**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

# ಕರ್ನಾಟಕ ವಿಧಾನ ಪರಿಷತ್ತು

19ನೇ ಮಾರ್ಚ್ 2020
ಗುರುವಾರ

## ವಿಷಯಾನುಕ್ರಮಣಿಕೆ

01. **ವರದಿಯನ್ನೊಪ್ಪಿಸುವುದು**

02. **ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಜಿ.ರಘು ಆಚಾರ್
- ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**(ನಿರ್ಣಯ ಅಂಗೀಕರಿಸಲ್ಪಟ್ಟಿತು)**

03. **ರಾಜ್ಯದಲ್ಲಿ ಕೊರೊನಾ ವೈರಸ್ ಹರಡುತ್ತಿರುವುದರಿಂದ ಸರ್ಕಾರ ಶಾಲಾ-ಕಾಲೇಜುಗಳಿಗೆ ರಜೆಯನ್ನು ನೀಡಲಾಗಿದ್ದು ಅದರಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ರಜೆಯ ಸೌಲಭ್ಯವನ್ನು ನೀಡುವ ಬಗ್ಗೆ**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಶರಣಪ್ಪ ಮಟ್ಟೂರು
- ಶ್ರೀ ಆಯನೂರು ಮಂಜುನಾಥ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

04. **<u>ಪ್ರಶ್ನೋತ್ತರಗಳು</u>**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1447 – ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿನ ದಾಲ್‌ಮಿಲ್‌ಗಳ ಬಗ್ಗೆ**
- ಶ್ರೀ ತಿಪ್ಪಣ್ಣ ಕಮಕನೂರ
- ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**1456 – ಸಿ.ಎ.ನಿವೇಶನಗಳ ಬಗ್ಗೆ**

– ಶ್ರೀ ಎಂ.ಸಿ.ವೇಣುಗೋಪಾಲ್

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

**1448 – ಹಾಸನ ವಿಮಾನ ನಿಲ್ದಾಣದ ಬಗ್ಗೆ**

– ಶ್ರೀ ಎಂ.ಎ.ಗೋಪಾಲಸ್ವಾಮಿ

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

**1452 +1453 – ಕೆ.ಪಿ.ಟಿ.ಸಿ.ಎಲ್‌ನಲ್ಲಿನ ನೇಮಕಾತಿ ವಿಳಂಬದ ಬಗ್ಗೆ**

– ಶ್ರೀ ಕೆ.ಸಿ.ಕೊಂಡಯ್ಯ

– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

**1497 – ವಿಧಾನಸೌಧದ ಸುತ್ತಮುತ್ತ ಸುಲಭ್ ಶೌಚಾಲಯಗಳ ನಿರ್ಮಾಣದ ಬಗ್ಗೆ**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

1488 – **2019–20ನೇ ಸಾಲಿನಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ**

– ಶ್ರೀ ಅಲ್ಲಂ ವೀರಭದ್ರಪ್ಪ

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

– ಶ್ರೀ ಬಸವರಾಜ ಬೊಮ್ಮಾಯಿ (ಗೃಹಸಚಿವರು)

**1470 – ಬಿ.ಡಿ.ಎ. ನಿವೃತ್ತ ಅಧಿಕಾರಿ/ನೌಕರರನ್ನು ಸೇವೆಯಲ್ಲಿ ಮುಂದುವರೆಸಿರುವ ಬಗ್ಗೆ**

– ಶ್ರೀ ಶರಣಪ್ಪ ಮಟ್ಟೂರ

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಗಳು)

**1540 + 1541 – ಕೆ.ಆರ್.ಇ.ಡಿ.ಎಲ್. ಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಬಗ್ಗೆ**

– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

**1420 + 1548 –ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶೀಯರ ಬಗ್ಗೆ**

– ಶ್ರೀ ಲಹರ್ ಸಿಂಗ್ ಸಿರೋಯಾ

– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)

– ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1495 – **ರಾಜ್ಯದಲ್ಲಿ ಕೆರೆಗಳನ್ನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸುವ ಬಗ್ಗೆ**
- ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ
- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂಸಣ್ಣ ನೀರಾವರಿ ಸಚಿವರು)

**1421 – ಎನ್.ಆರ್.ಬಿ.ಸಿ.ಯಿಂದ ದೇವದುರ್ಗ ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಬಗ್ಗೆ**
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ರಮೇಶ ಲ. ಜಾರಕಿಹೊಳಿ(ಜಲ ಸಂಪನ್ಮೂಲ ಸಚಿವರು)

**1519 – ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಶ್ರೀರಂಗ ಏತ ನೀರಾವರಿ ಕಾಮಗಾರಿಯ ಬಗ್ಗೆ**
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ

**1465 – ಕೆ.ಆರ್.ಪುರದಲ್ಲಿನ ಡ್ರಗ್ಸ್ ಮಾಫಿಯಾ ಬಗ್ಗೆ**
- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು)

**1558 – ಬೀದರ್ ಗ್ರಾಮೀಣ ಭಾಗದಲ್ಲಿ ಅತ್ಯಾಚಾರ, ದರೋಡೆ ವಿವರಗಳ ಬಗ್ಗೆ**
- ಶ್ರೀ ವಿಜಯ್ ಸಿಂಗ್
- ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು)

**713 – ಕಲಬುರಗಿ ಜಿಲ್ಲೆಯ ಬೆಣ್ಣೆತೋರಾ, ಅಮರ್ಜಾ ಮತ್ತು ಮುಲ್ಲಾಮಾರಿ ನೀರಾವರಿ ಯೋಜನೆ ಬಗ್ಗೆ**
- ಶ್ರೀ ತಿಪ್ಪಣ್ಣ ಕಮಕನೂರ
- ಶ್ರೀ ರಮೇಶ್ ಲ.ಜಾರಕಿಹೊಳಿ(ಜಲ ಸಂಪನ್ಮೂಲ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**5. <u>ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ಕೊರೊನಾ ಸೋಂಕಿನ ತಪ್ಪು ತಿಳುವಳಿಕೆಯಿಂದ ಕೋಳಿ ಸಾಕಾಣಿಕೆದಾರರು ಮತ್ತು ಉದ್ದಿಮೆದಾರರು ಭಾರಿ ನಷ್ಟವನ್ನು ಅನುಭವಿಸುತ್ತಿರುವ ಬಗ್ಗೆ.**
- ಶ್ರೀ ಐವನ್ ಡಿ'ಸೋಜಾ
- ಶ್ರೀ ಪ್ರಭು ಬಿ ಚವ್ಹಾಣ್ (ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು)

**ಆ) ರೇಷ್ಮೆ ಭಿತ್ತನೆ ವಲಯಕ್ಕೆ ಅನುದಾನ ಮತ್ತು ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವ ಬಗ್ಗೆ.**
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

6) **ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಸಿವಿಲ್ ನ್ಯಾಯಾಲಯ ಸ್ಥಾಪಿಸುವ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ)

**ಆ) ದತ್ತಾಂಶಗಳ ಮಾಹಿತಿ ಮತ್ತು ಮಧ್ಯಾಹ್ನ ಉಪಹಾರ ಯೋಜನೆಯಡಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಕಳೆದ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ 416 ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಸ್ಥಗಿತಗೊಳಿಸುತ್ತಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಪರವಾಗಿ)

7) **ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2020**

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)

- ಶ್ರೀ ಐವನ್ ಡಿ'ಸೋಜಾ
- ಶ್ರೀ ಶರಣಪ್ಪ ಮಟ್ಟೂರು
- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಹೆಚ್.ಎಂ.ರಮೇಶಗೌಡ
- ಶ್ರೀ ಪಿ.ಆರ್.ರಮೇಶ್
- ಶ್ರೀ ಆರ್.ಪ್ರಸನ್ನಕುಮಾರ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020**

– ಡಾ॥ ಸಿ.ಎನ್.ಅಶ್ವಥ್ ನಾರಾಯಣ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಜೀವನೋಪಾಯ ಸಚಿವರು)

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಮರಿತಿಬ್ಬೇಗೌಡ
- ಡಾ|| ವೈ.ಎ.ನಾರಾಯಣಸ್ವಾಮಿ
- ಶ್ರೀ ಅರುಣ ಶಹಾಪುರ
- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಅರುಣ ಶಹಾಪುರ

**(ವಿಧೇಯಕವನ್ನು ಪೆಂಡಿಂಗ್ ಇಡಲಾಯಿತು)**

**8. ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯ ಮೇಲೆ ಪೂರ್ವಭಾವಿ ಚರ್ಚೆ**

**ವಿಷಯ: ಕಾನೂನುಬದ್ಧವಾಗಿ ಕಲ್ಲು ಗಣಿಗಾರಿಕೆಯನ್ನು ಮಾಡುತ್ತಿದ್ದರೂ ರಾಜಕೀಯ ದ್ವೇಷದಿಂದ ತೊಂದರೆ ನೀಡುತ್ತಿರುವ ಬಗ್ಗೆ.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**9. <u>ಗಮನ ಸೆಳೆಯುವ ಸೂಚನೆ</u>**

ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿವಾಜಿನಗರದಿಂದ ನಾಗಾವರದವರೆಗೆ ಕೈಗೊಂಡಿರುವ ಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿದ್ದು ಭೂಮಾಲೀಕರಿಗೆ ಪರಿಹಾರ ನೀಡುವ ಬಗ್ಗೆ

- ಶ್ರೀ ಮರಿತಿಬ್ಬೇಗೌಡ
- ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

10. **<u>ನಿಯಮ 330ರ ಮೇರೆಗೆ ಚರ್ಚೆ</u>**

**ರಾಜ್ಯದಲ್ಲಿ ದಿನನಿತ್ಯ ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ಮಿಶ್ರಿತ ಕಲಬೆರಕೆ ಹೆಚ್ಚಾಗಿ ಜನಸಾಮಾನ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಬಗ್ಗೆ.**

- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಆರ್.ಬಿ.ತಿಮ್ಮಾಪುರ
- ಶ್ರೀ ಪಿ.ಆರ್.ರಮೇಶ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)
- ಶ್ರೀ ಎಸ್.ವ್ಹಿ.ಸಂಕನೂರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಡಾ॥ ಸಿ.ಎನ್.ಅಶ್ವಥ್ ನಾರಾಯಣ್ (ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**11. <u>ಅರ್ಧ ಗಂಟೆ ಕಾಲಾವಧಿ ಚರ್ಚೆ</u>**

**ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಿಂದ ನಿಯಮಬಾಹಿರವಾಗಿ ಮಾಡಲಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ನಿಯೋಜನೆ ಬಗ್ಗೆ.**

– ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಶರಣಪ್ಪ ಮಟ್ಟೂರು
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಡಾ॥ ಸಿ.ಎನ್.ಅಶ್ವಥ್ ನಾರಾಯಣ್ (ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
– ಶ್ರೀ ಕೆ.ಟಿ.ಶ್ರೀಕಂಠೇಗೌಡ

***

(563)/19.03.2020/10.30/ಎಸ್‌ಕೆ-ಎಕೆ

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 19ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ)ಯವರು ಪೀಠದಲ್ಲಿ ಉಪಸ್ಥಿತರಿದ್ದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(564) 19.03.2020 10.40 ಟಿಸಿಹೆಚ್–ಎಕೆ

**1. ವರದಿಯನ್ನೊಪ್ಪಿಸುವುದು**

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಸದಸ್ಯನಾದ ನಾನು ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಈ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

**2. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಸಂವಿಧಾನದ ಮೇಲೆ ವಿಶೇಷ ಚರ್ಚೆ ಅರ್ಧಕ್ಕೆ ನಿಂತಿತ್ತು. ಸಂವಿಧಾನದ ಪ್ರಯೋಜನಗಳೇನು? ಸಂವಿಧಾನದಿಂದ ಏನೇನು ದೇಶಕ್ಕೆ ಲಾಭಗಳಾಗಿವೆ ಎನ್ನುವುದರ ಬಗ್ಗೆ ಬಹಳಷ್ಟು ವಿಚಾರಗಳನ್ನು ಹೇಳುವುದರ ಜೊತೆಗೆ ಸಂವಿಧಾನ ರಚನೆ ಸಮಯದಲ್ಲಿ ಎದುರಾಗಿದ್ದ ಸವಾಲುಗಳೇನು? ಆ ಸವಾಲುಗಳನ್ನು ಹಿಮ್ಮೆಟ್ಟಿಸದಿದ್ದರೆ, ಏನೇನು ಅನಾಹುತಗಳು ಆಗುತ್ತಿತ್ತು. ಸಂವಿಧಾನವು ಎದುರಿಸಿದಂತಹ ಅತ್ಯಂತ ಸವಾಲುಗಳೆಂದರೆ, ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವದ ಬಗ್ಗೆ ನಾನು ನಿನ್ನೆ ದಿವಸ ಸುಧೀರ್ಘವಾಗಿ ಮಾತನಾಡಿದ್ದೇನೆ. ಆದರೆ, ಇನ್ನೂ ಅನೇಕ ಸಮಸ್ಯೆಗಳಿವೆ. 70 ವರ್ಷಗಳ ನಂತರ ಸಂವಿಧಾನ ಅತ್ಯಂತ ಬಹಳ ಕೆಟ್ಟರೀತಿಯಲ್ಲಿ ಇವತ್ತು ಸಮಸ್ಯೆಗಳನ್ನು ಎದುರಿಸುವಂತಹ ಒಂದು ಬರ್ಬರವಾದಂತಹ ಪರಿಸ್ಥಿತಿ ಬಂದಿದೆ. ಅದರಲ್ಲಿ ಹಕ್ಕಗಳ ಧಮನ, ಸಂವಿಧಾನ ನಮಗೆ ನೀಡಿದಂತಹ ಕೆಲವು ಸ್ವಾತಂತ್ರ್ಯಗಳು. ಅದರಲ್ಲೂ ವಿಶೇಷವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾತಾಂತ್ರಿಕ ವ್ಯವಸ್ಥೆಯ ತಳಹದಿ. It is the foundation. ಅನುಚ್ಛೇದ 19(1)(ಎ)ರಲ್ಲಿ ಪ್ರಜೆಗಳಿಗೆ ನೀಡಿದಂತಹ ಅಭಿವ್ಯಕ್ತಿ ಸ್ವಾತಂತ್ರ್ಯ ಏನಿದೆ, ಇದು ವಾಕ್ ಸ್ವಾತಂತ್ರ್ಯ. ಈ ವಾಕ್ ಸ್ವಾತಂತ್ರ್ಯವು ಜನರು ಮುಕ್ತವಾಗಿ ಮತ್ತು ಸ್ವತಂತ್ರವಾಗಿ ತಮ್ಮ ಅಭಿಪ್ರಾಯವನ್ನು ನೀಡಲು ಸಹಕಾರಿಯಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮುಖಾಂತರ ಮುಕ್ತ ಸಮಾಜದಲ್ಲಿ ಯಾವುದೇ ಅಂಜಿಕೆ, ಮರ್ಜಿ, ಮುಲಾಜುಗಳಿಲ್ಲದೇ freedom of speech and expression is not absolute. It has got its own restrictions. ಅದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೆಲವು ಕಟ್ಟುಪಾಡುಗಳು ಕೂಡ ಇವೆ. ಆದರೆ, ಈ ಅಭಿವ್ಯಕ್ತಿ ಸ್ವಾತಂತ್ರ್ಯವು ಮೂಲಭೂತ ಹಕ್ಕಿನಲ್ಲಿ ಬರುತ್ತದೆ. ಈ ಮೂಲಭೂತ ಹಕ್ಕಿನಲ್ಲಿ ಬರುವಂತಹ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವುದಕ್ಕೆ ಸಂವಿಧಾನ ಅವಕಾಶ ಮಾಡಿಕೊಡುವುದಿಲ್ಲ. ಹೀಗಿರುವಾಗ, ಇತ್ತೀಚೆಗೆ ವ್ಯಕ್ತವಾಗುತ್ತಿರುವಂತಹ ಒಳ್ಳೊಳ್ಳೆಯ ಅಭಿಪ್ರಾಯಗಳು, ವಿಭಿನ್ನ ರೀತಿಯ ಚಿಂತನೆಗಳ ಬಗ್ಗೆ ಅಸಹನೆ ವ್ಯಕ್ತವಾಗುತ್ತಿದೆ, ಇದು ಖಂಡಿತವಾಗಿ ಪ್ರಜಾತಾಂತ್ರಿಕ ವ್ಯವಸ್ಥೆಗೆ ಮಾರಕವಾದಂತಹ ಮತ್ತು ಅಪಾಯಕಾರಿಯಾದ ವಿಚಾರವಾಗಿದೆಯೆಂದು ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ಈ ನಿಟ್ಟಿನಲ್ಲಿ ಫ್ರಾನ್ಸ್‌ನ ಚಿಂತಕರಾದ ವಾಲ್ಟರ್‌ರವರು "ನಿನ್ನ ಯಾವ ಮಾತನ್ನು ನಾನು ಒಪ್ಪುವುದಿಲ್ಲ, ಆದರೆ, ನಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕನ್ನು ನನ್ನ ಉಸಿರು ಇರುವವರೆಗೆ ಸಮರ್ಥಿಸುತ್ತೇನೆ " ಎಂದು ಹೇಳಿದ್ದಾರೆ. ಇದು ಬಹಳ ಗಮನಾರ್ಹವಾದುದು. ಅಂದರೆ, ಇದು ವಾಕ್ ಸ್ವಾತಂತ್ರ್ಯಕ್ಕೆ ಸಂಬಂಧಿಸಿರುತ್ತದೆ. ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಲ್ಲವೇ? ಮುಕ್ತವಾದಂತಹ ವಾತಾವರಣದಲ್ಲಿ ಅವರ ಚಿಂತನೆಗಳನ್ನು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು it's an absolute right. ಫ್ರಾನ್ಸ್‌ನ ಚಿಂತಕರಾದ ವಾಲ್ಟರ್ ರವರು ಅದರ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನಾಡಿದ್ದಾರೆ. ಸಮಾಜದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ, ವ್ಯಕ್ತಿ ಸ್ವಾತಂತ್ರ್ಯ ಮೊದಲನೆಯದಾಗಿದೆ. It's the first step. ಇವತ್ತಿನ ದಿವಸ ಎಲ್ಲಾ ವಿಷಯಗಳ ಬಗ್ಗೆ ಮುಕ್ತವಾದಂತಹ ಚರ್ಚೆಗಳಾಗಬೇಕು. ಚರ್ಚೆಗಳು ನಡೆಯದೇ ಯಾವುದೇ ವಿಷಯವನ್ನು ಕೈಗೆತ್ತಿಕೊಳ್ಳಬಾರದು. ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುವುದು ಬಹಳ ಅವಶ್ಯಕತೆ ಇದೆ. 70 ವರ್ಷಗಳಿಂದ ಅನುಭವಿಸುತ್ತಾ ಬಂದಿರುವಂತಹ ಅನೇಕ ಹಕ್ಕುಗಳನ್ನು ಕಳೆದುಕೊಳ್ಳುವಂತಹ ದುಸ್ಥಿತಿಗೆ ನಾವು ಬಂದು ನಿಂತಿದ್ದೇವೆಂದು ನನಗೆ ಭಾಸವಾಗುತ್ತಿದೆ. ಸರ್ಕಾರಗಳು ಏನು ಮಾಡುತ್ತವೆಂದರೆ, ನಾನು ಆ ಸರ್ಕಾರ ಈ ಸರ್ಕಾರವೆಂದು ಹೇಳುವುದಿಲ್ಲ. ಸಾರ್ವಜನಿಕ ಮಾಧ್ಯಮಗಳಾದ ದೂರದರ್ಶನ ಇರಬಹುದು, ಆಕಾಶವಾಣಿ ಇರಬಹುದು ಇದನ್ನು ತಮ್ಮ ವಕ್ತಾರರಾಗಿ ಉಪಯೋಗಿಸಿಕೊಳ್ಳುವುದು ಬಹುತರವಾಗಿ ಇದು ಒಳ್ಳೆಯದಲ್ಲ. ಸರ್ಕಾರ ತನ್ನ ಪರಮಾಧಿಕಾರವನ್ನು ದುರ್ಬಳಕೆ ಮಾಡಿಕೊಂಡು, ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವಂತಹ ಪುಸ್ತಕಗಳಿರಬಹುದು, ಸಿನೆಮಾ ಇರಬಹುದು, ಚಿತ್ರಕಲೆ ಇರಬಹುದು ಇವುಗಳನ್ನು ನಿಷೇಧ ಮಾಡಬೇಕು. ಸರ್ಕಾರ ಹೇಳಿದ್ದನ್ನು ತಥಾಸ್ತು ಎಂದು ಹೇಳಬೇಕೇ? ತಮ್ಮದೇ ಆದಂತಹ ಅಭಿಪ್ರಾಯವನ್ನು ಕೆಲವು ಪುಸ್ತಕಗಳ ಮುಖಾಂತರ ಆಗಬಹುದು, ಸಿನಿಮಾ ಮುಖಾಂತರ ಆಗಬಹುದು, ಚಿತ್ರಕಲೆ ಇರಬಹುದು, ಕಾರ್ಟೂನ್‌ಗಳು ಅಂದರೆ ವ್ಯಂಗ್ಯ ಚಿತ್ರಗಳು ಇರಬಹುದು, ಆ ವ್ಯಂಗ್ಯ ಚಿತ್ರಗಳನ್ನು ನೋಡಿದಾಗ, ಸರ್ಕಾರದ ವಿಚಾರ ಧೋರಣೆಗಳಿಗೆ ವ್ಯತಿರಿಕ್ತವಾಗಿರುತ್ತವೆ ಎಂದು ಏಕೆ ಅಂದುಕೊಳ್ಳಬೇಕು. You have to take it in a good

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

spirit. ಚರ್ಚೆಗಳಿಗೆ ಮುಕ್ತ ಅವಕಾಶ ಮಾಡಿಕೊಡಬೇಕಲ್ಲವೇ? ಸರ್ಕಾರವನ್ನು ಅತಿರೇಕ ಮಾಡಬೇಕು. ಸರ್ಕಾರವನ್ನು ಅತಿರೇಕ ಮಾಡುವುದಿಲ್ಲವೆಂದು ಅಲ್ಲ. ಅತಿರೇಕ ಮಾಡಿದಾಗ, ಅದನ್ನು ಪ್ರಶ್ನಿಸುವಂತಹ ಒಬ್ಬ ಕಲಾವಿದರು ಆಗಿರಲಿ, ಸಾಮಾಜಿಕ ಕಾರ್ಯಕರ್ತರು ಆಗಿರಲಿ, ವಿದ್ಯಾರ್ಥಿಗಳು ಆಗಿರಲಿ, ಸಾಹಿತಿಗಳ ಮೇಲೆ ರಾಷ್ಟ್ರದ್ರೋಹದ ಕ್ರಿಮಿನಲ್ ಕೇಸ್ ದಾಖಲಿಸಿ ಜೈಲಿಗೆ ಕಳುಹಿಸಿದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವ ಎಲ್ಲಿ ಉಳಿಯುತ್ತದೆ? ಅಭಿವ್ಯಕ್ತಿ ಸ್ವಾತಂತ್ರ್ಯ ಕೊಟ್ಟಿರುವುದು ಸಂವಿಧಾನದ ಮೂಲಭೂತ ಹಕ್ಕಿನಲ್ಲಿದೆ. ಜನರು ತಮ್ಮ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ, ವ್ಯಕ್ತವಾಗಲಿ. ಆ ಅಭಿಪ್ರಾಯವನ್ನು ವ್ಯಕ್ತ ಮಾಡಿದ ಕೂಡಲೇ ಅವರನ್ನು ರಾಷ್ಟ್ರದ್ರೋಹಿಗಳು ಎಂದು ಅವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ, ಜೈಲಿಗೆ ಕಳುಹಿಸುವಂತಹ ಪರಿಸ್ಥಿತಿಗೆ ಬಂದಿದ್ದೇವೆ. ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯ ಉಳಿಸುವುದಕ್ಕೆ ನಾವು ಮೂಲಭೂತ ಹಕ್ಕನ್ನು ರಕ್ಷಣೆ ಮಾಡಬೇಕಲ್ಲವೇ? ಈಗ ಸರ್ಕಾರ ಖಾಸಗಿ ಮಾಧ್ಯಮಗಳಿಗೆ ಕೆಲವು ಜಾಹೀರಾತುಗಳನ್ನು ಕೊಡುತ್ತಾರೆ. ಪ್ರಿಂಟ್ ಮೀಡಿಯಾ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಕೊಡಬೇಕಾಗುತ್ತದೆ. ಅದು ಯಾವುದಾದರೂಂದು ಮೀಡಿಯಾದ ಮೂಲಕ ಜನತೆಗೆ ತಲುಪಬೇಕು. ನೀವು ಕಾನೂನಾತ್ಮಕವಾಗಿ ಆ ಮಾಧ್ಯಮಗಳಿಗೆ ಸಹಾಯ ಮಾಡುತ್ತೀರಲ್ಲಾ. ಆ ಮಾಧ್ಯಮದವರು ನಿಮ್ಮ ಮುಲಾಜಿಗೆ ಒಳಪಟ್ಟು ಕೆಲಸ ಮಾಡುತ್ತಾರೆ. ಮೊದಲನೆಯದಾಗಿ, ಟಿಆರ್‌ಪಿ ಸಲುವಾಗಿ ಮಾಡುತ್ತಾರೆ. ಎರಡನೆಯದಾಗಿ, ಸರ್ಕಾರದ ಮರ್ಜಿಗಾಗಿ ಕಾಯುತ್ತಾರೆ. ಸರ್ಕಾರದ್ದು ಏನಾದರು ಲೋಪದೋಷಗಳಿದ್ದರೆ, ತಪ್ಪಿದ್ದರೆ ಮಾಧ್ಯಮದವರು ಅದನ್ನು ಎತ್ತಿ ತೋರಿಸುವುದಿಲ್ಲ. ಏನು ಸರ್ಕಾರ ನಮಗೆ ಬಹಳಷ್ಟು ದುಡ್ಡನ್ನು ಕೊಡುತ್ತಾರೆ, Advertisement ಕೊಡುತ್ತಾರೆ. ನಮಗೆ ಸಾಕಷ್ಟು ಈ ಸರ್ಕಾರದಿಂದ ಲಾಭವಾಗಿದೆ. ಸರ್ಕಾರ ಏನು ಮಾಡಿದರೂ ಬಾಳೋಕೆ ಒಂದು ಮಾತು ಎನ್ನುವಂತೆ ಮಾಧ್ಯಮಗಳು ವರ್ತನೆ ಮಾಡುವುದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರಿಯೇ? ಆ ದೃಷ್ಟಿಯಿಂದ ಮಾಧ್ಯಮದವರು ನಿಜವಾದ ಅಭಿಪ್ರಾಯಗಳನ್ನು ತಿರುಚಿ ಸರ್ಕಾರದಿಂದ ಶಹಬಾಸ್‌ಗಿರಿ ಪಡೆಯುವಂತಹ ವಿಚಾರಗಳನ್ನು ನಾವು ಬಹಳಷ್ಟು ಕಂಡುಕೊಳ್ಳುತ್ತೇವೆ ನಮ್ಮ ಗ್ರಾಮೀಣ ಭಾಗದಲ್ಲಿ ಬಹಳಷ್ಟು ಜನ 'ಏನಪ್ಪಾ, ಈ ಮಾಧ್ಯಮದವರೆಲ್ಲಾ ಸರ್ಕಾರಕ್ಕೆ ಜೈ ಎನ್ನುತ್ತಾರೆ, ಸರ್ಕಾರ ಇವರನ್ನೇನಾದರೂ ಖರೀದಿ ಮಾಡಿದ್ದಾರೆಯೇ' ಎಂದು ಗ್ರಾಮೀಣ ಭಾಗದಲ್ಲಿರತಕ್ಕಂಥ ಅನಕ್ಷರಸ್ಥ ಜನ ಮಾತನಾಡುತ್ತಾರೆ. ಸುಶಿಕ್ಷಿತ ಜನ ಮಾತನಾಡುವುದಿಲ್ಲ. ಈ ರೀತಿಯಾದಂತಹ ವ್ಯವಸ್ಥೆ ಇದ್ದು, ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರವಾದಂತಹ ವ್ಯವಸ್ಥೆ ಅಲ್ಲ. ನಿಷ್ಪಕ್ಷಪಾತವಾದಿಗಳಾಗಿ ಕೆಲಸ ಮಾಡಬೇಕು. ಆ ಮಾಧ್ಯಮಗಳ ಮುಖಾಂತರ ಅವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೆಳೆದುಕೊಳ್ಳುವಂತಹ ಪ್ರಯತ್ನ ನಡೆಯುತ್ತಿರುವುದು ಕೂಡ ಸಂವಿಧಾನಕ್ಕೆ ಸವಾಲಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೂ 'Rule of Law', ಇದು ಕೂಡ ಗಂಡಾಂತರದಲ್ಲಿದೆ ಎನ್ನುವಂತಹ ಮಾತನ್ನು ಇವತ್ತು ನಾನು ವ್ಯಕ್ತ ಮಾಡಬೇಕಾಗುತ್ತದೆ. ಭಾರತದ ಸಂವಿಧಾನ ಸರ್ವಶ್ರೇಷ್ಠವಾದುದು. ಶಾಸಕಾಂಗ ಇರಬಹುದು, ಕಾರ್ಯಾಂಗ ಇರಬಹುದು ಮತ್ತು ನ್ಯಾಯಾಂಗ ಇರಬಹುದು ಇವುಗಳ ಕಾರ್ಯನಿರ್ವಹಣೆಯು ಸಂವಿಧಾನಾತ್ಮಕವಾಗಿರಬೇಕು. ಇವತ್ತಿನ ದಿವಸ ನಾವು ಶಾಸಕರಾಗಿದ್ದೇವೆ. ನಾವೊಂದು ಮಸೂದೆಯನ್ನು ಮಂಡಿಸುತ್ತೇವೆ. ಅದು ಸಂವಿಧಾನಾತ್ಮಕವಾದಂತಹ ಮಸೂದೆ ಇರಬೇಕು. ಬಿಲ್ ಸಂವಿಧಾನಕ್ಕೆ ವ್ಯತಿರಿಕ್ತವಾಗಿರಬಾರದು. ಅದೇ ರೀತಿ ಕಾರ್ಯಾಂಗದವರು ಹೊರಡಿಸುವಂತಹ ಆಜ್ಞೆಗಳು it should be in conformity with the provisions of the Constitution. ಸಂವಿಧಾನಕ್ಕೆ ವಿರೋಧವಾದಂತಹ ಆದೇಶಗಳನ್ನು ಹೊರಡಿಸುವುದಕ್ಕೆ ಕಾರ್ಯಾಂಗಕ್ಕೂ ಕೂಡ ಅವಕಾಶವಿಲ್ಲ. ನ್ಯಾಯಾಂಗದವರು ನೀಡುವಂತಹ ತೀರ್ಪುಗಳು ಕೂಡ ಸಂವಿಧಾನಾತ್ಮಕವಾಗಿ ಇರಬೇಕು. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳು ಸಂವಿಧಾನಕ್ಕೆ ಬದ್ಧವಾಗಿ ತಮ್ಮ ಕೆಲಸಕಾರ್ಯಗಳನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಮಾಡುತ್ತಿದ್ದೇನೆ.

**(565)19.3.2020/10.50/ಎಂ.ಎಂ–ಆರ್.ಎನ್**

**ಶ್ರೀ ಎಸ್.ಆರ್. ಪಾಟೀಲ್(ಮುಂದು):–**

ಪ್ರಜಾಪ್ರಭುತ್ವದ ಪ್ರಮುಖ ಅಂಗಗಳ ಬಗ್ಗೆ ಹೇಳುವುದಿಲ್ಲ, ಈ ದೇಶದಲ್ಲಿರುವಂತಹ ಎಲ್ಲಾ ಪ್ರಜೆಗಳು, ಎಲ್ಲಾ ಸಂಸ್ಥೆಗಳು ಸಂವಿಧಾನಕ್ಕೆ ಬದ್ಧವಾಗಿರಬೇಕು, ಸಂವಿಧಾನಕ್ಕಿಂತ ಯಾರೂ ಮೇಲಲ್ಲ. ರಾಜ್ಯವೇ ಕಾನೂನಲ್ಲ, ಕಾನೂನು ರಾಜ್ಯವಾಗಿದೆ. Theory is not law. Law is a king.ಅಂತಹ ಒಂದು ಪರಿಕಲ್ಪನೆಯನ್ನು ನಾವು ಕಲಿಯಬೇಕಾಗಿದೆ. ಈಗ ರಾಜನೇ ಕಾನೂನಾಗಿದೆ. ಆದರೆ Law is a king, I agree with that. But king is not law. ಈಗ ನಡೆಯುವಂತಹ ವ್ಯವಸ್ಥೆ ನೋಡಿದರೆ ಆ ರೀತಿಯಲ್ಲಿ ನಡೆಯುತ್ತಿದೆ. ಇತ್ತೀಚಿನ ಕೆಲವು ಬೆಳವಣಿಗೆಗಳನ್ನು ನೋಡಿದರೆ, rule of law ಏನಿದೆ ಅದಕ್ಕೆ ತದ್ವಿರುದ್ಧವಾಗಿಯೇ ನಡೆಯುತ್ತಿವೆ. ಇವತ್ತು ದೇಶದ ಪ್ರತಿ ನಗರದಲ್ಲಿ ಬೆಂಗಳೂರು ನಗರ ಇರಬಹುದು, ಕಲ್ಕತ್ತ, ಮುಂಬೈ, ಚೆನ್ನೈ ಇರಬಹುದು ಮಾಫಿಯಾಗಳ ಹಾವಳಿ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊಡ್ಡದಾಗಿದೆ. ಮಾರ್ಕೆಟ್‌ಗಳಲ್ಲಿ ತರಕಾರಿ ಮಾರುವಾಗ ಬದನೇಕಾಯಿಗೆ ಒಂದು ಕೆ.ಜಿ.ಗೆ ಇಷ್ಟು ದುಡ್ಡು, ಈರುಳ್ಳಿಗೆ ಇಷ್ಟು, ಬೆಳ್ಳುಳ್ಳಿಗೆ ಇಷ್ಟು ದುಡ್ಡು ಎಂದು ಮಾರಾಟ ಮಾಡುವಂತೆ ಹೀಗೆ ಮಾಫಿಯಾದವರು ಕಾಲು ತೆಗೆದರೆ ಇಷ್ಟು, ಕೈ ತೆಗೆದರೆ ಇಷ್ಟು, ಕುತ್ತಿಗೆ ತೆಗೆದರೆ ಇಷ್ಟು ಎಂದು ಹೇಳಿ ಮಾಫಿಯಾಗಳು ವಿಸ್ತೃತವಾಗಿ ಅದರಲ್ಲೂ Metropolitan Cityಯಲ್ಲಿ ಬಹಳಷ್ಟು ದರವನ್ನು ನಿಗದಿಪಡಿಸಿದ್ದಾರೆ. ಕೆಲವು ಜನರು ಇದನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಈಗ ಬಾಡಿಗೆದಾರರಿಂದ ಮನೆಯನ್ನು ಬಿಡಿಸಿಕೊಳ್ಳಬೇಕಾಗಿದೆ ಎಂದು ಇಟ್ಟುಕೊಂಡರೆ, HRC ಕೆಳಗೆ ನಮಗೆ ಅನುಭವ ಇದೆ, House Rent Control Act ಕೆಳಗೆ suit file ಮಾಡಿ; ಮಾಫಿಯಾದವರಿಗೆ ಹೇಳಿಬಿಟ್ಟರೆ ಸಂಜೆ ಹೊತ್ತಿಗೆ ಮನೆ ಖಾಲಿ ಆಗುತ್ತದೆ. ಜಾಗ ತೆರವು ಮಾಡುವುದಕ್ಕೆ ಯಾರೋ ಅತಿಕ್ರಮಣವಾಗಿ ಜಾಗದಲ್ಲಿ ಟೆಂಟ್ ಹಾಕಿ ಅತಿಕ್ರಮಣ ಮಾಡಿದ್ದರೆಂದರೆ, ಕೋರ್ಟ್‌ಗೆ ಹೋಗಿ eviction ಮಾಡುವುದಕ್ಕಿಂತ ಮಾಫಿಯಾದವರಿಗೆ ಹೇಳಿದರೆ, ಮಾನ್ಯ ಸಂಕನೂರರವರೇ, ಸಾಯಂಕಾಲವೇ ನಿಮ್ಮ ಜಾಗ ಖಲ್ಲಾ ಮಾಡಿಸುತ್ತಾರೆ. ಅದೇ ರೀತಿ ಕೊಟ್ಟ ಸಾಲ ವಸೂಲಿಗೆ ಈಗ money recovery suit file ಮಾಡುವುದಿಲ್ಲ; ನ್ಯಾಯಾಲಯಕ್ಕೆ ಹೋಗಿ ಗೆದ್ದವನು ಸೋತ, ಸೋತವನು ಸತ್ತ ಹಾಗೆ ಎಂಬಂತಾಗಿ ಬಿಟ್ಟಿದೆ. ಕೊಟ್ಟ ಸಾಲವನ್ನು ವಸೂಲಿ ಮಾಡುವುದಕ್ಕೆ, ಮಾಫಿಯಾಗೆ ಹೇಳಿದರೆ ಅವರೆಲ್ಲಾwith arms and weapons ವಸೂಲಿ ಮಾಡಿಕೊಡುತ್ತಾರೆ. ಇದನ್ನೆಲ್ಲಾ ನೋಡಿದರೆ, rule of law ಇದೆಯೇ ಅನಿಸುತ್ತದೆ. ನಿಮಗೆ ಕೆಲವು ದಾಖಲೆಗಳನ್ನು ಕೊಡುತ್ತೇನೆ. 'ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆ'ಯ ವರದಿ ಪ್ರಕಾರ ಈ ದೇಶದಲ್ಲಿ ಏನು ನಡೆಯುತ್ತಿದೆ ಎಂದರೆ, ಅಸ್ಪೃಶ್ಯರ ಮೇಲೆ ಪ್ರತಿ ದಿನ ಸರಾಸರಿ 27 ದೌರ್ಜನ್ಯಗಳು ನಡೆಯುತ್ತಿವೆ. ಪ್ರತಿ ದಿವಸ ಅಸ್ಪೃಶ್ಯರ ಐದು ಮನೆಗಳಿಗೆ ಬೆಂಕಿ ಹಚ್ಚಿ ಸುಡುತ್ತಾರೆ. ಮೂರು ಮಹಿಳೆಯರ ಮೇಲೆ ಲೈಂಗಿಕ ಅತ್ಯಾಚಾರ ಮತ್ತು 11 ಜನರ ಮೇಲೆ ದೈಹಿಕ ದೌರ್ಜನ್ಯ ನಡೆಯುತ್ತಿದೆ, ಪ್ರತಿ ವಾರವೂ 13 ಅಸ್ಪೃಶ್ಯರ ಕೊಲೆಯಾಗುತ್ತಿದೆ. ಸುಮಾರು 100 ರೀತಿಯ ದೌರ್ಜನ್ಯಗಳು ಅಸ್ಪೃಶ್ಯರ ಮೇಲೆ ನಡೆಯುತ್ತಿದೆ. ವರದಿಯಾದ ಪ್ರಕರಣಗಳ ಬಗ್ಗೆ ಹೇಳುತ್ತೇನೆ. ಎಷ್ಟೋ ಪ್ರಕರಣಗಳು ವರದಿಯೇ ಆಗುವುದಿಲ್ಲ. ವರದಿಯಾದ ಪ್ರಕರಣ ಕೋರ್ಟ್‌ಗೆ ಹೋಗಿ ಅಲ್ಲಿ ಶಿಕ್ಷೆ ಕೂಡ ಆಗುವುದಿಲ್ಲ. 'ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆ'ಯ 2016ರ ವರದಿ ಪ್ರಕಾರ ಪ್ರತಿ 77 ನಿಮಿಷಗಳಿಗೆ ಒಬ್ಬ ಮಹಿಳೆ ಹಿಂಸೆಯಿಂದ ಸಾಯುತ್ತಿದ್ದಾಳೆ, ಪ್ರತಿ ಆರು ಗಂಟೆಗೆ ಒಬ್ಬ ವಿವಾಹಿತ ಮಹಿಳೆಯನ್ನು ಜೀವಂತವಾಗಿ ಸುಡುತ್ತಾರೆ ಅಥವಾ ಅವಳನ್ನು ಹೊಡೆದು ಬಡಿದು ಸಾಯಿಸುತ್ತಾರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ದುಸ್ಥಿತಿಗೆ ತಳ್ಳುತ್ತಾರೆ. ವಿವಾಹವಾಗಿರುವ 100 ಮಹಿಳೆಯರ ಪೈಕಿ 20 ಮಹಿಳೆಯರು ಪ್ರತಿನಿತ್ಯ ಗಂಡನಿಂದ ಅಥವಾ ಅವರ ಕುಟುಂಬದವರಿಂದ ದೈಹಿಕ ಹಲ್ಲೆಗೆ ಗುರಿಯಾಗುತ್ತಾರೆ, ಪ್ರತಿ 47 ನಿಮಿಷಕ್ಕೆ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರವಾಗುತ್ತಿದೆ. ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ಆಸಿಡ್ ದಾಳಿ, ಬಿಸಿ ಎಣ್ಣೆ ಎರಚುವುದು ಇದು ನಿತ್ಯ ನಿರಂತರವಾಗಿ ನಡೆಯುತ್ತಿದೆ. ಮಹಿಳೆಯರ ಮೇಲೆ ಯಾವ ರೀತಿ ದೌರ್ಜನ್ಯ, ದಬ್ಬಾಳಿಕೆ NCRB (National Crime Records Bureau) ದಾಖಲೆಯನ್ನಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಇನ್ನೊಂದು ಹೃದಯವಿದ್ರಾವಕ ಘಟನೆಯನ್ನು ವ್ಯಕ್ತ ಮಾಡುವುದಕ್ಕೆ ನನಗೆ ಬಹಳ ನೋವೆನಿಸುತ್ತಿದೆ. ಸಾಮಾಜಿಕ ವಿಜ್ಞಾನ ಸಂಸ್ಥೆಯವರು ನಡೆಸಿದಂತಹ ಅಧ್ಯಯನದ ಪ್ರಕಾರ ಭಾರತದಲ್ಲಿ ಒಂದು ವರ್ಷಕ್ಕೆ ಸುಮಾರು 45 ಸಾವಿರ ಮಕ್ಕಳು ಕಾಣೆಯಾಗುತ್ತಾರೆ. ಅದರ ಪೈಕಿ 11 ಸಾವಿರ ಮಕ್ಕಳು ಮರಳಿ ಸಿಗುವುದೇ ಇಲ್ಲ. ಆ ಮಕ್ಕಳನ್ನು ಅಪಹರಿಸಿ ಭಿಕ್ಷಾಟನೆಗೆ ಉಪಯೋಗ ಮಾಡಬಹುದು ಅಥವಾ ವೇಶ್ಯಾವಾಟಿಕೆಗೆ ಉಪಯೋಗ ಮಾಡಬಹುದು. ಅಪಹರಣ ಮಾಡಿ ಹಣ ಗಳಿಸುವಂತಹ ವ್ಯವಹಾರ ಅವ್ಯಾಹತವಾಗಿ ನಡೆಯುತ್ತಿದೆ. ಸ್ತ್ರೀಯರು ಮತ್ತು ಮಕ್ಕಳು ಮಾರಾಟದ ಸರಕಾಗಿದ್ದಾರೆ. ನಾವು ಪೋಲೀಸರನ್ನು ಆರಕ್ಷಕರು ಎಂದು ಹೇಳುತ್ತೇವೆ. ಇವರ ಕೆಲಸ ಏನೆಂದರೆ, ನಮ್ಮ ಆಸ್ತಿ ರಕ್ಷಣೆ ಮಾಡುವುದು ಅಥವಾ ನಮ್ಮ ಜೀವವನ್ನು ರಕ್ಷಣೆ ಮಾಡುವುದಾಗಿದೆ. ಇದನ್ನು ಮಾಡಬೇಕಲ್ಲವೇ; ಇದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಕೇಳಿಸುತ್ತಿದೆ ಎಂಬ ವಿಶ್ವಾಸವಿದೆ. ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕೇಸ್ ದಾಖಲು ಮಾಡಬೇಕು, ಎಫ್.ಐ.ಆರ್., ತಯಾರು ಮಾಡಬೇಕು, ಚಾರ್ಜ್‌ಶೀಟ್ ಹಾಕಬೇಕು, ಆ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿ ಅವನಿಗೆ ಶಿಕ್ಷೆಯಾಗುವ ಹಾಗೆ ನೋಡಿಕೊಳ್ಳಬೇಕು. ಪೊಲೀಸ್ ಠಾಣೆಗೆ ತಂದರೆ third degree method ರೀತಿ truth elicit ವಿಜ್ಞಾನ ಬಹಳ ಮುಂದುವರೆದಿದೆ. ಅನೇಕ ಪ್ರಶ್ನಾವಳಿಗಳನ್ನು ತಯಾರು ಮಾಡಿ ಆ ಪ್ರಶ್ನಾವಳಿ ಹಾಕಿದರೆ ತಪ್ಪು ಮಾಡಿದವನು ಸಿಕ್ಕಿಹಾಕಿಕೊಂಡುಬಿಡುತ್ತಾನೆ. Third degree method ಬಗ್ಗೆ ಇಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾವ್ಯಾವ ರೀತಿ third degree method ಅನ್ನು ಪೊಲೀಸ್ ಸ್ಟೇಷನ್‌ನಲ್ಲಿ ಮಾಡುತ್ತಾರೆ ಎಂದರೆ, ಗಾಬರಿಯಾಗುತ್ತದೆ. ಪೊಲೀಸ್ ಸ್ಟೇಷನ್‌ನಲ್ಲಿ ಅದನ್ನು ಯಾರು ನೋಡಿದ್ದಾರೆ? ಜನರ ಜೀವ ರಕ್ಷಣೆ ಮಾಡುವವರು ಚಿತ್ರಹಿಂಸೆ ಕೊಟ್ಟು 2013ರಲ್ಲಿ 118ಲಾಕಪ್ ಡೆತ್ ಆಗಿದೆ. 2014ರಲ್ಲಿ 13 ಲಾಕಪ್ ಡೆತ್, 2015ರಲ್ಲಿ 97 ಲಾಕಪ್ ಡೆತ್, 2016ರಲ್ಲಿ 92 ಲಾಕಪ್ ಡೆತ್ ಆಗಿವೆ. ಚಿತ್ರಹಿಂಸೆ ಕೊಡುವುದು ಮಿತಿಮೀರಿದಾಗ ಸಾವು ನಿಶ್ಚಿತ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅತ್ಯಂತ ಆತಂಕ ಪಡುವಂತಹ ಮತ್ತು ಒಬ್ಬ ವಿರೋಧಪಕ್ಷದ ನಾಯಕರೆಂದರೆ ಸರ್ಕಾರದಲ್ಲಿ ಅವರ ಧ್ವನಿಗೆ ಬಹಳ ಬೆಲೆ ಇರುತ್ತದೆ. ಹಿರಿಯರಾದ ಶ್ರೀ ಎಸ್.ಆರ್. ಪಾಟೀಲರು ಮಹಿಳೆಯರು, ಮಕ್ಕಳ missing cases ಬಗ್ಗೆ ಮಾತನಾಡುತ್ತಾ ಸರ್ಕಾರ ಅಥವಾ ಒಂದು ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ methodology ಬಗ್ಗೆ ತಾವು ಹೇಳುತ್ತಿದ್ದಿರಿ. ನಿಮ್ಮ ಬಹುತೇಕ ಅಂಶಗಳನ್ನು ನಾನು ಒಪ್ಪುತ್ತೇನೆ. ಇಲ್ಲಿ ಎರಡು ರೀತಿ ಇದೆ. ಅಪರಾಧಿಗಳನ್ನು ಹಿಡಿಯುವಾಗ ಒಂದು ದಕ್ಷ ಅಧಿಕಾರಿಗಳು ಎಷ್ಟೇ ಚೆನ್ನಾಗಿದ್ದರೂ ಕಾನೂನು ಕೂಡ ಅವರಿಗೆ supportive ಆಗಿ ಇರಬೇಕಾಗುತ್ತದೆ. ಕಾನೂನು ಸಚಿವರಾದ ಮಾನ್ಯ ಮಾಧುಸ್ವಾಮಿ ಜೀ ಯವರು ಇಂತಹದರ ಬಗ್ಗೆ ಬಹಳ ಸೂಕ್ಷ್ಮವಾಗಿ; ಕೆಲವೊಂದು ಕಾನೂನುಗಳಿಗೆ ಬದಲಾವಣೆಗಳನ್ನು ತರುವುದು ಮತ್ತು ಪೊಲೀಸ್ ಇಲಾಖೆಗೆ ತನಿಖೆ ಮಾಡುವ ರೀತಿಗೆ ಹೆಚ್ಚು ಶಕ್ತಿ ತುಂಬುವ ದೃಷ್ಟಿಯಿಂದ ಕೂಡ ಶಾಸಕಾಂಗ ಸಹಾಯ ಮಾಡಬೇಕಾಗುತ್ತದೆ. ತಾವು third degree method ಬಗ್ಗೆ ಉಲ್ಲೇಖ ಮಾಡಿದಿರಿ habitual offenders ಅವರ ಶರೀರಕ್ಕೆ ಎಷ್ಟು ಶಿಕ್ಷೆ ಕೊಟ್ಟರೂ; ಭಯೋತ್ಪಾದಕರು ಅಥವಾ ಸತತವಾಗಿ ಅಪಹರಣ ಮಾಡುವಂತಹವರು, ವೇಶ್ಯಾವಾಟಿಕೆಗೆ ದೂಡುವಂತಹವರು Kingpins, habitual offenders ಗೆ this is the last resort. ಪೊಲೀಸ್ ಇಲಾಖೆಗೆ ಆ ಅಧಿಕಾರ ಕೊಟ್ಟಿರುವುದರಿಂದ ಸತ್ಯವನ್ನು ಹೊರತರಬೇಕಾದರೆ, ಜನರನ್ನು ರಕ್ಷಣೆ ಮಾಡಬೇಕಾದರೆ ಅದನ್ನು ಬಳಸಬೇಕಾಗುತ್ತದೆ. ಆದರೆ ಮಾನವ ಹಕ್ಕುಗಳ ಉಲ್ಲಂಘನೆಯಾಗಬಾರದು. That should be he last resort. Any of our interpretation should be strengthen the morale of the police. ಸಮಸ್ಯೆಗಳಿದ್ದರೆ ಅದನ್ನು ಕಾನೂನು ಸಚಿವರಿಗೆ ತಿಳಿಸಿ ತಿದ್ದುಪಡಿಗಳನ್ನು ತರಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ವಿಚಾರವನ್ನು ಒಪ್ಪಿದೆ. You have told about morality of the Police.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲರು ಒಂದು ಸಲ ಐ.ಪಿ.ಸಿ ಓದಬೇಕು, punishment for adultery ಬಗ್ಗೆ six months imprisonment or one

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

thousand rupees fineನ್ನು ಇನ್ನೂ ಐ.ಪಿ.ಸಿಯಲ್ಲಿ ಇಟ್ಟುಕೊಂಡಿದ್ದರೆ ಕಾನೂನು ಸಚಿವರು ಏನು ಮಾಡಬೇಕು?

**(566) 19–03–2020/ 11–00 ಕೆಹೆಚ್–ಆರ್ಎನ್**

**ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದ್ದು ಅವ್ಯಾಹತವಾಗಿ ನಡೆಯುತ್ತಿರುವ ವಿಚಾರ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** 1800ನೇ ಇಸವಿಯಿಂದಲೂ ಇರುವಂತಹ ಐ.ಪಿ.ಸಿ., ಮತ್ತು ಸಿ.ಆರ್.ಪಿ.ಸಿ. ಸಂಹಿತೆಗಳಿಗೆ ನಾವು ಇದುವರೆವಿಗೂ ಯಾವುದೇ ರೀತಿಯ ಮಾರ್ಪಾಟುಗಳನ್ನು ಮಾಡುವುದಕ್ಕೆ ಆಗಿರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, no doubt. ಆದರೂ ಲಾರ್ಡ್ ಮೆಕಾಲೆಯವರು Indian Penal Code ಅನ್ನು draft ಮಾಡಿದ್ದಾರೆ. Lord Macaulay has drafted the Indian Penal Code. Nobody can escape from the clutches of law. ಮಾನ್ಯ ಸಚಿವರು adultery ಎಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ it is a heinous offence. It is heinous offence involved in moral turpitude. ಅಲ್ಲಿ ಶಿಕ್ಷೆಯನ್ನು ಹೆಚ್ಚು ಮಾಡಬೇಕೆಂದರೆ, ಇದನ್ನು ಪಾರ್ಲಿಮೆಂಟ್‌ನವರು ಮಾಡಬಹುದು. For adultery,Indian Penal Code ಅನ್ನು ತಿದ್ದುಪಡಿ ಮಾಡಿ, ಶಿಕ್ಷೆಯನ್ನು ಹೆಚ್ಚು ಮಾಡಬಹುದು. It can be amended. ಮಾನ್ಯ ಸಚಿವರೇ, ನಾನು ಪಾರ್ಲಿಮೆಂಟ್ ಎಂದು ಹೇಳಿದ್ದೆ. ತಾವು ಆ ಕಡೆ ಮಾತನಾಡುತ್ತಿದ್ದಿರಿ. ಪಾರ್ಲಿಮೆಂಟ್‌ನಲ್ಲಿ Indian Penal Code ಬಗ್ಗೆ ಸಾಕಷ್ಟು ಬಾರಿ ತಿದ್ದುಪಡಿಯಾಗಿದೆ. ತಾವು ಹೇಳಿದ ಹಾಗೆ adultery punishment ಕಡಿಮೆ ಇದೆ. ಮಾನ್ಯ ಸಚಿವರು ಹೇಳಿದ ಹಾಗೆ habitual offenders ಬಗ್ಗೆ ಹೇಳಿದೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ. ಮಾನ್ಯ ಸಹೋದರಿಯಾದ ತೇಜಸ್ವಿನಿಗೌಡರವರು ಹೇಳಿದರು. Truth elicit ಬಗ್ಗೆ hardcore criminals ಗಳಿಂದ ಅಪರಾಧಗಳ ಬಗ್ಗೆ ಮಾಹಿತಿಯನ್ನು ಪಡೆಯುವಾಗ ಪೊಲೀಸ್‌ನವರು ಹೊಡೆಯುವುದು ಸತ್ಯ, ಅದರಲ್ಲಿ ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಮಾನ ಇಲ್ಲ. ಪೊಲೀಸ್‌ನವರು ಹೊಡೆಯದೇ ಇದ್ದರೂ ಕೂಡ ಅಪರಾಧಿಗಳು ಸತ್ಯವನ್ನು ಹೇಳುವುದಿಲ್ಲ. ಆದರೆ, ಈಗೀಗ 10 ವರ್ಷಗಳಿಂದ scientific method ಅನ್ನು ಅಳವಡಿಸುತ್ತಿದ್ದಾರೆ. ಎರಡನೆಯದಾಗಿ, ಅದರಲ್ಲಿ ಯಾವುದೇ ವಿಶೇಷತೆ ಇಲ್ಲ. ಪೊಲೀಸ್‌ನವರು ಹೇಳದೆ ಇದ್ದರೆ ಅವರು ಬಾಯಿ ಬಿಡುವುದಿಲ್ಲ ಎನ್ನುವಂತಹದ್ದು ಸತ್ಯವಾದ ಸಂಗತಿಯಾಗಿದೆ. ಮಾನ್ಯ ಕಾನೂನು ಸಚಿವರು ಹೇಳಿರುವುದೇನೆಂದರೆ, IPC ಬಗ್ಗೆಲಾರ್ಡ್ ಮೆಕಾಲೆಯವರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ, ಸಾಕಷ್ಟು severe imprisonment ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ, ಕೆಲವೊಂದು ತಿದ್ದುಪಡಿ ಮಾಡುವುದು ಬಹಳ ಅವಶ್ಯಕತೆ ಇದೆ. ಆರು ತಿಂಗಳು, ಒಂದು ವರ್ಷ, ಎರಡು ವರ್ಷಗಳ ಶಿಕ್ಷೆಗಳಿಗೆ 1500 ರೂಪಾಯಿಗಳ ದಂಡಗಳಿದೆ ಎಂದರೆ, they don't bother it. ಈಗ ಅವರು adultery ಬಗ್ಗೆ ಹೇಳಿರುವ ವಿಚಾರ ಒಂದು ಸಣ್ಣ ಉದಾಹರಣೆಯಾಯಿತು. ಈಗ Food Adulteration ಬಗ್ಗೆ ತೆಗೆದುಕೊಳ್ಳಿ. Food Adulteration ಬಗ್ಗೆ very simple imprisonment ಇತ್ತು ಎಂದರೆ, it is very hazardous to life. ಇದು ಜೀವಕ್ಕೆ ತೊಂದರೆಯಾಗುತ್ತಿದೆ. ಅದನ್ನು ಯಾರು..it is worse than the murder case.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ,. . .

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರೇ ನೆನ್ನೆ ಮತ್ತು ಇವತ್ತು ಎಲ್ಲಾ ಸೇರಿ ಈಗಾಗಲೇ ಎರಡು ಗಂಟೆಗಳಾಯಿತು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯೀಲ್ಡ್ ಆಗಲಿಲ್ಲವೆಂದರೆ ಅವರೇ ಮಾತನಾಡಲಿ. ಆದರೆ ಈಗ ಶಿಕ್ಷೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇವೆ. ನ್ಯಾಯಾಂಗ ಟಿಪ್ಪಣಿಯಲ್ಲಿ ಏನಾಗಿದೆ ಎಂದರೆ, 'Let a hundred guilty be acquitted, but one innocent should not be convicted', ಆ ನ್ಯಾಯಾಂಗ ಟಿಪ್ಪಣಿ ಕೆಳಗೆ benefit of doubt ಏನಿದೆ, ಅದು ಪೂರ್ತಿ accused ಗೆ ಹೋಗುವುದರಿಂದ, ಇವತ್ತಿನ ದಿವಸ ಬಹಳಷ್ಟು ಅಪರಾಧಗಳು ನಡೆಯುತ್ತಿವೆ. ಇವತ್ತಿನ ದಿವಸ ಹಾಡುಹಗಲೇ ನಮ್ಮ ಎದುರಿಗೆ ಕೊಲೆಯನ್ನು ಮಾಡಿದ್ದಾನೆ. ಇದರ ಬಗ್ಗೆ ಹೋಗಿ ಹೇಳಿದ್ದಾರೆ. Conviction ಇಲ್ಲ ಎಂದು ಜನ ಆಶ್ಚರ್ಯಪಡುತ್ತಾರೆ. A hundred guilty be acquitted, but one innocent

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

should not be convicted, ಇವರ ಮಧ್ಯದಲ್ಲಿ ಆರೋಪಗಳು ಬರಬಹುದು. ಆದರೆ ಒಬ್ಬ ಮುಗ್ಧನಿಗೆ ಶಿಕ್ಷೆಯಾಗುವುದು ತಪ್ಪು ಎನ್ನುವುದು ಒಂದು judicial notion. When the prosecution should prove the guilt beyond reasonable doubt, ಸಾಕ್ಷಿದಾರರು ಏನಿದ್ದಾರೆ, ಆ ಸಾಕ್ಷಿದಾರರನ್ನು hostile ಮಾಡುತ್ತಾರೆ. Prosecution witnesses ಬಗ್ಗೆ ನಮಗೆ ಗೊತ್ತಿದೆ. ಅಪರಾಧಿಯನ್ನು ಎಷ್ಟು ವರ್ಷ ಜೈಲಿಗೆ ಹಾಕುತ್ತಾರೆ, ಆ ಪ್ರಕರಣ committal ಆಗಿ, ಪ್ರಕರಣ ನಡೆಯಬೇಕಾದರೆ ಎಲ್ಲಾ ಸಾಕ್ಷಿದಾರರು ಬಂದು ಕೂಡಲೇ ಪೊಲೀಸ್‌ನವರು ಪಂಚನಾಮಕ್ಕೆ ಸಹಿಯನ್ನು ಮಾಡಿಸಿಕೊಂಡರು. ನಮ್ಮ ಗುರುತು ಇಲ್ಲ. ಏಕೆಂದರೆ, ನಾವು ಇದರ ಬಗ್ಗೆ ನೋಡಿದ್ದೇವೆ. ಈ ರೀತಿಯಾದರೆ ಅವರಿಗೆ ಹೇಗೆ ಶಿಕ್ಷೆಯಾಗಬೇಕು, ಪೊಲೀಸ್‌ನವರ moral ಕಡಿಮೆ ಮಾಡುವ ಬಗ್ಗೆ ನನ್ನದೇನೂ ಇಲ್ಲ. ಇವತ್ತಿನ ದಿವಸ ಬಹಳಷ್ಟು ಎನ್ಕೌಂಟರ್‌ಗಳು ನಡೆಯುತ್ತವೆ. ನೂರಾರು, ಸಾವಿರಾರು ಎನ್ಕೌಂಟರ್‌ಗಳು ನಡೆಯುತ್ತವೆ. ಆ ಎನ್ಕೌಂಟರ್,if it is genuine, I appreciate. If it is a fake one. ಗುಂಡು ಹಾಕಿದ್ದೇವೆ ಎಂದರೆ, ಇದು ಯಾವ ರೀತಿ ಇರಬೇಕು. ಇದಷ್ಟೇ ಅಲ್ಲ, ನಮ್ಮ ವಿಜಯಪುರ ಜಿಲ್ಲೆಯಲ್ಲಿ ತಾವು ಸಹ ನೋಡಿರಬಹುದು. ಅಲ್ಲಿ ಆರೋಪಿಗಳನ್ನು ತೆಗೆದುಕೊಂಡು ಹೋಗಿ ಅವರ ಎದುರಾಳಿಗಳು ಇರುತ್ತಾಲ್ಲವೇ, ಅವರ ಕೈಗೆ ಕೊಟ್ಟು ಬಿಡುತ್ತಾರೆ, ಆಗ ಆ ಆರೋಪಿ ಹೇಳಿದನಂತೆ, ನನ್ನನ್ನು ನೀವೇ ಗುಂಡು ಹಾಕಿ ಕೊಂದುಬಿಡಿ. ತಾವು ನನ್ನ ವೈರಿಗಳ ಕಡೆ ನನ್ನನ್ನು ಕೊಟ್ಟರೆ, ನನ್ನ ಕೈ, ಕಾಲುಗಳನ್ನು ಚೆನ್ನಾಗಿ ತುಂಡು ತುಂಡಾಗಿ ಕತ್ತರಿಸಿ, ಹೊಳೆಯಲ್ಲಿ ಬಿಸಾಕುತ್ತಾರೆ ಎಂದು ಹೇಳಿದ. ಪೊಲೀಸ್‌ನವರ ಕೈ-ಕಾಲುಗಳನ್ನು ಮುಗಿದು ಬೇಡಿ, ಅತ್ತರೂ ಕೂಡ, ಏ, ಮಗನೇ ನಿನ್ನನ್ನು ಅವರ ಕೈಗೆ ಕೊಡುತ್ತೇನೆ ಎಂದು ಹೇಳುತ್ತಾರೆ, ನಾನು ಆ ರೀತಿಯ ಶಬ್ದ ಬಳಕೆ ಮಾಡಿದ್ದೇನೆ. ಪೊಲೀಸ್‌ನವರಿಗೆ ಈ ರೀತಿಯಾಗಿ ಬೈಯ್ದು ಯಾರು ಅವನ rivals ಇದ್ದರು. ಅವರು ಇವನನ್ನು ತೆಗೆದುಕೊಂಡು ಹೋಗಿ ಮುಗಿಸಿದರು. ಬಹಳಷ್ಟು ಪ್ರಕರಣಗಳ ಬಗ್ಗೆ ವರದಿಯಾಗುವುದಿಲ್ಲ. ಎಷ್ಟೋ ಪ್ರಕರಣಗಳು ಬೆಳಕಿಗೆ ಬರದೇ ಹಾಗೆಯೇ ಮುಚ್ಚಿ ಹೋಗುತ್ತವೆ. ನಂತರ ಪ್ರಜಾತಂತ್ರ ಸಂಸ್ಥೆಗಳ ಸ್ವಾಯತ್ತತೆಗೂ ಸಹ ಧಕ್ಕೆಯಾಗುತ್ತದೆ. ಅದು ಒಂದು ಕಡೆ ಇರಲಿ. ಭಾರತ ಗಣರಾಜ್ಯವಾದ ನಂತರ ಕಟ್ಟಿರುವ ಸ್ವಾತಂತ್ರವಾದಂತಹ autonomous ಸಂಸ್ಥೆಗಳು ಏನಿವೆ, ಇವು ಜನಸಾಮಾನ್ಯರ ಜೀವನ ಮಟ್ಟವನ್ನು ಸುಧಾರಣೆ ಮಾಡುವುದಕ್ಕೆ ಬಹು ದೊಡ್ಡ ಕೆಲಸ ಮಾಡಿವೆ. ನಮ್ಮ ಸಂವಿಧಾನದಲ್ಲಿ ನ್ಯಾಯಾಂಗಕ್ಕೆ ಅತ್ಯಂತ ಮಹತ್ವವಾದಂತಹ ಸ್ಥಾನ ಇದೆ. ಶಾಸಕಾಂಗ, ಕಾರ್ಯಾಂಗದಿಂದ ಇವತ್ತಿನ ದಿವಸ ನ್ಯಾಯಾಂಗವನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೇರ್ಪಡಿಸಿ, ನ್ಯಾಯಾಂಗ ಸ್ವಾತಂತ್ರವಾಗಿದೆ. Judiciary should be an independent, ನ್ಯಾಯಾಂಗ ತನ್ನ ತೀರ್ಪುಗಳ ಮುಖಾಂತರ ನಮ್ಮ ಸಂವಿಧಾನ, ಅದರ ಮೂಲತತ್ವಗಳು, ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯವನ್ನು ಉಳಿಸಿ ಬೆಳೆಸುವುದರಲ್ಲಿ ಈ ದೇಶದ ನ್ಯಾಯಲಯಗಳು ಬಹು ದೊಡ್ಡ ಕೊಡುಗೆಗಳನ್ನು ನೀಡಿವೆ. ಇವತ್ತು ಸಂವಿಧಾನ ಮೂಲಭೂತ ತತ್ವಗಳು ಮತ್ತು ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡಬೇಕಾದರೆ, ಸಂವಿಧಾನದ ಆಶಯಗಳು, ಸಂವಿಧಾನದ ಸಿದ್ಧಾಂತಗಳು, ಸಂವಿಧಾನದ ಮೂಲಭೂತ ತತ್ವಗಳನ್ನು ರಕ್ಷಣೆ ಮಾಡುವುದೇ ನ್ಯಾಯಾಲಯ. ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಪ್ರತ್ಯೇಕವಾದಂತಹ ನ್ಯಾಯಾಂಗ, ಇದಕ್ಕೆ ಸ್ವಾತಂತ್ರವಾಗಿ ಕೆಲಸ ಮಾಡುವುದಕ್ಕೆ ನಾವು ಅವಕಾಶ ಮಾಡಿಕೊಡಬೇಕಲ್ಲವೇ, ಈಗ ಏನಾಗಿದೆಯೆಂದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಶೇಕಡಾ 20 ರಷ್ಟು, ಉಚ್ಚ ನ್ಯಾಯಾಲಯದಲ್ಲಿ ಶೇಕಡಾ 40 ರಷ್ಟು ಮತ್ತು ಜಿಲ್ಲಾ ನ್ಯಾಯಾಲಯದಲ್ಲಿ ಶೇಕಡಾ 30 ರಷ್ಟು ನ್ಯಾಯಾಧೀಶರ ಹುದ್ದೆ ಖಾಲಿ ಇವೆ. ಅಲ್ಲಿ ಹೇಗೆ Counseling ಮಾಡಬೇಕು. ನ್ಯಾಯಲಯಕ್ಕೆ ಹೋದವರೆಲ್ಲಾ 'ಗೆದ್ದವನು ಸೋತಂತೆ, ಸೋತವನು ಸತ್ತಂತೆ' ಎನ್ನುವ ಹಾಗೆ. Justice delayed is Justice denied, ಆ ರೀತಿ ಇದೆ. ಮೊನ್ನೆಯ ದಿವಸ ದೆಹಲಿಯಲ್ಲಿ 'goli maro' ಎಂದ ಕೂಡಲೇ ದೆಹಲಿಯ ನ್ಯಾಯಮೂರ್ತಿಗಳು ಎಫ್.ಐ.ಆರ್., ಅನ್ನು ದಾಖಲು ಮಾಡಿ ಎಂದರೆ, ಮುರಳೀಧರ್ ರಾವ್ ಎನ್ನುವಂತಹ ನ್ಯಾಯಮೂರ್ತಿ ರಾತ್ರೋರಾತ್ರಿ ಪಂಜಾಬ್ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿದರು. ನಂತರ ಸರ್ವೋಚ್ಚ ನ್ಯಾಯಾಲಯ ಆಡಳಿತ ನಡೆಸುವವರ ವಿರುದ್ಧ ವಿಮರ್ಶೆ ಮಾಡಿದರೆ, ಪ್ರತಿಭಟನೆ ಮಾಡಿದರೆ ಅದು ರಾಷ್ಟ್ರದ್ರೋಹ ಅಲ್ಲ ಎಂದು ಸರ್ವೋಚ್ಚ ನ್ಯಾಯಾಲಯ has ruled out. ಈ ರೀತಿಯಲ್ಲಿ ನಾವು ನ್ಯಾಯಾಲಯದಲ್ಲಿ interference ಮಾಡಿದರೆ, ನ್ಯಾಯಾಂಗದ ಸ್ವಾತಂತ್ರತೆ ಉಳಿಯುತ್ತದೆಯೇ, ಸಂವಿಧಾನದ ಆಸೆ ಏನು, Judiciary should be independent, and it should uphold the justice.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಅಬ್ದುಲ್ ಜಬ್ಬಾರ್‌ರವರೇ ನಂತರ ತಮಗೆ ಅವಕಾಶವನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳು Press Meet ಮಾಡುವಂತಹ ಸ್ಥಿತಿ ಭಾರತ ದೇಶಕ್ಕೆ ಒದಗಿಬಂತು. It is first of its kind. ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳೇ ಪತ್ರಿಕೆಯ ಮುಖಾಂತರ ಈ ಎಲ್ಲಾ ವ್ಯವಸ್ಥೆಯನ್ನು ನೋಡಿ, ಬೇಜಾರು ಆಗಿ, ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯಾದಂತಹ ಘಟನೆಗಳು ನಡೆಯಬಾರದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ Collegium ಇದೆ. ಸದನದಲ್ಲಿ ಕಾನೂನು ಸಚಿವರು ಇದ್ದಾರೆ. ಇವತ್ತು ನ್ಯಾಯಮೂರ್ತಿಗಳ ನೇಮಕಾತಿ ವಿಚಾರದಲ್ಲಿ Collegium ಶಿಫಾರಸ್ಸು ಮಾಡಿದಂತಹ ಏನು ಪಟ್ಟಿ ಇದೆ. ಅದನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳುವುದಿಲ್ಲ. ಇದನ್ನು ವಿಳಂಬ ಮಾಡಿಕೊಳ್ಳುತ್ತಾ ಹೋಗುವುದು, ಸರ್ವೋಚ್ಚ ನ್ಯಾಯಾಲಯದವರ ಗಮನಕ್ಕೆ ತರದೇ ಉಚ್ಚ ನ್ಯಾಯಾಲಯದವರ ಜೊತೆ ಚರ್ಚೆ ಮಾಡುವುದು. ಇದೆಲ್ಲಾ, ಈ ದೇಶದ ನ್ಯಾಯಾಂಗದ ವ್ಯವಸ್ಥೆಗೆ ಇದು ಒಳ್ಳೆಯದಲ್ಲ. ಇದು ಸಂವಿಧಾನಕ್ಕೆ ವ್ಯತಿರಿಕ್ತವಾದದ್ದು. ಸಂವಿಧಾನದ ಆಶಯಗಳಿಗೆ, ಸಂವಿಧಾನದ ಮೂಲತತ್ವಗಳಿಗೆ, ಸಂವಿಧಾನದ ಸಿದ್ಧಾಂತಗಳಿಗೆ ಅರ್ಥವಾಗುವಂತಹ ನಿರ್ಣಯಗಳು ಇವತ್ತಿನ ದಿವಸ ಆಗುತ್ತಿವೆ. ಇವತ್ತಿನ ದಿವಸ ಭಾರತೀಯ ರಿಸರ್ವ್ ಬ್ಯಾಂಕ್ ಸ್ವತಂತ್ರವಾಗಿ ಕೆಲಸ ಮಾಡುತ್ತಿದೆಯೇ, ಆದಾಯ ತೆರಿಗೆ, Enforcement Directorate, Election Commission ಇವು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಬಿಟ್ಟುಕೊಡಬೇಕಲ್ಲವೇ, ಇವು ಸ್ವತಂತ್ರವಾಗಿ ಕೆಲಸ ಮಾಡದೇ ಇದ್ದರೆ ಇದರ ಮುಂದಿನ ಪರಿಣಾಮ ಏನಾಗುತ್ತದೆ? ಈ ಸಾಯತ್ತ ಸಂಸ್ಥೆಗಳು ಸಂವಿಧಾನಾತ್ಮಕವಾಗಿ ಸ್ಥಾಪನೆ ಮಾಡಿದಂತಹ ಈ ಸಾಯತ್ತ ಸಂಸ್ಥೆಗಳು, ಇಂದೂ ತನಗೆ ತಾನೇ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡುವಂತಹ ಕೆಲಸ ನಮ್ಮದಾಗಿದೆ. ಅಂತಹ ಸ್ವತಂತ್ರವಾಗಿ ನಿರ್ಮಾಣವಾದಂತಹ ರಿಸರ್ವ್ ಬ್ಯಾಂಕ್ ಗವರ್ನರ್‌ರವರೇ ರಾಜೀನಾಮೆಯನ್ನು ಕೊಟ್ಟು ಹೋದರು.

**(567) 19/03/2020/11:10/ಎಸ್‌ಪಿಆರ್/ವಿಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**
ಚುನಾವಣಾ ಆಯೋಗ... ಇನ್ನು ಯಾರನ್ನು ನಂಬಬೇಕು. ನ್ಯಾಯಾಲಯಗಳಲ್ಲಿ ನ್ಯಾಯ ದೊರೆಯುವುದಿಲ್ಲ.ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿದ್ದವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿರುವುದನ್ನು ನಾನು ನಿನ್ನೆಯ ದಿನ ಪತ್ರಿಕೆಯಲ್ಲಿ ನೋಡಿದ್ದೇನೆ. What

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

message will go to the people of India? ಇದರಿಂದಾಗಿ ಈ ದೇಶದ ಜನರಿಗೆ ಯಾವ ರೀತಿಯ ಸಂದೇಶ ಹೋಗುತ್ತದೆ? ನಿವೃತ್ತ ನ್ಯಾಯಮೂರ್ತಿಗಳ ಹೆಸರನ್ನು ಶಿಫಾರಸ್ಸು ಮಾಡಿದರೆ ಏನಾದರೂ ಒಳಒಪ್ಪಂದವಿತ್ತೇ ಎನ್ನುವ ಭಾವನೆಯು ಜನರಲ್ಲಿ ಮೂಡುತ್ತದೆ. Basically, I am a lawyer. ನಾನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಮೂರ್ತಿಗಳ ಬಗ್ಗೆ ಆಪಾದನೆ ಮಾಡುವುದಿಲ್ಲ. What message we are giving to the general public? ನಿನ್ನೆಯ ದಿನ ನಿವೃತ್ತರಾಗಿ . . .

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ನನ್ನ ಆಕ್ಷೇಪವಿಲ್ಲ. ಆದರೆ, . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಮಾತನಾಡಲು ಪ್ರಾರಂಭಿಸಿದರೆ. . .

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರಾಗಿದ್ದವರನ್ನು ಪ್ರಧಾನ ಮಂತ್ರಿಗಳಾಗಿ ಆಯ್ಕೆ ಮಾಡುವಾಗ ನಿವೃತ್ತಿ ನ್ಯಾಯಮೂರ್ತಿಗಳನ್ನು ರಾಜ್ಯಸಭೆಗೆ ಆಯ್ಕೆ ಮಾಡುವುದು ತಪ್ಪೇ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಿವೃತ್ತ ನ್ಯಾಯಮೂರ್ತಿಗಳನ್ನು . . .

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರ ಬಾಯಿಯಿಂದ ಈ ರೀತಿಯ ಮಾತುಗಳು ಬರಬಾರದು. ಆರ್.ಬಿ.ಐ. ಗವರ್ನರ್‌ಗೂ, ನ್ಯಾಯಮೂರ್ತಿಗಳಿಯೂ ಸಂಬಂಧ ಇದೆಯೇ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ,. . .

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರ ಅಷ್ಟಾಗಿ ಮಾತನಾಡಬಾರದು. ನಾವು ತಪ್ಪೇ ಮಾಡಿಲ್ಲವೆಂದು ಹೇಳುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ನಾನು ಬಹಳ ವಿಸ್ತೃತವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. Casual reference ಮಾಡಿದ್ದೇನೆ. ಅದು ಹೀಗೆಯೇ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿಯ ಭಾವನೆಗಳು ಜನರಲ್ಲಿ ಬರಬಾರದು. "*Caesar's wife must be above suspicion*"ಎನ್ನುವ concept ಅನ್ನು ನಾವು ಒಪ್ಪಿಕೊಳ್ಳಬೇಕು.

**ಶ್ರೀ ಎಸ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವ ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾದರೆ, ಒಬ್ಬ ನಿವೃತ್ತ ಐ.ಎ.ಎಸ್. ಅಧಿಕಾರಿ, ನ್ಯಾಯಮೂರ್ತಿ ಅಥವಾ elite class ನಲ್ಲಿ ಇರುವವರು ಹಾಗೂ ಬಹಳ ಸುಶಿಕ್ಷಿತರು, ಅನುಭವವುಳ್ಳವರು ರಾಜ್ಯಸಭೆ ಅಥವಾ ಲೋಕಸಭೆಗಳಿಗೆ ಬರಬಾರದೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಂತಹವರುಗಳು ಬರಬಾರದೆಂದು ನಾನು ಹೇಳಿಲ್ಲ.

**ಶ್ರೀ ಎಸ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ವೇಳೆ ನ್ಯಾಯಮೂರ್ತಿಗಳು ಹಾಲಿ ಕರ್ತವ್ಯನಿರ್ವಹಿಸುತ್ತಿದ್ದಿದ್ದರೆ, ಅಂತಹವರನ್ನು ಆಯ್ಕೆ ಮಾಡಿದಾಗ ಅದು ಘೋರ ಅಪರಾಧವಾಗುತ್ತದೆ. ಇದರ ಬಗ್ಗೆ ಸಂವಿಧಾನದಲ್ಲಿ ಅವಕಾಶವಿದೆಯೆ ಅಥವಾ ಇಲ್ಲವೇ?

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, He has given oath to the President of India.

**ಡಾ॥ ತೇಜಸ್ವಿನಿ ಗೌಡ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಸ್ಥಾನಕ್ಕೆ ಅಗೌರವ ತೋರುವ ಚಾರಿತ್ರ್ಯ ಹೊಂದಿದ್ದಾರಾ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಕೇರಳ ರಾಜ್ಯದ ರಾಜ್ಯಪಾಲರಾದರು. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಆಶಯಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, It is not for the argument.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಭಾರತ ರತ್ನ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬರೆದಿರುವ ಸಂವಿಧಾನದ ಆಶಯಗಳೇನಿವೆ, ಅದರನ್ವಯ ಅಗೌರವ ತರುವ ಚಾರಿತ್ರ್ಯವನ್ನು ಹೊಂದಿದ್ದರೆ ನಾವು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಆಕ್ಷೇಪವನ್ನು ಒಪ್ಪಿಕೊಳ್ಳುತ್ತೇವೆ. ಸಂವಿಧಾನಕ್ಕೆ ಗೌರವ ತರುವ ವ್ಯಕ್ತಿತ್ವ ಹೊಂದಿದವರನ್ನು;

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, Before his retirement he has given so many landmark judgements to the Country. **(ಗೊಂದಲ)** ಮುಖ್ಯ ನ್ಯಾಯಮೂರ್ತಿಗಳಾದವರು ಕೇರಳ ರಾಜ್ಯದ ರಾಜ್ಯಪಾಲರಾಗುತ್ತಾರೆ. It is suspicious.

**(ಗೊಂದಲ)**

**ಶ್ರೀ ಎಸ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾವು ಸುಶಿಕ್ಷಿತರು ಬರುತ್ತಿಲ್ಲವೆಂದು ನಾವು ಹೇಳುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, in the other way it is correct. A week before his retirement, he has given landmark judgement to the Country.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಬಹಳ ಸಮಯದಿಂದ ಮಾತನಾಡುತ್ತಿದ್ದೇನೆಂದು ನನ್ನ ಮೇಲೆ ದೂರಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸುಶಿಕ್ಷಿತರು ಬರಬಾರದು ಎಂದು ಹೇಳುತ್ತಿಲ್ಲ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೀಗೆ ಆಗುತ್ತದೆ. ಆದರೆ, it is not acceptable.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರೇ, ನಾನು causal reference ಮಾಡಿದ್ದೇನೆ. ಅವರು ಏಕೆ ಇಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ? If so, you have accepted it.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದವರು ಸಂಸತ್ತಿನಲ್ಲಿ ಶೇಕಡಾ 30 ರಷ್ಟು ಸದಸ್ಯರಿದ್ದಾರೆ. ಹಾಗಾದರೆ, ಸುಶಿಕ್ಷಿತರು ಬರಲೇಬಾರದೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, This will impact on the entire judiciary system. ದಯಮಾಡಿ defend ಮಾಡಬಾರದು. ಅಂತಹವರು ರಾಜ್ಯಸಭೆಗೆ ಬರಬಾರದು ಎಂದಲ್ಲ. ನ್ಯಾಯಾಂಗ ವ್ಯವಸ್ಥೆಯ ಬಗ್ಗೆ comment ಮಾಡಿ . . .

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ನಿರ್ದಿಷ್ಟ ಪ್ರಕರಣದಲ್ಲಿ ನಾವು defend ಮಾಡುತ್ತೇವೆ. ಆದರೆ ನಿವೃತ್ತ ನ್ಯಾಯಾಮೂರ್ತಿ ಅವರು ರಾಜ್ಯಸಭೆಗೆ ಬರಬಾರದು ಎನ್ನುವಂತಹ ಯಾವುದೇ ವ್ಯಕ್ತಿತ್ವವನ್ನು ಹೊಂದಿಲ್ಲ. ಆದಕಾರಣ . .

**ಶ್ರೀ ಎಂ.ಕೆ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಏಕೆ ಅಂತಹ ವ್ಯಕ್ತಿಗಳನ್ನು ನಾಮಿನೇಟ್ ಮಾಡಬಾರದೇ? **(ಗೊಂದಲ)** ಅಂತಹ ವ್ಯಕ್ತಿಯ ನೇಮಕಾತಿಯ ಬಗ್ಗೆ ಏಕೆ ವಿರೋಧ ಮಾಡುತ್ತಾರೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಪ್ರಣಬ್ ಮುಖರ್ಜಿಯವರನ್ನು ಏಕೆ ಮಾಡಲಿಲ್ಲ? **(ಗೊಂದಲ)** ಈ ವಿಚಾರದಲ್ಲಿ ಚರ್ಚೆ ಮಾಡುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಚೆನ್ನಾಗಿ ಓದಿದವರು, ನಿವೃತ್ತರಾದವರು ರಾಜ್ಯಸಭೆಗೆ ಸಂಸದರಾಗಿ ಆಯ್ಕೆಗೊಳ್ಳುವುದೇ ಅಪರಾಧವೇ? **(ಗೊಂದಲ)** ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದವರೇ ಸಂಸತ್ತಿಗೆ ಬರಬೇಕೇ? ಇಂತಹ ಆಯ್ಕೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅಭಿನಂದಿಸಬೇಕಾಗಿತ್ತು. ಆದರೆ ಅವರೇ ಇದನ್ನು ವಿರೋಧಿಸುತ್ತಿರುವುದು ಸರಿಯಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೀವು ಹೇಳಿದ್ದೀರಿ and it has gone on record. ನಾನು ಹೇಳಿದ್ದನ್ನು ಆಡಳಿತ ಪಕ್ಷದ ಸದಸ್ಯರು ಅರ್ಥಮಾಡಿಕೊಳ್ಳುವುದಿಲ್ಲ. ನಾನು ಇಷ್ಟು careful ಆಗಿ ಸಂಸದೀಯ ವ್ಯವಸ್ಥೆಯಲ್ಲಿ ಯಾವ ರೀತಿಯಾಗಿ ಮಾತನಾಡಬೇಕು ಆ ರೀತಿಯಾಗಿ ನಾನು ಮಾತನಾಡಿದ್ದೇನೆ. I have not taken the name.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ರಾಜಕಾರಣಿಗಳ ಅವರ ವಿರುದ್ಧವಾಗಿ ತೀರ್ಪನ್ನು ನೀಡಿದರೆ, ನ್ಯಾಯಾಧೀಶರುಗಳನ್ನು ಅರ್ಧ ರಾತ್ರಿಯಲ್ಲಿ ವರ್ಗಾವಣೆ ಮಾಡುತ್ತಾರೆ. ಇದು ಯಾವ ರೀತಿಯ ನ್ಯಾಯ? ಅವರಿಗೆ ಬೇಕಾದ ಹಾಗೆ ತೀರ್ಪನ್ನು ನ್ಯಾಯಾಧೀಶರು ನೀಡಿದರೆ, ಅವಶ್ಯವಿದ್ದಲ್ಲಿ ರಾಜಧಾನಿಗೂ ಸಹ ಕರೆದುಕೊಂಡು ಬರುತ್ತಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅರ್ಧಂಬರ್ಧ ವಿಚಾರಗಳನ್ನು ತಿಳಿದುಕೊಂಡು ಆಪಾದನೆ ಮಾಡುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಬಹಳ ತಿಳಿದುಕೊಂಡಿದ್ದಾರೆ. ಅವರೇ ಸರ್ವಜ್ಞ ಎಂದು ಘೋಷಣೆ ಮಾಡಿಕೊಂಡು ಬಿಡಲಿ. ಏಕೆಂದರೆ ಈ ಸದನದಲ್ಲಿರುವವರು ಯಾರೂ ಸಹ ಏನನ್ನೂ ತಿಳಿದುಕೊಂಡು ಬಂದಿಲ್ಲ. ಅವರು ಏಕೆ ಈ ರೀತಿಯ ಆರೋಪವನ್ನು ಮಾಡುತ್ತಾರೆ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ಈ ಸದನದ ಒಬ್ಬ ಸದಸ್ಯರ ಬಗ್ಗೆ ಆ ರೀತಿಯಾಗಿ ಮಾತನಾಡಬಾರದು. ಮಾನ್ಯ ರವಿಕುಮಾರ್‌ರವರ ಸರ್ವಜ್ಞ ಎಂದು ಹೇಳಿಲ್ಲ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರನ್ನು ಕೇಳಬಯಸುವುದೇನೆಂದರೆ, ಕಾನೂನು ವಿಚಾರಗಳಲ್ಲಿ ತಿದ್ದುಪಡಿಯನ್ನು ಮಾಡುತ್ತಿದ್ದಾರೆ. ಬೀದರ್‌ನ ಶಾಹೀನ್ ಶಾಲೆಯಲ್ಲಿ ನಡೆದ ಮಕ್ಕಳ ನಾಟಕಕ್ಕೆ ಸಂಬಂಧಪಟ್ಟಂತೆ ಮಗುವಿನ ತಾಯಿಯನ್ನು ಬಂಧಿಸಿದ್ದಾರೆ. ಇದು ಕಾನೂನಿನ ಪ್ರಕಾರ ಸರಿ ಇದ್ದರೆ, ಅದನ್ನು ಮುಂದುವರೆಸಲಿ. ಒಂದು ವೇಳೆ ಅದು ತಪ್ಪು ಎಂದಾದರೆ, ಕಾನೂನಿಗೆ ಕಡಿವಾಣ ಹಾಕಬೇಕೆಂದು ನಾನು ಹೇಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಪರಿಶೀಲಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಕೇವಲ reference ಮಾಡಿದ್ದೇನೆ. ಏಕೆಂದರೆ ಸಾರ್ವಜನಿಕ ಬದುಕಿನಲ್ಲಿ ನಾವಿರುವಾಗ ಜನರಿಗೆ ತಪ್ಪು ಸಂದೇಶಗಳು ಹೋಗಬಾರದು. "*Caesar's wife must be above suspicion*"ಎನ್ನುವ ಶಬ್ದವನ್ನು ನಾನು ಬಳಕೆ ಮಾಡಿದ್ದೇನೆ. ಅವತ್ತಿನ ದಿವಸ ಮಡಿವಾಳನೊಬ್ಬನು ಸೀತೆಯ ಬಗ್ಗೆ ಕೆಟ್ಟದಾಗಿ ಮಾತನಾಡಿದಾಗ ರಾಜನಾದ ಶ್ರೀ ರಾಮಚಂದ್ರ ಏನು ಮಾಡಿದ? ಆಗ ಶ್ರೀರಾಮಚಂದ್ರನು ತನ್ನ ಪತ್ನಿಯ ಬಗ್ಗೆ ಒಬ್ಬ ಸಾಮಾನ್ಯ ಮನುಷ್ಯನಿಂದ ಆಪಾದನೆಯೊಂದು ಬಂದಾಗ ಅದರ ಮೇಲೆ ಕ್ರಮ ಜರುಗಿಸಿದನು. ಅಂದರೆ ಸಾರ್ವಜನಿಕವಾಗಿ ತಪ್ಪು ಸಂದೇಶ ಹೋಗಲಾರದ ಹಾಗೆ ನಾವು ಬಹಳ careful ಆಗಿರಬೇಕೆನ್ನುವ ವಿಚಾರವನ್ನಿಟ್ಟುಕೊಂಡು ...

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾಹಿತಿಗಳನ್ನು ತರಿಸಿ ನೋಡಬೇಕು. ಇಡೀ Inquiry Commission ಗೆ available ಇರುವವರೆಲ್ಲಾ ನಿವೃತ್ತ ನ್ಯಾಯಾಧೀಶರಾಗಿದ್ದಾರೆ. ಯಾವುದೇ ತನಿಖೆಯನ್ನು ಮಾಡಬೇಕೆಂದರೆ, ತಂಡ ಬೇಕೆಂದರೆ retired Bureaucrats ಇರುತ್ತಾರೆ. ನಾವು ನ್ಯಾಯಾಧೀಶರುಗಳನ್ನು ಬಿಟ್ಟು ಹೊರಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವುದಕ್ಕಾಗಿಲ್ಲ. ಅವತ್ತಿನ ದಿವಸ ನಾನು ಇದೇ ವಿಷಯವನ್ನು ಮಾತನಾಡಿದ್ದೇನೆ. We are capable ಎಂದು ಸಾಬೀತುಪಡಿಸುವುದಕ್ಕೆ ನಾವು ಪ್ರಯತ್ನ ಮಾಡಿಲ್ಲ ಎಂದರೆ ಈ ವಿಷಯದಲ್ಲಿ ಚರ್ಚೆಯನ್ನು ಎಲ್ಲಿಯವರೆಗೆ ಮಾಡೋಣ? ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಶಾಸಕರಾದ ನಾವುಗಳು ನಮ್ಮ ಶಕ್ತಿಯನ್ನು ಅರ್ಥಮಾಡಿಕೊಂಡಿದ್ದರೆ ... ಯಾವುದೇ Bureaucrats ನಿವೃತ್ತರಾಗುವ ಮುನ್ನ ಸಾರ್ವಜನಿಕ ಅಥವಾ ಖಾಸಗಿ ಕಂಪೆನಿಗಳೊಂದಿಗೆ ಒಳಒಪ್ಪಂದವನ್ನು ಮಾಡಿಕೊಳ್ಳದೇ ಅಧಿಕಾರಿಗಳು ಯಾರೂ ಸಹ ನಿವೃತ್ತರಾಗುವುದಿಲ್ಲ. ನಿವೃತ್ತಿಯ ನಂತರದ ದಿನಗಳಲ್ಲಿ ಅಧಿಕಾರಿಗಳ ಮಕ್ಕಳು ಎಲ್ಲಿಗೆ ಹೋಗಿರುವುದನ್ನು ನಾವು ನೋಡಿದ್ದೇವೆಯೇ? ನಾವು ಇಲ್ಲಿ ಯಾವುದೋ ಒಂದು ಪ್ರಕರಣದ ವಿಚಾರಣೆಯನ್ನು ನಡೆಸುತ್ತಿರುತ್ತೇವೆ, ಆದರೆ, ಅಲ್ಲಿ ಅಧಿಕಾರಿಗಳು ಆರಾಮವಾಗಿ ಒಳಒಪ್ಪಂದ ಮಾಡಿಕೊಂಡ ಕಂಪೆನಿಗಳೊಂದಿಗೆ ವ್ಯವಹಾರವನ್ನು ಮಾಡುತ್ತಿರುತ್ತಾರೆ. This cannot be controlled.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಚರ್ಚೆಯನ್ನು ಇಲ್ಲಿಗೆ ಮುಗಿಸೋಣ ಮತ್ತು ಇದಕ್ಕೆ ಮತ್ತೊಂದು ಅವಕಾಶ ನೀಡುವುದು ಬೇಡ. ಅದೇ ರೀತಿಯಾಗಿ ಚುನಾವಣಾ ಆಯೋಗವು ...

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಈ ಚರ್ಚೆಯನ್ನು ಆಮೇಲೆ ಮುಂದುವರೆಸೋಣವೇ? ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಚುನಾವಣಾ ಆಯೋಗ, ಕೇಂದ್ರದ ತನಿಖಾ ದಳ, ಸಿ.ಬಿ.ಐ. ಅಥವಾ CEC (*Central Enforcement Cell*), ಚಲನಚಿತ್ರ ಸೆನ್ಸಾರ್ ಮಂಡಳಿಯಾಗಲಿ ಯಾವುದೇ ಸಂಸ್ಥೆಯಾಗಿರಲಿ ...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇನ್ನು ಐದು ನಿಮಿಷದಲ್ಲಿ ನಿಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ಎಲ್ಲಾ ಸಂಸ್ಥೆಗಳಿಗೆ ಇತ್ತೀಚೆಗೆ ಮಾಡಿರುವ ನೇಮಕಾತಿಗಳು, ಸಂಸ್ಥೆಗಳ ಕಾರ್ಯನಿರ್ವಹಣೆ ಹಾಗೂ ಅವುಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕಾರ್ಯವೈಖರಿಯನ್ನು ನೋಡಿ ಜನರಲ್ಲಿ ಅಸಂತೋಷವುಂಟಾಗಿರುವುದು ಸತ್ಯವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಜ್ಯಾತ್ಯಾತೀತ ಹಾಗೂ ಧರ್ಮನಿರಪೇಕ್ಷಿತ ವ್ಯವಸ್ಥೆಗಳು ಆಪತ್ತಿನಲ್ಲಿವೆ.

**(568)/19-03-2020/11-20/ಎಲ್‌ಎಂ/ವಿಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಜಾತ್ಯಾತೀತ ಧರ್ಮ ನಿರಪೇಕ್ಷಿತ ಎಂದರೆ, ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸಬೇಕು. ಅಂದರೆ ಸರ್ಕಾರಕ್ಕೆ ತನ್ನದೆ ಆದ ಧರ್ಮ ಇರಬಾರದು. ನನ್ನ ಧರ್ಮ ಇದ್ದಂತೆ ಎಂದು ಸರ್ಕಾರ ಹೇಳುವ ಹಾಗೆ ಇಲ್ಲ. ಸರ್ಕಾರ ಎಲ್ಲ ಧರ್ಮಗಳನ್ನು ಸಮಾನತೆಯಿಂದ ನೋಡಬೇಕು ಎನ್ನುವ ವಿಚಾರದಲ್ಲಿ ಈ ಧರ್ಮ ನಿರಪೇಕ್ಷಿತ ಎನ್ನುವ ಪ್ರಶ್ನೆ ಬರುತ್ತದೆ. ಸರ್ಕಾರ ಯಾವುದೇ ಒಂದು ಫರ್ಮಾನು ಹೊರಡಿಸುವ ರೀತಿಯಲ್ಲಿಯು ನಡೆಯಬಾರದು. ಇಂತಹ ರಾಜಕೀಯ ವ್ಯವಸ್ಥೆಗೆ ಧರ್ಮ ನಿರಪೇಕ್ಷಿತ ರಾಷ್ಟ್ರ ಎಂದು ಕರೆಯುತ್ತೇವೆ. ಧರ್ಮ ನಿರಪೇಕ್ಷಿತ ಎಂದರೆ ಧರ್ಮದ ವಿರುದ್ಧ ನಡೆದುಕೊಳ್ಳಬೇಕು ಎಂದು ಅಲ್ಲ. ಆದರೆ ಯಾವುದೇ ಒಂದು ಧರ್ಮದ ನಂಬಿಕೆಗಳು ಅಮಾನವೀಯ, ಅನಾರೋಗ್ಯಕರವಾಗಿರುತ್ತದೆ. ಹಿಂಸಾತ್ಮಕವಾಗಿ, ದಮನಕಾರಿಯಾಗಿರುತ್ತವೆ, ಮಾನವನ ಜೀವನಕ್ಕೆ ಧಕ್ಕೆ ತರುವಂತವು ಇರುತ್ತವೆ. ಅವುಗಳನ್ನು ಬ್ಯಾನ್ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಇದೆ ಎನ್ನುವುದನ್ನು ಹೇಳಬಯಸುತ್ತೇನೆ. ಇತ್ತೀಚೆಗೆ ಮೂಲಭೂತವಾದಿಗಳು, ಕೋಮುವಾದಿ ಶಕ್ತಿಗಳು ದೊಡ್ಡ ಪ್ರಮಾಣದಲ್ಲಿ ತಲೆ ಎತ್ತಿವೆ. ಈ ಶಕ್ತಿಗಳು ಜನರ ಐಕ್ಯತೆಗೆ ಕೊಡಲಿಪೆಟ್ಟು ಹಾಕುವಂತಹ ಕೆಲಸವನ್ನು ಮಾಡುತ್ತವೆ. ಜನರ ಮಧ್ಯ ಗೋಡೆಯನ್ನು ನಿರ್ಮಾಣ ಮಾಡುವಂತಹ ಕೆಲಸವನ್ನು ಮಾಡುತ್ತಿವೆ. ಜನರಲ್ಲಿ ದ್ವೇಷ, ಹಿಂಸೆ, ಅಪನಂಬಿಕೆಗಳನ್ನು ಹುಟ್ಟಿಸುವಂತಹ ವ್ಯವಸ್ಥೆ ನಡೆಯುತ್ತಿದೆ. ಇಂತಹ ಆತಂಕಕಾರಿ ದಮನ ಶಕ್ತಿಗಳು ಎಲ್ಲಾ ಕ್ಷೇತ್ರದಲ್ಲಿ ಇದ್ದಾರೆ. ರಾಜಕಾರಣದಲ್ಲಿ, ಶಿಕ್ಷಣದಲ್ಲಿ, ಆಡಳಿತದಲ್ಲಿ, ಸಿನಿಮಾ ರಂಗದಲ್ಲಿ, ಕ್ರೀಡೆಯಲ್ಲಿ, ಸಂಗೀತ-ಕಲೆಯಲ್ಲಿ, ಪೊಲೀಸ್ ಕ್ಷೇತ್ರದಲ್ಲಿ ಹೀಗೆ ಎಲ್ಲಾ ಕಡೆ ಇವರು ಸರ್ವವ್ಯಾಪ್ತಿಯಾಗಿದ್ದಾರೆ. ಇಂತಹ ದಮನಕಾರಿ ಶಕ್ತಿಗಳು ಎಷ್ಟರಮಟ್ಟಿಗೆ ಇದ್ದಾರೆ ಎಂದರೆ, ಏನು ತಿನ್ನಬೇಕು, ಎಂತಹ ಬಟ್ಟೆ ಧರಿಸಬೇಕು, ಏನನ್ನು ಮಾತನಾಡಬೇಕು, ಹೇಗೆ ನಡೆದುಕೊಳ್ಳಬೇಕು, ಯಾರನ್ನು ಪ್ರೀತಿಸಬೇಕು, ಯಾರನ್ನು ಮದುವೆಯಾಗಬೇಕು, ಯಾರ ಜೊತೆಯಲ್ಲಿ ಮಾತನಾಡಬೇಕು, ಯಾರ ಜೊತೆಯಲ್ಲಿ ವ್ಯವಹಾರ ಮಾಡಬೇಕು, ಎಷ್ಟು ಮಕ್ಕಳನ್ನು ಪಡೆಯಬೇಕು ಇಂತಹ ಖಾಸಗಿ ಬದುಕಿನ ಮೇಲೆ ಈ ಶಕ್ತಿಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫರ್ಮಾನು ಹೊರಡಿಸಿದರೆ ನಮ್ಮ ಭೌತದ ಸಂಸ್ಕೃತಿಯನ್ನು ನಾಶ ಮಾಡಿದ ಹಾಗೆ ಆಗುತ್ತದೆ. ಎಲ್ಲ ಧರ್ಮಗಳಲ್ಲಿಯು ಮತಾಂದರು, ಮೂಲಭೂತವಾದಿಗಳು ಇದ್ದಾರೆ. ಇವರು ಜನರಲ್ಲಿ ಅಭದ್ರತೆ, ಭಯವನ್ನು ಹುಟ್ಟು ಹಾಕುತ್ತಿದ್ದಾರೆ. ಇವುಗಳನ್ನು ಹಿಮ್ಮೆಟ್ಟಿಸುವಂತಹ ಕೆಲಸವಾಗಬೇಕಾಗಿದೆ. ಹಿಮ್ಮೆಟಿಸುವಂತಹ ಕೆಲಸವನ್ನು ಮಾಡದಿದ್ದರೆ ದೇಶದ ಭವಿಷ್ಯಕ್ಕೆ ಒಳ್ಳೆಯದಲ್ಲ. ಒಂದು ಗುಂಪಿಗೆ ಸೇರಿದ ನಾಯಕರು ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ತಮ್ಮ ವಿರೋಧಿಗಳ ತಲೆ ಸೀಳಿದರೆ, ಕೈಕಾಲು ಮುರಿದರೆ, ನಾಲಿಗೆ ಸೀಳಿದರೆ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಘೋಷಣೆ ಮಾಡುತ್ತಾರೆ. ಒಂದು ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿ ಘೋಷಣೆಗಳನ್ನು ಮಾಡಿದರೆ ಪರಿಸ್ಥಿತಿ ಎಲ್ಲಿಗೆ ಹೋಗಿ ಮುಟ್ಟುತ್ತದೆ? ಇದು ಸಂವಿಧಾನಕ್ಕೆ ಸವಾಲಾಗಿದೆ(challenge) ಎನ್ನುವುದನ್ನು ಹೇಳಬಯಸುತ್ತೇನೆ. ಧರ್ಮ ನಿರಪೇಕ್ಷಿತ ಎಂದರೆ, ರಾಜಕಾರಣವನ್ನು ಧರ್ಮದಿಂದ ಬೇರ್ಪಡಿಸುವುದು. ಇಂದು ಧರ್ಮಪೀಠಗಳು, ಧರ್ಮಗುರುಗಳು ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಎಷ್ಟು ಜನ ಚುನಾವಣೆಯಲ್ಲಿದ್ದಾರೆ, ರಾಜಕಾರಣ ಧರ್ಮಗುರುಗಳ ಕೈಯಲ್ಲಿ ಹೋಗುವಂತಹ ಅಪಾಯಕಾರಿ ಸೂಚನೆ ಬಂದಿದೆ. ಧರ್ಮ ನಿರಪೇಕ್ಷಿತಕ್ಕೆ ಮತ್ತು ಭೌತಿಕಕ್ಕೆ ಧಕ್ಕೆ ಬಂದಿರುವುದರಿಂದ ಸಮಾಜದಲ್ಲಿ ಶಾಂತಿಗೆ ಧಕ್ಕೆಯಾಗಿದೆ. ಇದರಿಂದ ನಿಶ್ಚಿತವಾಗಿ ದೇಶದ ಪ್ರಗತಿ ಕುಂಠಿತವಾಗುತ್ತದೆ. ಹಿಂಸೆಯಾಗುತ್ತದೆ, ಜನರಲ್ಲಿ ಭಯ ಮತ್ತು ಅಭದ್ರತೆ ಕಾಡಲು ಕಾರಣವಾಗುತ್ತದೆ. ಇಂದೊಂದು ಸಂವಿಧಾನಕ್ಕೆ ಇರುವಂತಹ ಪ್ರಮುಖವಾದ ಸವಾಲು ಎನ್ನುವುದನ್ನು ಹೇಳಬಯಸುತ್ತೇನೆ.

ಕಲ್ಯಾಣ ರಾಜ್ಯದ ಕಲ್ಪನೆ ಇದೆ. ಇದು ಜನಾದೇಶದಿಂದ ಬಂದಿರುವುದು. ಇದು ಕೂಡಾ ಇಂದು ಮಾಯವಾಗುತ್ತಿದೆ. No doubt, ವಿಜ್ಞಾನ ಕ್ಷೇತ್ರದಲ್ಲಿ, ಉನ್ನತ ಶಿಕ್ಷಣದಲ್ಲಿ, ತಂತ್ರಜ್ಞಾನ ಕ್ಷೇತ್ರದಲ್ಲಿ, ಬಾಹ್ಯಾಕಾಶ ಕ್ಷೇತ್ರದಲ್ಲಿ, ಮಾಹಿತಿ ತಂತ್ರಜ್ಞಾನದಲ್ಲಿ, ಸಾರಿಗೆ ಇತ್ಯಾದಿ ಕ್ಷೇತ್ರಗಳಲ್ಲಿ ಭಾರತ ಬಹು ದೊಡ್ಡ ಸಾಧನೆ ಮಾಡಿದೆ. ಈ ಸಾಧನೆ ಪರಿಣಾಮದಿಂದ ಕೈಗಾರಿಕೆಗಳು ಬೆಳೆದು, ಉತ್ಪಾದನೆ ಹೆಚ್ಚಾಗಿದೆ, ಕೃಷಿ ಉತ್ಪಾದನೆಯಲ್ಲಿ ಹೆಚ್ಚಾಗಿದೆ. ಸೇವಾ ಕ್ಷೇತ್ರದಲ್ಲಿ ಅಪಾರ ಸಂಪತ್ತನ್ನು ಗಳಿಸಿದ್ದಾರೆ. ಈ ಎಲ್ಲ ಕ್ಷೇತ್ರಗಳಿಂದ ಬಂದಂತ ಸಂಪತ್ತು ಯಾರ ಹಿಡಿತದಲ್ಲಿದೆ ಎನ್ನುವುದು ಬಹಳ ಮುಖ್ಯವಾದದ್ದು. ಒಂದು ಕಾಲದಲ್ಲಿ ಎಲ್ಲಾ ಸಂಪತ್ತು ಒಬ್ಬ ಶ್ರೀಮಂತನ ಕೈಯಲ್ಲಿ ಇದೆ ಎಂದರೆ, ಅದು ಹನಿ-ಹನಿಯಾಗಿ ಎಲ್ಲ ಬಡವರಿಗೆ ಬಂದು ಸೇರುತ್ತದೆ ಎನ್ನುವ ಮಾತು ಇತ್ತು. ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದಾನೆ ಎಂದರೆ, ಅಲ್ಲಿಯ ಜನರಿಗೆ ಒಳ್ಳೆಯದಾಯಿತು ಬಡವರ ಸಹಾಯಕ್ಕೆ ಬರುತ್ತಾರೆ, ನಮ್ಮನ್ನು ಎತ್ತಿ ಹಿಡಿಯುತ್ತಾರೆ ಎನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತು ಹಿಂದೆ ಇತ್ತು. ಶ್ರೀಮಂತರ ಸಂಪತ್ತು ಬಡವರಿಗೆ ಬಂದು ಸೇರುತ್ತದೆ ಎನ್ನುವ ವಾದವೇ ಇದು ಸುಳ್ಳಾಗಿದೆ. ಇದರಿಂದ ಭಾರತ ದೇಶದಲ್ಲಿ ಅಸಮಾನತೆ ಹೆಚ್ಚಾಗುತ್ತಿದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಮಾತನಾಡಲು ಪ್ರಾರಂಭ ಮಾಡಿ ಎರಡೂವರೆ ಗಂಟೆಯಾಯಿತು. ಇನ್ನು ಐದು ನಿಮಿಷ ಮಾತನಾಡಿ ಮುಕ್ತಾಯಗೊಳಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಮಧ್ಯದಲ್ಲಿ ಎಲ್ಲರೂ ಮಾತನಾಡುತ್ತಿರುವುದರಿಂದ ತಡವಾಗುತ್ತಿದೆ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನಾನು ಮಾತನಾಡಿ ಮುಕ್ತಾಯಗೊಳಿಸುತ್ತಿದೆ. ಈ ದೇಶದ ಸಂಪತ್ತು ಕೆಲವೇ ಕೆಲವು ಜನರಲ್ಲಿ ಕ್ರೋಢಿಕರಣವಾಗಬಾರದು. 1% ರಷ್ಟು ಇರುವಷ್ಟು ಜನರ ಕೈಯಲ್ಲಿ ದೇಶದ 58% ಸಂಪತ್ತು ಇದೆ. 9% ರಷ್ಟು ಜನರಲ್ಲಿ ದೇಶದ 22% ಸಂಪತ್ತು ಸೇರಿದೆ, 25% ರಷ್ಟು ಸಂಪತ್ತು ಉಳಿದವರ ಕೈಯಲ್ಲಿದೆ. ಈ ರೀತಿ ದೇಶದಲ್ಲಿ ಅಸಮಾನತೆ ಇರಬಾರದು. ಸಮಾನ ಸಮಾಜ ಮಾಡುತ್ತೇವೆ, ಸಮಾನತೆ ಎನ್ನುವುದು, it is mentioned in the very preamble of the Indian Constitution. ಪೀಠಿಕೆಯಲ್ಲಿ ಇದೆ. ಇದಕ್ಕೆ ವ್ಯತರಿಕ್ತವಾದ ಕೆಲಸಗಳು ಇಂದು ನಡೆಯುತ್ತಿವೆ. ಇದರ ಜೊತೆಗೆ ಒಂದು ಭ್ರಷ್ಟಾಚಾರ ಅತಿ ಹೆಚ್ಚಾಗಿದೆ. ಅದರ ಬಗ್ಗೆ ಮಾತನಾಡುವುದರಲ್ಲಿ ಯಾವುದೇ ಅರ್ಥವಿಲ್ಲ ಎನ್ನುವಷ್ಟರ ಮಟ್ಟಿಗೆ it has become integral part of a every human being. ಭ್ರಷ್ಟಾಚಾರ ಇಂದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಸೂಕ್ಷ್ಮ ಕ್ಷೇತ್ರವಾದ ರಕ್ಷಣಾ ಇಲಾಖೆ, ಸಂಶೋಧನೆ, ನ್ಯಾಯಾಂಗ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆಗಳಲ್ಲಿ ಭ್ರಷ್ಟಾಚಾರ ಹಬ್ಬಿದೆ. ಇಂದು Yes Bank ನ ಸ್ಥಿತಿ ಏನಾಗಿದೆ ನೋಡಬಹುದು, "Vijay *Mallya*, *Lalit* Modi, Nirav Modiand Mehul Choksi.ಇವರು ಸಾರ್ವಜನಿಕ ಬ್ಯಾಂಕ್‌ಗಳಿಂದ ಲಕ್ಷಾಂತರ ಕೋಟಿ ಹಣವನ್ನು ತೆಗೆದುಕೊಂಡು ವಿದೇಶಕ್ಕೆ ಪಲಾಯನ ಮಾಡಿ ಭೋಗ ಜೀವನವನ್ನು ನಡೆಸುತ್ತಿದ್ದಾರೆ. ಮಾನ್ಯ ಸಭಾಪತಿಯವರೆ ನಾಲ್ಕು ರಾಷ್ಟ್ರೀಕೃತ ಬ್ಯಾಂಕ್‌ಗಳು ನಿಮ್ಮಲ್ಲಿಯೇ ಹುಟ್ಟಿವೆ. ಬ್ಯಾಂಕಿಂಗ್ ವ್ಯವಸ್ಥೆ ಬಗ್ಗೆ ನಿಮಗೆ ಗೊತ್ತಿದೆ. ಬ್ಯಾಂಕ್‌ನಲ್ಲಿ ಇಟ್ಟಿರುವ ಹಣ ಯಾರದು? ಜನರು ತಮ್ಮ ಆಪತ್ತು ಕಾಲಕ್ಕೆ ಬೇಕಾಗುತ್ತದೆ. ಆಸ್ಪತ್ರೆ ವೆಚ್ಚಕ್ಕೆ, ಮಕ್ಕಳ ವಿದ್ಯಾಭ್ಯಾಸಕ್ಕೆ, ಮಕ್ಕಳ ಮದುವೆಗೆ ಎಂದು ಹೊಟ್ಟೆಗೆ ತಿನ್ನದೆ, ಹೊಟ್ಟೆ ಕಟ್ಟಿ ಹಣವನ್ನು ಇಟ್ಟಿರುತ್ತಾರೆ. ಹಾಗೆ ಇಟ್ಟಿರುವ ಕೋಟ್ಯಾಂತರ ರೂಪಾಯಿಗಳನ್ನು ದೊಡ್ಡವರು ಲಪಟಾಯಿಸಿಕೊಂಡು ಹೋಗುತ್ತಿದ್ದಾರೆ. ಇವತ್ತು NPA ಎಲ್ಲಿಗೆ ಬಂದಿದೆ? Bad and doubtful debts, non-

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

performance assets. ಇವತ್ತು ಬ್ಯಾಂಕನ್ನುamalgamation ಮಾಡಿದರು. ಇಲ್ಲದಿದ್ದರೆ Yes Bank ಗೆ ಆದ ಗತಿಯೇ ಆ ಬ್ಯಾಂಕ್‌ಗೆ ಆಗುತ್ತಿತ್ತು. ಬ್ಯಾಂಕ್‌ಗಳು ಏಕೆ ದಿವಾಳಿಯಾಗುತ್ತಿದೆ? Bankruptcy, insolvency ಆಗುತ್ತವೆ ಎಂದರೆ, ಇತಿಮಿತಿ ತಪ್ಪಿ ಸಾಲವನ್ನು ಕೊಡುವುದು, ತೆಗೆದುಕೊಂಡುವವರು ಹಣ ಕಟ್ಟದೆ ಲಪಟಾಯಿಸುವುದರಿಂದ ಹೀಗಾಗುತ್ತದೆ. ಇವತ್ತು ದೊಡ್ಡ-ದೊಡ್ಡ ಕೈಗಾರಿಕೋದ್ಯಮಿಗಳ ಕೋಟ್ಯಾಂತರ ರೂಪಾಯಿ ಸಾಲವನ್ನು ಮನ್ನಾ ಮಾಡುತ್ತಾರೆ. ಆದರೆ ಸಾಮಾನ್ಯ ಜನರ ಕಷ್ಟಗಳಿಗೆ ನಾವು ಭಾಗಿಯಾಗುವುದಿಲ್ಲ. ಈ ದೇಶದ ಅನ್ನದಾತನ ಬಗ್ಗೆ ನಮಗೆ ಲಕ್ಷವಿಲ್ಲ. ಇವತ್ತು ಡಾ: ಮನಮೋಹನ್ ಸಿಂಗ್‌ರವರನ್ನು ನಾವು ನೆನಪಿಸಿಕೊಳ್ಳಬೇಕು. ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಈ ದೇಶದ ಬಡ ರೈತರ 72,000 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರು. ಬಡವರ, ರೈತರ ಸಾಲವನ್ನು ಮನ್ನಾ ಮಾಡುವುದನ್ನು ಬಿಟ್ಟು, ದೊಡ್ಡ ದೊಡ್ಡ ಉದ್ದಿಮೆಗಳವರ ಲಕ್ಷಾಂತರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರೆ, ಈ ಸಮಾಜದಲ್ಲಿ ಸಮಾನತೆಯನ್ನು ನಿರ್ಮಾಣ ಮಾಡಲು ಸಾಧ್ಯವಿದೆಯೇ?

**ಶ್ರೀ ಜೆ.ಎಸ್.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಮಾಜಿ ಪ್ರಧಾನಿಗಳಾದ ಡಾ: ಮನಮೋಹನ ಸಿಂಗ್‌ರವರು 72,000 ಕೋಟಿ ರೂ.ಗಳನ್ನು ಮನ್ನಾ ಮಾಡಿ cut-off date ಕೊಟ್ಟರು, ಬ್ಯಾಂಕ್‌ಗಳು ತಮ್ಮ NP account clear ಮಾಡಿಕೊಂಡರು. ರೈತರಿಗೆ ಏನು ಸಹಾಯ ಮಾಡಲಿಲ್ಲ. ಅದರಲ್ಲಿ ನಾವೆಲ್ಲರೂ ಫಲಾನುಭವಿಗಳು.

**ಶ್ರೀ ಎಸ್.ಆರ್.ಪಾಟೀಲ್:-** ಡಾ: ಮನಮೋಹನ್ ಸಿಂಗ್‌ರವರು ಸಾಲ ಮನ್ನಾ ಮಾಡಿರುವುದು ಸರಿಯಿಲ್ಲ ಎಂದು ಹೇಳುತ್ತೀರಾ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮನ್ನಾ ಮಾಡಿರುವುದು ಸರಿಯಿಲ್ಲ ಎಂದು ಹೇಳುತ್ತಿಲ್ಲ, ಮಾಡಿರುವುದು ಸರಿ ಇದೆ. ಆದರೆ ಅದರ beneficiary ಬ್ಯಾಂಕ್‌ಗಳು, ರೈತರಲ್ಲ. ಅದೇನೊ cut-off date ಕೊಟ್ಟರು, ಅದರಿಂದ ನಮಗ್ಯಾರಿಗೂ ಸಹಾಯವಾಗಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಮಂತ್ರಿಗಳು ಬಹಳ ಜಾಣರಾಗಿ ಮಾತನಾಡುತ್ತಿದ್ದಾರೆ. ಅವರು ಈ ರೀತಿ ವಿತಂಡವಾದ ಮಾಡಿದರೆ ನಾವೇನು ಹೇಳಲು ಆಗುವುದಿಲ್ಲ. ವಿಶೇಷವಾಗಿ ಮಾನ್ಯ ಮಂತ್ರಿಗಳ ಮೇಲೆ ನನಗೆ ಗೌರವವಿದೆ. ಗುಣಕ್ಕೆ ಮತ್ಸರವಿರಬಾರದು. ನೀವು ಒಳ್ಳೆಯದು ಮಾಡಿದಾಗ ತತಾಸ್ತು ಎಂದು ಹೇಳಿ ಅಭಿನಂದಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಗಳೆ, ತಾವು ದಯಮಾಡಿ 10ವರ್ಷಗಳ ಹಿಂದಿನ ಮಾಹಿತಿಯನ್ನು ಬ್ಯಾಂಕ್‌ಗಳಿಂದ ತರಿಸಿಕೊಂಡು ನೋಡಿ,cut-off date ಕೊಟ್ಟಿರುವುದರಿಂದ ಯಾರಿಗೆ ಹೆಚ್ಚು ಲಾಭವಾಗಿದೆ ಎನ್ನುವ ಬಗ್ಗೆ ಸ್ವಲ್ಪ ಮಾಹಿತಿ ತೆಗೆದುಕೊಳ್ಳಿ.

**(569)19–03–2020(11–30)ಬಿಎಸ್‌ಡಿ–ಬಿಎನ್‌ಎಸ್**

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸದಸ್ಯರು ದಯಮಾಡಿ ಬ್ಯಾಂಕ್‌ಗಳಿಂದ ಮಾಹಿತಿಯನ್ನು ತರಿಸಿಕೊಳ್ಳಬೇಕು. 10 ವರ್ಷಗಳ cutoff date ನೋಡಿ, ಇದರಿಂದ ಯಾರಿಗೆ ಹೆಚ್ಚು ಪ್ರಯೋಜನವಾಗಿ ಎಂಬ ಮಾಹಿತಿಯನ್ನು ತೆಗೆದುಕೊಳ್ಳಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯವು ಈಗ ಗಗನಕುಸುಮವಾಗಿದೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರು ' ಸಾಮಾಜಿಕ ನ್ಯಾಯ ಭಿಕ್ಷೆಯಲ್ಲ, ಅದೊಂದು ಹಕ್ಕು' ಎಂದು ಹೇಳುತ್ತಾರೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಸಾಮಾಜಿಕ ನ್ಯಾಯದ concept ಶುರು ಮಾಡಿದರು. 900 ವರ್ಷಗಳ ಹಿಂದೆ ಸಾಮಾಜಿಕ ನ್ಯಾಯದ concept ಬಂತು, ಈಗ ಬಂದಿಲ್ಲ. ಹಿಂದೆಯೇ ಯೋಚನೆ ಮಾಡಿ ತಂದಿದ್ದಾರೆ. ಹಿಂದುಳಿದವರು, ಬಡವರು, ದುರ್ಬಲರು, ತುಳಿತ ಮತ್ತು ಶೋಷಣೆಗೆ ಒಳಗಾದವರಿಗೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ಮೇಲೆತ್ತುವ ಸಲುವಾಗಿ ಸಾಮಾಜಿಕ ನ್ಯಾಯದ concept ಇದೆ. ಅವರಿಗೆ ಕಾರ್ಯಕ್ರಮಗಳನ್ನು ರೂಪಿಸಿ, ಅನೇಕ ಶಾಸನಗಳನ್ನು ಮಾಡಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಬಲಾಢ್ಯ ಮಾಡುವ ಸಲುವಾಗಿ ಸಾಮಾಜಿಕ ನ್ಯಾಯದ concept ಬಂದಿದೆ. ಈಗ ಸಾಮಾಜಿಕ ನ್ಯಾಯ ಉಳಿದಿದೆಯೇ? ದೇಶಕ್ಕೆ ಸ್ವಾತಂತ್ರ್ಯ ಬಂದು 73 ವರ್ಷಗಳು ಕಳೆದಿದ್ದು, ಬೇಕಾದಷ್ಟು ಕಾರ್ಯಕ್ರಮಗಳನ್ನು ರೂಪಿಸಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ವಿಕಲಚೇತನರು, ಬಡವರು ಹಾಗೂ ವೃದ್ಧರ ಬದುಕು ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ. ಆದರೆ ಮಾನ್ಯ ಸಭಾಪತಿಯವರೆ, ಖಾಸಗೀಕರಣ ಮತ್ತು ಜಾಗತೀಕರಣದಲ್ಲಿ ಅದರದೇ ಆದ ವ್ಯಾಪಾರೀಕರಣ ಬೆಳೆಯುತ್ತಿದೆ. ಅತೀಯಾದ ವ್ಯಾಪಾರೀಕರಣ ಬೆಳೆದು ಕಾರ್ಮಿಕರು ಬೀದಿ ಪಾಲಾಗಿದ್ದಾರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಗ್ರಾಮಾಂತರ ಜನರು ಗುಳೆ ಹೋಗುತ್ತಿದ್ದಾರೆ, ಗ್ರಾಮಗಳು ಸೊರಗುತ್ತಿದ್ದು, ನಗರಗಳು ದಷ್ಟಪುಷ್ಟವಾಗುತ್ತಿವೆ. ಅಂದರೆ ನಗರಗಳಲ್ಲಿ ಕೊಳಗೇರಿಗಳು ಹೆಚ್ಚಾಗುತ್ತಿದ್ದು, slum area is

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

increasing day by day, ಏಕೆ? ಗ್ರಾಮೀಣ ಭಾಗದ ಜನರು migrate ಆಗಿ ವಲಸೆ ಹೋಗುವುದಕ್ಕೆ ಪ್ರಾರಂಭಿಸಿದ್ದು, ನಗರಕ್ಕೆ ಬಂದ ಕೂಡಲೇ slum ನಲ್ಲಿಯೇ ವಾಸ ಮಾಡಬೇಕು. Slum ಗಳು ಬೆಳವಣಿಗೆಯಾಗುವುದಕ್ಕೆ ಪ್ರಾರಂಭವಾಗಿದೆ. ಸಾಮಾಜಿಕ ನ್ಯಾಯಕ್ಕೆ ಬಹಳ ಮಹತ್ವವಾಗಿ ಒತ್ತು ಕೊಡಬೇಕು. ಸಾಮಾಜಿಕ ನ್ಯಾಯ ದೂರ ಆದರೆ ವರ್ಗಗಳಿಗೆ ತೊಂದರೆ ತಪ್ಪಿದ್ದಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಹೇಳುವುದಾದರೆ 1948 ರಲ್ಲಿ ವಿಶ್ವಸಂಸ್ಥೆಯವರು ಮಾನವ ಹಕ್ಕುಗಳ ಬಗ್ಗೆ ಒಂದು ಘೋಷಣೆ ಮಾಡಿದರು. ಅದೇ ಸಮಯದಲ್ಲಿ ನಮ್ಮ ಸಂವಿಧಾನವೂ ರಚನೆಯಾಗುತ್ತಿದ್ದು, ವಿಶ್ವಸಂಸ್ಥೆಯ ಘೋಷಣೆಯು ಬಹಳ impressive ಅನಿಸಿತು. ಬಹಳ ಖುಷಿ ಎನಿಸಿತು. ಮಾನವ ಹಕ್ಕುಗಳ ಬಗ್ಗೆ ನಮ್ಮ ಸಂವಿಧಾನದ ಅನೇಕ ಅನುಚ್ಛೇದದಲ್ಲಿ ಸೇರಿಸಿದರು. ನಮ್ಮ ಭಾರತದ ಸಂಸತ್ ಕೂಡ 1993 ರಲ್ಲಿ ಮಾನವ ಹಕ್ಕುಗಳ ಕಾಯ್ದೆಯನ್ನು ಘೋಷಣೆ ಮಾಡಿತು. ಇವತ್ತು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಾನವ ಹಕ್ಕುಗಳ ಕಾಯ್ದೆ ಬಂದಿದೆ. ಆದರೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಈ ಮಾನವ ಹಕ್ಕುಗಳ ಉಲ್ಲಂಘನೆಯು ಸರ್ಕಾರದಿಂದ, ಪೊಲೀಸರಿಂದ ಮತ್ತು ಸೈನಿಕರಿಂದ ಉಲ್ಲಂಘನೆಯಾಗುತ್ತಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಭಯೋತ್ಪಾದಕರಿಂದ, ಉಗ್ರಗಾಮಿಗಳು ಮತ್ತು ಮೂಲಭೂತವಾದಿಗಳಿಂದ, ಕೋಮುವಾದಿಗಳು ಹಾಗೂ ಮಾಫಿಯಾಗಳಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗುವಂತಹ ಸ್ಥಿತಿ ಇದೆ. ಇದನ್ನು ಹದ್ದುಬಸ್ತು ಮಾಡುವಂತಹ ಕೆಲಸ ಆಗಬೇಕಾಗಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಥವಾ ರಾಜ್ಯ ಮಾನವ ಹಕ್ಕುಗಳ ಆಯೋಗ ಇರಬಹುದು, ಇವುಗಳು ಕ್ರಿಯಾಶೀಲತೆಯುಳ್ಳ ಬದ್ಧತೆಯಿಂದ ಕೆಲಸ ಮಾಡಬೇಕು. ರಾಜಕೀಯ ಇಚ್ಛಾಶಕ್ತಿಯ ಕೊರತೆಯೂ ಆಗಬಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೇವಲ ಅಭಿವೃದ್ಧಿಯಾದರೆ ಕೊನೆಯಲ್ಲ, ಆದರೆ ಮಾನವತೆಯನ್ನು ಒಳಗೊಂಡ ಅಭಿವೃದ್ಧಿಯ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಸಭಾಪತಿಯವರೇ, ಈಗ ಇಷ್ಟೆಲ್ಲಾ ಹೇಳಿದ್ದರೂ ಮುಂದಿನ ದಾರಿ ಏನು ಎಂಬುದನ್ನು ಹೇಳಿ ಮುಗಿಸಿಬಿಡುತ್ತೇನೆ. ತಾವು ಬಹಳ ಅವಸರ ಮಾಡುತ್ತಿದ್ದೀರಿ.

**ಸಭಾಪತಿಯವರು:–** ಅವಸರ ಅಲ್ಲ, ಎರಡೂವರೆ ಗಂಟೆ ಆಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡುವಾಗ ಎಷ್ಟು ಸಮಯ ಮಾತನಾಡುತ್ತಾರೆ ಎಂದು ಕೇಳಿದ್ದಕ್ಕೆ ಒಂದು 10

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಮಿಷ ಎಂದು ಹೇಳಿದರು. ಆಗ ನಾನು 10 ನಿಮಿಷ ಎಂದರೆ ಒಂದು ಗಂಟೆ ಮಾತನಾಡಬಹುದು ಎಂದು ತಿಳಿದುಕೊಂಡೆನು. ಆದರೆ ಈಗ ಎರಡೂವರೆ ಗಂಟೆಗಳ ಸಮಯ ಕಳೆದಿದೆ. ಅವರು ಇನ್ನು ಮಾತನಾಡಲಿ, ಅವರು ಮಾತನ್ನು ಮುಕ್ತಾಯ ಮಾಡಲಿ ಎಂದು ನಾನು ಈ ಮಾತನ್ನು ಹೇಳುತ್ತಿಲ್ಲ. ಆದರೂ ಎರಡೂವರೆ ಗಂಟೆಗಳ ಸಮಯ ಮಾತನಾಡಿದ್ದಾರೆ ಎಂದು ತಮ್ಮ ಮೂಲಕ ಅವರಿಗೆ ನೆನಪು ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವುಗಳು ತಮ್ಮ Chamber ನಲ್ಲಿ ಆಪ್ತಲೋಚನೆ ಮಾಡಿದ ವಿಷಯಗಳನ್ನು ಸದನದಲ್ಲಿ ಮಾತನಾಡಬಾರದು. ಕೆಲವೊಮ್ಮೆ ವಿಚಾರಗಳನ್ನು ಅವರು ಮಾತನಾಡಿರುತ್ತಾರೆ ಮತ್ತು ನಾವೂ ಮಾತನಾಡಿರುತ್ತೇವೆ. ಅವುಗಳು ನಮ್ಮ ಮಧ್ಯೆ ಇರಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಸಂವಿಧಾನವನ್ನು ನಾವು ರಕ್ಷಿಸಿದಾಗ ಸಂವಿಧಾನವು ನಮ್ಮನ್ನು ರಕ್ಷಿಸುತ್ತದೆ. ಮಾನ್ಯ ಕೆಂಗಲ್ ಹನುಮಂತಯ್ಯನವರು " ಧರ್ಮೋ ರಕ್ಷತಿ ರಕ್ಷಿತಃ" ವಿಧಾನ ಸೌಧದ ಮೇಲೆ ಕೆತ್ತಿಸಿದ್ದಾರೆ. ಅದೇರೀತಿ ನಾವು ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನವು ನಮ್ಮನ್ನು ರಕ್ಷಿಸುತ್ತದೆ. ಸಂವಿಧಾನವನ್ನು ಹಾಗೂ ಸಂವಿಧಾನದ ಆಶಯಗಳನ್ನು ಉಳಿಸಿಕೊಂಡು ಹೋಗಬೇಕು. ನಾವಷ್ಟೇ ಸುರಕ್ಷಿತ ಇರುವುದಲ್ಲದೇ ಮುಂದಿನ ಪೀಳಿಗೆ ಸಹ ಸುರಕ್ಷಿತವಾಗಿರುತ್ತದೆ. ಸಂವಿಧಾನವೆಂದರೆ ಎಷ್ಟು ಅದ್ಭುತವಾದ ನಮ್ಮ ದೇಶದ ಧರ್ಮಗ್ರಂಥ!. ಇದು ನಮ್ಮ ದೇಶದ ಮಹಾಗ್ರಂಥ! ವಿವಿಧ ಧರ್ಮ, ಜಾತಿ, ಸಂಸ್ಕೃತಿ, ನಂಬಿಕೆ ಮತ್ತು ಅಭಿಪ್ರಾಯ, ಆಚಾರ–ವಿಚಾರಗಳು, ಆಹಾರ ಪದ್ಧತಿ, ಉಡುಪುಗಳನ್ನೊಳಗೊಂಡಂತೆ ಎಲ್ಲಾ ಜನರನ್ನು ಒಟ್ಟಿಗೆ ಮುನ್ನಡೆಸುತ್ತಿರುವಂತಹದ್ದೇ ಸಂವಿಧಾನ. ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯಗಳನ್ನು ಭಿತ್ತಿ ಬೆಳೆಯುವಂತೆ ಮಾಡುತ್ತಿರುವುದೇ ನಮ್ಮ ಸಂವಿಧಾನ. ಇವತ್ತು ನಾವೆಲ್ಲ ಅನುಭವಿಸುತ್ತಿರುವ ಮಾನವ ಹಕ್ಕು, ಮೂಲಭೂತ ಹಕ್ಕುಗಳು ಹಾಗೂ ನಾವು ಎದುರಿಸುವ ಸಮಸ್ಯೆಗಳಿಗೆ ಸಲಹೆ–ಸೂಚನೆಗಳು ಸಂವಿಧಾನದಲ್ಲಿವೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಸ್ವತಂತ್ರ್ಯವಾಗಿ ಸ್ಥಾಪಿಸಿ, ಅವುಗಳಲ್ಲಿ ದೇಶದ ಜನರು ಭಾಗವಹಿಸುವಂತೆ ಮಾಡಿ, ಜನಸಾಮಾನ್ಯರು ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ಶಕ್ತಿ ಸಂವಿಧಾನದಲ್ಲಿ ಇದೆ. ನಾವು ಎಲ್ಲರನ್ನು ಸಮಾನವಾಗಿ ರಕ್ಷಣೆ ಮತ್ತು ಅವಕಾಶಗಳನ್ನು ನೀಡಲು ಸಂವಿಧಾನದ ಅವಶ್ಯಕತೆ ಇದೆ. ಆದ್ದರಿಂದ ನಾವು ಸುರಕ್ಷಿತವಾಗಿ ಬದುಕಲು ನಮಗಾಗಿ ಮಾತ್ರವಲ್ಲದೇ ನಮ್ಮ ಮುಂದಿನ ಪೀಳಿಗೆಗಾಗಿ ಸಂವಿಧಾನದ ಆಶಯಗಳನ್ನು ರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದು ಕೊನೆಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಸಂವಿಧಾನವನ್ನು ಕಳೆದುಕೊಂಡರೆ ದೇಶದಲ್ಲಿ ಅಂತರ್‌ಯುದ್ಧ ಪ್ರಾರಂಭವಾಗುತ್ತದೆ, ಭಾರತ ದೇಶ ಛಿದ್ರ ಛಿದ್ರ ಆಗುವ ಸ್ಥಿತಿಯ ನಿರೀಕ್ಷೆ ಮಾಡಬೇಕಾಗುತ್ತದೆ. ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜಿಕ ನ್ಯಾಯದ ಸಿದ್ಧಾಂತಗಳು ನಾಶವಾಗಿ ಅರಾಜಕತೆ, ಮತೀಯವಾದ, ಕೋಮುವಾದ, ಮೂಲಭೂತವಾದಗಳೆಂಬ ಅಮಾನವೀಯ ಸಿದ್ಧಾಂತಗಳು ರಾರಾಜಿಸುತ್ತವೆ. ಸಂವಿಧಾನವನ್ನು ಕಳೆದುಕೊಂಡರೆ ಜನಸಾಮಾನ್ಯರು ಗಳಿಸಿದ ಹಕ್ಕು ಕಳೆದುಕೊಂಡು, ಬಾಯಿಗೆ ಬೀಗ ಹಾಕಿಕೊಂಡು ಗುಲಾಮರಂತೆ ಜೀವಿಸುವ ಕಾಲ ಬರುತ್ತದೆ. ಸಂವಿಧಾನದ ಆಶಯಗಳಿಂದಲೇ ನಾವು ದೂರವಾಗುತ್ತೇವೆ. ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ಬಡವರು ಶೋಷಣೆ, ದೌರ್ಜನ್ಯ, ದಬ್ಬಾಳಿಕೆ, ಹಿಂಸೆಗಳಿಗೆ ಬಲಿಯಾಗುವ ಪರಿಸ್ಥಿತಿ ಬರುತ್ತದೆ. ಕೊನೆಗೆ Rule of Law ಹೋಗಿ Jungle Law ಆಗುತ್ತದೆ. ಅದಕ್ಕಾಗಿ ಸಂವಿಧಾನವನ್ನು ರಕ್ಷಿಸಿ, ಅದರ ಆಶಯಗಳನ್ನು ಎತ್ತಿ ಹಿಡಿಯಬೇಕು. ಸಂವಿಧಾನದ ರಕ್ಷಣೆ ಜೊತೆಗೆ ಆಶಯಗಳನ್ನು ರಕ್ಷಣೆ ಮಾಡುವುದರಿಂದ ಸಂವಿಧಾನವು ನಮ್ಮನ್ನು ರಕ್ಷಣೆ ಮಾಡುವುದಲ್ಲದೇ ಮುಂದಿನ ಪೀಳಿಗೆಯನ್ನು ರಕ್ಷಣೆ ಮಾಡುತ್ತದೆ. ಈ ದೇಶವನ್ನು ಶಕ್ತಿಶಾಲಿ ಮತ್ತು ಪ್ರಚಂಡ ರಾಷ್ಟ್ರವಾಗಿ ಹೊರಹೊಮ್ಮಿಸುವುದರ ಜೊತೆಗೆ definitely, India will emerge as a super power. ಅದಕ್ಕೆ ಸಂವಿಧಾನ ಮತ್ತು ಅದರ ಆಶಯಗಳನ್ನು ರಕ್ಷಣೆ ಮಾಡಬೇಕೆಂದು ಹೇಳಿ, ನನಗೆ ಬಹಳಷ್ಟು ಸಮಯ ಕೊಟ್ಟ ತಮಗೆ ವಿಶೇಷವಾಗಿ ವಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾವು ಇಲ್ಲಿ 10 ವರ್ಷ ಚರ್ಚೆ ಮಾಡಿದರೂ ಇದರ comma, full stop ಅನ್ನು change ಮಾಡುವುದಿಲ್ಲ. ಇದರಿಂದ ಮಾತನಾಡುವ ಚಟ ತೀರಿಸಿಕೊಳ್ಳಬಹುದು. ಎರಡನೆಯದಾಗಿ ನಮ್ಮ ಚರ್ಚೆಗಳನ್ನು ಮುಂದೆ ಯಾರಾದರೂ record ನಲ್ಲಿ ಓದುತ್ತಾರೆ ಎಂದು ನನಗಂತೂ ಅನಿಸುವುದಿಲ್ಲ. ಆದರೂ ಎಲ್ಲರೂ ಮಾತನಾಡುವಾಗ ನಾನು ಮಾತನಾಡದಿದ್ದರೆ ತಪ್ಪಾಗುತ್ತದೆ. ಇವತ್ತು 10 ಗಂಟೆ ಮಾತನಾಡಿದರೂ ಕಡಿಮೆ, 20 ಗಂಟೆ ಮಾತನಾಡಿದರೂ ಸಾಕಾಗುವುದಿಲ್ಲ. ಏಕೆಂದರೆ subject ಅಷ್ಟು vast ಆಗಿ ಇದೆ. ಸಂವಿಧಾನ ಹೇಗೆ ರಚನೆ ಆಯಿತು, ಹೇಗೆ ಮಾಡಿದರು ಎಂದು ಎಲ್ಲರೂ ವಿಸ್ತಾರವಾಗಿ ಹೇಳಿದ್ದಾರೆ. ಆದರೆ ಇದನ್ನು ನಾವು ಸರಿಯಾಗಿ ನಡೆಸಿಕೊಂಡು ಹೋಗುತ್ತಿದ್ದೇವೆಯೇ ಎನ್ನುವುದೇ ದೊಡ್ಡ ಪ್ರಶ್ನೆಯಾಗಿದೆ. ಮಾನ್ಯ ಕಾನೂನು ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿರವರು ಹೇಳಿದರು, ನೀವು ಮಾಡಿದ್ದೀರಿ, ನಾವು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದರು. ನಾನು ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನ್ನು 6 ವರ್ಷಗಳಿಂದಲೂ ಕೇಳುತ್ತಿದ್ದೇನೆ. ಆದರೆ ಭಿನ್ನ ಏನು? ನಾವು ಕೆಟ್ಟವರೆಂದೇ ಅವರು ಒಳ್ಳೆಯವರಾಗಿ ಬಂದಿದ್ದಾರೆ. ಅವರು ಅದನ್ನೇ ಮಾಡುವವರಾದರೆ ನಾವೆಲ್ಲರೂ ಒಂದೇ ಕೇರಿಯವರಾಗಿ ಬಿಡುತ್ತೇವೆ. ಇದು ಗಿರಾಕಿ ಮೇಲೆ depend ಆಗುತ್ತದೆ. ಇವತ್ತು ಪುನರ್ ವಿವಾಹಕ್ಕೆ ಅವಕಾಶ ಇದೆ. ಗಂಡ ಸತ್ತ ಒಂದೆರಡು ಮೂರು ವರ್ಷಗಳ ನಂತರ ಮದುವೆಯಾದರೆ ಪರವಾಗಿಲ್ಲ.

**(570)/19.03.2020/11.40/ಹೆಚ್‌ವಿ-ಬಿಎನ್‌ಎಸ್**

**ಶ್ರೀ ಸಿ.ಎಂ.ಇಬ್ರಾಹಿಂ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಗಂಡ ಸತ್ತಿದ್ದಾನೆ, ಇವತ್ತೇ ಮದುವೆಯಾದರೆ, ಆಕೆಗೆ ಗಂಡನ ಬಗ್ಗೆ ಎಷ್ಟರಮಟ್ಟಿಗೆ ಆತ್ಮೀಯತೆ ಮತ್ತು ಪ್ರಾಮಾಣಿಕತೆಯಿತ್ತು ಎನ್ನುವುದು ಇದರಿಂದ ಅರ್ಥವಾಗುತ್ತದೆ. ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಮಾನ್ಯ ಕೆ.ಎಸ್. ಹೆಗಡೆಯವರು ಮತ್ತು ರಾಮ ಜೋಯಿಷರು ಚುನಾಯಿತರಾಗಿ ಹೋಗಿದ್ದರು. ಇದೊಂದು ಪರಂಪರೆ ಇತ್ತು. ಆದರೆ, ಈ ಮನುಷ್ಯ ಇನ್ನೂ ನಾಲ್ಕು ತಿಂಗಳಾಗಿರಲಿಲ್ಲ, ಅವರು ಹೇಳುವುದೇ ತಡ 'ಮೊದಲು ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ನಂತರ ಮಾತನಾಡುತ್ತೇನೆ' ಎಂದು ಹೇಳಿದರೆ, ಅದರ ಅರ್ಥ 'ಇದೂ ಎಲ್ಲಿ ಹೊರಟು ಹೋಗುತ್ತದೆಯೋ' ಎನ್ನುವ ಆತುರ ಇತ್ತು. ಅವರು ಪುನರ್‌ವಿವಾಹವಾಗಿರುವುದು ತಪ್ಪಲ್ಲ, ಆ ಸ್ಥಾನಕ್ಕೆ ಚ್ಯುತಿ ಬಂತಲ್ಲ ಎನ್ನುವ ನೋವು ನಮಗಿದೆ. ಅವರು ಏನಾದರೂ ಮಾಡಿಕೊಳ್ಳಲಿ ಆದರೆ, ಸೂರ್ಯಚಂದ್ರಾದಿ ಇರುವವರೆಗೂ ಆ ಸ್ಥಾನಕ್ಕೆ ಚ್ಯುತಿ ಬಂತು ಎನ್ನುವುದು ನಮಗಿರುವ ನೋವು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ಕಾರಜೋಳರವರು ಈಗ ಸದನದಲ್ಲಿಲ್ಲ. ಕೇಂದ್ರ ಸಚಿವರೊಬ್ಬರು ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಮಾತನಾಡಿರುವುದನ್ನು ಸಮರ್ಥಿಸಿಕೊಂಡು, 'ಇಲ್ಲ...ಇಲ್ಲ...ಅವರು ಆ ರೀತಿ ಹೇಳಿಲ್ಲ. ಬಾಯಿ ತಪ್ಪಿ ಹೇಳಿರಬಹುದು' ಎಂದು ಹೇಳಿದರು. ನಾನು ಅವರ ಬಾಯಿಯಿಂದ ಇಂತಹ ಮಾತುಗಳನ್ನು ನಿರೀಕ್ಷೆ ಮಾಡಿರಲಿಲ್ಲ. ಬಾಯಿ ತಪ್ಪಿ ಮಾತನಾಡಿದ್ದರೆ, ಆ ಪಕ್ಷದಲ್ಲಿ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಅಂತಹ ಬದ್ಧತೆ ಇದ್ದಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಂಡು ಪಕ್ಷದಿಂದ ಹೊರಗೆ ಹಾಕಬೇಕಾಗಿತ್ತು ಅಥವಾ ನೋಟೀಸ್ ಕೊಡಬೇಕಾಗಿತ್ತು. ಆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇವರುಗಳು ಒಳಗಡೆ ಒಂದು ರೀತಿ ಹೊರಗಡೆ ಒಂದು ರೀತಿ ಮಾತನಾಡುತ್ತಾರೆ. ಇವರು ಎಷ್ಟು ಚೆನ್ನಾಗಿ ಮಾತನಾಡುತ್ತಾರೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಒಬ್ಬ ರಾಜನ ಆಸ್ಥಾನದಲ್ಲಿ ಒಬ್ಬ ನಪುಂಸಕ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಒಬ್ಬ ಪಂಡಿತ ಇದ್ದರು. ರಾಜ ಪಂಡಿತನಿಗೆ ಭಾರಿ ಗೌರವ ಕೊಡುವುದನ್ನು ನೋಡಿ ನಪುಂಸಕನಿಗೆ ಸಿಟ್ಟು ಬರುತ್ತಿತ್ತು. ಒಮ್ಮೆ ನಪುಂಸಕ, 'ನೀವು ಪಂಡಿತನಿಗೆ ಇಷ್ಟು ಗೌರವ ಕೊಡುತ್ತೀರಿ, ನನಗೂ ಗೌರವ ಕೊಡಿ, ನನಗೂ ಭಾರಿ ಬುದ್ಧಿ ಇದೆ' ಎಂದು ರಾಜನನ್ನು ಕೇಳಿದ. ಆಗ ರಾಜ 'ನಿನಗೆ ಏನು ಬುದ್ಧಿ ಇದೆ ತೋರಿಸು' ಎಂದು ಹೇಳಿದಾಗ, 'ನಾನು ಮೂರು ಪ್ರಶ್ನೆ ಕೇಳುತ್ತೇನೆ. ಅದಕ್ಕೆ ಅವರು ಉತ್ತರವನ್ನು ಕೊಡಲಿ' ಎಂದು ಹೇಳಿದ. ಆಗ ರಾಜ ಸಭೆಯನ್ನು ಕರೆದು ಪಂಡಿತನಿಗೆ, 'ನಪುಂಸಕ ಮೂರು ಪ್ರಶ್ನೆಯನ್ನು ಕೇಳುತ್ತಾನೆ, ನೀವು ಉತ್ತರ ಕೊಡಿ' ಎಂದು ಹೇಳಿದಾಗ, ಪಂಡಿತ, 'ಏನಪ್ಪ ನಿನ್ನ ಪ್ರಶ್ನೆಗಳು' ಎಂದು ಕೇಳುತ್ತಾನೆ. ಆಗ ನಪುಂಸಕ 'ಈ ಜಗತ್ತಿನಲ್ಲಿ ಸೆಂಟರ್ ಜಾಗ ಯಾವುದು?' ಎಂದು ಕೇಳಿದ, ಪಂಡಿತರಿಗೆ ಗಲಿಬಿಲಿ ಆಯಿತು. ಎರಡನೆಯದಾಗಿ 'ಆಕಾಶದಲ್ಲಿ ಇರುವ ನಕ್ಷತ್ರಗಳ ಸಂಖ್ಯೆ ಎಷ್ಟು?' ಎಂದು ಕೇಳಿದ. ಮೂರನೆಯದಾಗಿ 'ಈ ಪ್ರಪಂಚದಲ್ಲಿ ಗಂಡಸರ ಸಂಖ್ಯೆ ಎಷ್ಟು, ಹೆಂಗಸರ ಸಂಖ್ಯೆ ಎಷ್ಟು?' ಎಂದು ಕೇಳಿದ. ಯಾರಿಗೆ ಇದಕ್ಕೆ ಉತ್ತರವನ್ನು ಹೇಳುವುದಕ್ಕೆ ಸಾಧ್ಯ? ಪಾಪ! ಪಂಡಿತರು ಬೇಸರಗೊಂಡು ಮನೆಗೆ ಹೋಗುತ್ತಾರೆ. ಮರುದಿನ ಕತ್ತೆ ಮತ್ತು ದೊಣ್ಣೆಯನ್ನು ತೆಗೆದುಕೊಂಡು ಮಡಿವಾಳ ಬಂದ ಅವನು, 'ಏನು ಪಂಡಿತರೇ, ಬಹಳ ಬೇಸರದಲ್ಲಿದ್ದೀರಿ?' ಎಂದು ಕೇಳಿದಾಗ, ಪಂಡಿತ'ನಸುಂಪಕ ಇಂತಹ ಪ್ರಶ್ನೆಗಳನ್ನು ಕೇಳಿದ್ದಾನೆ ನನಗೆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ' ಎಂದು ಹೇಳಿದಾಗ, “ಆ ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಡುತ್ತೇನೆ. ತಾವು ಉತ್ತರವನ್ನು ಹೇಳುವುದು ಬೇಡ. 'ನಪುಂಸಕನಿಗೆ ಪಂಡಿತರು ಉತ್ತರ ಕೊಡಬಾರದು. ಅದಕ್ಕೆ ಮಡಿವಾಳರೇ ಉತ್ತರ ಕೊಡುತ್ತಾರೆ' ಎಂದು ಹೇಳಿ” ಎಂದು ಮಡಿವಾಳ ಪಂಡಿತನಿಗೆ ಹೇಳಿಕೊಡುತ್ತಾನೆ. ನಂತರ ಪಂಡಿತ ಮತ್ತು ಮಡಿವಾಳ ಇಬ್ಬರು ರಾಜನ ಆಸ್ಥಾನಕ್ಕೆ ಹೋಗುತ್ತಾರೆ. ಸಭೆಯಲ್ಲಿ ನಪುಂಸಕ ಮೊದಲನೆಯ ಪ್ರಶ್ನೆ,'ಈ ಜಗತ್ತಿನಲ್ಲಿ ಸೆಂಟರ್ ಜಾಗ ಯಾವುದು?' ಎಂದು ಕೇಳಿದ. ಮಡಿವಾಳನ ಕೈಯಲ್ಲಿ ದೊಣ್ಣೆ ಇತ್ತು ಅದನ್ನು ತೆಗೆದು ಹೊಡೆದ, 'ಇದೇ ಸೆಂಟರ್ ಜಾಗ ಅನುಮಾನ ಇದ್ದರೆ ಅಳತೆ ಮಾಡಿಕೊಳ್ಳಿ' ಎಂದು ಹೇಳಿದ. ಎರಡನೆಯದಾಗಿ, 'ಆಕಾಶದಲ್ಲಿ ಇರುವ ನಕ್ಷತ್ರಗಳ ಸಂಖ್ಯೆ ಎಷ್ಟು?' ಎಂದು ಕೇಳಿದ. ಮಡಿವಾಳ ಪಕ್ಕಕ್ಕೆ ತಿರುಗಿ ಕತ್ತೆ ಮೇಲೆ ಹೊಡೆದು, 'ನನ್ನ ಕತ್ತೆ ಮೇಲೆ ಎಷ್ಟು ಕೂದಲು ಇವೆಯೋ ಅಷ್ಟು ನಕ್ಷತ್ರಗಳಿವೆ. ಬೇಕಾದರೆ ಹೋಗಿ ಎಣಿಸಿಕೊಂಡು ಬಾ' ಎಂದು ಹೇಳಿದ. ಮಡಿವಾಳ ಬಹಳ ಬುದ್ಧಿವಂತ ಎಂದುಕೊಂಡ ನಪುಂಸಕ ಮೂರನೆಯದಾಗಿ 'ಈ ಪ್ರಪಂಚದಲ್ಲಿ ಗಂಡಸರ ಸಂಖ್ಯೆ ಎಷ್ಟು, ಹೆಂಗಸರ ಸಂಖ್ಯೆ ಎಷ್ಟು?' ಎಂದು ಕೇಳಿದ. ಒಂದು ಗಂಟೆಯಾದರೂ ಮಡಿವಾಳ ತಲೆ ತಿರುಗಿಸುತ್ತಲೇ ಇದ್ದ ಉತ್ತರ ಕೊಡುತ್ತಿರಲಿಲ್ಲ. ಕೊನೆಗೆ ದೊಣ್ಣೆ ತೆಗೆದುಕೊಂಡು ನಪುಂಸಕನಿಗೆ ಹೊಡೆಯುವುದಕ್ಕೆ ಪ್ರಾರಂಭಿಸಿದ. ರಾಜ, 'ಯಾಕೆ ಹೊಡೆಯುತ್ತಿರುವೆ?' ಎಂದು ಕೇಳಿದ. ಆಗ ಮಡಿವಾಳ, ' ಇಲ್ಲ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಹಾರಾಜರೇ, ನಾನು ಗಂಡಸರ ತಲೆಗಳನ್ನು ಎಣಿಸುತ್ತಿದ್ದೆ ಒಂದು ಜಾಸ್ತಿ ಬಂತು. ಹೆಂಗಸರ ಸಂಖ್ಯೆಯನ್ನು ಎಣಿಸುತ್ತಿದ್ದಾಗ ಒಂದು ಕಡಿಮೆ ಬಿತ್ತು. ಪುನಃ ಹೆಂಗಸರ ಸಂಖ್ಯೆಯನ್ನು ಎಣಿಸಿದಾಗ ಒಂದು ಜಾಸ್ತಿ ಬಂತು ಯಾಕೆ ನನ್ನ ಲೆಕ್ಕ ಹೆಚ್ಚು ಕಡಿಮೆಯಾಗುತ್ತಿದೆಯೆಂದರೆ, ಈ ನಪುಂಸಕ ಗಂಡಸರ ಕಡೆ ಲೆಕ್ಕ ಹಾಕುತ್ತಿದ್ದರೆ ಆ ಕಡೆ ಬಂದು ನಿಂತುಕೊಳ್ಳುತ್ತಾನೆ, ಹೆಂಗಸರ ಕಡೆ ಲೆಕ್ಕ ಹಾಕುತ್ತಿದ್ದರೆ ಅಲ್ಲಿಯೂ ಬಂದು ನಿಂತುಕೊಳ್ಳುತ್ತಾನೆ. ಇದರಿಂದಾಗಿ ನನ್ನ ಲೆಕ್ಕ ತಪ್ಪುತ್ತಿದೆ' ಎಂದು ಹೇಳಿದ. ಅದೇ ರೀತಿ ಇವತ್ತು ಏನಾಗಿದೆಯೆಂದರೆ, ಅಲ್ಲಿ ಹೋದರೆ, ಅಲ್ಲಿನ ಹಾಗೆ, ಇಲ್ಲಿ ಬಂದರೇ ಇಲ್ಲಿನ ಹಾಗೆ ನಡೆದುಕೊಳ್ಳುತ್ತಿದ್ದಾರೆ. ಇಂತಹವರನ್ನು ಚುನಾಯಿಸಿದ ಜನರು ವಿಲಿವಿಲಿ ಒದ್ದಾಡುವಂತಹ ವಾತಾವರಣ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ಅದಕ್ಕಾಗಿ ಜಗಜ್ಯೋತಿ ಬಸವಣ್ಣನವರ ಒಂದು ವಚನ ನನಗೆ ನೆನಪಾಗುತ್ತಿದೆ;

**ಒಲವಿಲ್ಲದ ಪೂಜೆ,**
**ನೇಹವಿಲ್ಲದ ಮಾಟ,**
**ಆ ಪೂಜೆಯು ಆ ಮಾಟವು**
**ಚಿತ್ರದೊಳಗಿನ ರೂಹು ಕಾಣಿರಣ್ಣ,**
**ಚಿತ್ರದೊಳಗಿನ ಕಬ್ಬು ಕಾಣಿರಣ್ಣ,**
**ಅಪ್ಪಿದರೆ ಫಲವಿಲ್ಲ**
**ಮೆಲ್ಲಿದರೆ ರುಚಿಯಿಲ್ಲ**
**ಕೂಡಲಸಂಗಮದೇವಾ**

ಇಂತಹ ಪರಿಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗಿದೆ. ಒಂದು ಬಾಧ್ಯತೆ ನಮಗೆ ಬೇಕು. ಮಾನ್ಯ ನರೇಂದ್ರ ಮೋದಿಯವರು ಈ ದೇಶದ ಪ್ರಧಾನಮಂತ್ರಿಗಳಾಗಿದ್ದಾರೆ. ನಾವು ಚುನಾವಣೆಯಲ್ಲಿ ಅವರನ್ನು ವಿರೋಧಿಸಿರಬಹುದು. ಆದರೆ, ಅವರು ಇವತ್ತು ಪ್ರಧಾನಮಂತ್ರಿಗಳ ಪದವಿಯಲ್ಲಿ ಕುಳಿತಿದ್ದಾರೆ. ನಾವೆಲ್ಲರೂ ಅವರನ್ನು ಗೌರವಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಹಾಗೇ ಕುಳಿತಿರುವವರು ಏನಾದರೂ ತಪ್ಪು ಮಾಡಿದರೆ ಅದನ್ನು ವಿಮರ್ಶೆ ಮಾಡುವುದು ಭಾರತದ ಸಂವಿಧಾನದಲ್ಲಿ ನಮಗಿರುವಂತಹ ಒಂದು ದೊಡ್ಡ ಅವಕಾಶವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಪ್ರಜಾಪ್ರಭುತ್ವದಲ್ಲಿ ಇವತ್ತು ಸಮಾಜವಾದ ಎನ್ನುವುದು ಉಳಿದೇ ಇಲ್ಲ. ಶ್ರೀಮಂತ ಶ್ರೀಮಂತನಾಗುತ್ತಿದ್ದಾನೆ. ಬಡವ ಬಡವನಾಗುತ್ತಲೇ ಇದ್ದಾನೆ. ಅಸ್ಪೃಶ್ಯತೆ ಎನ್ನುವುದು ಹೋಗಿಯೇ ಇಲ್ಲ. ಎಂ.ಎಲ್.ಎ. ಅಥವಾ ಮಂತ್ರಿ ಆದರೆ, ಆತನ ಅಸ್ಪೃಶ್ಯತೆ ಹೋಗುತ್ತದೆ. ಹಳ್ಳಿಯಲ್ಲಿರುವವರು ಇನ್ನೂ ಇದರ ಶೋಷಣೆಗೆ ಒಳಗಾಗುತ್ತಿದ್ದಾರೆ. ಇದನ್ನು ಹೋಗಲಾಡಿಸಬೇಕಾದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಮಾಡಬೇಕು? ಎಲ್ಲ ದಲಿತರಿಗೂ ಮೀಸಲಾತಿ ಎನ್ನುವುದು ಸಿಗಬೇಕು ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಣೆ ಮಾಡಿರುವುದೇ ದೊಡ್ಡ ತಪ್ಪಾಯಿತೇನೋ ಎಂದು ನಾನು ಭಾವಿಸುತ್ತಿದ್ದೇನೆ. ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಣೆ ಮಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ರಾಜಗೋಪಾಲಾಚಾರ್ಯರು 'ಭಾಷಾವಾರು ಪ್ರಾಂತ್ಯಗಳನ್ನು Hero worship ವಿಂಗಡಣೆ ಮಾಡಬೇಡಿ; ನಾಲ್ಕು ಡಿವಿಜನ್‌ಗಳಾಗಿ ವಿಭಾಗಿಸಿ, ಭಾಷಾವಾರು ವಿಂಗಡಣೆ ಮಾಡಿದರೆ ಸಿನಿಮಾ ನಟರು ಹಿರೋಗಳಾಗಿ, ನಿಜವಾದ ರಾಜಕಾರಣಿಗಳು ಮನೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. 'ನನಗೊಬ್ಬ, ನಿನಗೊಬ್ಬ' 'ಐ ಲವ್ ಯು, ಯು ಲವ್ ಮಿ' ಎಂದು ಹೇಳಿಕೊಳ್ಳುತ್ತಾ, ಸ್ಕ್ರೀನ್ ಮೇಲೆ ಮೆರದಾಡುತ್ತಿದ್ದವರು ನಾಯಕರಾಗಿಬಿಡುತ್ತಾರೆ. ಇಂತಹ ಪರಿಸ್ಥಿತಿ ಇದೆ. ತಮಿಳುನಾಡಿನಲ್ಲಿ ಎಂ.ಜಿ.ರಾಮಚಂದ್ರನ್‌ರವರ ಹೆಂಡತಿ ಚುನಾವಣೆಯಲ್ಲಿ ಸೋತರು. ಅದೇ ಜಯಲಲಿತ ಲೈಫ್ ಲಾಂಗ್ ತಮಿಳುನಾಡನ್ನು ಆಳಿದರು. ಪರದೆ ಮೇಲಿರುವ 'Hero worship'ಎನ್ನುವುದು ಜನರ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿದರೆ, ದೇಶ ಪ್ರೇಮಕ್ಕಿಂತ ಭಾಷೆಯ ಮೇಲಿನ ಪ್ರೇಮ ಹೆಚ್ಚಾಗುತ್ತದೆಂದು ಮಾನ್ಯ ರಾಜಗೋಪಾಲಾಚಾರ್ಯರು ಅವತ್ತೇ ಹೇಳಿದ್ದರು. ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಣೆ ಮಾಡಿರುವುದರಿಂದ ಭಾರತ ದೇಶ ಒಕ್ಕೂಟದಿಂದ ಬೇರೆಯಾಗುವುದಕ್ಕೆ ಗಡಿಬಿಡಿ ಮಾಡಬೇಕಾಗಿರುವ ಅವಶ್ಯಕತೆ ಇಲ್ಲ. ತಮಿಳುನಾಡಿನವರು 'ನಾ ಪೋರೆ ಪೋಡಾ' ಎಂದರೆ ಮುಗಿದು ಹೋಗುತ್ತದೆ. ಕರ್ನಾಟಕದಲ್ಲಿ 'ನಮಗೆ ಸಾಕಾಗಿದೆ ಹೋಗುತ್ತೇವೆ' ಎಂದರೆ ಮುಗಿದು ಹೋಗುತ್ತದೆ. ಯಾಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗಾಗಲೇ ಗಡಿಗಳನ್ನು ಗುರುತು ಮಾಡಿಬಿಟ್ಟಿದ್ದೇವೆ. ಒಕ್ಕೂಟ ವ್ಯವಸ್ಥೆಯಲ್ಲಿ ಇದೇ ರೀತಿಯ ತಾರತಮ್ಯವಾಗುತ್ತಿದ್ದರೆ, ಮುಂದೆ ಏನಾಗುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಆದಾಯ ತೆರಿಗೆ ಸಂಗ್ರಹದಲ್ಲಿ ಕರ್ನಾಟಕ ಮೊದಲನೆಯ ಸ್ಥಾನದಲ್ಲಿ ನಿಂತಿದೆ. ನಮ್ಮ ರಾಜ್ಯಕ್ಕೆ ಬರಬೇಕಾಗಿರುವ ಅನುದಾನದ ಮೊತ್ತವೆಷ್ಟು ಎನ್ನುವುದನ್ನು ನಮ್ಮ ಎಂ.ಪಿ.ಗಳನ್ನು ಕೇಳಿದ್ದೇವೆಯೇ? ನಮಗೆ ಬರಬೇಕಾಗಿರುವ ಜಿ.ಎಸ್.ಟಿ.ಯ ಬಗ್ಗೆ ಕೇಳಿಲ್ಲ. ಮೊನ್ನೆ ಕೇಂದ್ರ ಹಣಕಾಸು ಸಚಿವೆಯವರಿಗೆ ಒಂದು ಪತ್ರ ಬರೆದು ನಮಗೆ ಬರಬೇಕಾಗಿರುವ 4300 ಕೋಟಿ ರೂಪಾಯಿಗಳ ಅನುದಾನವನ್ನು ಕೇಳಿದರೆ ಅವರು ಕೊಟ್ಟಿಲ್ಲ. ಈ ರೀತಿಯಾದರೆ ಒಕ್ಕೂಟ ವ್ಯವಸ್ಥೆ ತನ್ನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಥವನ್ನು ಕಳೆದುಕೊಳ್ಳುತ್ತದೆ. ನಾವು ಬರೀ "ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ" ಎಂದು ಹಾಡುತ್ತಾ ಕುಳಿತುಕೊಂಡಿರಬೇಕಾಗುತ್ತದೆ. ರೈಲ್ವೆಗೆ ಒಂದು ಕೋಟಿ...........

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಹಣಕಾಸು ಸಚಿವರನ್ನು ನಮ್ಮ ಕರ್ನಾಟಕ ರಾಜ್ಯದಿಂದ ಆರಿಸಿ ಕಳುಹಿಸಿಕೊಟ್ಟಿದ್ದೇವೆ.

**ಶ್ರೀ ಸಿ.ಎಂ.ಇಬ್ರಾಹಿಂಃ–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕದಿಂದ ಅವರನ್ನು ರಾಜ್ಯಸಭೆಗೆ ಆರಿಸಿ ಕಳುಹಿಸಿಕೊಟ್ಟಿದ್ದೇವೆ. ಯಾವುದಕ್ಕೆ ನಾವು ಒಕ್ಕೂಟದ ವ್ಯವಸ್ಥೆ ಎಂದು ಕರೆಯುತ್ತಿದ್ದೇವೆಂದು ನನಗೆ ಅರ್ಥವಾಗುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಎಲ್ಲವನ್ನೂ ಖಾಸಗೀಕರಣಗೊಳಿಸಲು ಹೊರಟಿದ್ದಾರೆ. ಮೀಸಲಾತಿ ಎನ್ನುವುದು ಬರುತ್ತದೆಯೆನ್ನುವ ಕಾರಣಕ್ಕಾಗಿಯೇ ಎಲ್ಲವನ್ನು ಖಾಸಗೀಕರಣಗೊಳಿಸುತ್ತಿದ್ದಾರೆಯೇ ಹೊರತು ಸರ್ಕಾರದಿಂದ ನಡೆಸುವುದಕ್ಕಾಗುವುದಿಲ್ಲ ಎನ್ನುವ ಕಾರಣದಿಂದ ಅಲ್ಲ. ನಾನು ಹೇಳುತ್ತಿರುವ ವಿಚಾರ ರೆಕಾರ್ಡ್‌ಗೆ ಹೋಗಲಿ. ನಷ್ಟದಲ್ಲಿದ್ದ IndianAirlinesಅನ್ನು 50 ಕೋಟಿ ರೂಪಾಯಿಗಳಷ್ಟು ಲಾಭ ಪಡೆದುಕೊಳ್ಳುವ ಹಂತಕ್ಕೆ ನಾನು ತಂದೆ. AirIndia ದ ನಷ್ಟದ ಪ್ರಮಾಣವನ್ನು ಶೇಕಡಾ ಶೂನ್ಯಕ್ಕೆ ಇಳಿಸಿದ್ದೆ. ಈ ಬಗ್ಗೆ ಎ.ಜಿ.ಯವರು ರಿಪೋರ್ಟ್ ಕೊಟ್ಟಿದ್ದಾರೆ. ಇಂತಹ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ನನ್ನ ಹತ್ತಿರ ಇದ್ದ ಅನಿಲ್ ಬೈಜಾಲ್. ಐ.ಎ.ಎಸ್., ಅವರನ್ನು Lieutenant Governor of Delhi ಆಗಿ ನೇಮಕ ಮಾಡಿದ್ದಾರೆ. ಅವರೊಬ್ಬರು ಉತ್ತಮ ಅಧಿಕಾರಿಯಾಗಿದ್ದಾರೆ. ಅವರು ಆರ್.ಎಸ್.ಎಸ್. ಹಿನ್ನೆಲೆಯಿರುವವರು, ವಿವೇಕಾನಂದ ಇನ್ಸ್‌ಟಿಟ್ಯೂಟ್ ನಡೆಸುತ್ತಿದ್ದಾರೆ. ಈ ಯಾವ ಅಂಶಗಳನ್ನು ಸಹ ನಾನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ.

**(571) 19.3.2020 11.50 ಪಿಕೆ:ಜಿಆರ್**

**ಶ್ರೀ ಸಿ.ಎಂ.ಇಬ್ರಾಹಿಂ(ಮುಂದು)**

ನನ್ನ ಹತ್ತಿರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರೆ, I can't deny him. ಜಾತಿಯ ಆಧಾರದ ಮೇಲೆ deny ಮಾಡುವುದಕ್ಕೆ ಹೋಗಲಿಲ್ಲ. ನಾನು ಮಂತ್ರಿಯಾಗಿದ್ದಾಗ ಬಹುಪಾಲು ಅಧಿಕಾರಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬ್ರಾಹ್ಮಣರೇ ಆಗಿದ್ದರು. ಮಾನ್ಯ ಹೆಚ್.ಡಿ. ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ his Private Secretary was a Brahmin; Cabinet Secretary was a Brahmin. ಆದರೆ, ಶ್ರೀ ಸುಬ್ರಹ್ಮಣ್ಯಂ ರವರು ಆಕ್ಷೇಪ ಎತ್ತಿದರೂ ನಾವೇನು ಮಾಡಿದೆವು? ಆಡಳಿತ ನಡೆಸಬೇಕಾದರೆ ಗುಣಕ್ಕೆ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಆ ಪಾಲಿಸಿಯನ್ನು ನಾವು ಇವತ್ತು ಮುಂದುವರೆಸಿಕೊಂಡು ಬಂದಿದ್ದೇವೆಯೇ? ಮಾನ್ಯ ಸಭಾಪತಿಯವರೇ, ರಾಯಚೂರಿಗೆ ಮೊನ್ನೆ ಒಬ್ಬ ಮುಸಲ್ಮಾನ ವ್ಯಕ್ತಿಯನ್ನು ಸಿ.ಇ.ಓ., ಆಗಿ ಹಾಕಿದ್ದರು. ಆದರೆ ತಕ್ಷಣ ಮತ್ತೆ ವರ್ಗಾವಣೆ ಮಾಡಿದರು. ದೊಣ್ಣೆ ಇದ್ದವರ ಕೈಯಲ್ಲಿ ಎಮ್ಮೆ ಎನ್ನುವಂಥದ್ದಾದರೆ ಮುಂದೆ ಬಹಳ ಕಷ್ಟವಾಗುತ್ತದೆ. ಚುನಾವಣೆಗೆ ಸಂಬಂಧಪಟ್ಟಂತೆ ಜನ ಬಹಳ ಹುಷಾರಾಗಿದ್ದಾರೆ. ಇವನು ಹಿಂದು, ಇವನು ಮುಸ್ಲಿಂ ಎಂದು ಜಾತಿಯ ಬಗ್ಗೆ ಹೇಳಬೇಕಾದುದೇ ಇಲ್ಲ. ಕೇವಲ ಒಳ್ಳೆಯತನವನ್ನು ಹೇಳುತ್ತಾ ಹೋದರೆ ಇನ್ನೂ ನಿಮಗೆ ಅವಕಾಶ ಸಿಗುತ್ತದೆ. ಹಿಂದು ಧರ್ಮ ಉದಾತ್ತವಾಗಿರುವಂಥದ್ದು. "ವಸುಧೈವ ಕುಟುಂಬಕಂ" "ಸರ್ವ ಧರ್ಮ ಸಮನ್ವಯ", "ಸರ್ವೇ ಜನಾಃ ಸುಖಿನೋ ಭವಂತು" ಎನ್ನುವುದು ಹಿಂದೂ ಧರ್ಮದ ಮೂಲ ಉದ್ದೇಶವಾಗಿದೆ. ಅದು ಈ ದೇಶದಲ್ಲಿ ಜಾರಿಗೆ ಬರುತ್ತಿದೆಯೇ? ಇವತ್ತು ಸಿ.ಎ.ಎ., ಎನ್.ಆರ್.ಸಿ., ಬಗ್ಗೆ ಏನಾಗುತ್ತಿದೆ? ನಾವು ಸಂವಿಧಾನವನ್ನು ಬದಲಾಯಿಸುವುದಿಲ್ಲ ಎಂದು ಹೇಳುತ್ತಾರೆ. ಆದರೆ ಸಂವಿಧಾನದ ಒಳಗಿನಿಂದ ಮೆಲ್ಲಗೆ ಒಂದೊಂದು ಪುಟವನ್ನು ಎಳೆಯುತ್ತಿದ್ದಾರೆ. ಇದು ಒಂದು ರೀತಿ ಮದುವೆ ಮನೆಯಲ್ಲಿ ಕೈ ಹಾಕಿದ ಹಾಗೆ. ಅಂದರೆ, ಸುಮ್ಮನೆ ಹಾಗೆಯೇ ಕೈ ಹಾಕುವುದು; ಅವರು ಹುಷಾರಾಗಿದ್ದರೆ ಆ ಹಾ ಹಾ ಎಂದು ಸುಮ್ಮನಾಗಿಬಿಡುವುದು. ಅಡ್ಜಸ್ಟ್ ಆಗಿಬಿಟ್ಟರೆ ಇನ್ನೊಂದು ತರಹ ಇರುವುದು. ಈಗ ನೀವು ಒಂದೊಂದೇ ಪುಟಗಳನ್ನು ಎಳೆಯುತಿದ್ದೀರಿ. ಸಿ.ಎ.ಎ., ಮಾಡಿದ್ದೀರಿ, ಅದರಲ್ಲಿ 'we the people' ಎಂದಿತ್ತು. ಈಗ 5 ಜಾತಿ ಹೆಸರನ್ನು ಹಾಕಿಬಿಟ್ಟರು. ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ಕೇಳಿದಾಗ, ಬೇರೆ ದೇಶದಲ್ಲಿರುವ ಹಿಂದೂಗಳು, ಸಿಖ್ಖರು, ಕ್ರೈಸ್ತರು, ಜೈನರು, ಬೌದ್ಧರು ಮೈನಾರಿಟಿಗಳಾಗಿರುವುದರಿಂದ ಜಾತಿ ಹೆಸರನ್ನು ಹಾಕಿದ್ದೇವೆ, ಆದರೆ ಅಲ್ಲಿನ ಮುಸಲ್ಮಾನರು ಮೈನಾರಿಟಿಗಳಲ್ಲ ಎಂದು ಬುದ್ಧಿವಂತಿಕೆಯಿಂದ ಹೇಳಿಬಿಟ್ಟರು. ಆ ವಿಚಾರ ಬಂದಾಗ ನಾನು ಮಾತನಾಡುತ್ತೇನೆ. ದುರ್ದೈವ ಎಂದರೆ ನಾವು ಇವತ್ತು ಪಾರ್ಲಿಮೆಂಟ್‌ನಲ್ಲಿ ಇಲ್ಲ, ಇಲ್ಲಿದ್ದೇವೆ. ಇವತ್ತು, ಹೊಳೆಯಲ್ಲಿ ಗಂಟು ಹಾಕಿ ಅದು ಎಲ್ಲಿ ಬಿದ್ದಿದೆ ಎಂದು ಹುಡುಕುತ್ತಿರುವ ಹಾಗೆ ನಮ್ಮ ಪರಿಸ್ಥಿತಿಯಾಗಿದೆ. ಕರ್ನಾಟಕದಲ್ಲಿ ವಲಸಿಗರು ಎಷ್ಟಿದ್ದಾರೆ ಎನ್ನುವುದನ್ನು ನಿಮ್ಮ ರಿಪ್ಲೆಯಲ್ಲಿ ನೋಡಿದೆ. 200 ಜನ ವಲಸಿಗರು ಇದ್ದಾರೆ. ಈ 200 ಜನರನ್ನು ಹುಡುಕುವ ಸಲುವಾಗಿ 6 ಕೋಟಿ ಜನರನ್ನು ಪರಿಶೀಲನೆ ಮಾಡುವುದಕ್ಕೆ ಹೋಗುತ್ತೀರಾ? ಅಕ್ಕಿಯಲ್ಲಿ ಕಲ್ಲು ಹುಡುಕಿ ಎಂದು ಹೇಳಿದರೆ, ಕಲ್ಲಿನಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಕ್ಕಿ ಹುಡುಕುತ್ತೇವೆ ಎಂದು ಹೊರಟರೆ ಅದು ನಿಮಗೆ ಯಾವಾಗ ಸಿಗಬೇಕು? ಈ ವಲಸಿಗರ ಮಾಹಿತಿ ನಿಮಗೆ ಹೇಗೆ ಬಂತು? ಲೋಕಲ್ ಸಬ್‌ಇನ್ಸ್‌ಪೆಕ್ಟರ್ ಅಥವಾ ತಹಸೀಲ್ದಾರರಿಗೆ ಹೇಳಿದರೆ ಈ ಕುರಿತ ಮಾಹಿತಿಯನ್ನು ಒಂದು ವಾರದ ಒಳಗೆ ಕೊಟ್ಟುಬಿಡುತ್ತಾರೆ. ಸಿಕ್ಕಿದ 600 ಜನರಲ್ಲಿ 150 ಜನರನ್ನು ಕಳುಹಿಸಿದ್ದೀರಿ, ಇನ್ನೂ 300 ಜನರನ್ನು ಕಳುಹಿಸುವ ಕೆಲಸ ಮಾಡುತ್ತಿದ್ದೇವೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಅನೇಕ ರಾಜ್ಯಗಳು ಸಿ.ಎ.ಎ., ಬೇಡ ಎಂದು ಹೇಳಿವೆ. ನಾವು ಮೊನ್ನೆ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಾಗ, ಅವರು ಸಂತೋಷವಾಗಿ ನಮ್ಮನ್ನು ಕರೆಸಿದರು, ಶ್ರೀ ಜಿತೇಂದ್ರ ಸಿಂಗ್‌ರವರ ಜೊತೆ 2 ಗಂಟೆಗಳ ಕಾಲ ಕುಳಿತು ಮಾತನಾಡಿ, ಇದರಲ್ಲಿ ಈ ರೀತಿಯ ತಪ್ಪುಗಳಿದೆ ದಯವಿಟ್ಟು ಗಮನಿಸಿ ಎಂದು ಅವರಿಗೂ ಮನವರಿಕೆ ಮಾಡಿಕೊಟ್ಟೆವು. ಆದಾದ ಮೇಲೆ ಮಾನ್ಯ ಅಮಿತ್‌ಷಾ ರವರು ರಾಜ್ಯಸಭೆಯಲ್ಲಿ, ನಾವು ಯಾರ ಹತ್ತಿರವೂ ಕಂಪಲ್ಸರಿ ಡಾಕ್ಯುಮೆಂಟ್ ಕೇಳುವುದಿಲ್ಲ, "ಡಿ" ಎಂದು ಹಾಕುವುದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ನನಗೆ ನನ್ನ ಜನನ ಪ್ರಮಾಣ ಪತ್ರ ಕೊಡುವುದೇ ಕಷ್ಟದ ವಿಚಾರ. ಅದರಲ್ಲೂ, ನಿಮ್ಮಪ್ಪ ನಿಮ್ಮವ್ವ ಎಲ್ಲಿ ಹುಟ್ಟಿದರು, ಅಪ್ಪ-ಅಮ್ಮ ಯಾವಾಗ ಮದುವೆಯಾದರು ಹೇಳು ಎಂದರೆ ಹೇಗೆ ಹೇಳುವುದು? ನಮ್ಮ ಅಪ್ಪ-ಅಮ್ಮ ಮದುವೆಯಾಗಬೇಕಾದರೆ ನಾನಿದ್ದನೇ? ಇಂತಹ ವಿವರಗಳನ್ನು ಯಾರು ಒದಗಿಸುವುದಕ್ಕೆ ಆಗುವುದಿಲ್ಲ. ನಮ್ಮ ದೇಶದಲ್ಲಿ ಆಗ ಶೇಕಡ 60-70ರಷ್ಟು ಜನ ಅಶಿಕ್ಷಿತರಾಗಿದ್ದರು. ಜಾಡಮಾಲಿಗಳು, ಅಲೆಮಾರಿಗಳು, ಆದಿವಾಸಿಗಳು ಎಲ್ಲಿಂದ ದಾಖಲೆಗಳನ್ನು ತರುತ್ತಾರೆ? ದಲಿತರು ಊರಿನ ಹೊರಗೆ ಕೇರಿಯಲ್ಲಿರುತ್ತಾರೆ. ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅವರು, ನಾನು ಇಷ್ಟೊತ್ತಿಗೆ ಹುಟ್ಟಿದೆ ಎಂದು ಜನನ ಪ್ರಮಾಣ ಪತ್ರವನ್ನು ಅಥವಾ ಇಷ್ಟು ಹೊತ್ತಿಗೆ ಇಂಥವರು ಸತ್ತರು ಎಂದು ದಾಖಲೆಗಳನ್ನು ಇಟ್ಟುಕೊಂಡಿರುತ್ತಾರೆಯೇ? ಸಂಘ ಪರಿವಾರದ ಜನರಲ್ ಸೆಕ್ರಟರಿಯವರು ಕೊಟ್ಟ ಒಂದು ಸ್ಟೇಟ್‌ಮೆಂಟನ್ನು ವಾಟ್ಸ್‌ಅಪ್‌ನಲ್ಲಿ ನೋಡಿದೆ. ಅವರು, ಶೇಕಡ 68 ಜನರಿಗೆ ಪೌರತ್ವ ಕೊಡುತ್ತೇವೆ ಎಂದರೆ ಇವರಿಗೇಕೆ ಸಿಟ್ಟು ಎಂದು ಹೇಳಿದರು. ಆ ಜನ ಯಾರು ಎಂದರೆ, ವಾಲ್ಮೀಕಿ, ದಲಿತರು, ಭೋವಿ ಜನಾಂಗಗಳವರು. ಇವರು ಹೊರಗಿನಿಂದ ಬಂದವರಾಗಿದ್ದಾರೆಯೇ? ಒಂದು ವೇಳೆ ಇವರಿಗೆ ಪೌರತ್ವ ಕೊಡಬೇಕಾದರೆ, ಸಂಬಂಧಪಟ್ಟವರು, ನಾನು ಪಾಕಿಸ್ತಾನದಿಂದ ಬಂದೆ ಎಂದು ಪ್ರಮಾಣ ಪತ್ರ ಕೊಡಬೇಕಾಗುತ್ತದೆ. ಇಂಡಿಯಾದಲ್ಲಿರುವ ಹಿಂದೂ, ತಾನು ಪಾಕಿಸ್ತಾನದಿಂದ ಯಾವಾಗ ಬಂದೆ ಎಂದು ತಿಳಿಸಿ ಅಫಿಡವಿಟ್ ಕೊಡುವುದಿಲ್ಲವೋ ಅಲ್ಲಿಯ ತನಕ ಆತನ ಪೌರತ್ವ ಸಿಂಧುವಾಗುವುದಿಲ್ಲ. ಇದು ನೀವು ಮಾಡಿರುವ ಕಾನೂನಾಗಿದೆ. ಅಸ್ಸಾಂ ನಲ್ಲಿ ಈ ರೀತಿ ಮಾಡಿ, 19 ಲಕ್ಷ ಜನರಲ್ಲಿ ಸಿಕ್ಕಿರುವ 4 ಲಕ್ಷ ಜನ ಸಾಬ್ರು. 15 ಲಕ್ಷ ಜನ ಇತರರು. Concentration

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Camp ನಲ್ಲಿ ಮುಸಲ್ಮಾನರು ಕೂಡ ಸತ್ತಿದ್ದಾರೆ, ಹಿಂದೂಗಳೂ ಕೂಡ ಸತ್ತಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ . .

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, Concentration Campಎಂದು ಎಲ್ಲಿದೆ?

**ಶ್ರೀ ಸಿ.ಎಂ.ಇಬ್ರಾಹಿಂ:–** ಅಸ್ಸಾಂ ರಾಜ್ಯದಲ್ಲಿದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸದಸ್ಯರು ಹಿರಿಯರಿದ್ದಾರೆ. ಅದು Detention Camp ಆಗಿದೆ.

**Sri C.M.IBRAHIM:-** Concentration Camp ಅಥವಾ Detention Camp - ಎರಡೂ ಒಂದೇ ಆಗಿದೆ. ಬಾ ಎಂದು ನಿಧಾನವಾಗಿ ಕರೆದುಕೊಂಡು ಹೋಗುವುದು ಅಥವಾ ಗದರಿಸಿ ಬಾ ಎಂದು ಕರೆದೊಯ್ಯುವುದು ಎರಡೂ ಒಂದೇ ಆಗಿದೆ.

ಡಾ:ತೇಜಸ್ವಿನಿ ಗೌಡ:– ಹಿರಿಯರಾದ ಮಾನ್ಯ ಇಬ್ರಾಹಿಂರವರು ದಯವಿಟ್ಟು ಗಮನಿಸಬೇಕು. Concentration Camp is different.

**ಶ್ರೀ ಸಿ.ಎಂ.ಇಬ್ರಾಹಿಂ:–** ಒಂದರಲ್ಲಿ ಅನ್ನ ಸಾಂಬಾರ್ ಕೊಟ್ಟು ಇನ್ನೊಂದರಲ್ಲಿ ಬಿರಿಯಾನಿ ಕೊಡುತ್ತಾರೆಯೇ?

(ಗೊಂದಲ)

**ಡಾ:ತೇಜಸ್ವಿನಿ ಗೌಡ:–** ಹಿಟ್ಲರ್ ಸ್ಥಾಪಿಸಿದ್ದಂತಹ Concentration Camp ಗೂ detention ಮಾಡುವುದಕ್ಕೆ ತೆರೆಯುವಂತಹ ಕ್ಯಾಂಪಿಗೂ ಬಹಳ ವ್ಯತ್ಯಾಸ ಇದೆ.

**ಶ್ರೀ ಎನ್.ರವಿಕುಮಾರ್:–** ಬಹಳ ವ್ಯತ್ಯಾಸ ಇದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:-**ಮಾನ್ಯ ಸಭಾಪತಿಯವರೇ, ನಾನು ಉಪವಾಸ ಇದ್ದೇನೆ. ಅವರಾದರೋ ಆಗಾಗ ನೀರನ್ನು ಕುಡಿಯುತ್ತಾರೆ. ದಯವಿಟ್ಟು ನನ್ನ ಮೇಲೆ ಕರುಣೆ ತೋರಿಸಿ. ನಾನು ಜಾಸ್ತಿ ಎಳೆದುಕೊಂಡು ಹೋಗುವುದಿಲ್ಲ. 10 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್. ರವಿ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಎರಡು ಮಾತುಗಳನ್ನಷ್ಟೇ ಹೇಳುತ್ತೇನೆ.

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಈಗ ಸಿಎಎ ಎಂದು ಏನು ಕಾಯಿದೆ ಮಾಡಿದ್ದೆ, ಇದರಲ್ಲಿ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನ ಈ ಮೂರು ದೇಶಗಳಲ್ಲಿ ಮುಸ್ಲಿಂ ಬಾಹುಳ್ಯವಿದ್ದು ಅವರು ತಮ್ಮದು ಇಸ್ಲಾಮಿಕ್ ದೇಶ ಎಂದು ಘೋಷಿಸಿಕೊಂಡಿದ್ದಾರೆ. ಅಲ್ಲಿನ ಮುಸ್ಲಿಮರು ಅಲ್ಪಸಂಖ್ಯಾತರಲ್ಲ. ನಮ್ಮ ದೇಶದಿಂದ ಅಲ್ಲಿಗೆ ಯಾರು ಹೋಗಿದ್ದಾರೋ ಅವರ್ಯಾರಿಗೂ ಯಾವುದೇ ಹಕ್ಕುಗಳಿರಲಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಅದು ನಮಗೂ ಗೊತ್ತು, ನಾವೂ ಓದಿ ತಿಳಿದುಕೊಂಡಿದ್ದೇವೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಭಾರತದಲ್ಲಿ Concentration Camp ಇದೆ ಎಂದು ಹೇಳಿದರೆ ಜಗತ್ತಿಗೆ ತಪ್ಪು ಮಾಹಿತಿ ಹೋಗುತ್ತದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಧರ್ಮದ ಆಧಾರದ ಮೇಲೆ ದೇಶವನ್ನೇ ಪ್ರತ್ಯೇಕಗೊಳಿಸಿಕೊಂಡ ಮೇಲೆ ಮತ್ತೆ ಅವರಿಗೆ ಈ ದೇಶದ ಪೌರತ್ವ ಕೊಡಬೇಕು ಎಂದು ಹೇಳುವುದಾದರೆ ಮೊದಲಿನಿಂದಲೇ ಇದೇ ದೇಶದಲ್ಲಿ ಇರಬೇಕಾಗಿತ್ತು ಎನ್ನುವುದು ನನ್ನ ವಾದವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** ನಿಮ್ಮ interpretation ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಸದಸ್ಯರಿಗೆ ಮಾತನಾಡಲು ಬಿಡಿ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಸಿ.ಎ.ಎ., ಅನ್ನು ನಾವು ಸ್ವಾಗತ ಮಾಡುತ್ತೇವೆ, ನಾವ್ಯಾರೂ ಇದಕ್ಕೆ ವಿರೋಧ ಮಾಡಿಲ್ಲ.

**(ಗೊಂದಲ)**

**ಡಾ|| ಕೆ.ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇನ್ನೂ ಪ್ರಶ್ನೋತ್ತರ ಶುರುವಾಗಿಲ್ಲ. ಆದರೂ ಅದರಲ್ಲಿರುವ ಅಂಕಿ–ಅಂಶಗಳನ್ನು quote ಮಾಡುವುದರಿಂದ ಇಲ್ಲಿ ಲೋಪವಾಗಿದೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಸಿ.ಎ.ಎ., ಗೆ ಒಂದು ಸಣ್ಣ ತಿದ್ದುಪಡಿ ತರಬೇಕಿದೆ. ಹಿಂದೂ, ಕ್ರಿಶ್ಚಿಯನ್ ಎಂದು ನಮೂದು ಮಾಡುವ ಬದಲು all minorities coming from Southern Asian countries ಎಂದು ಮಾಡಬೇಕು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಈಗ 'ಮೈನಾರಿಟಿ' ಎನ್ನುವುದನ್ನೇ redefine ಮಾಡಬೇಕಾಗಿ ಬಂದಿದೆ. ಮೈನಾರಿಟಿ ಎನ್ನುವುದು ಎಷ್ಟಿದೆ ಎನ್ನುವ ಪ್ರಶ್ನೆ ಬಂದಿದೆ. ಅಲ್ಲಿರುವವರೆಲ್ಲರೂ ಇಲ್ಲಿ ಬರುವುದಾದರೆ ಪ್ರತ್ಯೇಕ ರಾಷ್ಟ್ರದ ಅವಶ್ಯಕತೆ ಏಕಿತ್ತು?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸಿ.ಎ.ಎ., ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(572) 19–03–2020 12.00 ಡಿಎಸ್–ಜಿಆರ್

**ಡಾ||ತೇಜಸ್ವಿನಿಗೌಡ:–** ಕಾಂಗ್ರೆಸ್‌ನ stand ಪಾಕಿಸ್ತಾನದ ಮುಸಲ್ಮಾನರಿಗೆ ಭಾರತದಲ್ಲಿ ಪೌರತ್ವ ಕೊಡಬಹುದೆಂದು ಇದ್ದರೆ ತಾವು ಹೇಳಬಹುದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಅಲ್ಲಿಂದ ಬಂದಿರತಕ್ಕಂಥವರು ಶೇಕಡ 70 ರಷ್ಟು ದಲಿತರಿದ್ದಾರೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಆಮೇಲೆ ರೆಸಲ್ಯೂಷನ್ ಮೂವ್ ಮಾಡೋಣ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಲೋಕಸಭಾ ಅಧಿವೇಶನದಲ್ಲಿ ಅದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು, ಗೃಹ ಮಂತ್ರಿಗಳು, ವಿರೋಧ ಪಕ್ಷದ ಎಲ್ಲಾ ನಾಯಕರುಗಳು ಸೇರುತ್ತಿದ್ದಾರೆ. ಅದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕಾಣುತ್ತದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಚುನಾವಣಾ ಆಯೋಗ ಇಷ್ಟೊಂದು ವೀಕ್ ಆಗಿರುವುದನ್ನು ನಾನು ಇತಿಹಾಸದಲ್ಲಿ ನೋಡಿರಲಿಲ್ಲ. ಏಕೆಂದರೆ ನಾನು ಎರಡು ವರ್ಷ ಕೇಂದ್ರದಲ್ಲಿ ಮಂತ್ರಿಯಾಗಿದ್ದವನು. ಇ.ವಿ.ಎಂ., ಬೇಡ, ಬ್ಯಾಲೆಟ್ ಪೇಪರ್ ಜಾರಿಗೆ ತನ್ನಿ ಎಂದು ಹೇಳಿದರೆ ಇವರಿಗೆ ಏಕೆ ಹೊಟ್ಟೆಕಿಚ್ಚು? ಅವರಿಗೆ ಇ.ವಿ.ಎಂ., ನಲ್ಲಿ ಪ್ರೀತಿ ಏಕೆ? ಪ್ರಪಂಚದ ಯಾವುದೇ ದೇಶ ಇ.ವಿ.ಎಂ., ಅನ್ನು ಒಪ್ಪಿಕೊಳ್ಳಲು ತಯಾರಿಲ್ಲ, ಇರುವುದನ್ನು ವಾಪಸ್ ತೆಗೆದರು. ಇದೇ ಏಕೆ ಬೇಕು ಎಂದರೆ ಇದರಲ್ಲಿ ಗೋಲ್‌ಮಾಲ್ ಇದೆ.

**ಡಾ||ತೇಜಸ್ವಿನಿಗೌಡ:–** ಇದನ್ನು ತಮ್ಮ ಕಾಲದಲ್ಲೇ ತಂದಿರುವಂಥದ್ದು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ದಯಮಾಡಿ ಅವರನ್ನು ನಿಯಂತ್ರಣ ಮಾಡಿ. ಅವರು ಮಾತನಾಡಿದ ಮೇಲೆ ಉತ್ತರ ಕೊಡಲಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸುಬ್ರಮಣ್ಯಸ್ವಾಮಿಯವರು ಏನು ಹೇಳಿದ್ದಾರೆ ಅದನ್ನು ಓದಿ ಆಮೇಲೆ ಮಾತನಾಡಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇ.ವಿ.ಎಂ., ಅನ್ನು ನಾವೇ ತಂದಿದ್ದೇವೆ. ಅದು ತಪ್ಪಾಯಿತು ಎಂದಾಯಿತು. ಅವರು ಪ್ರಜಾಪ್ರಭುತ್ವವಾದಿಗಳು. ಏಕೆ ಇದನ್ನು ಬದಲಾವಣೆ ಮಾಡುವುದಿಲ್ಲ? ಇದರಿಂದ ಅವರಿಗೆ ಲುಕ್ಸಾನ್ ಏನು?

**ಡಾ॥ವೈ.ಎ.ನಾರಾಯಣಸ್ವಾಮಿ:-** ಏಕೆ ಬದಲಾವಣೆ ಮಾಡಬೇಕು ಎಂಬುದನ್ನು ನೀವು ಹೇಳಿ?

**ಶ್ರೀ ಸಿ.ಎಂ.ಇಬ್ರಾಹಿಂ:-** ಇ.ವಿ.ಎಂ., ಮೇಲೆ ನನಗೆ ಅನುಮಾನವಾಗಿದೆ.

(ಗೊಂದಲ)

**ಡಾ॥ವೈ.ಎ.ನಾರಾಯಣಸ್ವಾಮಿ:-** ಕಾಂಗ್ರೆಸ್ ಗೆದ್ದಿದ್ದರೆ ಚೆನ್ನಾಗಿದೆ ಎಂದು ಹೇಳುತ್ತಿದ್ದಿರಿ.

**ಡಾ॥ತೇಜಸ್ವಿನಿಗೌಡ:-** ಇದರ ಬಗ್ಗೆ ಶಾಸಕರ ಅಭಿಪ್ರಾಯವನ್ನು ಕೇಳಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ರಾಮನ ಧರ್ಮ ಪತ್ನಿ, ನನ್ನ ತಾಯಿ ಸೀತಾಮಾತೆ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾಗ ತನ್ನ ಪತ್ನಿಯನ್ನು ಶ್ರೀರಾಮ ತ್ಯಾಗ ಮಾಡಿದ. ರಾಮನ ಹೆಸರಿನಲ್ಲಿ ಇವಿಎಂ ಅನ್ನು ತ್ಯಾಗ ಮಾಡುವುದಕ್ಕಾಗುವುದಿಲ್ಲವೇ?

**ಡಾ॥ವೈ.ಎ.ನಾರಾಯಣಸ್ವಾಮಿ:-** ಇದು ಕೇಳುವುದಕ್ಕೆ ಚೆನ್ನಾಗಿದೆ. ಇದು ಮಾಡುವುದಕ್ಕೆ ಚೆನ್ನಾಗಿಲ್ಲ.

**ಡಾ॥ತೇಜಸ್ವಿನಿಗೌಡ:-** ನಿಮಗೆ ಅನುಕೂಲವಾದಾಗ ರಾಮನ ಆದರ್ಶಗಳನ್ನು ಹೇಳುತ್ತೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕಥೆಯನ್ನು ಬಹಳ ಸ್ವಾರಸ್ಯವಾಗಿ ಹೇಳುತ್ತೀರಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಅನುಮಾನ, ಅನುಮಾನ ಬಂದಾಗ ತ್ಯಾಗ ಮಾಡಬೇಕಾಗುತ್ತದೆ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇವತ್ತು ಇಡೀ ಭಾರತ ದೇಶದಲ್ಲಿ ಇ.ವಿ.ಎಂ., ಮೆಷಿನ್ ಬೇಡ. ಇದನ್ನು ನಾನು ಹೇಳಿರುವುದಲ್ಲ, ಸುಬ್ರಮಣ್ಯಸ್ವಾಮಿಯವರು ಕೇಸ್ ಹಾಕಿರುವುದು. ಸುಬ್ರಮಣ್ಯಸ್ವಾಮಿಯವರು ನನಗೆ ಆತ್ಮೀಯರು. ಎಲ್ಲಾ ಪಕ್ಷಗಳಲ್ಲೂ ನನಗೆ ಆತ್ಮೀಯರು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದರಿಂದ ನನಗೆ ಪ್ರಾಣಸಂಕಟವಾಗಿದೆ. ಶ್ರೀ ಅನಂತಕುಮಾರ್ ಹೆಗ್ಗಡೆ ಅವರು ಆತ್ಮೀಯರೇ, ಅವರ ಅಭಿಪ್ರಾಯ ಬೇರೆ ಇರಬಹುದು. ನಾನು ಯಾವುತ್ತೂ ಕೂಡ ವಿಚಾರಧಾರೆಗಳ ವಿರುದ್ಧ ಇದ್ದರೆ ಇಸ್ಲಾಂ ಧರ್ಮ ಹೇಳುತ್ತದೆ, ಪಾಪಿಯನ್ನು ವಿರೋಧಿಸಬೇಡ, ಪಾಪವನ್ನು ವಿರೋಧ ಮಾಡು ಎಂದು, ಆ ಪಾಪಿ ಪಾಪವನ್ನು ಬಿಟ್ಟುಬಿಟ್ಟರೆ ಅವನು ದೊಡ್ಡ ಮನುಷ್ಯನಾಗುತ್ತಾನೆ. ಅದು ಮಾನವತೆ. ಅದಕ್ಕೆ ನಾನು ಹೇಳುವಂಥದ್ದು, ಇವತ್ತು "ವಸುಧೈವ ಕುಟುಂಬಕಂ"ಎನ್ನುವುದನ್ನು ದಯವಿಟ್ಟು ತನ್ನಿ. ಈ ಮಣ್ಣು ಬಹಳ ಶಕ್ತಿಯುತವಾಗಿರುವಂತಹ ಮಣ್ಣು. ಇಲ್ಲಿ ಪಾಪ ಮಾಡಿದರೆ ಯಾರು ಜಾಸ್ತಿ ದಿವಸ ನಿಲ್ಲುವುದಿಲ್ಲ. ಸತ್ಯಯುಗ (ಕೃತಯುಗ) ತ್ರೇತಾಯುಗ, ದ್ವಾಪರಯುಗ ಹಾಗೂ ಕಲಿಯುಗ ಎಂಬ ನಾಲ್ಕು ಯುಗಗಳಿವೆ, 12ನೇ ಶತಮಾನದಲ್ಲಿ ಬಸವಣ್ಣನವರು ಬಂದರು, 800 ವರ್ಷವಾದರೂ ಕೂಡ ಅವರು ಅಜಾರಾಮರರಾಗಿದ್ದಾರೆ. ಇವತ್ತು ಈ ಒಂದು ಪ್ರಜಾಪ್ರಭುತ್ವವನ್ನು ನಾವು ಉಳಿಸಿಕೊಳ್ಳಬೇಕು. ಒಂದೊಂದು ಸಲ 18 ವರ್ಷ ಪೂರೈಸಿದರೆ ಮತದಾನದ ಹಕ್ಕು ನೀಡಿರುವುದು ತಪ್ಪಾಯಿತೇನೋ ಎಂದು ನನಗನಿಸುತ್ತಿದೆ. ಒಬ್ಬ ಮನುಷ್ಯ ಆರಿಸಬೇಕಾದರೆ ಅವನಿಗೆ ಅನುಭವ ಇರಬೇಕಾಗುತ್ತದೆ. ಅವನು ಮದುವೆಯಾಗಿ ಮಕ್ಕಳಾಗಿ, ಎಲ್ಲಾ ಆಗಿ.....

(ಗೊಂದಲ)

**ಡಾ॥ತೇಜಸ್ವಿನಿಗೌಡ:-** ಮಾನ್ಯ ರಾಜೀವ್ ಗಾಂಧಿಯವರು ಯುವ ಜನತೆಗೆ ಮಾನ್ಯತೆ ಕೊಟ್ಟರು. ಯುವಕರ ವಿವೇಚಾನ ಶಕ್ತಿಯನ್ನು ರಾಜೀವ್ ಗಾಂಧಿಯವರು ನಂಬಿರುವುದು ತಪ್ಪಾ? ಇದು ಆಭಾಸ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ನಾನು ಇವತ್ತು ಉಪವಾಸ ಇದ್ದೇನೆ, ದಯವಿಟ್ಟು ಪೀಡಿಸಬೇಡಿ.

ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ರಾಜೀವ್ ಗಾಂಧಿಯವರು ದೊಡ್ಡ ಆಶಯವನ್ನಿಟ್ಟುಕೊಂಡು ಅವಕಾಶ ಕೊಟ್ಟರು. ಆದರೆ ನಾವು ಮದುವೆಯಾಗಬೇಕಾದರೆ 21 ವರ್ಷ ಆಗಿರಬೇಕೆಂದು ಕೇಳುತ್ತೇವೆ. ಏನಾದರೂ ಕೆಲಸ ಕೊಡಬೇಕಾದರೆ ಅಧಿಕಾರಿ ನಿನಗೆ ಎಷ್ಟು ವರ್ಷ experience ಆಗಿದೆ ಎಂದು ಕೇಳುತ್ತಾರೆ. ನಾನು ಅಧಿಕಾರಿಯನ್ನು ಕೇಳುತ್ತೇನೆ, ನೀನು ಕೆಲಸ ಕೊಡುವುದಕ್ಕೆ experience ಕೇಳುತ್ತೀಯಾ, ನಿನ್ನ ಮಗಳನ್ನು ಅಳಿಯನಿಗೆ ಕೊಟ್ಟಲ್ಲಾ, ಆಗ ಎಷ್ಟು ವರ್ಷ experience ಆಗಿದೆ ಎಂದು ಕೇಳಿದ್ದೀಯಾ ಎಂದು ಕೇಳಿದೆ. ಮಾಮೂಲಿ ಕೆಲಸ ಕೊಡುವುದಕ್ಕೆ ನಿನಗೆ experience ಬೇಕು, 20 ವರ್ಷ ಸಾಕಿ ಬೆಳಸಿದ ಮಗಳನ್ನೇ ಕೊಡುತ್ತಿದ್ದೀಯಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

experience ಬಗ್ಗೆ ಕೇಳಲೇ ಇಲ್ಲ, ಹಾಗೆಯೇ ಕೊಟ್ಟುಬಿಟ್ಟಲ್ಲಾ ಎಂದು ಕೇಳಿದೆ. ನಮ್ಮ ದೇಶದಲ್ಲಿ ಇದು ದುರ್ದೈವ.

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಇದು ನಮಗೆ hurt ಆಗುತ್ತದೆ. ಇದು ಮಹಿಳೆಯರಿಗೆ ಮಾಡಿದ ಅಪಮಾನ. ನಮ್ಮ ಭಾವನೆಗಳಿಗೆ ಧಕ್ಕೆ ಮಾಡುತ್ತಿದ್ದಾರೆ. ಇದು derogatory. ನಮ್ಮ ಭಾವನೆಗಳಿಗೆ ಧಕ್ಕೆ ಮಾಡುತಿದ್ದಾರೆ, ನೋವುಂಟು ಮಾಡುತ್ತಿದ್ದಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ನನಗೂ ಹೆಂಡತಿ, ಮಗಳು ಇದ್ದಾರೆ.

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಇದು ಸದನ. ಇದು ಒಂದು ಸಲ ಅಲ್ಲ, ಪ್ರತಿ ಸಲವೂ ಹಾಗೆಯೇ ಮಾತನಾಡುತ್ತಾರೆ.

**(573) 19.03.2020 12.10 ಎಸ್‌ವಿ-ಎಂಡಿ**

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಯಾವುದು derogatory?

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಸಂತೆ ಭಾಷೆಯನ್ನು ಉಪಯೋಗ ಮಾಡುವ ಜಾಗವಲ್ಲ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೊರಗಡೆ ಹೋಗುತ್ತೇನೆ, ಅವರು ಮಾತನಾಡಿಕೊಳ್ಳಲಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಜನ ಇವರನ್ನು ಒಪ್ಪಿಕೊಳ್ಳುತ್ತಾರೆ. ಹಾಗೆಂದು ಚುನಾವಣೆ ಬಂದಾಗ ನಾವು-ನೀವು ಪುನಃ ಪರಸ್ಪರ ವಿರೋಧ ಮಾಡಿಕೊಳ್ಳೋಣ.

ಎರಡನೆಯದಾಗಿ ಬ್ಯಾಂಕ್‌ಗಳ ಇಂದಿನ ಸ್ಥಿತಿ. ಇಂದು ಎಂಟೂವರೆ ಲಕ್ಷ...

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ:ತೇಜಸ್ವಿನಿ ಗೌಡ ಅವರು ಸದನದಿಂದ ಹೊರನಡೆದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಇಬ್ರಾಹಿಂ ಅವರೇ, ನಿಮಗೆ ಇಷ್ಟ ಬಂದಂತೆ ಮಾತನಾಡುತ್ತಿದ್ದೀರಾ? ಮದುವೆಗೆ experience ಬೇಕು ಎಂದು ಹೇಳುತ್ತೀರಿ. Non-sense ಇದು. ಏನು ಹಾಗೆ ಮಾತನಾಡುತ್ತೀರಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಮಾನ್ಯ ಸದಸ್ಯರು ಒಟ್ಟಾಗಿ ಎದ್ದುನಿಂತು ಮಾತನಾಡತೊಡಗಿದರು.)**

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದು ಅಸಂಸದೀಯ ಪದವಲ್ಲವೆ?

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂ ಅವರಿಗೆ ಎಷ್ಟು ಜನ ಹೆಣ್ಣುಮಕ್ಕಳಿದ್ದಾರೆ? ಅವರ ಮಕ್ಕಳಿಗೆ ಮದುವೆ ಮಾಡಿಕೊಡುವಾಗ ಅನುಭವವನ್ನು ಕೇಳಿದ್ದಾರೆಯೇ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಅಸಂಸದೀಯ ಪದ ಏನಿದೆ?

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಹೆಣ್ಣುಮಕ್ಕಳಿಗೆ ಮಾಡುತ್ತಿರುವ ಅವಮಾನ. This is not good. ಸಂತೆ ಭಾಷೆಯನ್ನು ಮಾತನಾಡುವುದಕ್ಕೆ ಇದು ಸಂತೆಯಲ್ಲ. ನಾವು ಇದನ್ನು ಖಂಡಿಸುತ್ತೇವೆ. We are not here to accept the wrong speeches. ಅವರಿಗೂ ಎಂಟು ಜನ ಹೆಣ್ಣುಮಕ್ಕಳಿದ್ದಾರೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಯೆಸ್ ಬ್ಯಾಂಕ್ ಬಿತ್ತು. ರಾಘವೇಂದ್ರ ಬ್ಯಾಂಕ್ ಬಿತ್ತು. ಆಗ ಏಕೆ ಇವರು ಬರಲಿಲ್ಲ? ರಾಘವೇಂದ್ರ ಬ್ಯಾಂಕ್ ಕರ್ನಾಟಕದ ಕನ್ನಡಿಗರು ಸ್ಥಾಪನೆ ಮಾಡಿದ ಬ್ಯಾಂಕ್ ಆಗಿದೆ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದೆಲ್ಲಾ ಬೇಡ. ಈಗ ಇದಕ್ಕೆ ಉತ್ತರ ಕೊಡಲಿ. ಅವರು ಮಹಿಳೆಯರಿಗೆ ಅವಮಾನ ಮಾಡುತ್ತಿದ್ದಾರೆ. ಮಹಿಳೆಯರ ಭಾವನೆಗಳಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಧಕ್ಕೆಯುಂಟು ಮಾಡಿದ್ದಾರೆ. (ವಿರೋಧಪಕ್ಷದ ಸಾಲಿನಲ್ಲಿ ಕುಳಿತಿದ್ದ ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮ ಮತ್ತು ಶ್ರೀಮತಿ ವೀಣಾ ಅಚ್ಚಯ್ಯ ಅವರತ್ತ ತಿರುಗಿ) ಅವರು ಹೆಣ್ಣುಮಕ್ಕಳ ಬಗ್ಗೆ ಮಾತನಾಡುತ್ತಿದ್ದರೆ, ನೀವು ಆತ್ಮ ಸಾಕ್ಷಿ ಇಲ್ಲದೆ ಕುಳಿತಿದ್ದೀರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಇಬ್ರಾಹಿಂ ಅವರು ಹೇಳಿದಂತಹ ಮಾತನ್ನು ತಾವು ಕಡತದಿಂದ ತೆಗೆದುಹಾಕಬೇಕು.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಕ್ಷಮೆ ಕೇಳಬೇಕು. ಇದು ಹೆಣ್ಣುಮಕ್ಕಳಿಗೆ ಮಾಡಿದ ಅವಮಾನ. ಇಲ್ಲದಿದ್ದರೆ ನಾವು ಧರಣಿ ಮಾಡುತ್ತೇವೆ. ಅವರಿಗೂ ಎಂಟು ಜನ ಹೆಣ್ಣುಮಕ್ಕಳು ಇದ್ದಾರೆ. ಅವರ ಮಕ್ಕಳಿಗೆ ಮದುವೆ ಮಾಡಬೇಕಾದರೆ ಅನುಭವವನ್ನು ಕೇಳಿದ್ದರೇ? ಸರ್ಟಿಫಿಕೇಟ್ ಕೊಟ್ಟಿದ್ದಾರೆಯೇ? ವಿದೂಷಕರ ಭಾಷೆ ಇಲ್ಲಿ ಬೇಕಾಗಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ಮಾತನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಉದಾಹರಣೆಯನ್ನು ಕೊಡಬೇಕಾದರೂ...

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಏನು ಮಾತನಾಡಬೇಕು ಎನ್ನುವುದರ ಬಗ್ಗೆ ಬಹಳಷ್ಟು ತಿಳುವಳಿಕೆ ಇರಬೇಕು. ಒಮ್ಮೊಮ್ಮೆ ಮಾತನಾಡುವಾಗ ಹೆಚ್ಚು ಕಡಿಮೆಯಾಗುತ್ತದೆ. ಇಷ್ಟೆಲ್ಲಾ ಗಲಾಟೆ ಮಾಡಿ fish market ರೀತಿಯಲ್ಲಿ ಮಾಡುವುದರಿಂದ ಹೀಗಾಗುತ್ತದೆ. ನಾನು ಮಾನ್ಯ ಇಬ್ರಾಹಿಂ ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಬಳಸಿರುವ ಪದವನ್ನು withdraw ಮಾಡಿಕೊಂಡರೆ ಬಹಳ ಒಳ್ಳೆಯದು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ರವಿಕುಮಾರ್‌ರವರು ಎಲ್ಲದಕ್ಕೂ ಎದ್ದೆದ್ದು ಕುಣಿಯುವುದನ್ನು ಸ್ವಲ್ಪ ಕಡಿಮೆ ಮಾಡಬೇಕು. ಸದನದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಸ್ವಲ್ಪ ಕಲಿತುಕೊಳ್ಳಿ. ಸುಮ್ಮನೆ ಕುಳಿತುಕೊಳ್ಳಲು ಕಲಿಯಿರಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಒಂದು ಇತ್ಯರ್ಥವಾಗಬೇಕಲ್ಲವೇ? ಏನು ತೀರ್ಮಾನಕ್ಕೆ ಬರಲಾಗುತ್ತಿದೆ? ನಾವು ಮಾತನಾಡುವಾಗ ಅನೇಕ ಸಾರಿ ತಪ್ಪು ಮಾಡುತ್ತೇವೆ. ಆದಂತಹ ತಪ್ಪಿಗೆ withdraw ಮಾಡಿಕೊಳ್ಳುವುದಾಗಲೀ, excuse ಕೇಳಿಕೊಳ್ಳುವುದಾಗಲೀ ಅಥವಾ ವಿಷಾದವನ್ನು ವ್ಯಕ್ತಪಡಿಸುವುದಾಗಲೀ ಮಾಡಬೇಕು. ಮಾನ್ಯ ಇಬ್ರಾಹಿಂ ಅವರು ಹಿರಿಯ ಸದಸ್ಯರಾಗಿದ್ದಾರೆ. ನನಗಿಂತ ಮೊದಲೇ ರಾಜಕಾರಣಕ್ಕೆ ಬಂದಿದ್ದು, ಬಹಳ ಅನುಭವವುಳ್ಳವರಾಗಿದ್ದಾರೆ. ತಪ್ಪಾಗಿರುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಬೇಡ. ದಯಮಾಡಿ ಅದನ್ನು withdraw ಮಾಡಿಕೊಂಡು ಈ ವಿಷಯವನ್ನು ಇಲ್ಲಿಗೆ ಮುಗಿಸಬೇಕೆಂದು ವಿನಂತಿ ಮಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಅವರು ಮಾತನಾಡಲು ನಿಂತರು.)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಪುಟ್ಟಣ್ಣನವರೇ, ಸದನದ ಪರವಾಗಿ ಹಿರಿಯ ಸದಸ್ಯರು ಹೇಳಿದ್ದಾರೆ. ಅಲ್ಲಿಗೆ ಈ ವಿಷಯವನ್ನು ಮುಗಿಸೋಣ. ಮತ್ತೇಕೆ ಬೆಳೆಸುತ್ತೀರಿ? ಮಾನ್ಯ ಇಬ್ರಾಹಿಂ ಅವರೇ, ಆ ಪದವನ್ನು withdraw ಮಾಡಿಬಿಡಿ.

**ಶ್ರೀ ಹೆಚ್.ಎಂ.ರೇವಣ್ಣ:-** ಕಲಾಪ ಸುಗಮವಾಗಿ ನಡೆಯಲು ಬಿಡಿ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಕುಳಿತುಕೊಳ್ಳಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಸಹೋದರಿ ಡಾ:ತೇಜಸ್ವಿನಿಗೌಡ ಅವರು ಸದನದಲ್ಲಿ ಇಲ್ಲ. ಅವರು ಇಲ್ಲಿ ಇದ್ದಿದ್ದರೆ 'ನೋಡಮ್ಮಾ ನನಗೂ ಎಂಟು ಜನ ಹೆಣ್ಣು ಮಕ್ಕಳಿದ್ದಾರೆ. ಮೂರು ಹೆಣ್ಣುಮಕ್ಕಳಿಗೆ ಮದುವೆಯಾಗಿದ್ದು, ಇನ್ನೂ ಐದು ಹೆಣ್ಣು ಮಕ್ಕಳು ಮದುವೆಯಾಗಬೇಕಿದೆ' ಎಂದು ಹೇಳುತ್ತಿದ್ದೆನು. **ನಾನು ಆ ಪದವನ್ನು withdraw ಮಾಡಿಕೊಳ್ಳುತ್ತಿದ್ದೇನೆ.**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಇಂದು ನಮ್ಮ ಜೀವನದಲ್ಲಿ ಏನಿದೆ ಎಂಬುದನ್ನು ನಾವು ನೋಡಿಕೊಳ್ಳಬೇಕಾಗಿದೆ. ಇಂದು ಡಾಲರ್ ಮೌಲ್ಯ ರೂ.74 ಆಗಿದೆ. ಯೆಸ್ ಬ್ಯಾಂಕ್ ಬಿದ್ದರೆ ರೂ.2 ರ ಷೇರನ್ನು ರೂ.10 ಕ್ಕೆ ಖರೀದಿ ಮಾಡಲಾಗುತ್ತದೆ. ರಾಘವೇಂದ್ರ ಬ್ಯಾಂಕ್ ಬಿದ್ದಾಗ ಸರ್ಕಾರ rescue ಗೆ ಬರಲಿಲ್ಲ ಏಕೆ? ಈ ದೇಶದ ವಿತ್ತಸಚಿವರಾದಂತಹ ಮಾನ್ಯ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ನಮ್ಮ ರಾಜ್ಯದಿಂದ ಆಯ್ಕೆಯಾಗಿ ಹೋದವರಾಗಿದ್ದಾರೆ. ಅವರಾದರೂ ಒಂದು ಮಾತನ್ನು ಹೇಳಿದರೇ?

ಇನ್ನು ಬ್ಯಾಂಕ್‌ಗಳ ವಿಲೀನದ ಬಗ್ಗೆ ಹೇಳುವುದಾದರೆ ಶ್ರೀಯುತ ಸುಂದರರಾಮ ಶೆಟ್ಟರು ದಕ್ಷಿಣ ಕನ್ನಡದ ‘ಭಂಟ’ ಸಮುದಾಯದವರು. ಭೂ ಸುಧಾರಣೆಯಲ್ಲಿ ಸರ್ವನಾಶವಾದಾಗ ಅವರು ವಿಜಯಾ ಬ್ಯಾಂಕ್ ಅನ್ನು ಸ್ಥಾಪನೆ ಮಾಡಿದರು. ಇಂದು ಆ ಬ್ಯಾಂಕ್ ಅನ್ನು ಒಯ್ದು ಬೇರೆ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಲಾಗಿದೆ. ಮೈಸೂರು ಮಹಾರಾಜರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅನ್ನು ಪ್ರಾರಂಭ ಮಾಡಿದ್ದರು. ಅದನ್ನೂ ವಿಲೀನಗೊಳಿಸಲಾಗಿದೆ. ಈಗ ಉಳಿದಿರುವುದು ಒಂದೇ ಒಂದು. ಕರ್ನಾಟಕ ಬ್ಯಾಂಕ್. ಬಹುತೇಕ ಅದಕ್ಕೆ ಕೈ ಹಾಕುವುದಿಲ್ಲ ಎಂದು ಕಾಣುತ್ತದೆ. ಏನಾಗುತ್ತದೆಯೋ ಗೊತ್ತಿಲ್ಲ. ಇದು ಏಕೆ ತಪ್ಪಾಗುತ್ತಿದೆ ಎಂದು ತಿಳಿಯಬೇಕು.

ಚಾಣಕ್ಯ ಒಂದು ಕಡೆಯಲ್ಲಿ “ಜಿಸ್ ದೇಶ್ ಕಾ ರಾಜಾ ಬೇಪಾರಿ ಹೋ ತೊ ಉಸ್ ದೇಶ್ ಕೀ ಪ್ರಜಾ ಭಿಕಾರಿ ಹೋಜಾಯೇಗಿ” ಎಂದು ಹೇಳುತ್ತಾನೆ. ಇಂದು ನಮ್ಮ ನೀತಿ ಏನಿರಬೇಕು? ಹಿಂದೂ ಧರ್ಮದ ನೀತಿಯೇನು? ಆರ್ಥಿಕ ನೀತಿಯೇನು? ಬಸವಣ್ಣನವರ ನೀತಿಯೇನು? ದಾಸೋಹ ಹಾಗೂ ಕಾಯಕ. ಕಾಯಕ ಎಂದರೆ ಉತ್ಪಾದನೆ. ದಾಸೋಹ ಎಂದರೆ ವಿತರಣೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ:ತೇಜಸ್ವಿನಿಗೌಡ ಅವರು ಸದನವನ್ನು ಪ್ರವೇಶಿಸಿ, ತಮ್ಮ ಸ್ಥಾನದಲ್ಲಿ ಆಸೀನರಾದರು.)**

**(574) 12.20 19.3.2020 KG MD**

**ಶ್ರೀ ಸಿ.ಎಂ. ಇಬ್ರಾಹಿಂ (ಮುಂದು):–**

ಇದು ನಮ್ಮ ನೀತಿ. ಅದೇರೀತಿ ಹಿಂದೂ ಧರ್ಮದ ನೀತಿ ಏನೆಂದರೆ, **“ಕೃಷಿತೋ ನಾಸ್ತಿ ದುರ್ಭಿಕ್ಷಾಃಧರ್ಮತೋ ನಾಸ್ತಿ ಪಾಪನಾಶನಂ”** ಎಂದು ಇದೆ. ಅಂದರೆ, ಕೃಷಿಯಿಂದ ಹೆಚ್ಚು ಮಾಡು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ದುರ್ಭಿಕ್ಷೆಯನ್ನು ದೂರ ಮಾಡು; ಧರ್ಮವನ್ನು ಬೆಳೆಸು, ಪಾಪವನ್ನು ನಾಶ ಮಾಡು ಎಂದು ಇದರ ಅರ್ಥ. ಧರ್ಮ ಎಂದರೆ,

**"ಒಲೆಯ ಬೂದಿಯಂ ಒಲಿಯಲು ಬೇಡ**
**ಒಲಿದಂತೆ ಪೂಸಿಕೊಂಡು ಇಪ್ಪವುದು**
**ಪೂಸಿ ಬಳಿದರೆ ಏನು ಫಲ?**
**ಮನದಲ್ಲಿ ಲೇಸಿಲ್ಲದನಕ**
**ಒಂದನ್ನಾಡ ಹೋಗಿ**
**ಒಂಭತ್ತನಾಡುವ ಡಾಂಭಿಕರನ್ನು ಶಿವ ಮೆಚ್ಚಲಾರನು**
**ಕೂಡಲ ಸಂಗಮದೇವಾ"**

ಜಗಜ್ಯೋತಿ ಶ್ರೀ ಬಸವಣ್ಣನವರು ಇದನ್ನು 800 ವರ್ಷಗಳ ಹಿಂದೆಯೇ ಹೇಳಿದ್ದಾರೆ. ನಾವು ನಮ್ಮ ಆತ್ಮಗಳನ್ನು ಅವಲೋಕನ ಮಾಡಿಕೊಂಡು, ನಾವು ಮಾಡುತ್ತಿರುವುದು ಸರಿ ಇದೆಯೇ ಎಂಬುದನ್ನು ನೋಡಬೇಕು. ನಿದ್ದೆ ಮಾಡುತ್ತಿರುವವನ್ನು ಎಚ್ಚರ ಮಾಡಬಹುದು, ಆದರೆ, ಕಣ್ಣು ಮುಚ್ಚಿಕೊಂಡು ನಿದ್ದೆ ಮಾಡುತ್ತಿರುವಂತೆ ನಟಿಸುತ್ತಿರುವವರನ್ನು ಎಚ್ಚರ ಮಾಡುವುದಕ್ಕೆ ಬಹಳ ಕಷ್ಟ. ಆದ್ದರಿಂದ, **'ಧರ್ಮೋ ರಕ್ಷತಿ ರಕ್ಷಿತಃ'**ಎಂಬ ಉಕ್ತಿಯಲ್ಲಿ ನನಗೆ ಒಂದು ವಿಶ್ವಾಸ ಇದೆ. ಧರ್ಮ ಎಂದರೆ, ಮಾನವಿಯತೆ, ಏಕತೆ. ಅದನ್ನು ನಾವೆಲ್ಲರೂ ಸೇರಿ ಕಾಪಾಡುತ್ತೇವೆ ಎಂಬ ಸಂಕಲ್ಪ ಮಾಡೋಣ. ಈಗ ಮನುಷ್ಯನೇ ಬದುಕುವುದಿಲ್ಲ. ಈಗ ಕೊರೊನ ವೈರಸ್ ಬಂತು ಎಂದರೆ, ನಾವು ಇರುತ್ತೇವೆಯೋ ಅಥವಾ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ನಮಗೆ ಕೆಮ್ಮು, ಜ್ವರ ಬಂದರೆ ಖಲಾಷ್ ಆಗಿಬಿಡುತ್ತೇವೆ. ಯಾವತ್ತೂ ಅಧಿಕಾರ ಶಾಶ್ವತವಾಗಿರುವುದಿಲ್ಲ. ಏಕೆಂದರೆ, ನಾವು 50 ವರ್ಷಗಳಲ್ಲಿ ಅನೇಕ ಪ್ರಧಾನ ಮಂತ್ರಿಗಳನ್ನು ಮತ್ತು ಅನೇಕ ಸಚಿವರನ್ನು ನೋಡಿದ್ದೇವೆ. ನಾವೆಲ್ಲರೂ ಒಂದು ಸಂಕಲ್ಪ ಮಾಡಿ ಕನಿಷ್ಠಪಕ್ಷ ನಮ್ಮ ರಾಜ್ಯದಲ್ಲಿಯಾದರೂ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಾಗಿ ಒಂದಾಗಿ ಬಾಳೋಣ ಎಂಬ ಕರೆಯನ್ನು ಕೊಡಬೇಕು.

ಮಾನ್ಯ ಸಭಾಪತಿಯವರೇ, ಈಗ ಬೀದರ್‌ನ ಘಟನೆಯನ್ನು ಪ್ರಸ್ತಾಪ ಮಾಡಿ ಹೇಳಿದರು. ಪಾಪ ಅದು ಆರು ವರ್ಷದ ಮಗು. ಇವತ್ತು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡರೆ, ಇದೊಂದು ದೊಡ್ಡ ಸಂದೇಶವನ್ನು ರಾಜ್ಯಕ್ಕೆ ಕೊಟ್ಟಂತೆ ಆಗುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಯವರೇ, ಎಷ್ಟು ಹೊತ್ತು ಮಾತನಾಡಿದರೂ ಅಷ್ಟೇ ಇದು ಬಗೆಹರಿಯುವುದಿಲ್ಲ. ಇದು ಹನುಮಂತನ ಬಾಲ ಇದ್ದಂತೆ, ಎಳೆದುಕೊಂಡು ಹೋದಂತೆ ಬೆಳೆಯುತ್ತಲೇ ಇರುತ್ತದೆ. ಸಂವಿಧಾನ ಶಿಲ್ಪಿ ಡಾ||ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನವನ್ನು ಕೊಟ್ಟರು. ನಿನ್ನೆ ದಿವಸ ಸದನದಲ್ಲಿ ಸಂವಿಧಾನದ reservation ಬಗ್ಗೆ ಸನ್ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷ್ಣರಾಜ ಒಡೆಯರ್‌ರವರ ಬಗ್ಗೆ ಮಾತನಾಡುತ್ತಿದ್ದರು. ಆದರೆ, ಆ ಚಳುವಳಿಯನ್ನು ಪ್ರಾರಂಭ ಮಾಡಿದ್ದು ಮೈಸೂರಿನ ಶ್ರೀ ಸಿದ್ದಯ್ಯನವರು. Millers Commission Report ಬಂದ ತಕ್ಷಣ Sir M.Visvesvaraya ನವರು reservation ಗೆ ಒಪ್ಪುವುದಿಲ್ಲ ಎಂದು ರಾಜೀನಾಮೆಯನ್ನು ಕೊಟ್ಟರು. ಆಗ reservation ಕೇಳಿದ್ದು ಲಿಂಗಾಯಿತರಿಗೆ, ಒಕ್ಕಲಿಗರಿಗೆ, ದಲಿತರಿಗೆ ಎಲ್ಲರಿಗೂ ಸೇರಿ ಕೇಳಿದ್ದು. 75% – 25% ಆಗಿದ್ದು. ಆದರೆ, ಇವತ್ತು ಮೈಸೂರಿನ ಸಿದ್ದಯ್ಯನವರನ್ನು ಯಾರು ನೆನಪಿಸಿಕೊಳ್ಳಲಿಲ್ಲ. ನಂತರ ಅವರಿಗೆ ಸಣ್ಣ ವಯಸ್ಸಿನಲ್ಲಿಯೇ ಕಾಯಿಲೆ ಬಂದು ತೀರಿಕೊಂಡರು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ಸಿದ್ದಯ್ಯನವರು ಕೇಳುವುದಕ್ಕೆ ಮೊದಲೇ ಮಹಾರಾಜರ ಬಳಿ ಇದ್ದ ಬ್ರಾಹ್ಮಣರಲ್ಲಿಯೇ, ಮೈಸೂರು ಬ್ರಾಹ್ಮಣರು ಮತ್ತು ತಮಿಳುನಾಡು ಬ್ರಾಹ್ಮಣರು ಎಂದು ಕಲಹ ಪ್ರಾರಂಭವಾಯಿತು. ಮೈಸೂರು ಬ್ರಾಹ್ಮಣರು reservation ಕೊಡಿ ಎನ್ನುವುದು start ಆಗಿ ನಮಗೆಲ್ಲಾ ಅನುಕೂಲವಾಯಿತು. ಆಗ ಶ್ರೀ ಸಿದ್ದಯ್ಯನವರು ಎಲ್ಲರೂ ಮಾತನಾಡಿ ಹಿಂದುಳಿದ ವರ್ಗದವರು ಎಂದು ನಮ್ಮನ್ನು Sir LeslieMiller ರವರು ಗುರುತಿಸಿದರು.

**ಶ್ರೀ ಸಿ.ಎಂ.ಇಬ್ರಾಹಿಂ:–**ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಿಗಳಾಗಿದ್ದ ದಿವಂಗತ ಶ್ರೀ ವಾಜಪೇಯಿಯವರು ನನ್ನನ್ನು ಯಾವಾಗಲೂ ಕೇಳುತ್ತಿದ್ದರು; ನನಗೆ ಅವರು ಬಹಳ ಆತ್ಮೀಯರು, ಅವರು ನಮ್ಮ ಜೊತೆಯಲ್ಲಿ 3 ತಿಂಗಳು ಜೈಲಿನಲ್ಲಿದ್ದರು. ಶ್ರೀ ಎಲ್.ಕೆ.ಅಡ್ವಾನಿಯವರು 18 ತಿಂಗಳು ಜೈಲಿನಲ್ಲಿದ್ದರು. ಶ್ರೀ ಸುರೇಶ್‌ರವರು ಮತ್ತು ನಾನು ಜೈಲಿನಲ್ಲಿ ಅಕ್ಕಪಕ್ಕದ ಕೊಠಡಿಗಳಲ್ಲಿಯೇ ಇದ್ದೆವು. ಕರ್ನಾಟಕದಲ್ಲಿ ಬಹಳಷ್ಟು ಕಡೆ ದೇವಸ್ಥಾನಗಳಲ್ಲಿ, ಮಠಗಳಲ್ಲಿ ದಾಸೋಹ ವ್ಯವಸ್ಥೆ ಇದೆ. ಆದರೆ, ಉತ್ತರ ಭಾರತದಲ್ಲಿ ದಾಸೋಹ ಇಲ್ಲವಲ್ಲ, ಇದಕ್ಕೆ ಕಾರಣ ಏನು ಎಂದು ಕೇಳಿದ್ದರು. ಅದಕ್ಕೆ ನಾನು ದಕ್ಷಿಣ ಭಾರತದ್ದು ಒಂದು ಪರಂಪರೆ ಇದೆ. ಬ್ರಾಹ್ಮಣರ ಮಠದಲ್ಲಿ ದಾಸೋಹ ಇದೆ. ಲಿಂಗಾಯತರ ಮಠದಲ್ಲಿ ದಾಸೋಹ ಇದೆ. ಜೈನರ ಮಠದಲ್ಲಿಯೂ ದಾಸೋಹ ಇದೆ. ಇದು ಪದ್ಧತಿ. ನಾನು ಬ್ರಾಹ್ಮಣರ ಪದ್ಧತಿ ಬಗ್ಗೆ ಮಾತನಾಡುವುದಕ್ಕೆ ಹೋದರೆ ಮತ್ತೆ ಗಲಾಟೆಯಾಗುತ್ತದೆ. ಏಕೆಂದರೆ, ನಾನು ಮುಸಲ್ಮಾನ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಲ್ಲಾ ಬ್ರಾಹ್ಮಣರ ಮೇಲೆ ಹೇಳಬಾರದು. ಎಲ್ಲಾ ಬ್ರಾಹ್ಮಣರಿಂದ ಪ್ರಾರಂಭವಾಗಿದೆ. ನಾವು highest position ನಲ್ಲಿ ಎಲ್ಲರನ್ನು ಕೂರಿಸಿ ನಾವು ಕೆಳಗೆ ಕುಳಿತುಕೊಳ್ಳುತ್ತೇವೆ, ಇದನ್ನು ಅವರು ಅರ್ಥಮಾಡಿಕೊಳ್ಳಬೇಕು.

**ಶ್ರೀ ಸಿ.ಎಂ. ಇಬ್ರಾಹಿಂ:–**ಮಾನ್ಯ ಸಭಾಪತಿಯವರೇ, ಶೃಂಗೇರಿ ಮಠದಲ್ಲಿ 'ಸಲಾಂ ಆರತಿ' ಎಂದು ನಡೆಯುತ್ತದೆ. ಇದನ್ನು ಏಕೆ ಮಾಡುತ್ತೀರಾ ಎಂದು ಸ್ವಾಮಿಗಳಿಗೆ ಕೇಳಿದಾಗ 'ಟಿಪ್ಪು ಸುಲ್ತಾನ' ನೆನಪಿಗಾಗಿ ಈ ಆರತಿಯನ್ನು ಮಾಡುತ್ತಿದ್ದೇವೆಂದು ಹೇಳಿದರು. ಏಕೆಂದರೆ, ಅವರು ಈ ಮಠವನ್ನು ಉಳಿಸಿದವರು ಎಂದು ಹೇಳಿದರು. 'ಮಂತ್ರಾಲಯದ ಶ್ರೀ ರಾಘವೇಂದ್ರ ಯತಿಗಳಿಗೆ ಈ ಜಾಗವನ್ನು ಕೊಟ್ಟಿದ್ದು Nawab of Adoni. ಏಕೆ ಕೊಟ್ಟರು, ಅವರು ಮತಕ್ಕಾಗಿ(ಜಾತಿಗಾಗಿ) ಕೊಡಲಿಲ್ಲ. ಭಾವೈಕ್ಯತೆಗಾಗಿ ಕೊಟ್ಟರು. **'ಅತಿಥಿ ದೇವೋಭವ'** ಎಂದು ಹೇಳುತ್ತಾರೆ. 'ನಂಜನಗೂಡಿನಿಂದ ಶ್ರೀ ರಾಘವೇಂದ್ರ' ಬಂದಿದ್ದಾರೆ ಎಂದಾಗ ಮಂತ್ರಿ ಈ ಜಾಗವನ್ನು ಖಾಜೀ ಸಾಹೇಬರಿಗೆ ಕೊಟ್ಟಿದ್ದೇನೆಂದು ಹೇಳಿದಾಗ ರಾಜರು ಖಾಜೀ ಸಾಹೇಬರಿಗೆ ಕೊಟ್ಟ ಜಾಗವನ್ನು ವಜಾ ಮಾಡು. ನಮಲ್ಲಿಗೆ ರಾಘವೇಂದ್ರ ಅತಿಥಿಯಾಗಿ ಬಂದಿದ್ದಾರೆ. 'ಶ್ರೀ ರಾಘವೇಂದ್ರ ಸ್ವಾಮಿಯ ಬೃಂದಾವನ' ಆ ಜಾಗದಲ್ಲಿ ಆಗಲಿ ಎಂದು ಹೇಳಿದರು. ಅದನ್ನು ಅಲ್ಲಿ ಬರೆದು ಇಟ್ಟಿದೆ. ನವಾಬರು ಏನು ಮತಕ್ಕಾಗಿ ಕೊಟ್ಟರಾ? ನಾನು ಹೇಳಿದರೆ ಮತಕ್ಕೆ ಹೇಳಿದರು ಎನ್ನಬಹುದು. ಆದರೆ, ನವಾಬರಿಗೆ ಏನು, ಆದರಿಂದ, ಇವತ್ತು ನಾವು ಅನೇಕತೆಯಲ್ಲಿ ಏಕತೆಯನ್ನು ನೋಡುವಂತಹ ನಾಡು ನಮ್ಮದು, ಇದು ಚರ್ಚೆಯಾಗಿದೆ. ಮುಂದೆ ಈ ದೇಶಕ್ಕೆ ಉತ್ತಮವಾದಂತಹ ಭವಿಷ್ಯ ಇದೆ. ನನಗೆ ಇದರಲ್ಲಿ ವಿಶ್ವಾಸ ಇದೆ. ಏಕೆಂದರೆ, ಮಹಾಭಾರತದಲ್ಲಿ **"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ"**ಎಂದು ದ್ವಾಪರಯುಗದಲ್ಲಿ ಹೇಳಿ ಹೋಗಿದ್ದಾರೆ ಅಧರ್ಮ ಆಯಿತು ಎಂದು ಹೇಳಿದರೆ, ಈ ಭೂಮಿಯಿಂದಲೇ ಒಬ್ಬ ಪುಣ್ಯ ಪುರುಷ ಹುಟ್ಟಿಕೊಳ್ಳುತ್ತಾನೆ, ಏನಾದರೂ ಮಾಡಿ ಸಂಹಾರ ಆಗಲೇಬೇಕು. ಆದರೆ, ನಾವು ಇರುತ್ತೇವೆಯೋ ಅಥವಾ ಇಲ್ಲವೋ ಗೊತ್ತಿಲ್ಲ.

ಮಾನ್ಯ ಸಭಾಪತಿಯವರೇ, ಇವತ್ತು ಇದನ್ನು ನಡೆಸಿಕೊಂಡು ಹೋಗಲಿ. ಹಣಕಾಸಿನ ವಿಧೇಯಕ ಬರುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ, ಕೊರೊನ ವೈರಸ್ ನಕೋನ ಅಂದರೆ, ಅದುಕೊರೊನ ಅನ್ನುತ್ತದೆ. ಕೊರೊನಾ ವೈರಸ್ ಯಾವ ಹಂತಕ್ಕೆ ಮುಟ್ಟುತ್ತದೆಯೋ ನಮಗೆ ಗೊತ್ತಿಲ್ಲ. ನಾನು ಹಣಕಾಸಿನ ವಿಧೇಯಕದ ಮೇಲೆ ಅವಕಾಶ ಸಿಕ್ಕಾಗ ಐದು ನಿಮಿಷಗಳ ಕಾಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾತನಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಸಭಾಪತಿಯವರಿಗೂ ಮತ್ತು ಸಹಕರಿಸಿದ ಮಾನ್ಯ ಸದಸ್ಯರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಸಂವಿಧಾನದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್‌ರವರ ಭಾವಚಿತ್ರವನ್ನು ಹಾಕಿಸಿದ್ದು ಬ್ರಾಹ್ಮಣರೆ, ಮಾಜಿ ಮುಖ್ಯ ಮಂತ್ರಿಗಳಾದ ದಿವಂಗತ ಶ್ರೀ ಗುಂಡೂರಾವ್‌ರವರು. ಬ್ರಾಹ್ಮಣರ ಬಗ್ಗೆ ಮಾತನಾಡುವಾಗ ಇದು ಜ್ಞಾಪಕ ಇರಲಿ.

**ಶ್ರೀ ಜಿ.ರಘು ಆಚಾರ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಾನು ಬಹುಶಃ ಈ ಸದನದ ಬಹಳ ಕಿರಿಯ ಸದಸ್ಯನೆಂದು ಭಾವಿಸಿದ್ದೇನೆ. ನನಗಿಂತ ಮುಂಚೆ Sri Rizwan Arshad ರವರು ಇದ್ದರು. ನಾನು ಬಂದಾಗ ಅವರು ಇರಲಿಲ್ಲ. ನಾನು youngest member. ನಾನು ಹೊಸದಾಗಿ Upper House ಗೆ ಬಂದಾಗ ಈ ಸದನ ಬಹಳ ಚೆನ್ನಾಗಿ ನಡೆಯುತ್ತಿತ್ತು. ಆಗ ಒಳ್ಳೊಳ್ಳೆಯ debate ಆಗುತ್ತಿದ್ದವು. ಆಗ ಬಹುಶಃ ಶ್ರೀ ಕೆ.ಎಸ್.ಈಶ್ವರಪ್ಪನವರು ಇದ್ದರು. ನನಗೆ ಈಗ ಸದನಕ್ಕೆ ಬರುವಂತಹ ಆಸಕ್ತಿ ಇಲ್ಲದಾಗಿದೆ. ಏಕೆಂದರೆ, ಬಹುಶಃ ಈ ಕಡೆ ಇಬ್ಬರು, ಆ ಕಡೆ ಇಬ್ಬರು ನಿಂತುಕೊಂಡು ಗೊಂದಲ ಮಾಡುವುದೇ ಆಗಿದೆ. ಇಲ್ಲಿ ಚರ್ಚೆ ಮಾಡುವುದಕ್ಕಿಂತ ಗೊಂದಲ ಮಾಡುವುದೇ ಜಾಸ್ತಿಯಾಗಿದೆ. ಮೇಲ್ಮನೆಯಲ್ಲಿ ಚರ್ಚೆಗಳು ನಡೆಯುತ್ತವೆ ಅಂದರೆ, ಇದನ್ನು ಜನರು ನೋಡುತ್ತಿರುತ್ತಾರೆ. ನನ್ನನ್ನು ತಪ್ಪು ತಿಳಿದುಕೊಳ್ಳಬೇಡಿ. ಏಕೆಂದರೆ, ನಾನು ಅವರು ಇವರು ಎಂದು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮನ್ನು ಜನ ನೋಡುತ್ತಿರುತ್ತಾರೆ. ನಾವು Democracy System ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, 1946ನೇ ಇಸವಿಯಲ್ಲಿ ಶ್ರೀ ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ 301 ಜನರು ಇರುವಂತಹ ಒಂದು ಸಮಿತಿಯನ್ನು ರಚನೆ ಮಾಡುತ್ತಾರೆ. ಆದಾದ ನಂತರ ಕರಡು ಸಮಿತಿಗೆ ಡಾ॥ಬಿ.ಆರ್.ಅಂಬೇಡ್ಕರ್‌ರವರನ್ನು ನೇಮಿಸಿದರು. ಡಾ॥ಬಿ.ಆರ್.ಅಂಬೇಡ್ಕರ್‌ರವರು ಉತ್ತಮ ಆಶಯಗಳನ್ನು ಇಟ್ಟುಕೊಂಡು ಎಲ್ಲರಿಗೂ ಸಮಾನವಾದ ಹಕ್ಕುಗಳು ಸಿಗಬೇಕೆಂದು ಸುಂದರವಾದಂತಹ ಒಂದು ಸಂವಿಧಾನವನ್ನು ಮಾಡಿಕೊಟ್ಟರು. ಕಳೆದ ಐದಾರು ದಿವಸಗಳಿಂದ ಸಂವಿಧಾನದ ಮೇಲೆ ಬಹಳ ಚೆನ್ನಾಗಿ ಚರ್ಚೆಯಾಗುತ್ತಿದೆ. ಇದು ಎಲ್ಲರಿಗೂ ಆಶಾದಾಯಕ. ಇದು ಹೀಗೆ ನಡೆಯಬೇಕು. ನಾನು ಅದನ್ನು ತಪ್ಪು ಎಂದು ಹೇಳುವುದಿಲ್ಲ. ಸದನದಲ್ಲಿ ಮಾನ್ಯ ಕಾನೂನು ಸಚಿವರು ಇದ್ದಾರೆ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ..,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜಿ.ರಘು ಆಚಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ಡಾ||ವೈ.ಎ.ನಾರಾಯಣಸ್ವಾಮಿಯವರಿಗೆ ಸ್ವಲ್ಪ ಸುಮ್ಮನಿರುವುದಕ್ಕೆ ಹೇಳಿ. ಮಾನ್ಯ ಕಾನೂನು ಮಂತ್ರಿಗಳು ಇದನ್ನು ಸ್ವಲ್ಪ ಕೇಳಿಸಿಕೊಳ್ಳಲಿ. ಅವರು ಯಾವಾಗಲೂ ಇದನ್ನೇ ಮಾಡುತ್ತಿರುತ್ತಾರೆ. ಅವರು ಒಬ್ಬರು ಇಲ್ಲವೆಂದರೆ, ಈ ಸದನ ಚೆನ್ನಾಗಿ ನಡೆಯುತ್ತದೆ. ಇದು ಬಹಳ ಮುಖ್ಯವಾದ ಚರ್ಚೆ. ನಾನು ಮೊನ್ನೆ ಮಾನ್ಯ ಸಚಿವರಿಗೆ, "ನಾರಾಯಣಸ್ವಾಮಿಯವರಿಗೆ ಕಾಫಿ ಕೊಡಿಸಿ ಅವರನ್ನು ಚರ್ಚೆ ನಡೆಯುವಾಗ ಸದನದ ಒಳಗಡೆ ಕರೆದುಕೊಂಡು ಬರಬೇಡಿ" ಎಂದು ಹೇಳಿದ್ದೆ. ಹಾಗೆಯೇ, ಶ್ರೀ ಎನ್.ರವಿಕುಮಾರ್‌ರವರು, ನನಗೆ ಅವರಿಬ್ಬರ ಸಹವಾಸ ಆಗುವುದಿಲ್ಲ. ಸದನ ನಡೆಯುವಾಗ ಅವರಿಗೆ ಸುಮ್ಮನಿರುವುದಕ್ಕೆ ಹೇಳಿ.

ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಸಂವಿಧಾನದ ಬಗ್ಗೆ ಪುಸ್ತಕಗಳನ್ನು ಓದಿದ್ದೇನೆ. ಈಗಾಗಲೇ ಮಾನ್ಯ ಸದಸ್ಯರು ಸಂವಿಧಾನದ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದ್ದಾರೆ. ಹಾಗಾಗಿ, ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವಂಥದ್ದು ಏನಿಲ್ಲ. ನಾವು ಸಂವಿಧಾನದಲ್ಲಿ ಸುಮಾರು 104 ತಿದ್ದುಪಡಿಗಳನ್ನು 2020 ರವರೆಗೂ ಮಾಡಿದ್ದೇವೆ. ನಾವು ಮಾಡಿರುವಂತಹ ತಿದ್ದುಪಡಿಗಳಂತೆ ನಾವು ನಡೆದುಕೊಳ್ಳುತ್ತಿದ್ದೇವೆಯೇ ಎಂಬುದನ್ನು ನೋಡಬೇಕಲ್ಲವೇ; ನಾವು ಇಲ್ಲಿ ಯಾವುದೇ amendment ಮಾಡುವುದಕ್ಕೆ ಆಗುವುದಿಲ್ಲ. ನಾವು ಇಲ್ಲಿ ಎಷ್ಟೇ ಚರ್ಚೆಗಳನ್ನು ಮಾಡಿದ್ದರೂ ಸಹ, ನಾವು ಇಲ್ಲಿ amendment ಮಾಡುವುದಕ್ಕೆ ಆಗುವುದಿಲ್ಲ. ಅದರ ಬದಲಿಗೆ ಮಾನ್ಯ ಸದಸ್ಯರಾದ ಶ್ರೀ ಶರಣಪ್ಪ ಮಟ್ಟೂರರವರನ್ನು ಕರೆದು ಒಂದು seminar ಮಾಡಿದ್ದರೆ ಒಳ್ಳೆಯದಿತ್ತು. ಅವರು ಕಾನೂನು ಬಗ್ಗೆ ಸಂಜೆ ಹೇಳುತ್ತಿದ್ದರು, ಅದನ್ನು ನಾವು ಸಹ ಕೇಳಿಸಿಕೊಳ್ಳುತ್ತಿದ್ದೆವು. ಆಗ ಖಂಡಿತ problem solve ಆಗುತ್ತದೆ. ನಾನು ಇದನ್ನು ಕಲಿತ ಮೇಲೂ ಸಹ ವಕೀಲರಿಗೆ fee ಕೊಡುವುದು ನನಗೆ ತಪ್ಪಿಲ್ಲ. ವಕೀಲರು ಇದ್ದಾರೆ, ಬುದ್ಧಿವಂತರು ಇದ್ದಾರೆ. ನನಗಿಂತ ಹಿರಿಯರು ಇದ್ದಾರೆ. ನಾನು ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಉದಾಹರಣೆಗೆ ಮಕ್ಕಳಿಗೆ 14 ವರ್ಷಗಳವರೆಗೆ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡಬೇಕೆಂದು ಒಂದು ತಿದ್ದುಪಡಿಯನ್ನು ಮಾಡಿಕೊಂಡಿದ್ದೇವೆ. ಆದರೆ, ನಾವು ಅದನ್ನು ನಡೆಸಿಕೊಂಡಿದ್ದೇವೆಯೇ? ನಾನು ಮೊನ್ನೆ ದಿವಸ ಡಿ.ಸಿ ಮತ್ತು ಎ.ಸಿ., ಯವರು ಸರ್ಕಾರದ control ನಲ್ಲಿ ಇರುತ್ತಾರೆಂದು ಹೇಳಿದೆ. ಅಧಿಕಾರಿಗಳು ಯಾವಾಗಲೂ ಸಹ ಯಾವ ಸರ್ಕಾರ ಇರುತ್ತದೆಯೋ ಅವರ control ನಲ್ಲಿ ಇರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(575)19-03-2020(12-30)ಎಂವಿ-ಎಕೆ**

**ಶ್ರೀ ಜಿ.ರಘು ಆಚಾರ್ (ಮುಂದು.:-**

ಈ ಮೊದಲು ನಮ್ಮ ಸರ್ಕಾರವಿತ್ತು. ನಾನು 2017ರಲ್ಲಿ ಸದನದಲ್ಲಿ ಖಾಸಗಿ ವಿಧೇಯಕವನ್ನು ಮಂಡನೆ ಮಾಡಿದೆ. ಈಗ ಇಲ್ಲಿರುವಂತಹ ಸಂವಿಧಾನ ಪುಸ್ತಕವನ್ನು ಬಿಡಿ. ಮಾನ್ಯ ಕಾನೂನು ಸಚಿವರು ಬುದ್ಧಿವಂತರು ಅವರು ಒಂದು ಅಥವಾ ಎರಡನ್ನು ಬದಲಾವಣೆ ಮಾಡಬಹುದು. ಅವರು ಬದಲಾವಣೆ ಮಾಡಿದರೆ, ನಾನು ಬಹಳ ಖುಷಿ ಪಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಯವರೇ, ಅದು Directive Principles of State Policy ರ ಅಡಿಯಲ್ಲಿ ಬರುತ್ತದೆ. 6 ರಿಂದ 14 ವರ್ಷದ ಮಕ್ಕಳಿಗೆ free and compulsory education ಅನ್ನು ಅನುಷ್ಠಾನಗೊಳಿಸಬೇಕು.

**ಶ್ರೀ ಜಿ.ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾನ್ಯ ಸದಸ್ಯರು ಸ್ವಲ್ಪ ಸಮಾಧಾನವಾಗಿರಲಿ. 2017ರಲ್ಲಿ ನಾನು ಖಾಸಗಿ ವಿಧೇಯಕವನ್ನು ತಂದಿದ್ದೆ. ಆಗ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಇದ್ದರು. ಅದು ಶುಕ್ರವಾರ ಸಾಯಂಕಾಲವೇ ಬರುತ್ತದೆ. ಅಷ್ಟು ಹೊತ್ತಿಗೆ ಸದನ ಮುಗಿದು ಹೋಗುತ್ತದೆ. ಮೂರ್ನಾಲ್ಕು ದಿವಸಗಳಿಂದ ಸಂವಿಧಾನದ ಬಗ್ಗೆ ಚರ್ಚೆ ಮಾಡಿ, ಸದನವನ್ನು ನಡೆಸುತ್ತಿದ್ದಾರೆ. ಆದರೆ, ಖಾಸಗಿ ವಿಧೇಯಕ ಮಂಡಿಸುವುದಕ್ಕೆ ಯಾವೊತ್ತು ಸಹ ಬೇಗ ತೆಗೆದುಕೊಂಡಿಲ್ಲ. 2017ರಲ್ಲಿ ಖಾಸಗಿ ವಿಧೇಯಕವನ್ನು ತಂದಾಗ ಮಾನ್ಯ ಕೆ.ಎಸ್.ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು. ಸದಸ್ಯರಾದ ಮಾನ್ಯ ಟಿ.ಎ.ಶರವಣ ಮತ್ತು ಶಾಸಕರಾದ ಮಾನ್ಯ ತನ್ವೀರ್ ಸೇಠ್‌ರವರು ಇದ್ದರು. ಅವರು ಇದನ್ನು ತರುತ್ತೇನೆ ಎಂದು ಹೇಳಿದರು. ಆದರೆ, ನನ್ನ ವಿಧೇಯಕ ಎಲ್ಲಿಗೆ ಬಂದಿದೆ? ಇದಕ್ಕೆ ನ್ಯಾಯವನ್ನು ಒದಗಿಸಬೇಕಲ್ಲವೆ? ಈಗ ಆ ಕಡೆ ಇರುವವರು ಕೊಡುವುದಿಲ್ಲ ಬಿಡಿ. ನಾನು ಆ ನಂಬಿಕೆಯಲ್ಲಿ ಇಲ್ಲ. ಏಕೆಂದರೆ, ಈಗ ಕಾರ್‌ನಲ್ಲಿ ಕುಳಿತುಕೊಂಡಾಗ ಸೀಟ್‌ಬೆಲ್ಟ್ ಹಾಕಬೇಕು ಎನ್ನುತ್ತಾರೆ. ಈಗ ನಾವು ಎಷ್ಟು ಜನ ಎಂ.ಎಲ್.ಸಿ.ಗಳು, ಎಂ.ಎಲ್.ಎ.ಗಳು ಮತ್ತು ಮಂತ್ರಿಗಳು ಸೀಟ್‌ಬೆಲ್ಟ್ ಹಾಕಿಕೊಂಡು ಓಡಾಡುತ್ತಿದ್ದೇವೆ. ಈಗ ನಾವು ಕಾನೂನುಗಳನ್ನು ಪಾಲನೆ ಮಾಡುತ್ತಿಲ್ಲ, ಬೇರೆಯವರನ್ನು ಬಿಡಿ. ಆದರೆ, ನಮ್ಮ ರಕ್ಷಣೆಗೆ ಯಾರಾದರೂ ಬರಬೇಕಲ್ಲವೇ? ಮಾನ್ಯ ಕಾನೂನು ಸಚಿವರಲ್ಲಿ ನಾನು ಕೇಳುವುದೇನೆಂದರೆ, ಈಗ ಟ್ರಾಫಿಕ್‌ನಲ್ಲಿ ಯಾರಾದರೂ ಹಿರಿಯ ಅಧಿಕಾರಿಗಳು ಹೋಗಿದ್ದಾರೆಯೇ? ಈಗ ಬಸವರಾಜ ಬೊಮ್ಮಾಯಿಯವರು ಗೃಹ ಮಂತ್ರಿಗಳು ಎಂದು ಮಾತನಾಡುತ್ತಿಲ್ಲ. ಇವತ್ತು ನಾನು ಮನೆಯಿಂದ ಅರ್ಧ ಗಂಟೆಗೆ ಇಲ್ಲಿಗೆ

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಬಂದಿದ್ದೇನೆ. ಇಲ್ಲವಾದರೆ ಸುಮಾರು ಎರಡು ಗಂಟೆಯಾಗುತ್ತದೆ. ನಾನು ಈಗ ಸದನಕ್ಕೆ ಬರುವುದನ್ನೇ ನಿಲ್ಲಿಸಿಬಿಟ್ಟಿದ್ದೇನೆ. ಏಕೆಂದರೆ, ಏನೂ ಆಗುವುದಿಲ್ಲವೆಂದರೆ, ಸುಮ್ಮನೆ ಏತಕ್ಕೆ ಬಂದು ಚರ್ಚೆ ಮಾಡುವುದು. ಇದು ಸ್ಟೋರಿ ಎಂದು ನನಗೆ ಮೊದಲೇ ಗೊತ್ತಿತ್ತು. ಮೊದಲು ಚಂದಮಾಮ ಪುಸ್ತಕ ಬರುತ್ತಿತ್ತು. ಅದರಲ್ಲಿ ಪ್ರತಿದಿನ ವಿಕ್ರಮ್ ಮತ್ತು ಬೇತಾಳ್ ಸ್ಟೋರಿ ಬರುತ್ತಿತ್ತು. ನಾವು ಆ ತರಹ ಕೇಳಿಕೊಂಡು ಹೋಗುವುದಕ್ಕೆ ಏಕೆ ಸದನಕ್ಕೆ ಬರಬೇಕು? ಈಗ ಸದನವನ್ನು ಒಂದು ತಿಂಗಳು ನಡೆಸುತ್ತಿದ್ದಾರೆ. ಆದರೆ, ಸದನಕ್ಕೆ ಬರುತ್ತಿರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಏಕೆಂದರೆ, ನಾವು ಸದನದಲ್ಲಿ ಸರಿಯಾಗಿ ಚರ್ಚೆ ಮಾಡುತ್ತಿಲ್ಲ. ಇದು ನನ್ನ ಅನಿಸಿಕೆ. ನಾನು ಮಾನ್ಯ ಸಭಾಪತಿಯವರಲ್ಲಿ ಮತ್ತು ಕಾನೂನು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ...

**ಸಭಾಪತಿಯವರು:-**ತಾವು ಸದನಕ್ಕೆ ಸರಿಯಾಗಿ ಹಾಜರಾಗಿ ಭಾಷಣ ಮಾಡಬೇಕು. ತಾವು ಸದನಕ್ಕೆ ಬರುವುದೇ ಇಲ್ಲ.

**ಶ್ರೀ ಜಿ.ರಘು ಆಚಾರ್:-**ಮಾನ್ಯ ಸಭಾಪತಿಯವರೇ, ನಾನು ಮೊದಲು ಸದನಕ್ಕೆ ಸರಿಯಾಗಿ ಬರುತ್ತಿದ್ದೆ. ಈಗ ಏನಾಗಿದೆ ಎಂದರೆ, ಮೊದಲು ಡಾ॥ವೈ.ಎ.ನಾರಾಯಣಸ್ವಾಮಿ ಈ ಸದನದಿಂದ ಹೋದಮೇಲೆ ಇಲ್ಲಿ ಸರಿಯಾಗಿ ಇತ್ತು. ಆದರೆ, ಮತ್ತೆ ಮಾನ್ಯ ಎನ್.ರವಿಕುಮಾರ್ ಮತ್ತು ಡಾ॥ವೈ.ಎ.ನಾರಾಯಣಸ್ವಾಮಿ ಈ ಇಬ್ಬರು ಸದನಕ್ಕೆ ಬಂದ ನಂತರ ನಾನು ಬರುವುದನ್ನು ನಿಲ್ಲಿಸಿದ್ದೇನೆ. ಈಗ ದಯವಿಟ್ಟು ನಾಳೆ ಬೆಳಿಗ್ಗೆ ಶುಕ್ರವಾರ ನನ್ನ ಖಾಸಗಿ ವಿಧೇಯಕ ಏನಿದೆ ಅದನ್ನು lay ಮಾಡಿ. ಇಲ್ಲವಾದರೆ ನಾನು ನಾಳೆಯಿಂದ ಸದನದ ಬಾವಿಯಲ್ಲಿ ಅನಿರ್ದಿಷ್ಟಾವಧಿಗೆ ಧರಣಿ ಕೂರುತ್ತೇನೆ. ಏಕೆಂದರೆ, ಇಲ್ಲಿ ನನ್ನ ಸೀಟ್‌ನಲ್ಲಿ ಕುಳಿತುಕೊಳ್ಳುವುದರ ಬದಲು, ಅಲ್ಲಿ ಕುಳಿತುಕೊಂಡರೆ ಕೇಳಿಸುತ್ತದೆ. ಅಲ್ಲಿ ನಾವು ಏನು ಮಾತನಾಡುವಂತಿಲ್ಲ, ಮತ್ತೇನು ಇಲ್ಲ. ಅದಕ್ಕೆ ನಾನು ಏತಕ್ಕೆ ತಲೆಕೆಡಿಸಿಕೊಳ್ಳುವುದು. ಈ ‘ಕರ್ನಾಟಕ ಶಿಕ್ಷಣ (ತಿದ್ದುಪಡಿ) ಅಧಿನಿಯಮ, 2017’ ಆದ ಮೇಲೆ, ಅದಕ್ಕೆ ಸಂಬಂಧಪಟ್ಟಂತೆ ಒಂದು ಕಮಿಟಿಯಾಯಿತು. ಆ ಕಮಿಟಿಗೆ ಪ್ರಧಾನ ಕಾರ್ಯದರ್ಶಿಯವರು ಬಂದರು. ನಮ್ಮ ಇಂಡಿಯಾದಲ್ಲಿ education ಮತ್ತು health ಇವೆರಡು ಸಹ ಸಮಾನವಾಗಿ ಸಿಗದೇ ಇದ್ದರೆ, ನಾಳೆಯ ದಿವಸ ನಮ್ಮ ದೇಶ ಎಲ್ಲಿಗೆ ಹೋಗಿ ನಿಲ್ಲುತ್ತದೆ. ನೀವು ಎಷ್ಟೇ ಸಾಹುಕಾರರಾದರೂ ಏನು ಆಗುವುದಿಲ್ಲ. ಈಗ ಕೊರೊನಾ ವೈರಸ್ ನಿಮ್ಮನ್ನು ತಿಂದುಕೊಳ್ಳುತ್ತಿಲ್ಲವೆ? ನಾನು ಬೆಳಗ್ಗೆ ಎದ್ದು ದೇವರಿಗೆ ಪೂಜೆ ಮಾಡಿಕೊಂಡು ಬರುತ್ತಿದ್ದೇನೆ. ಆದರೆ, ದೇವಸ್ಥಾನಕ್ಕೆ ಬಾಗಿಲು ಹಾಕಿಸುತ್ತಿದ್ದಾರೆ. ಹಾಗಾದರೆ ನಾನು ದೇವರಿಗೆ ಎಲ್ಲಿ ಕೈ ಮುಗಿಯುವುದು? ಈ ವ್ಯವಸ್ಥೆಯಲ್ಲಿ ನಾವು ಎಲ್ಲಿಗೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೋಗುತ್ತಿದ್ದೇವೆ. ಈಗ ಒಂದು ಉದಾಹರಣೆಗೆ; ಚಿತ್ರದುರ್ಗ ಜಿಲ್ಲೆಯಲ್ಲಿ ನಮ್ಮ ಆರೋಗ್ಯ ಮಂತ್ರಿಗಳು ಇದ್ದಾರೆ. ಕೊರೊನಾ ವೈರಸ್ ತಡೆಗಟ್ಟುವುದಕ್ಕೆ 200 ಕೋಟಿ ಕೊಟ್ಟಿದ್ದೇವೆ, 300 ಕೋಟಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ವೈದ್ಯಕೀಯ ಶಿಕ್ಷಣ ಸಚಿವರಾದ ಮಾನ್ಯ ಕೆ.ಸುಧಾಕರ್‌ರವರು ನನ್ನ ಸ್ನೇಹಿತರು. ಆರೋಗ್ಯ ಮಂತ್ರಿಗಳಾದ ಮಾನ್ಯ ಶ್ರೀರಾಮುಲು ರವರಗಿಂತ ಅವರೇ ಮಾಡುತ್ತಿದ್ದಾರೆ. ನಾನು ಚಿತ್ರದುರ್ಗ ಮತ್ತು ದಾವಣಗೆರೆ ಈ ಎರಡು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೇನೆ. ಲ್ಯಾಬೋರೇಟರಿಗೆ ಒಂದೂವರೆ ಕೋಟಿಯಿಂದ ಎರಡು ಕೋಟಿ ರೂಪಾಯಿ ಆಗುತ್ತದೆ. ಈಗ ಒಂದೊಂದು ಜಿಲ್ಲೆಗಳಲ್ಲಿ ಒಂದೊಂದು ಲ್ಯಾಬೋರೇಟರಿ ಮಾಡುವುದಕ್ಕೆ ಆಗುವುದಿಲ್ಲವೇ? ಈಗ ನಾವು ಅಷ್ಟೊಂದು ಕೆಳಗೆ ಬಂದಿದ್ದೇವೆಯೇ? ನಿನ್ನೆಯ ದಿವಸ ನಾನು 104ಕ್ಕೆ ಫೋನ್ ಮಾಡಿದ್ದೆ. ಈಗ ಶಿಕ್ಷಣ ವಿಧೇಯಕ ಬರಲಿ, ಅದರ ಬಗ್ಗೆ ಚರ್ಚೆಯಾಗಲಿ. ಈ ವ್ಯವಸ್ಥೆಯಲ್ಲಿ education ಮತ್ತು health ಇವೆರಡು ಬಡವರು ಮತ್ತು ಶ್ರೀಮಂತರಿಗೆ ಸಮಾನವಾಗಿ ಸಿಗಲಿ. ಆಗ ಅದು ಸಮಾನಾಂತರವಾಗಿ ಸಿಗುತ್ತದೆ. ಆ ಭಾಗದಲ್ಲಿ ಕುಳಿತಿರುವಂತಹ ಕರ್ನಾಟಕದ ಬಹಳಷ್ಟು ಅಧಿಕಾರಿಗಳು ಮತ್ತು ಇಲ್ಲಿ ಕುಳಿತಿರುವಂತಹವರು ಎಲ್ಲರೂ ಸಹ ಸರ್ಕಾರಿ ಶಾಲೆಗಳಲ್ಲಿ ಓದಿರುವಂತಹವರು.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಜಿ.ರಘು ಆಚಾರ್‌ರವರು ಈ ವ್ಯವಸ್ಥೆಯ ಬಗ್ಗೆ ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು Right to Education ಬಗ್ಗೆ ಒಂದು ಮಾತನ್ನು ಹೇಳಿದರು ಮತ್ತು ಅವರು ಒಂದು ವಿಧೇಯಕವನ್ನು ತಂದಿದ್ದೇನೆ ಎಂದರು. ಅವರು ಈಗಲೂ ಯಾವ ಆಶಯವನ್ನು ಇಟ್ಟುಕೊಂಡು ಆ ವಿಧೇಯಕವನ್ನು ತಂದಿದ್ದಾರೆ, ಈಗ ಇರುವ ಸಮಯದಲ್ಲಿ ಇದೆಲ್ಲವನ್ನು ಬಿಟ್ಟು, ಅವರುRight to Education ಬಗ್ಗೆ ಹೇಳಬಹುದು ಅನಿಸುತ್ತಿದೆ.

**ಸಭಾಪತಿಯವರು:-** ಮಾನ್ಯ ಜಿ.ರಘು ಆಚಾರ್‌ರವರೇ, ನೀವು ನಾಳೆ ಹೇಗೂ ರೆಡಿ ಆಗುತ್ತೀರಿ ಅಲ್ಲವೇ?

**ಶ್ರೀ ಜಿ.ರಘು ಆಚಾರ್:-**ಮಾನ್ಯ ಸಭಾಪತಿಯವರೇ, ತಾವು ಕನಿಷ್ಠ ಪಕ್ಷ ಆ ವಿಧೇಯಕದ ಬಗ್ಗೆ ತೆಗೆದುಕೊಂಡರೆ ಒಳ್ಳೆಯದು. ಈ ವಿಧೇಯಕವನ್ನು ನಾನು ಮತ್ತು ಮಾನ್ಯ ಬಸವರಾಜ ಹೊರಟ್ಟಿಯವರು ಇಬ್ಬರು ಸೇರಿ ತಂದಿದ್ದೇವೆ. ಅದನ್ನು ಮೊದಲು ಮಾನ್ಯ ಹೊರಟ್ಟಿಯವರು ಮಾಡಿದ್ದರು, ಎರಡನೆಯದಾಗಿ ನಾನು ಅವರ ಜೊತೆಗೆ ಕೈ ಜೋಡಿಸಿದೆ. ಅದರ ಬಗ್ಗೆ ಸುದೀರ್ಘವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಚರ್ಚೆ ಆಗಬೇಕು. ಕೇವಲ ಸಂವಿಧಾನದ ಬಗ್ಗೆ ಐದು ದಿವಸ ಚರ್ಚೆ ಮಾಡಿರುವುದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಈಗ health and education ಬಗ್ಗೆ ಏನಾಯಿತು. ಈಗ ನಾವು ಎಲ್ಲಿಗೆ ಬಂದು ನಿಂತಿದ್ದೇವೆ. ಈಗ ಏನಾಗಬೇಕು ಅದು ಆಗಬೇಕಲ್ಲವೆ.

**ಸಭಾಪತಿಯವರು:–** ಆಯಿತು, ನಾಳೆ.

**ಶ್ರೀ ಜಿ.ರಘು ಆಚಾರ್:–**ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಕಾನೂನು ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ಕನಿಷ್ಠ ಪಕ್ಷ ಅವರ ಕೈಯಲ್ಲಿ ಆಗುವಂಥದ್ದು, ಈಗ ಅಧಿಕಾರಿಗಳ ಹತ್ತಿರ ಆಗುವುದು, ಈಗ ಎ.ಸಿ., ಡಿ.ಸಿ., ಈಗ ನಿಮಗೆ ಏನು ಹೇಳಿದ್ದೇನೆ, ಅದಕ್ಕಾದರೂ ಒಂದು ಕಾಲಮಿತಿಯನ್ನು ನಿಗದಿ ಮಾಡಿ. ಈಗ ಐದು ವರ್ಷ ಏಳು ವರ್ಷವಾಗಿರುವಂಥದ್ದಕ್ಕೆ ಮಾಡಬಾರದು. ಅಂತಹವುಗಳನ್ನು ನೀವು ಕರೆದು ಮೀಟಿಂಗ್ ಮಾಡಿದರೆ, ನಾಲ್ಕಾರು ಜನರಿಗೆ ಒಳ್ಳೆಯದಾಗುತ್ತದೆ. ಇಲ್ಲದೇ ಇದ್ದರೆ ಅದು ಎಲ್ಲಿ ಆಗುತ್ತದೆ. ಈಗ ನಾವು ಏನೇ ಮಾತನಾಡಿದರೂ ಸಹ. ಇನ್ನು ಕೇಂದ್ರ ಸರ್ಕಾರದಿಂದ ಬರಗಾಲ ಪರಿಹಾರಕ್ಕೆ ಹಣ ಬಂದಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಗಳಾದ ಮೇಲೆ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ನಮ್ಮ ರಾಜ್ಯದ ಎಂ.ಪಿ.ಗಳ ಬಗ್ಗೆ ತಪ್ಪು ಎಂದು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರದಿಂದ ಬರಬೇಕಾದ ಹಣ ಬಂದಿದ್ದೇಯೋ ಇಲ್ಲವೋ ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಈಗ ಆಗಿರುವಂತಹ ಚರ್ಚೆಗಳಿಗೆ ಮಾನ್ಯ ಕಾನೂನು ಸಚಿವರು ಉತ್ತರ ಕೊಡುತ್ತಾರೆಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಈ ತಿದ್ದುಪಡಿ ಏನಾಗಿದೆ, ಹೊಸ ತಿದ್ದುಪಡಿ ಮಾಡದೇ ಇದ್ದರು ಸಹ ಎಷ್ಟು ಹಳೆಯ ತಿದ್ದುಪಡಿಗಳನ್ನು ಅನುಷ್ಠಾನ ಮಾಡುತ್ತಿದ್ದೇವೆ ಮತ್ತು ಮಾಡುತ್ತಿಲ್ಲ. ಈಗ ಏನು ಆಗುತ್ತಿದೆ ಮತ್ತು ಏನು ಆಗುತ್ತಿಲ್ಲ. ಏನು ಮಾಡಬಹುದು ಎಂಬ ಚಿಂತನೆಯನ್ನು ಮಾಡಿದರೆ, ನಾಲ್ಕಾರು ಜನರಿಗೆ ಒಳ್ಳೆಯದಾಗುತ್ತದೆ. ಈಗ ಐದಾರು ದಿನಗಳಿಂದ ಮಾಡಿರುವಂತಹ ಚರ್ಚೆಗೆ ಅರ್ಥಗರ್ಭಿತವಾಗಿರುತ್ತದೆ. ಇಲ್ಲದೇ ಸುಮ್ಮನೆ ಏನೋ reply ಮಾಡಿ, ಇಲ್ಲ ಅದು ಆಗುವುದಿಲ್ಲವೆಂದರೆ, ಅದು ಏನೂ ಆಗುವುದಿಲ್ಲ. ಇಲ್ಲಿ ಇಷ್ಟು ಜನ ಚರ್ಚೆ ಮಾಡಿದ್ದೇವೆ ಏನಾದರೂ ತಿದ್ದುಪಡಿಯನ್ನು ಬದಲಾಯಿಸುವುದಕ್ಕೆ ಆಗುತ್ತದೆಯೇ? ಏನೂ ಇಲ್ಲ. ನನಗೆ ನಿಮ್ಮ ಮೇಲೆ ನಂಬಿಕೆ ಮತ್ತು ಭರವಸೆ ಇದೆ. ನಾಳೆ ನನ್ನ ವಿಧೇಯಕಕ್ಕೆ ಅವಕಾಶ ಮಾಡಿ ಕೊಡಬೇಕು ಮತ್ತು ಎಲ್ಲರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಜಾಸ್ತಿ ಮಾತನಾಡಬೇಕೆಂದು ಅಂದುಕೊಂಡಿದ್ದೆ. ಆದರೆ, ಮಾತನಾಡುವುದನ್ನು ನಿಲ್ಲಿಸಿಬಿಟ್ಟಿದ್ದೇನೆ. ನಾನು ಜಗಳ ಮಾಡಿದರೆ, ಆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಡೆಯಿಂದ ಮಾನ್ಯ ಎನ್.ರವಿಕುಮಾರ್‌ರವರು ಎದ್ದೇಳುತ್ತಾರೆ. ನಮ್ಮ ಸರ್ಕಾರವಿದ್ದಾಗ ಹಿಂದುಳಿದ ವರ್ಗದವರಿಗೆ ಸಂಬಂಧಪಟ್ಟಂತೆ ವಿಧೇಯಕವನ್ನು ತಂದಿದ್ದರು. ಅದು ಎಲ್ಲಿಗೆ ಹೋಯಿತು ಎಂದು ಅರ್ಥವಾಗಲಿಲ್ಲ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 100-150 ಕೋಟಿ ರೂಪಾಯಿ ಖರ್ಚು ಮಾಡಿ, ಜನಗಣತಿ ಮಾಡಿಸಿದರು, ಆದರೆ ಅದು ಬರಲಿಲ್ಲ. ಈಗ ಅದು ಏನಾಗಿದೆ ಎಂದು ನಾಳೆ ಮಾನ್ಯ ಮಂತ್ರಿಗಳು ಹೇಳಿದರೆ ನನಗೆ ಖುಷಿಯಾಗುತ್ತದೆ. ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ತಾವು ಸಂವಿಧಾನದ ಮೇಲೆ ಚರ್ಚೆ ಕೈಗೆತ್ತಿಕೊಂಡು ಇವತ್ತಿಗೆ ಎಂಟನೆ ದಿವಸ. ಸಂವಿಧಾನ ಕುರಿತು ಚರ್ಚೆ, ಈ ಪ್ರಜಾಪ್ರಭುತ್ವದ ದೇಗುಲವಾಗಿರುವಂತಹ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಗೌರವವನ್ನು ಹೆಚ್ಚಿಸಿದೆ ಎಂದು ನಾನು ಭಾವಿಸುತ್ತೇನೆ. ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು, ಮಾನ್ಯ ಸಿ.ಎಂ.ಇಬ್ರಾಹಿಂರವರು ಮತ್ತು ಮಾನ್ಯ ಜಿ.ರಘು ಆಚಾರ್ ರವರು ಸೇರಿದಂತೆ 36ಕ್ಕೂ ಹೆಚ್ಚು ಜನ ಈ ಸಂವಿಧಾನದ ಬಗ್ಗೆ ಚರ್ಚೆ ಮಾಡಿದ್ದಾರೆ. ನನ್ನ ಅಂದಾಜು ಸುಮಾರು 25 ಗಂಟೆಗೂ ಹೆಚ್ಚು ಕಾಲ ಚರ್ಚೆಯಾಗಿದೆ ಎಂದು ನಾನು ಭಾವಿಸುತ್ತೇನೆ. ಸರ್ಕಾರದ ಪರವಾಗಿ ಮಾನ್ಯ ಕಾನೂನು ಸಚಿವರು ಹೇಳಿದಂತಹ ಮಾತನು ಪ್ರಾರಂಭ ಮಾಡುತ್ತಾ ಎಂಟು ದಿನಗಳ ಸುದಿರ್ಘ ಅವಧಿಯಲ್ಲಿ, ಸಂವಿಧಾನದ ನೆನಪುಗಳನ್ನು, ಅವಲೋಕನಗಳನ್ನು, ಚರ್ಚೆಗಳನ್ನು, ವಿಮರ್ಶೆಗಳನ್ನು ಪ್ರಚಲಿತ ವಿದ್ಯಮಾನದಲ್ಲಿ ಸಂವಿಧಾನ ನಮಗೆ ಕೊಟ್ಟಿರುವಂತಹ ರಕ್ಷಣೆಗಳ ಬಗ್ಗೆ ಮತ್ತು ಎಲ್ಲದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಕಾನೂನು ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ಬಹಳ ಅರ್ಥಗರ್ಭಿತವಾಗಿ ಮಾತನಾಡುತ್ತಾ, ಅವರು ಹೇಳಿದಂತಹ ಮಾತುಗಳು ನನ್ನ ಮನಸ್ಸಿನಲ್ಲಿ ಬಹಳ ದಿವಸಗಳ ಕಾಲ ಅಚ್ಚಳಿಯದೆ ಉಳಿದುಬಿಡುತ್ತದೆಂದು ನನಗೆ ಅನಿಸುತ್ತದೆ ಅಂದರೆ, ‘ಸಂವಿಧಾನದ ಆಚರಣೆಯಲ್ಲಿ ಲೋಪವಾದರೆ, ಅದಕ್ಕೆ ಕಾರಣ ಸಂವಿಧಾನವಲ್ಲ, ಬದಲಾಗಿ ಸಂವಿಧಾನ ಆಶಯಗಳನ್ನು ಅನುಷ್ಠಾನ ಮಾಡುವಲ್ಲಿ, ನಾವು ವಿಫಲರಾಗಿದ್ದೇವೆ’ ಎಂದು ಅರ್ಥ, ಎಂಬುವಂತಹ ಒಳ್ಳೆಯ ಮಾತುಗಳಿಂದ ತಮ್ಮ ಮಾತುಗಳನ್ನು ಪ್ರಾರಂಭ ಮಾಡಿದರು. ಎಲ್ಲಾ ಚರ್ಚೆಗಳ ವಿಚಾರವನ್ನು ಗಮನದಲ್ಲಿಟ್ಟುಕೊಂಡರೆ, ಸಂವಿಧಾನ ಕೊಟ್ಟಿರುವಂತಹ ಆಶಯಗಳ ಆಧಾರದಲ್ಲಿ, ನಮಗೆ ಇರುವಂತಹ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗದ ವ್ಯಾಪ್ತಿಯಲ್ಲಿ, ಈ 73 ವರ್ಷಗಳಲ್ಲಿ ನಾವು ನಡೆದು ಬಂದಿರುವಂತಹ ದಾರಿ, ಮಂಡನೆ ಮಾಡಿದಂತಹ ವಿಚಾರಗಳು, ನಾವು ಅನುಷ್ಠಾನ ಮಾಡಿದಂತಹ ಕಾರ್ಯಯೋಜನೆಗಳು, ಇವುಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮೇಲೆ ನಮ್ಮೆಲ್ಲರಿಗೂ ಕೂಡ, ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕಿರುವುದು ಒಂದು ಸುಯೋಗ ಎಂದು ನನಗೆ ಅನಿಸುತ್ತದೆ. ಅನೇಕ ಟೀಕೆ ಟಿಪ್ಪಣಿ, ಚರ್ಚೆಗಳು, ವಾದ ವಿವಾದಗಳು, ಸರ್ಕಾರ ಮತ್ತು ಪ್ರತಿಪಕ್ಷಗಳ ನಡುವೆ,

**(576) 19.03.2020 12.40 LL-AK**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಒಂದು ರೀತಿಯ ವಾಕ್ಸಮರಗಳ ನಡುವೆಯೂ ಕೂಡ ಈ ಸಂವಿಧಾನ ಚರ್ಚೆ ಎನ್ನುವುದು ಒಂದು ಐತಿಹಾಸಿಕವಾದಂತಹ ಮೈಲಿಗಲ್ಲು ಎಂದು ನಾನು ಭಾವಿಸುತ್ತೇನೆ. ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗದ ವ್ಯಾಪ್ತಿಯಲ್ಲಿ 7 ದಶಕಗಳು ಕಳೆದ ನಂತರವೂ ಸಹ ನಮ್ಮ ಕೆಲಸದಲ್ಲಿ ನಾವೆಲ್ಲರೂ ತೃಪ್ತರಾಗಿದ್ದೇವೆಯೇ ಎನ್ನುವುದರ ಬಗ್ಗೆ ನಾವು ಒಂದು ಬಾರಿ ಕಣ್ಣಾಡಿಸಿದರೆ, ಸ್ವಾಭಾವಿಕವಾಗಿ ನಾವೆಲ್ಲರೂ ಇನ್ನೂ ಹೆಚ್ಚು ಪರಿಣಾಮಕಾರಿಯಾದಂತಹ ಕೆಲಸಗಳನ್ನು ಮಾಡಬಹುದೆಂದು ಹೇಳಬಹುದು. ನ್ಯಾಯಾಂಗದ ಬಗ್ಗೆ ಇನ್ನೂ ಹೆಚ್ಚು ಸಶಕ್ತವಾಗಿ ಕೆಲಸಗಳನ್ನು ಮಾಡಬೇಕಾಗಿತ್ತು ಎನ್ನುವಂತಹ ನಮ್ಮ ಚರ್ಚೆ, ಟೀಕೆ ಮತ್ತು ಪ್ರಹಾರಗಳು; ಕಾರ್ಯಾಂಗ ಒಂದು ರೀತಿ ಜಿಡ್ಡುಗಟ್ಟಿ ಹೋಗಿದೆ; ಇನ್ನೂ ಮತ್ತಷ್ಟು ತೀವ್ರವಾಗಿ ಅದು ಜನರ ಮಧ್ಯೆ ಕೆಲಸಗಳನ್ನು ಮಾಡಬೇಕೆನ್ನುವಂತಹ ವಾದ; ಇವುಗಳ ನಡುವೆ ಶಾಸಕಾಂಗವಾಗಿರುವಂತಹ ನಾವು ಎಷ್ಟರಮಟ್ಟಿಗೆ ನಮ್ಮನ್ನು ಆರಿಸಿದಂತಹ ಜನರಿಗೆ ವಿಶ್ವಾಸ ತುಂಬುವಂತಹ ಕೆಲಸಗಳನ್ನು ಮಾಡಿದ್ದೇವೆ ಎನ್ನುವಂತಹ ಚರ್ಚೆಗಳು ಬರುತ್ತವೆ; ಅಲ್ಲಿ ಎಲ್ಲಿಯೋ ವಿಫಲರಾಗಿದ್ದೇವೆ ಎನ್ನುವುದು ಸತ್ಯ. ಅದರ ಮಧ್ಯದಲ್ಲಿ ಕೂಡ ನಾವು ನಡೆದು ಬಂದಿರುವಂತಹ ದಾರಿ; ಸಂವಿಧಾನಕ್ಕೆ ಪೂರಕವಾಗಿ ನಾವು ಮಾಡಿರುವಂತಹ ಕೆಲಸ; ನಮ್ಮ ಮುಂದೆ ಇರುವಂತಹ ಆದರ್ಶ ಜೀವನಗಳು; ಇವುಗಳೆಲ್ಲದರ ಬಗ್ಗೆ ಗಮನಹರಿಸಲಿಕ್ಕೆ ನಮ್ಮ ಸಂವಿಧಾನ ಚರ್ಚೆಯು ಒಂದು ಅವಕಾಶವಾಗಿದೆ ಎಂದು ನಾನು ಭಾವಿಸುತ್ತೇನೆ. ಒಂದೊಂದು ಬಾರಿ ಶಾಸಕಾಂಗವಾಗಿರುವಂತಹ ನಮ್ಮ ವ್ಯವಸ್ಥೆಗಳು ಮತ್ತಷ್ಟು ಗಟ್ಟಿಯಾಗಿ ಕೆಲಸಗಳನ್ನು ಮಾಡಿದರೆ ನ್ಯಾಯಾಂಗದ ಎಷ್ಟೋ ಹೊರೆ ಕಡಿಮೆಯಾಗುತ್ತಿತ್ತೋ ಏನೋ ಎಂದು ನಮಗೆ ಅಂದುಕೊಳ್ಳುವುದಕ್ಕೆ ಅವಕಾಶಗಳಾಗುತ್ತವೆ. ಕಾರ್ಯಾಂಗದ ಬಗ್ಗೆ ಹೇಳುವುದಾದರೆ, ನಮ್ಮ ಚೌಕಟ್ಟಿನಲ್ಲಿ ನಾವು ಪರಿಣಾಮಕಾರಿಯಾಗಿ ಕೆಲಸ ಮಾಡಿ, ಆ ಕಾರ್ಯಾಂಗವನ್ನು ಬಡಿದೆಬ್ಬಿಸಿದರೆ ಮತ್ತಷ್ಟು ಕೆಲಸಗಳನ್ನು ನಾವು ಮಾಡಬಹುದಾಗಿತ್ತು ಎಂದು ಅನ್ನಿಸುತ್ತದೆ. 'ಸರ್ಕಾರಿ ಕೆಲಸ, ದೇವರ ಕೆಲಸ' ಎಂದು ತಿಳಿದುಕೊಂಡು ಕೆಲಸ ಮಾಡಿ ಎನ್ನುವ ಬರಹವನ್ನು ವಿಧಾನ ಸೌಧದ ಮುಂಭಾಗದಲ್ಲಿರುವ ದ್ವಾರದ ಮೇಲೆ ಬರೆದಿರುವುದನ್ನು ನಾವು ಓದುತ್ತಿದ್ದೇವೆ. ಒಂದೊಂದು ಬಾರಿ ನಮ್ಮ ಒತ್ತಡಗಳು ಕಾರ್ಯಾಂಗದ ಮೇಲೆ ಒಂದಷ್ಟು ಸಮಸ್ಯೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೃಷ್ಠಿ ಮಾಡುತ್ತೇವೆಯೇ ಎನ್ನುವ ಚರ್ಚೆಯ ನಡುವೆಯೂ ಕೂಡ ಕಾರ್ಯಾಂಗ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರೆ, ಇವೊತ್ತಿನ ದಿವಸ ಇಷ್ಟೊಂದು ಕಡತಗಳು ಬಾಕಿ ಇರಬಹುದೇ ಎನ್ನುವಂತಹ ಚರ್ಚೆ ಇದೆ.

ನ್ಯಾಯಾಂಗ ಇಲಾಖೆಯ ಬಗ್ಗೆ ಕಾನೂನು ಪಂಡಿತರು ಮಾತನಾಡಬಹುದು. ನನಗೆ ಒಂದು ಉದಾಹರಣೆ, ಆಗಾಗ ನೆನಪಾಗುತ್ತದೆ. ಕೊಡಗು ಜಿಲ್ಲೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಇರುತ್ತಾನೆ. ವೀರಪ್ಪನ್ ಪ್ರಕರಣದಲ್ಲಿ ಆತನ ಹತ್ಯೆಯಾಗುತ್ತದೆ. ನಾನು ನನ್ನ ಭಾಷಣವನ್ನು 10–15 ನಿಮಿಷದಲ್ಲಿ ಮುಗಿಸುತ್ತೇನೆಂದುಕೊಂಡಿದ್ದೇನೆ. ಅದಕ್ಕಿಂತಲೂ ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

**ಸಭಾಪತಿಯವರು:–** ತಾವು 1–00 ಗಂಟೆಯವರೆಗೂ ಮಾತನಾಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಷ್ಟು ಸಮಯ ಬೇಡ. ಕೊಡಗು ಜಿಲ್ಲೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಇರುತ್ತಾನೆ. ವೀರಪ್ಪನ್ ಪ್ರಕರಣದಲ್ಲಿ ಆತನ ಹತ್ಯೆ ಆಗುತ್ತದೆ. ನಾವು ಕಾರ್ಯಾಂಗವನ್ನು ಎಲ್ಲಿಗೆ ತಂದು ನಿಲ್ಲಿಸಿದ್ದೇವೆ, ಅಂದರೆ, ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವಿನ ಚರ್ಚೆಯನ್ನು ತಾವು ಗಮನಿಸಬೇಕು. ಆ ಪೊಲೀಸ್ ಅಧಿಕಾರಿಯ ಹತ್ಯೆಯಾದ ನಂತರ, ಆತನ ವಿಧವಾ ಹೆಂಡತಿ ಸರ್ಕಾರಕ್ಕೆ ಮೊರೆ ಇಡುತ್ತಾಳೆ. ಆಕೆಗೆ ಯಾವುದೋ ಒಂದು ಸರ್ಕಾರಿ ಭೂಮಿ ಮಂಜೂರಾಗುತ್ತದೆ. ಇದು ಈಗ ನಡೆದಿರುವ ಘಟನೆ ಎಂದು ನಾನು ಹೇಳುತ್ತಿಲ್ಲ. ಇದು 3–4 ವರ್ಷಗಳ ಹಿಂದೆ ನಡೆದಂತಹ ಘಟನೆ. ನಮ್ಮ ಆಡಳಿತ ಯಂತ್ರದ ವಿಫಲತೆಯಿಂದಾಗಿ ಅವಳಿಗೆ ಸರ್ಕಾರಿ ಸವಲತ್ತುಗಳು ಸಿಗುವುದಿಲ್ಲ. ನಂತರ ಆಕೆ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಈ ಬಗ್ಗೆ ದಾವೆ ಹೂಡುತ್ತಾಳೆ. ಮಾನ್ಯ ಉಚ್ಛ ನ್ಯಾಯಾಲಯವು ಎರಡು–ಮೂರು ಬಾರಿ ಸರ್ಕಾರಕ್ಕೆ ನೋಟಿಸ್ ಕೊಟ್ಟರೂ ಸಹ ಆ ನೋಟಿಸ್‌ಗೆ ಸರಿಯಾದ ಪ್ರತಿಕ್ರಿಯೆ ನೀಡುವುದಿಲ್ಲ. ರಾಜ್ಯದ ಉಚ್ಛ ನ್ಯಾಯಾಲಯದ ನ್ಯಾಯಾಧೀಶರು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ, "ಖುದ್ದು ಹಾಜರಾಗಬೇಕೆಂದು" ನೋಟಿಸ್ ಕೊಡುತ್ತಾರೆ. ಒಂದು ಕಡೆಯಲ್ಲಿ ವೀರಪ್ಪನ ಗುಂಡಿಗೆ ಬಲಿಯಾದ ಪೊಲೀಸ್ ಅಧಿಕಾರಿಯ ಹೆಂಡತಿ ಬಿಳಿ ಸೀರೆ ಧರಿಸಿಕೊಂಡು ನ್ಯಾಯಾಲಯದಲ್ಲಿ ನಿಂತಿರುತ್ತಾಳೆ. ಮತ್ತೊಂದು ಕಡೆ ರಾಜ್ಯದ ಮುಖ್ಯ ಕಾರ್ಯದರ್ಶಿಯವರು ನಿಂತಿದ್ದಾರೆ. ಆಗ ನ್ಯಾಯಮೂರ್ತಿಗಳು, "ತಪ್ಪಾಗಿ ತಿಳಿಯಬೇಡಿ ಮುಖ್ಯ ಕಾರ್ಯದರ್ಶಿಯವರೇ, ಆ ಪೊಲೀಸ್ ಅಧಿಕಾರಿಯ ಹೆಂಡತಿ ಸ್ಥಾನದಲ್ಲಿ ನನ್ನ ಅಥವಾ ತಮ್ಮ ಹೆಂಡತಿ ಇದ್ದಿದ್ದರೆ ನಿಮಗೆ ಏನು ಅನ್ನಿಸುತ್ತದೆ? ಆಕೆ ನ್ಯಾಯ ಕೇಳಿದಾಗ, ನಿಮಗೆ ನ್ಯಾಯ ಕೊಡಬೇಕೆಂದು ಅನ್ನಿಸುವುದಿಲ್ಲವೇ? ಹಾಗಾಗಿ, ಇನ್ನೂ ಹದಿನೈದು ದಿವಸದೊಳಗೆ ಸರ್ಕಾರಿ ಸವಲತ್ತುಗಳಾದ ಕಟ್ಟಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮತ್ತು ಜಾಗವನ್ನು ಮಂಜೂರು ಮಾಡಿ ನ್ಯಾಯಾಲಯಕ್ಕೆ ವರದಿ ಕೊಡಬೇಕೆಂದು ಹಾಗೂ ಒಂದು ವೇಳೆ ಇದರಲ್ಲಿ ಸಮಯ ಅಗತ್ಯವಿದ್ದರೆ ಪ್ರತಿ ವಾರಕ್ಕೆ ಒಮ್ಮೆ ವರದಿ ಕೊಡಬೇಕು" ಎಂದು ಹೇಳುತ್ತಾರೆ. ಅದೇ ರೀತಿ, ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ರಾಜ್ಯದ ಮುಖ್ಯಕಾರ್ಯದರ್ಶಿಯವರು ಆದೇಶ ಕೊಡುತ್ತಾರೆ. ನಾನು ಒಂದು ದಿವಸ ದಾರಿಯಲ್ಲಿ ಹೋಗುವಾಗ, ಆ ಕಟ್ಟಡಕ್ಕೆ ನೀರು ಹಾಕುವುದನ್ನು ಜಿಲ್ಲಾಧಿಕಾರಿಯವರು ನಿಂತು ನೋಡಿಕೊಳ್ಳುತ್ತಿದ್ದಾರೆ. ನಾನು ಹೇಳುವುದೇನೆಂದರೆ, ಈ ವ್ಯವಸ್ಥೆಗಳು ಇಷ್ಟು ಪರಿಣಾಮಕಾರಿಯಾಗುವುದಕ್ಕೆ ನ್ಯಾಯಾಂಗದವರೆಗೂ ಸರ್ಕಾರದವರು ಹೋಗಬೇಕಾಗಿತ್ತೇ? ನಮ್ಮ ಕಾರ್ಯಾಂಗ ಮತ್ತು ಶಾಸಕಾಂಗಗಳು ಮತ್ತಷ್ಟು ಗಟ್ಟಿಯಾಗಿದ್ದರೆ ನ್ಯಾಯಾಂಗದ ಮೇಲಿರುವಂತಹ ಹೊರೆ ಮತ್ತು ಜವಾಬ್ದಾರಿಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿತ್ತು ಎಂದು ನಾನು ಅಂದುಕೊಂಡೆನು. ಇದೇ ರೀತಿ ಅನ್ನಿಸುತ್ತದೆ. ಹೀಗೆ, ಕಾರ್ಯಾಂಗದಲ್ಲಿರುವಂತಹ ಹಾಗೂ ನ್ಯಾಯಾಂಗದಲ್ಲಿರುವಂತಹ ಕೆಲವು ಸಮಸ್ಯೆಗಳಿಗೆ ಆ ಎರಡು ವ್ಯವಸ್ಥೆಗಳು ಹೇಗೆ ಕಾರಣವೋ, ನಮ್ಮ ಆಡಳಿತಾತ್ಮಕ ವಿಚಾರಗಳು ಅದೇ ರೀತಿ ಕಾರಣ ಎಂದು ನನಗೆ ಒಂದೊಂದು ಬಾರಿ ಅನ್ನಿಸಿದೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕೊಟ್ಟಿರುವಂತಹ ಈ ಸರ್ವಶ್ರೇಷ್ಠ ಸಂವಿಧಾನವನ್ನು ನಾವೆಲ್ಲರೂ ಮಾತನಾಡುವಾಗ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮತ್ತು ಅವರ ತಂಡ 2 ವರ್ಷ 11 ತಿಂಗಳು ಮತ್ತು 17 ದಿನಗಳ ಕಾಲ ನಿರಂತರವಾಗಿ ಶ್ರಮಿಸಿ ಮತ್ತು ಚರ್ಚಿಸಿ ಈ ಸಂವಿಧಾನವನ್ನು ಅಂಗೀಕರಿಸಿತು.

**(ಈ ಹಂತದಲ್ಲಿ ವೈಸ್-ಛೇರ್ಮನ್ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಸಭಾಪತಿ ಸ್ಥಾನವನ್ನು ಅಲಂಕರಿಸಿದರು)**

ಅದರ ಹಿನ್ನೆಲೆಯಲ್ಲಿ ಬಂದಿರುವಂತಹ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವೆ ಈ ಸಮಾಜ ಕಟ್ಟುವಂತಹ, ದೇಶ ಕಟ್ಟುವಂತಹ ಒಟ್ಟು ಚಟುವಟಿಕೆಗೆ ನಾವೆಲ್ಲರೂ ಪಾಲ್ಗೊಳ್ಳುತ್ತಿದ್ದೇವೆ ಎನ್ನುವಂತಹ ಸಂದರ್ಭದಲ್ಲಿ, ನನಗಾಗಿರುವಂತಹ ಕುತೂಹಲ; ನನಗಾಗಿರುವಂತಹ ಆಶ್ಚರ್ಯ; ನನ್ನಂತಹ ಸಾಮಾನ್ಯನಿಗೆ ಅರ್ಥವಾಗದೇ ಇರುವಂತಹ ವಿಚಾರಗಳೇನೆಂದರೆ, ಡಾ|| ಬಿ.ಆರ್. ಅಂಬೇಡ್ಕರ್‌ರವರು ಈ ಸಂವಿಧಾನ ರಚನೆ ಮಾಡುವುದಕ್ಕೆ ಪ್ರೇರಣೆ ಏನು? ಇಂತಹ ಅದ್ಭುತವಾದಂತಹ ಯೋಚನೆ; ಇಂತಹ ಸರ್ವಶ್ರೇಷ್ಠವಾದಂತಹ ಗ್ರಂಥವನ್ನು ರಚನೆ ಮಾಡುವುದಕ್ಕೆ ಸಿಕ್ಕಿರುವ ಪ್ರೇರಣೆ ಏನು? ನನಗನ್ನಿಸುವುದೇನೆಂದರೆ, ತಾವೇ ಕಣ್ಣಾರೆ ಕಂಡ ಬದುಕನ್ನು ಅರ್ಥ ಮಾಡಿಕೊಂಡಂತಹ ಲೋಕಾನುಭಾವ ಅವರಿಗೆ ಈ ಸಂವಿಧಾನ ಸೃಷ್ಟಿ ಮಾಡುವುದಕ್ಕೆ ಪ್ರೇರಣೆ ನೀಡಿದೆಯೇ; ಸಂಕಷ್ಟದ ನಡುವೆಯೂ ಪಡೆದಿರುವಂತಹ ಶಿಕ್ಷಣವೇ; ಅಸ್ಪೃಶ್ಯ ಜನಾಂಗದ ನಡುವೆ ಹುಟ್ಟಿ ಬಂದ ಕಾರಣಕ್ಕೆ ಸುತ್ತಲ ಸಮಾಜ ನೀಡಿರುವಂತಹ ಘಟನೆಗಳು; ಅವರಿಗೆ ಈ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ನ್ಯಾಯ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕೆನ್ನುವಂತಹ ಕಲ್ಪನೆ ಮತ್ತು ಪ್ರೇರಣೆ ಕೊಟ್ಟಿದೆಯೇ? ಅಂದಿನ ಜಾತೀಯತೆಯ ಮೇಲಾಟದ ನಡುವೆಯೂ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸ್ಥಿತಪ್ರಜ್ಞೆಯ ಮನೋಭಾವದ ಗಟ್ಟಿತನ ಅವರಿಗೆ ಪ್ರೇರಣೆ ಕೊಟ್ಟಿದೆಯೇ ಎಂಬ ಜಿಜ್ಞಾಸೆಗಳಿಗೆ ನನ್ನಂತಹವನಿಗೆ ಅರ್ಥವಾಗದಷ್ಟು ಎತ್ತರದ ವ್ಯಕ್ತಿಯಾಗಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಮಗೆಲ್ಲಾ ಗೋಚರಿಸುತ್ತಾರೆಂದು ನನಗನ್ನಿಸುತ್ತದೆ. ಶೋಷಿತರ ಬದುಕನ್ನು ಸ್ವತಃ ಅನುಭವಿಸಿದಂತಹ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಟ್ಟಿರುವಂತಹ ರೀತಿ; ಸಮಾನತೆಯನ್ನು ದೃಢೀಕರಿಸುವ ರೀತಿ-ನೀತಿಗಳು; ಅವರ ಸಮಬಾಳು-ಸಮಪಾಲು ಎನ್ನುವಂತಹ ಕಲ್ಪನೆ ಭಾರತೀಯರಾದ ನಮಗೆ ಬದುಕನ್ನು ಕಟ್ಟಿಕೊಟ್ಟಿದೆ ಎಂದು ಅನ್ನಿಸುತ್ತದೆ. ವಿಶೇಷ ಏನೆಂದರೆ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಯಾರನ್ನು ದ್ವೇಷಿಸಲಿಲ್ಲ. ಅವರ ಜೀವನದ ಉದ್ದಕ್ಕೂ ತನ್ನ ಗುರಿ, ತನ್ನ ಶ್ರಮ, ತನ್ನ ಸಾರ್ಥಕತೆಯ ಬದುಕು, ತನ್ನ ಒಟ್ಟಾರೆ ಚಟುವಟಿಕೆಗಳ ಬಗೆಗೆ ಗಮನ ಕೊಟ್ಟರೆ ಹೊರತು, ಎಂದಿಗೂ ಕೂಡ ತನ್ನ ನೋವಿಗೆ ಯಾರು ಕಾರಣ; ಅವರಿಗೆ ಸಂಕಷ್ಟ ಕೊಡಲು ಯಾರು ಕಾರಣ; ಅವರಿಗೆ ಅಸ್ಪೃಶ್ಯತೆಗೆ ದೂಡಲಿಕ್ಕೆ ಯಾರು ಕಾರಣ; ಅವರಿಗೆ ಸಂಕಟವನ್ನು ಉಂಟು ಮಾಡಲು ಯಾರು ಕಾರಣ; ಅವರಿಂದ ಏನಾದರೂ ಆಗಿರಬಹುದು ಎಂಬ ಯೋಚನೆ ಕೂಡ ಮಾಡಿರಲಿಲ್ಲ ಎನ್ನುವುದು ಅವರ ಇಡೀ ಬದುಕನ್ನು ಕಂಡಾಗ ನಮಗೆ ಅರ್ಥವಾಗುತ್ತದೆ.

ಈ ಮನೆಯ ಹಿಂದಿನ ಸಭಾಪತಿಯವರಾಗಿದ್ದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಒಂದು ಘಟನೆಯನ್ನು ನಮಗೆ ಹೇಳುತ್ತಾರೆ. ಅದೇನೆಂದರೆ, ಒಂದು ಬಾರಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಅವರ ಸಹೋದರ ತುರ್ತು ಕೆಲಸಕ್ಕೆ ಅಂದರೆ, ಮನೆಯ ಯಾವುದೋ ಸದಸ್ಯರಿಗೆ ಸೌಖ್ಯವಿಲ್ಲ ಎನ್ನುವ ಕಾರಣಕ್ಕೆ ಮನೆಗೆ ಬರಬೇಕಾಗಿತ್ತು. ಆ ರೀತಿ ಮನೆಗೆ ಬರಬೇಕಾದರೆ, ದಾರಿ ಮಧ್ಯದಲ್ಲಿ ಒಂದು ಎತ್ತಿನ ಗಾಡಿ ಸಿಗುತ್ತದೆ. ಆ ಎತ್ತಿನ ಗಾಡಿಯನ್ನು ನಿಲ್ಲಿಸಿ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಅವರ ಸಹೋದರ ಗಾಡಿಯನ್ನು ಏರುತ್ತಾರೆ. ಇವೊತ್ತಿನ ನಮ್ಮ ವಿಮರ್ಶೆಗಳು ಯಾವ ಮಟ್ಟಕ್ಕೆ ಇದೆ ಎಂದು ಹೇಳುತ್ತಿದ್ದೇನೆ. ಹಾಗೆಯೇ, ಎತ್ತಿನ ಗಾಡಿಯಲ್ಲಿ ಸಾಕಷ್ಟು ದೂರಗಳನ್ನು ಸಾಗಿದ ನಂತರ, ಇನ್ನೇನು ಮನೆಗೆ ಸುಮಾರು ಒಂದು ಮೈಲಿ ಇರುವಾಗ ಗಾಡಿ ಓಡಿಸುವವನು ಹಿಂದೆ ತಿರುಗಿ, "ನೀವು ಯಾವ ಜಾತಿಯವರು" ಎಂದು ಕೇಳುತ್ತಾನೆ. ನಾವು ಇವೊತ್ತಿನ ದಿವಸ ಮೇಲ್ವರ್ಗ ಮತ್ತು ಕೆಳವರ್ಗದ ಬಗ್ಗೆ ಮಾತನಾಡುತ್ತೇವೆ. ಆದರೆ, ಆ ದಿನ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮತ್ತು ಅವರ ಸಹೋದರ ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗ, ಮನೆಗೆ ಸುಮಾರು ಒಂದು ಮೈಲಿ ದೂರ ಇದೆ ಎನ್ನುವಾಗ ಆ ಗಾಡಿಯವನು ಹಿಂದೆ ತಿರುಗಿ, "ನೀವು ಯಾವ ಜಾತಿಯವರು" ಎಂದು ಕೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ಅವರು "ನಾವು ದಲಿತರು, 'ಮಹರ್' ಎಂಬ ಜಾತಿ" ಎಂದು ಹೇಳುತ್ತಾರೆ. ಇವರು ದಲಿತರು, ಅಸ್ಪೃಶ್ಯರು ಎಂದು ಗೊತ್ತಾದ ಕೂಡಲೇ ಗಾಡಿ ಓಡಿಸುವವನು ಗಾಡಿ ನಿಲ್ಲಿಸಿ, ತಾನು ಕೆಳಗಿಳಿದು, ಎತ್ತುಗಳನ್ನು ಬಿಡಿಸಿ, ಅವರನ್ನು "ಗಾಡಿಯಿಂದ ಕೆಳಗೆ ಇಳಿಯಿರಿ" ಎಂದು ಹೇಳುವುದೇ ಇಲ್ಲ. ನಂತರ, ಗಾಡಿಯ ಮುಂಗಟ್ಟನ್ನು ಮೇಲೆತ್ತುತ್ತಾನೆ. ಆಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮತ್ತು ಅವರ ಸಹೋದರ ಗಾಡಿಯಿಂದ ಕೆಳಗೆ ಜಾರಿ ಬೀಳುತ್ತಾರೆ. ಗಾಡಿ ಓಡಿಸುವವನು, ಇವರನ್ನು ಬೈದು, ಹೀಯಾಳಿಸಿ, ಗಾಡಿಯನ್ನು ನೀರಿನಲ್ಲಿ ತೊಳೆದುಕೊಂಡು ಮುಂದೆ ಸಾಗುತ್ತಾನೆ. ಈ ರೀತಿಯ ನೋವಿನಲ್ಲಿರುವಂತಹ ಘಟನೆಗಳು ಸ್ವತಃ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅನುಭವಿಸಿದ ರೀತಿಗಳು. ಇಲ್ಲಿ ಚರ್ಚೆ ಏನೆಂದರೆ, ಆ ಕಾಲದಲ್ಲಿ ಗಾಡಿ ಹೊಡೆಯುವವರು, ಮೇಲ್ವರ್ಗದವರು, ಬ್ರಾಹ್ಮಣರುಗಳೆಂದು ನಾವೆಲ್ಲರೂ ತಿಳಿದುಕೊಂಡಿದ್ದೆವು. ಅವೊತ್ತಿನ ದಿವಸ ಇತಿಹಾಸದ ಉದ್ದಕ್ಕೂ ಬ್ರಾಹ್ಮಣರು ಅಥವಾ ಮೇಲ್ವರ್ಗದವರು ಗಾಡಿ ಓಡಿಸುತ್ತಿರಲಿಲ್ಲ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಜನಾಂಗಕ್ಕಿಂತಲೂ ಸ್ವಲ್ಪ ಮೇಲಿದ್ದವರು ಹಾಗೂ ಬ್ರಾಹ್ಮಣರಿಗಿಂತ ಕೆಳಗಿನ ಜನಾಂಗದವರು, ಅವರು ಕೂಡ ಅಸ್ಪೃಶ್ಯರಾಗಿದ್ದರು. ಅಂದರೆ, ಅವೊತ್ತಿನ ಕಾಲದಲ್ಲಿಯೂ ಅಸ್ಪೃಶ್ಯತೆಯನ್ನು ಅನುಭವಿಸುವವರು ಮತ್ತೊಬ್ಬ ಅಸ್ಪೃಶ್ಯನಿಗೆ ಅಸ್ಪೃಶ್ಯವನ್ನು ಅನುಸರಿಸುವಂತಹ ಕಾಲಘಟ್ಟ ಇತ್ತು ಎಂದು ಮಾನ್ಯ ಡಿ.ಹೆಚ್. ಶಂಕರಮೂರ್ತಿಯವರು ಬಹಳ ಪರಿಣಾಮಕಾರಿಯಾಗಿ ನಮಗೆಲ್ಲಾ ಹೇಳುವಂತಹ ಮಾತುಗಳನ್ನು ಕೇಳಿದ್ದೇವೆ. ಇಂತಹ ನೋವುಗಳನ್ನು ಅನುಭವಿಸಿದಾಗಲೂ ಕೂಡ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಎಂದಿಗೂ ಕೂಡ ಜಾತಿಯ ಬಗ್ಗೆ ಅಥವಾ ಅನ್ಯ ವಿಚಾರಗಳ ಬಗ್ಗೆ ಟೀಕೆ ಮಾಡಿರುವುದಿಲ್ಲ. ತಾನು ಬೆಳೆಯಬೇಕು ಎನ್ನುವಂತಹ ವ್ಯವಸ್ಥೆಗಳ ನಡುವೆ; ಅಂದೂ ಅಸ್ಪೃಶ್ಯತೆ ಕಾರಣಕ್ಕೆ ಒಬ್ಬ ಎತ್ತಿನ ಗಾಡಿ ಓಡಿಸುವವನಿಂದ ಕೆಳಗೆ ದೂಡಿಸಲ್ಪಟ್ಟ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅಂತಹ ಸರ್ವಶ್ರೇಷ್ಠ ಗ್ರಂಥವನ್ನು, ಅಂತಹ ಅದ್ಭುತವಾದಂತಹ ಸಂವಿಧಾನವನ್ನು ಬರೆದು, ಯಾರು ಈ ಭಾರತ ದೇಶದಲ್ಲಿ ಅಸ್ಪೃಶ್ಯತೆ ಅನುಭವಿಸುತ್ತಾರೋ ಅವರಿಗೆ ಸಾಮಾಜಿಕ ನ್ಯಾಯ ಕೊಟ್ಟರು ಎಂದು ಹೇಳಿದರೆ ಅದಕ್ಕಿಂತಲೂ ದೊಡ್ಡ ಗೌರವಗಳು ಈ ದೇಶಕ್ಕೆ, ಈ ಪ್ರಪಂಚಕ್ಕೆ, ನಮಗೆ ಮತ್ಯಾರಿಗೂ ಸಿಕ್ಕಿಲ್ಲವೆಂದು ನನಗನ್ನಿಸುತ್ತದೆ. ನಮ್ಮಂತಹ ಸಾಮಾನ್ಯ ಮನುಷ್ಯರಿಗೆ ಸಾಮಾಜಿಕ ನ್ಯಾಯ ಕೊಟ್ಟಿರುವುದು; ಸಮಾಜದ ಕಟ್ಟಕಡೆಯ ಮನುಷ್ಯ ಮುಖ್ಯವಾಹಿನಿ ಬರುವುದಕ್ಕೆ ಅವಕಾಶ ಕೊಟ್ಟಿರುವುದು ಇದೇ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು. ಅಂದರೆ, ಯಾರು ಎತ್ತಿನ ಗಾಡಿ ಓಡಿಸುವವನಿಂದ ಕೆಳಗೆ ದೂಡಿಸಿಕೊಂಡು ಅಸ್ಪೃಶ್ಯತೆಯನ್ನು ಅನುಭವಿಸಿದರೋ, ಅದೇ ಡಾ॥ ಬಾಬಾ ಸಾಹೇಬ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಬೇಡ್ಕರ್‌ರವರು ತಾವೇ ಬರೆದ ಗ್ರಂಥದಲ್ಲಿ, ತಾವೇ ಬರೆದಿರುವ ಸಂವಿಧಾನದಲ್ಲಿ ತನ್ನಂತೆ ಅಸ್ಪೃಶ್ಯತೆಯನ್ನು ಅನುಭವಿಸುತ್ತಿರುವ

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಕೋಟ್ಯಂತರ ಜನರಿಗೆ ನ್ಯಾಯ ಕೊಟ್ಟಿದ್ದಾರೆಂದು ಹೇಳಿದರೆ ಅದೆಲ್ಲಾ ನಮಗೆ ಹೆಮ್ಮೆ, ಆ ಅವಕಾಶಗಳನ್ನು ಈ ಸಂದರ್ಭದಲ್ಲಿ ನೆನಪು ಮಾಡುತ್ತೇನೆ.

**(577)19.03.2020/12.50/ವೈಎಲ್-ಆರ್‌ಎನ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ನನಗೆ ಅನೇಕ ವಿಚಾರಗಳನ್ನು ಹೇಳಬೇಕೆಂದು ಅನ್ನಿಸಲಿಲ್ಲ. ಆದರೆ, ಒಟ್ಟು 8 ದಿವಸಗಳ ಚರ್ಚೆಯಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ತಿಳಿದುಕೊಂಡಿರುವ ರೀತಿಗಳು, ಕಲ್ಪನೆಗಳು ಭಿನ್ನ-ಭಿನ್ನವಾಗಿದೆ. ಒಬ್ಬೊಬ್ಬರ ಮಾತಿನಲ್ಲಿ ಒಂದೊಂದು ರೀತಿಯ ಶೈಲಿಗಳು ಬಂದಿವೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ಒಂದು ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ ಮಾನ್ಯ ಮರಿತಿಬ್ಬೇಗೌಡರು ಅವರ ಬಗ್ಗೆ ಒಂದು ವಿಚಾರವನ್ನು ಹೇಳಿದ್ದಾರೆ. ನಿನ್ನೆ ದಿವಸ ಮಾನ್ಯ ಆರ್.ಧರ್ಮಸೇನ್‌ರವರು ಮಾತನಾಡುವಾಗ 'ಜನಪ್ರತಿನಿಧಿಗಳಾಗಿದ್ದವರು ಅಸ್ಪೃಶ್ಯರಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡಿರುವುದು ರಾಜಕೀಯ ಕಾರಣಕ್ಕಾಗಿ' ಎಂದು ಹೇಳಿದಾಗ, ನನಗೆ ಒಂದು ರೀತಿ ದಿಗ್ಭ್ರಮೆಯಾಗಿತ್ತು. ಮಾನ್ಯ ಬಿ.ಆರ್.ತಿಮ್ಮಾಪೂರರವರು ಹೇಳಿದ ನೆನಪು, 'ಇವತ್ತಿನ ಕಾಲದಲ್ಲಿ ಸಂವಿಧಾನ ಬದ್ಧವಾಗಿ ಆಯ್ಕೆಯಾಗಿರುವ ಜನಪ್ರತಿನಿಧಿಯೊಬ್ಬ ರಾಜಕೀಯ ಕಾರಣಕೋಸ್ಕರ ತನ್ನನ್ನು ತಾನೇ ಅಸ್ಪೃಶ್ಯತೆ' ಮಾಡಿಕೊಳ್ಳುತ್ತಾರೆ ಎಂಬ ಮಾತನ್ನು ಕೇಳಿದರೆ, ಅದು ಸೋಗಲಾಡಿತನ ಅಲ್ಲವೇನೋ,... ನನ್ನ ಮಾತಿಗೆ ಪ್ರತಿಪಕ್ಷ ನಾಯಕರ ಸಹಮತಿ ಇದೆ ಎಂದು ನನಗೆ ಅನ್ನಿಸುತ್ತದೆ. ಹಾಗಾಗಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನೀಡಿರುವಂಥ ಈ ಸಂವಿಧಾನವನ್ನು ಅರ್ಥ ಮಾಡಿಕೊಂಡು, ಇಡೀ ಸಮಾಜವು ಒಟ್ಟಾಗಿ ಎಲ್ಲವನ್ನೂ ಮರೆತು ಬದುಕುವಂಥ ಕಾಲಘಟ್ಟದಲ್ಲಿ ಶ್ರಮಿಸಬೇಕು ಎಂದು ನೆನಪು ಮಾಡಿಕೊಳ್ಳುತ್ತೇನೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು 'ಕುತೂಹಲದ ಕಣ್ಣಿನಿಂದ' ಸಮಾಜವನ್ನು ನೋಡುತ್ತಿದ್ದರು. ಅವರು ಒಂದು ಸಲ ನಾಗಾಪುರದ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಶಿಬಿರಕ್ಕೆ ಭೇಟಿ ನೀಡುತ್ತಾರೆ. ನಮ್ಮಲ್ಲಿ ರಾಷ್ಟ್ರೀಯ ಸಂಸದೀಯ ಸಂಘದ ಬಗ್ಗೆ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಎಂದು ರಾಜಕೀಯ ವಿಚಾರಗಳ ಬಗ್ಗೆ ಚರ್ಚೆ ನಡೆಯಬಹುದು. ವೈಚಾರಿಕ ವಿಚಾರದಲ್ಲಿ ಭಿನ್ನಾಭಿಪ್ರಾಯವು ಇರಬಹುದು. ಒಂದು ರೀತಿಯಲ್ಲಿ ತಾರಕ್ಕೆ ಹೇರಿದ ಪರಿಣಾಮವು ಇರಬಹುದು, ಆದರೆ, ಇತಿಹಾಸವನ್ನು ಮೆಲುಕು ಹಾಕಿಕೊಂಡರೆ ತಪ್ಪೇನಿಲ್ಲವೆಂದು ಕೊಂಡಿದ್ದೇನೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಾಗಪುರದ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಶಿಬಿರಕ್ಕೆ ಭೇಟಿ ನೀಡಿದಾಗ ಅವರಿಗೆ ಆ ಶಿಬಿರವನ್ನು ನೋಡಿ 'ಇದು ಯಾವುದೋ ಒಂದು ತಂಡ' ಎಂದು ಅನ್ನಿಸುತ್ತದೆ. ಆ ಶಿಬಿರದಲ್ಲಿರುವ ವಿದ್ಯಾರ್ಥಿಗಳನ್ನು ಕರೆದು ಒಂದು ಮಾತನ್ನು ಕೇಳುತ್ತಾರೆ. ಅದೇನೆಂದರೆ, 'ನೀವೆಲ್ಲಾ ಒಂದೇ ವರ್ಗದವರೆ ಅಥವಾ ನನ್ನ ಮಹರ್ ಜಾತಿಯವರು ಯಾರಾದರೂ ಇದ್ದೀರಾ' ಎಂದು ಕೇಳುತ್ತಾರೆ. ಸಾಮಾನ್ಯವಾಗಿ ಆರ್.ಎಸ್.ಎಸ್. ಶಿಬಿರದಲ್ಲಿ 70 ರಿಂದ 100 ಜನದವರೆಗೂ ಸೇರಿದ್ದು, 8 ದಿವಸಗಳು, 15 ದಿವಸಗಳು ಅಥವಾ ಒಂದು ತಿಂಗಳ ಕಾಲ ಶಿಬಿರ ನಡೆಯುತ್ತದೆ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮನಸ್ಸಿನಲ್ಲಿ ಆ ಶಿಬಿರದಲ್ಲಿರತಕ್ಕಂಥವರೆಲ್ಲಾ ಮೇಲ್ವರ್ಗದವರು ಎಂದು ಅನ್ನಿಸಿತ್ತು. ಹಾಗಾಗಿ ಮತ್ತೊಮ್ಮೆ ಅವರು 'ಈ ಶಿಬಿರದಲ್ಲಿ ನನ್ನ ಮಹರ್ ಜಾತಿಯವರು ಅಥವಾ ದಲಿತರು ಯಾರಾದರೂ ಇದ್ದೀರಾ' ಎಂದು ಕೇಳಿದರೆ, ಆ ಇಡೀ ಶಿಬಿರದಲ್ಲಿ ಯಾವುದೇ ವಿದ್ಯಾರ್ಥಿ ಉತ್ತರವನ್ನು ನೀಡುವುದಿಲ್ಲ. ಎರಡನೇ ಸಲ ಸಹ ಕೇಳುತ್ತಾರೆ. 'ನಾನು ನಿಮ್ಮ ಹತ್ತಿರವೇ ಕೇಳುತ್ತಿರುವುದು, 'ನೀವು ಎಲ್ಲಾ ಚರ್ಚೆಗಳ ಬಗ್ಗೆ ಮಾತನಾಡಿ ನನ್ನ ಪ್ರಶ್ನೆಗೆ ಉತ್ತರ ನೀಡಿದ್ದೀರಿ, ಮಹರ್ ಜಾತಿಯವರು ಯಾರಾದರೂ ಇದ್ದೀರಾ' ಎಂದು ಕೇಳುತ್ತಾರೆ. ಎರಡನೇ ಸಲ ಕೇಳಿದಾಗಲೂ ಅಲ್ಲಿನ ವಿದ್ಯಾರ್ಥಿಗಳು ಉತ್ತರ ನೀಡುವುದಿಲ್ಲ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ ಇವರಿಗೆಲ್ಲಾ ಏನಾಗಿದೆ ಎಂದು ಸ್ವಲ್ಪ ಆತಂಕವಾಗಿ ಯಾರೂ ಮಹರ್ ಜಾತಿಯವರು ಇಲ್ಲವೇನೋ ಎನ್ನುವ ಅನುಮಾನ ಬರುತ್ತದೆ. ನಂತರ ಗಟ್ಟಿಯಾಗಿ ನಾನು ಹೇಳಿದ್ದು ನಿಮಗೆ ಅರ್ಥವಾಗಲಿಲ್ಲವೇ ಎಂದು ಕೇಳುತ್ತಾರೆ. ದಲಿತ ಜನಾಂಗದವರು ಯಾರಾದರೂ ಆರ್.ಎಸ್.ಎಸ್. ಶಿಬಿರದಲ್ಲಿದ್ದೀರಾ ಎಂದು ಕೇಳಿದಾಗ, ಒಬ್ಬರ ನಂತರ ಒಬ್ಬರಂತೆ ಆರೇಳು ಜನ ತಮ್ಮ ಕೈ ಮೇಲೆ ಎತ್ತುತ್ತಾರೆ. ಆಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ನಾನು ಮೂರನೇ ಸಲ ಕೇಳಿದಾಗ ಕೈ ಎತ್ತುತ್ತಿದ್ದೀರಿ, ಆಗಲೇ ಹೇಳಬಹುದಾಗಿತ್ತಲ್ಲಾ! ಏತಕ್ಕೆ ಹೇಳಲಿಲ್ಲ ಎಂದು ಕೇಳಿದಾಗ ಅದರಲ್ಲಿದ್ದ ಒಬ್ಬ ವಿದ್ಯಾರ್ಥಿ 'ನಮ್ಮ ಸಂಘದಲ್ಲಿ ಜಾತಿ ಬಗ್ಗೆ ಮಾತನಾಡುವುದೇ ಇಲ್ಲ, ಯಾರಿಗೂ ಯಾವ್ಯಾವ ಜಾತಿಯವರೆಂಬುದು ಗೊತ್ತಿಲ್ಲ. ಬ್ರಾಹ್ಮಣನಾಗಿರಬಹುದು, ಬೇರೆ ಯಾವ ಜಾತಿಯವರೇ ಆಗಿರಬಹುದು, ನಮಗೆ ಗೊತ್ತಿಲ್ಲ. ನಾವೆಲ್ಲಾ ಒಂದೇ, ಒಂದೇ ಕುಟುಂಬದವರು ಎನ್ನುವ ರೀತಿ ಬದುಕುತ್ತೇವೆ.' 'ಈ ಸಂಘವು ನಮಗೆ ಜಾತಿಯನ್ನು ಕಲಿಸಿಕೊಟ್ಟಿಲ್ಲ, ರಾಷ್ಟ್ರೀಯತೆ ಕಳುಹಿಸಿಕೊಟ್ಟಿದ್ದೆ' ಎನ್ನುವಂಥ ಮಾತನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಆ ವಿದ್ಯಾರ್ಥಿ ಹೇಳುತ್ತಾನೆ. ಈ ಮಾತನ್ನು ಒಪ್ಪಬಹುದು, ಬಿಡಬಹುದು. ಆಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು 'ನಾನು ಎಷ್ಟೋ ವರ್ಷಗಳಿಂದ ಈ ಬದಲಾವಣೆಯನ್ನು ತರಬೇಕೆಂದು ಯೋಚನೆ ಮಾಡಿದ್ದೆನೋ, ಆ ಯೋಚನೆಯನ್ನು ನಿಮ್ಮ ಸಂಘ ಮಾಡುತ್ತಿದ್ದೆ ಎನ್ನುವುದು ನನಗೆ ಅರ್ಥವಾಗಿದೆ' ಎಂದು ಸಂಘದ ಮೂಲಕ ಆ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ನಿಮ್ಮಲ್ಲಿ ಅನೇಕ ಕಲ್ಪನೆಗಳಿವೆ. ನಮ್ಮ ದೃಷ್ಟಿಯಲ್ಲಿ ಯಾವುದೋ ಒಂದು ಪಕ್ಷವನ್ನು ನೋಡಿದಾಗ ಅವರೆಲ್ಲರೂ ಕೂಡಾ ನಮ್ಮಷ್ಟು ರಾಷ್ಟ್ರ ಪ್ರೇಮಿಗಳಲ್ಲ ಎನ್ನುವ ಭಾವನೆ ಬರುತ್ತದೆ. ಯಾವುದೋ ಒಂದು ಧರ್ಮವನ್ನು ನೋಡಿದಾಗ ಇವರೆಲ್ಲರಿಗೂ 'ರಾಷ್ಟ್ರೀಯ ಭಾವನೆ' ಇಲ್ಲವೆಂಬ ಭಾವನೆ ಬರುತ್ತದೆ. ನಾನು ರಾಷ್ಟ್ರೀಯ ಸ್ವಯಂ ಸೇವಾ ಸಂಘದ...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಆ ರೀತಿ ಹೇಳಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಾವು ಆ ರೀತಿ ಹೇಳಿಯೇ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, 'ನಮಸ್ತೇ ಸದಾವತ್ಸಲೇ ಮಾತೃ ಭೂಮೇ, ತ್ವಯಾ ಹಿಂದೂ ಭೂಮೇ' ಎನ್ನುವಂಥ ವಿಚಾರವನ್ನು ನಾನು ಹೇಳಿ ಒಪ್ಪಿಕೊಂಡಿದ್ದೇನೆ. ಅದನ್ನು ಪ್ರತಿಯೊಬ್ಬರೂ ಪಾಲನೆ ಮಾಡಿದರೆ ತಪ್ಪೇನು ಎಂಬ ವಿಚಾರವನ್ನು ಪ್ರತಿಪಾದನೆ ಮಾಡಿದ್ದೇವೆ. ಅದರ ಅಶಯವೇನೆಂಬುದನ್ನು ಹೇಳಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ಸಹ ಮಾನ್ಯ ಎಸ್.ಎಲ್.ಭೋಜೇಗೌಡರು ಆ ರೀತಿ ಹೇಳಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಅವರ ಮಾತನ್ನು ಮುಕ್ತಾಯಗೊಳ್ಳಿಸಲಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಆರ್‌ಎಸ್‌ಎಸ್ ಶಿಬಿರಕ್ಕೆ ಹೋದಂಥ ಸಂದರ್ಭದಲ್ಲಿ ಆರ್‌ಎಸ್‌ಎಸ್ ಶಿಬಿರದಲ್ಲಿ ನಡೆದಂಥ ವಿಚಾರಗಳನ್ನು ಮಾನ್ಯ ಸಭಾನಾಯಕರು ತಿಳಿಸಿದ್ದಾರೆ. ಅದನ್ನು ಸ್ವಾಗತಿಸುತ್ತೇವೆ. ಆದರೆ, ಇವತ್ತು ಬಿಜೆಪಿ ಎಂದರೆ, ಆರ್.ಎಸ್.ಎಸ್. ಎಂದು ಕರೆಯಲಾಗುತ್ತದೆ. ಆದರೆ, ಆ ಒಂದು ಪಕ್ಷದಲ್ಲಿ ಮೂರು ಬಾರಿ, ನಾಲ್ಕು ಬಾರಿ ಶಾಸನ ಸಭೆ, ಲೋಕಸಭೆಗೆ ಹೋಗಿರುವಂಥ ಜನ. ಇವತ್ತು ಅದೇ ಆರ್.ಎಸ್.ಎಸ್.ನವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ನಾನು ಹುಟ್ಟಿದಾಗಿನಿಂದಲೂ ಆರ್.ಎಸ್.ಎಸ್. ಎಂದು ಹೇಳಿಕೊಂಡು ಸಂಸತ್, ಶಾಸನಸಭೆಗೆ ಬರುವಂಥ ಜನ ಆ ರಾಷ್ಟ್ರೀಯತೆ ಮರೆತು, ಜಾತಿಯತೆ ಬಗ್ಗೆ ಮಾತನಾಡುತ್ತಾರಲ್ಲಾ, ಇಂತಹ ವರ್ಗದ ಜನರ ಮತಗಳೇ ಬೇಕಾಗಿಲ್ಲ, ಅವರೆಲ್ಲಾ ದೇಶದ್ರೋಹಿಗಳು ಎನ್ನುವಂಥ ಮಾತನ್ನು ಹೇಳಿರುವ ಬಗ್ಗೆಯು ಸ್ವಲ್ಪ ದಯಮಾಡಿ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ನಿನ್ನೆ ದಿವಸ ಮಾತನಾಡುವಾಗ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ‘ಎಲ್ಲಿಯವರೆಗೆ ರಾಜಕಾರಣದಲ್ಲಿ ಅತ್ಯಂತ ಆರ್ಯರು, ಶ್ರೇಷ್ಠರು ಬರುವುದಿಲ್ಲವೋ, ಅಲ್ಲಿಯವರೆಗೂ ಪ್ರಸ್ತುತ ಇರುವವರ ಕೈಯಲ್ಲಿಯೇ ಆಡಿಸಿಕೊಳ್ಳಬೇಕು’ ಎನ್ನುವಂಥ ಮಾತನ್ನು ಹೇಳಿದ್ದರು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾನಾಯಕರೇ, ನಾನು ಹೇಳಿದ ಮಾತಲ್ಲ ಅದು. ಮಹಾತ್ಮಗಾಂಧಿಜೀಯವರು ಹೇಳಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರೇ, ನಿನ್ನೆ ದಿವಸ ಅಂತೂ ನೀವೇ ಹೇಳಿದ್ದು.

**ಶ್ರೀ ಮರಿತಿಬ್ಬೇಗೌಡ:-** ಹೌದು. ಹೌದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾರು ಆ ಮಾತು ಹೇಳಿದ್ದಾರೆ ಎಂಬುದನ್ನು ಹೇಳಬೇಕೆಂದು ನನಗೆ ಅನ್ನಿಸಲಿಲ್ಲ. ಏಕೆಂದರೆ, ನನಗೆ ಮಾನ್ಯ ಸದಸ್ಯರ ಮೇಲೆ ನಂಬಿಕೆ ಇದೆ. ಆ ಕಾರಣಕ್ಕಾಗಿ ಹೇಳಲಿಲ್ಲ. ಈ ದೇಶದಲ್ಲಿರುವ ಎಲ್ಲರೂ ಸಹ ನಾವು ಅರ್ಥ ಮಾಡಿಕೊಂಡ ಹಾಗೆ,...

**ಶ್ರೀ ಕೆ.ಗೋವಿಂದರಾಜ್:-**ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಆರ್.ಎಸ್.ಎಸ್,...

**ಸಭಾಪತಿಯವರು:-** ಸಂವಿಧಾನದ ಮೇಲೆ ಸಭಾನಾಯಕರು ಮಾತನಾಡುತ್ತಿದ್ದಾರೆ, ಬೇರೆ ಚರ್ಚೆ ಮುಂದುವರೆಸುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಸೃಷ್ಟಿಕರ್ತ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತನ್ನ ಕಣ್ಣ ಅಳತೆಯ ದೃಷ್ಟಿಕೋನದಲ್ಲಿ ಸರ್ವರನ್ನು ನೋಡುವಾಗ, ಕುತೂಹಲದ ಕಣ್ಣುಗಳಿಂದ ನೋಡುತ್ತಿದ್ದರು, ಅರ್ಥ ಮಾಡಿಕೊಳ್ಳುತ್ತಿದ್ದರು, ವಿಮರ್ಶೆ ಮಾಡಿಕೊಳ್ಳುತ್ತಿದ್ದರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವ ಮಾತನ್ನು ಹೇಳುವಾಗ ಈ ಉಲ್ಲೇಖವನ್ನು ಮಾಡಬೇಕಾಗಿತ್ತು ಎಂದು ಅನ್ನಿಸುತ್ತದೆ. 5 ನಿಮಿಷ ಅದೇನೆಂಬುದನ್ನು ತಿಳಿಸುತ್ತೇನೆ. ನಮ್ಮ ಹುಟ್ಟಿನ ವ್ಯವಸ್ಥೆಗಳ ನಡುವೆ ಶಾಸಕಾಂಗದಲ್ಲಿರುವಾಗ ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಿದರೆ, ಮತ್ತಷ್ಟು ಅರ್ಥ ಪೂರ್ಣವಾಗಿ ತೊಡಗಿಸಿಕೊಂಡಿದರೆ, ರಾಜಕಾರಣದಲ್ಲಿ ಮಾನ್ಯ ದೀನ್ ದಯಾಳ್ ಜೀ ಯವರು ಒಂದು ಮಾತನ್ನು ಹೇಳಿದ್ದಾರೆ. ನಾನು ಮಾಜಿ ಪ್ರಧಾನಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರನ್ನು ಮತ್ತು ಶ್ರೀ ಅಟಲ್ ಬಿಹ್ಹಾರಿ ವಾಜಪೇಯಿಯವರು ಯಾವ ಭಾಷೆಯಲ್ಲಿ ಸಮರ್ಥಿಸಿದರು ಎಂಬ ಮಾತನ್ನು ವಿರೋಧ ಪಕ್ಷದ ನಾಯಕನಾಗಿದ್ದಾಗ ಹೇಳಿದ್ದೆ. ಮಾನ್ಯ ದೀನ್ ದಯಾಳ್ ಜೀ ಯವರು ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, 'ಭಾರತ ದೇಶದಲ್ಲಿ ರಾಜಕಾರಣವನ್ನು ವೃತ್ತಿಯಾಗಿಟ್ಟುಕೊಂಡವರು ಕೋಟ್ಯಂತರ ಮಂದಿ, ಆದರೆ ರಾಜಕಾರಣವನ್ನು ವ್ರತವಾಗಿ ಸ್ವೀಕರಿಸಿದವರು ಕೆಲವೇ ಮಂದಿ' ಎಂದು ಹೇಳಿದ್ದಾರೆ. ಆ ಕೆಲವೇ ಮಂದಿಗಳ ಸಂಖ್ಯೆ ಹೆಚ್ಚಾಗಬೇಕು ಎನ್ನುವುದು ನಮ್ಮ ಸಂವಿಧಾನದ ಆಶಯ ಎಂದು ಕೊಂಡಿದ್ದೇನೆ. ರಾಜಕಾರಣ ಎನ್ನುವುದು ಹಣ ಮಾಡುವುದಕ್ಕಾಗಿ ಇರುವ ದಂಧೆ ಅಲ್ಲ, ರಾಜಕಾರಣ ಎನ್ನುವುದು ಅಧಿಕಾರಕೋಸ್ಕರ ಇರುವುದಲ್ಲ, ರಾಜಕಾರಣ ಎನ್ನುವುದು ಸೇವೆಗಾಗಿ ಇರುವುದು, ರಾಜಕಾರಣವು ವ್ರತ ಎಂದು ತಿಳಿದುಕೊಂಡಿರುವ ಕೆಲವೇ ಮಂದಿ ಭಾರತದಲ್ಲಿದ್ದಾರೆ ಎಂದಾಗ ಆ ಕೆಲವೇ ಮಂದಿ ಸಂಖ್ಯೆ ಜಾಸ್ತಿಯಾಗಬೇಕೆಂದು ಅನ್ನಿಸುತ್ತದೆ. ಮಾಜಿ ಸಚಿವರಾದ ಶ್ರೀ ಡಿ.ಬಿ.ಚಂದ್ರೇಗೌಡರು ಒಂದು ಲೇಖನವನ್ನು ಬರೆಯುತ್ತಾರೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ಕಟ್ಟುವಾಗ ಮಾಜಿ ಸಚಿವರಾದ ಶ್ರೀ ಡಿ.ಬಿ.ಚಂದ್ರೇಗೌಡರು ಭೇಟಿ ಮಾಡಿದಂಥ ಸಂದರ್ಭದಲ್ಲಿ 'ಹೇ ಚಂದ್ರೇಗೌಡ ನೋಡುತ್ತೀರು, ನಾನು ವಿಧಾನಸೌಧ ಕಟ್ಟುವ ರೀತಿ, ಆ ಬ್ರಿಟಿಷ್ ಮಕ್ಕಳು ತಮ್ಮ ಅರಮನೆ ಸುಟ್ಟು ಹೋಗಿದೆ ಎಂದು ಹೇಳಿ, ಕೊಡಗು ಸೇರಿದಂತೆ ಇಡೀ ಕರ್ನಾಟಕದ ಕಾಡನ್ನೇ ಸೂರೆ ಮಾಡಿಕೊಂಡು ಅವರ ಅರಮನೆ ಕಟ್ಟುತ್ತಿದ್ದಾರೆ. ನೋಡಿ ಚಂದ್ರೇಗೌಡ, ಈ ಕರ್ನಾಟಕದಲ್ಲಿ ಅಲ್ಲಿದ್ದ ಉಳಿದ ಮರಗಳನ್ನೆಲ್ಲಾ ಹಾಕಿ, ಬ್ರಿಟಿಷ್ ಅರಮನೆಗಿಂತಲೂ ಚೆನ್ನಾಗಿರುವ ವಿಧಾನಸೌಧ ಕಟ್ಟುತ್ತೇನೆ' ಎಂದು ಹೇಳಿದ್ದರು ಎಂದು ಮಾಜಿ ಸಚಿವರಾದ ಶ್ರೀ ಡಿ.ಬಿ.ಚಂದ್ರೇಗೌಡರು ಉಲ್ಲೇಖದಲ್ಲಿ ಆಗಾಗ್ಗೆ ಹೇಳುತ್ತಿರುತ್ತಾರೆ. ಆದರೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರು ಹೆಚ್ಚು ದಿವಸ ಕುರ್ಚಿ ಮೇಲೆ ಕುಳಿತುಕೊಳ್ಳಲು ಅವಕಾಶವಾಗಲಿಲ್ಲ. ಆದರೆ ಅವರು ಮಾಡಿದಂಥ ಕೆಲಸ ಸಾಮಾನ್ಯವಲ್ಲ. ಬಹುಶಃ ನಾವು ಯಾರು ಅಲ್ಲ. ನಮ್ಮ ಹತ್ತಾರು ತಲೆಮಾರಿನ ಕಾಲ ಇದನ್ನು ಅರ್ಥಮಾಡಿಕೊಳ್ಳಬಹುದು ಎಂದು ಅನ್ನಿಸುತ್ತದೆ. ಇಂತಹ ವ್ಯವಸ್ಥೆಗಳ ನಡುವೆ ನಾವು ಮಾತನಾಡುವಾಗ ಅನೇಕ ಸಲ ಸಾಂದರ್ಭಿಕವಾಗಿ ಹಿರಿಯರ ಬಗ್ಗೆ ಮಾತನಾಡಿದ್ದೆವು. ನಂತರ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮರೆತುಬಿಡುವ ಘಟನೆಗಳು ಸಹ ಇದೆ. ನಾವು ಉದಾಹರಣೆಗಳನ್ನಷ್ಟೇ ನೀಡುತ್ತೇವೆ, ವಾಸ್ತವಿಕವಾಗಿ ಅದನ್ನು ಅನುಷ್ಠಾನ ಮಾಡುವುದಕ್ಕೆ ವಿಳಂಬ ಮಾಡುತ್ತೇವೆಯೋ ಎಂದು ನಾನು ಅಂದುಕೊಂಡಿದ್ದೇನೆ. ಆ ಕಾರಣಕ್ಕಾಗಿ ರಾಜಕಾರಣ ಎನ್ನುವುದು ವೃತ್ತಿಯಲ್ಲಿ, ರಾಜಕಾರಣವನ್ನು ವ್ರತವಾಗಿ ಸ್ವೀಕರಿಸಬೇಕು ಎನ್ನುವುದು ಒಂದು ಭಾಗ. ಪ್ರಚಲಿತ ದಿನಗಳಲ್ಲಿ ಮತ್ತಷ್ಟು ಶಕ್ತಿಯುತವಾಗಿ ಒಟ್ಟಾಗಿ ಕೆಲಸ ಮಾಡಿದ್ದರೆ, ಸ್ವಾತಂತ್ರ್ಯ ಬಂದ 73 ವರ್ಷಗಳಲ್ಲಿ ಶೇಕಡಾ ಅರ್ಧದಷ್ಟು ಮಂದಿಗೆ ಕುಡಿಯುವ ನೀರಿನ ಸೌಲಭ್ಯ ಇಲ್ಲದಂತಾಗಿದೆ. ಅಷ್ಟೇ ಪ್ರಮಾಣದ ಜನರಿಗೆ ಸ್ವಂತ ಸೂರಿಲ್ಲ. ಅದಕ್ಕಿಂತಲೂ ಜಾಸ್ತಿ ಮಕ್ಕಳಿಗೆ ಓದುವುದಕ್ಕೆ ವಿದ್ಯುತ್ ಸೌಲಭ್ಯ ಇಲ್ಲ ಎನ್ನುವಾಗ ನಾವು ಮಾಡುವ ಕೆಲಸಗಳು ಮತ್ತಷ್ಟು ಶಕ್ತಿಯುತವಾಗಿ ಮಾಡಿದ್ದರೆ ಆ ಸಮಸ್ಯೆಗಳನ್ನಾದರೂ ವಿವರಿಸಬಹುದೇನೋ ಎನ್ನುವಂಥ ಕಾಲಘಟ್ಟದ ನಡುವೆ ನಾವು ಇದ್ದೇವೆಯೋ ಅನ್ನಿಸುತ್ತದೆ. ಕೆಲವು ಸಲ ಅಧಿಕಾರ ಸಿಕ್ಕಿದಾಗ ಕೆಲವರು ಮಾಡಿರುವ ಸಾಧನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಅರ್ಥ ಮಾಡಿಕೊಳ್ಳಬೇಕು ಎಂದರೆ, ನಾನು ನೆನಪು ಮಾಡಿಕೊಳ್ಳುತ್ತೇನೆ ಎಂದರ್ಥ. ನಮ್ಮಲ್ಲಿ ರಾಜಕಾರಣದ ಅಭಿಪ್ರಾಯಗಳು ಏನೇ ಇರಬಹುದು.

(578)/19.03.2020/1.00/ಎಸ್‌ಕೆ-ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಮಾನ್ಯ ಸಭಾಪತಿಯವರೇ, ಮಾನ್ಯ ದೇವರಾಜ ಅರಸ್‌ರವರು 1974 ರಲ್ಲಿ ಭೂ ಸುಧಾರಣೆ ಕಾಯಿದೆ ಜಾರಿಗೆ ತಂದಾಗ, ಅದನ್ನು ವಿರೋಧ ಮಾಡಿದ ಸಂಘಟನೆಯಲ್ಲಿ ನಾವೆಲ್ಲರೂ ಇದ್ದೆವು. ಮಾನ್ಯ ದೇವರಾಜ ಅರಸುರವರನ್ನು ಟೀಕೆ ಮಾಡಿದಂತಹ ಸಂಘಟನೆಯ ಉದ್ದಗಲಕ್ಕೂ ನಾವೆಲ್ಲ ಬೆಳೆದು ಬಂದವರು. ಆದರೆ ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದಾಗ, ಬಡವ ಪ್ರಥಮ ಬಾರಿಗೆ ಅನ್ನದ ಅಗುಳು ನೋಡಿದ ಎಂದು ಇತಿಹಾಸ ಹೇಳುತ್ತದೆ. ಯಾರಾದರೂ ಗೇಣಿದಾರ ತಾನು ಬೆಳೆದಂತಹ ಬೆಳೆಗಳನ್ನು ಒಂದು ಕಣಜದಲ್ಲಿ ಹಾಕಿ ಇಡಬೇಕಿತ್ತು. ಆಗ ಧಣಿಯವರು ಬಂದು ಅಳತೆ ಮಾಡಿಕೊಂಡು ಹೋಗಬೇಕಿತ್ತು. ಇದನ್ನು ನಾನು ನಮ್ಮ ಊರಿನಲ್ಲಿ ಕಣ್ಣಾರೆ ನೋಡಿದ್ದೇನೆ. ಯಾವುದಾದರೂ ಆ ಹುಲ್ಲಿನಲ್ಲಿ ಉಳಿದಿರುವಂತಹ ಭತ್ತ ಇದ್ದರೆ, ಇವರು ಬದುಕುವುದಕ್ಕೆ ಅವಕಾಶವಿತ್ತು. ಅದೂ ಕೂಡ ಸಿಗುತ್ತಿರಲಿಲ್ಲ. ಕಾಲಘಟ್ಟಗಳು ಬದಲಾಗಿ, ಪ್ರಥಮ ಬಾರಿಗೆ ಅನ್ನದ ಅಗುಳನ್ನು ತನ್ನ ಕೈಯ್ಯಾರೆ ತಾನು ಊಟ ಮಾಡುವಂತಹ ಅವಕಾಶಗಳು ಸಿಕ್ಕಿದ್ದು ಸನ್ಮಾನ್ಯ ದೇವರಾಜ ಅರಸ್‌ರ ಕಾಲದಲ್ಲಿ ಆಯಿತು. ಭೂ ಸುಧಾರಣೆ ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಾಗ ಎಷ್ಟೋ ಜನ ಬೀದಿಗೆ ಬಿದ್ದಿರುವುದು ಕೂಡ ಸುಳ್ಳಲ್ಲ. ಎಷ್ಟೋ ಜನ ಶ್ರೀಮಂತರು, ಭೂಮಾಲೀಕರು ರೇಷನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಗಡಿಯೊಳಗೆ ಹೋಗುವಂತಹ ಒಂದು ಪರಿಸ್ಥಿತಿಯೂ ಕೂಡ ಬಂತು. ಅದು ಕೂಡ ಸುಳ್ಳಲ್ಲ. ಆದರೆ ಸಮಾಜದಲ್ಲಿ ಬದಲಾವಣೆ ತರುವಂತಹ ರೀತಿಯಾಗಿತ್ತು.

ಕರ್ನಾಟಕದಲ್ಲಿ ಜಸ್ಟೀಸ್ ಭೀಮಯ್ಯ ಎನ್ನುವವರ ಬಗ್ಗೆ ಮಾನ್ಯ ತಿಪ್ಪೇಸ್ವಾಮಿಯವರಿಗೆ ಗೊತ್ತಿರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಜಸ್ಟೀಸ್ ಭೀಮಯ್ಯನವರು ವಿಚಾರ ಸಂಕಿರಣದಲ್ಲಿ ಮಾತನಾಡುವಾಗ ಕರ್ನಾಟಕದಲ್ಲಿ ತಂದಿರುವಂತಹ ಭೂ ಸುಧಾರಣೆ ಕಾಯಿದೆಯನ್ನು ಭಾರತದಲ್ಲಿ ಅಲ್ಲದೇ ಬೇರೆ ಯಾವುದೇ ದೇಶದಲ್ಲಿ ತಂದಿದಿದ್ದರೆ ಅಲ್ಲಿನ ಮಂತ್ರಿಗಳ ತಲೆ ಉರುಳುತ್ತಿತ್ತು ಎಂಬ ಮಾತನ್ನು ಹೇಳುತ್ತಾರೆ. ಅಷ್ಟೊಂದು ಗಂಭೀರವಾದ ಭೂ ಸುಧಾರಣೆ ಕಾಯಿದೆಯನ್ನು ಸನ್ಮಾನ್ಯ ದೇವರಾಜ ಅರಸುರವರು ಅನುಷ್ಠಾನ ಮಾಡಿದ್ದಾರೆ ಎನ್ನುವಂತಹ ಮಾತುಗಳನ್ನು ನಾವು ಕೇಳಿದ್ದೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಆ ಸಮಯದಲ್ಲಿ ಸನ್ಮಾನ್ಯ ಹುಚ್ಚಮಾಸ್ತಿ ಗೌಡರನ್ನು ಮತ್ತು ಶ್ರೀ ಕೆ.ಹೆಚ್. ರಂಗನಾಥ್ ರವರನ್ನು ನಾವು ನೆನಪು ಮಾಡಬೇಕಾಗುತ್ತದೆ. ಕಾರಣವೇನಂದರೆ, ಆ ಕಾಲದಲ್ಲಿ ಅವರೆಲ್ಲರೂ ಕೂಡ ಪ್ರಜಾ ಸೋಷಿಯಲ್ ಪಾರ್ಟಿಯಿಂದ ಬಂದಂತಹವರು. ಅವರ ಮೊಟ್ಟ ಮೊದಲನೆಯ ಗುರಿ ಏನೆಂದರೆ, ‘ಉಳುವವನೇ ಭೂಮಿಯ ಒಡೆಯ’ ಎಂದು 1961 ರಲ್ಲಿ ಈ ಕಾಯಿದೆ ಏನು ಜಾರಿಗೆ ಬಂತು, ಅದನ್ನು ದಿನಾಂಕ 01.03.1974 ನೇ ಇಸವಿಯಿಂದ ತ್ವರಿತವಾಗಿ ಜಾರಿಗೆ ತಂದರು. ಆ ವಿಷಯದಲ್ಲಿ ಸನ್ಮಾನ್ಯ ಹುಚ್ಚಮಾಸ್ತಿ ಗೌಡರನ್ನು ಮತ್ತು ಶ್ರೀ ಕೆ.ಹೆಚ್. ರಂಗನಾಥ್ ಅವರಿಬ್ಬರ ಹೆಸರುಗಳನ್ನು ನಾವು ಮಾನ್ಯ ದೇವರಾಜು ಅರಸು ಅವರ ಹೆಸರಿನೊಂದಿಗೆ ನೆನಪು ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಅಷ್ಟೊಂದು ಪರಿಣಾಮಕಾರಿಯಾದ ಕಾಯಿದೆಯನ್ನು ಜಾರಿಗೆ ತಂದರು; ಇವತ್ತು ರಾಜಕಾರಣದಲ್ಲಿದ್ದುಕೊಂಡು ಆಡಳಿತ ಮಾಡುತ್ತಿದ್ದೇವೆ ಎನ್ನುವಂತಹದ್ದು ಒಂದು ಭಾಗ. ಸನ್ಮಾನ್ಯ ದೇವರಾಜ ಅರಸುರವರು ಭೂ ಸುಧಾರಣೆಗೆ ತಂದಿರುವಂತಹ ರಾಜಕಾರಣ ಆಡಳಿತ ಮತ್ತು ಮೌಲ್ಯಾಧಾರಿತ ರಾಜಕಾರಣ ಮಾಡಿದ ಮಾನ್ಯ ರಾಮಕೃಷ್ಣ ಹೆಗಡೆಯವರ ಆಡಳಿತವನ್ನು ಗಮನಿಸಬೇಕಾಗುತ್ತದೆ. ಇವತ್ತು ‘ಕುರುಡು ಕಾಂಚಾಣ’ ಆಳುತ್ತಿದೆ ಎಂದು ನಿಮಗೆಲ್ಲರಿಗೂ ಅನಿಸುವುದಿಲ್ಲವೇ? ಇವತ್ತು ರಾಜಕಾರಣವನ್ನು ಒಮ್ಮೆ ಅಳೆದು ನೋಡಿ. ಹೌದೋ ಅಥವಾ ಇಲ್ಲವೋ? ಅಲ್ಲದಿದ್ದರೆ, ನನ್ನದೇನೂ ಅಭ್ಯಂತರವಿಲ್ಲ. ಯಾವ ರೀತಿ ಜನಸೇವೆಗೋಸ್ಕರ, ಜನಪರವಾಗಿ ಬದುಕನ್ನು ಸಮರ್ಪಣೆ ಮಾಡಿದಂತಹ ರಾಜಕಾರಣದ ಬಗ್ಗೆ ಪ್ರಸ್ತಾಪಿಸುವಾಗ ತಮಿಳುನಾಡಿನ ಮಾನ್ಯ ಕಾಮ್‌ರಾಜ್‌ರವರ ಬಗ್ಗೆ ನಾವು ಖಂಡಿತವಾಗಿಯೂ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಮಾತನಾಡಬೇಕಾಗುತ್ತದೆ. ಅವರ ಬಗ್ಗೆ ತಿಳಿದಂತಹವರು. ಅವರು ಗೆಲುವಿನ-ನಲುವಿನ ಘಟ್ಟವನ್ನು ಮುಟ್ಟಿ ಮುಖ್ಯಮಂತ್ರಿಗಳಾಗಿ ಮನೆಗೆ ಬರುತ್ತಾರೆ. ಅವರ ಅಮ್ಮನಿಗೆ ಅದರಿಂದ ತುಂಬಾ ಸಂತೋಷವಾಗುತ್ತದೆ. ಅವರನ್ನು ನೋಡಿ, ಇಡೀ ಗ್ರಾಮವೇ ಹೆಮ್ಮೆ ಪಡುತ್ತದೆ. ಅವರ ಅಮ್ಮ ಬಹಳ ಪ್ರೀತಿಯಿಂದ ಮಗನಿಗೆ ಆಶೀರ್ವಾದ ಮಾಡಿ, ನನಗೆ ಎರಡು ಕಾರಣಕ್ಕೋಸ್ಕರ ಸಂತೋಷವಾಯಿತು. ಮೊದಲನೆಯದಾಗಿ ನೀನು ಮುಖ್ಯಮಂತ್ರಿಯಾಗಿದ್ದಕ್ಕೆ, ಮತ್ತೊಂದು ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಯಾದ ಸುದ್ದಿ ಕೇಳಿದ ತಕ್ಷಣ ಮೂರು ದಿವಸಗಳ ಹಿಂದೆ ಮೂರು ಕಿಲೋ ಮೀಟರ್‌ರವರೆಗೆ ಪೈಪ್ ಲೈನ್ ಎಳೆದು ನಮ್ಮ ಮನೆಗೊಂದು ನೀರಿನ ನಲ್ಲಿಯನ್ನು ಹಾಕಿ ಹೋಗಿದ್ದಾರೆ. ನನ್ನ ಮಗನಾಗಿ ನೀನು ಮುಖ್ಯಮುಂತ್ರಿಯಾಗಿದ್ದು ಒಂದು ಖುಷಿಯಾದರೆ ಮತ್ತೊಂದು ನನ್ನ ಮನೆಗೆ ನಲ್ಲಿ ನೀರು ಬಂತು ಎಂಬುದು ಮತ್ತೊಂದು ಸಂತೋಷದ ವಿಚಾರ ಎಂದು ಹೇಳುತ್ತಾಳೆ. ಆ ಸಂದರ್ಭದಲ್ಲಿ ಮಾನ್ಯ ಕಾಮಾರಾಜರವರು ಹೇಳಿದರಂತೆ, ‘ಇದೆಲ್ಲಾ ಸರಿಯಿದೆ, ತಪ್ಪು ಎಂದು ಹೇಳುವುದಿಲ್ಲ. ಆದರೆ ಮುಖ್ಯಮಂತ್ರಿಗಳಾಗಿ ಹೇಗಿರಬೇಕೆಂದರೆ, ಇಡೀ ರಾಜ್ಯಕ್ಕೆ ನಲ್ಲಿ ನೀರು ಕೊಟ್ಟ ನಂತರ ನನ್ನ ಅಮ್ಮನಾದ ನೀನು ನಲ್ಲಿ ನೀರು ಕುಡಿಯಬೇಕಾಗುತ್ತದೆ. ಅದಕ್ಕೋಸ್ಕರ ತಪ್ಪಾಗಿ ಭಾವಿಸಬೇಡ, ನನಗೆ ಆಶೀರ್ವಾದ ಮಾಡು ಎಂದು ಆ ನೀರಿನ ನಲ್ಲಿಯನ್ನು ತೆಗೆದು, ತಾಯಿಯ ಕಾಲಿಗೆ ನಮಸ್ಕಾರ ಮಾಡಿ ಹೋಗುತ್ತಾರೆ. ಇದು ಒಂದು ಘಟನೆಯಾಗಿದೆ. ಅಂತಹ ರಾಜಕಾರಣವನ್ನು ಇವತ್ತು ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಂಡರೆ, ನನಗೆ ಅನಿಸಿದ್ದು ಸರಿ ಎಂದುಕೊಂಡರೆ, ಕುರುಡು ಕಾಂಚಾಣ ಎಂದು ಇವತ್ತು ನಮಗೆ ಅನಿಸುವುದಿಲ್ಲವೋ? ಇವತ್ತು ನಮಗೆ ಎಲ್ಲವನ್ನೂ ಹಣ hijack ಮಾಡಿಸಿದೆ ಎಂದು ಅನಿಸುವುದಿಲ್ಲವೋ? ಅದಕ್ಕೆ ಕಾರಣಗಳೇನು? ನಾನೇನಾದಾರೂ ಒಂದೊಮ್ಮೆ ಮಾತನಾಡಿದರೆ, ನಾವು ಪ್ರಜಾಪ್ರಭುತ್ವದಲ್ಲಿ ಕಾರ್ಯಾಂಗದ ಮೇಲೋ, ಶಾಸಕಾಂಗದ ಮೇಲೋ, ನ್ಯಾಯಾಂಗದ ಮೇಲೋ ಚರ್ಚೆಗಳು ಬಂದಾಗ, ಸಿಕ್ಕಾಪಟ್ಟೆ ವಾದಗಳಾ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈಗ ಏನು ಮಾತನಾಡುತ್ತಾರೆಂದು ನಾವು ಒಮ್ಮೊಮ್ಮೆ ನೋಡುತ್ತಿರುತ್ತೇವೆ. ಅವರು ಸೀಟಿನಲ್ಲಿ ಎದ್ದು ನಿಂತುಕೊಂಡು ಮಾತನಾಡುತ್ತಾರೆ; ಆದರೆ, ಸರಿ ತಪ್ಪುಗಳ ಚರ್ಚೆಗಳೇ ಬೇರೆ. ಹಾಗೆಯೇ ಶ್ರೀ ಎಂ.ಸಿ.ನಾಣಯ್ಯನವರುತಮ್ಮ ಸ್ಥಾನದಲ್ಲಿ ಎದ್ದುನಿಂತು ಕೊಂಡು, ಬಹುಶಃ ನೀವೀಗ ಕುಳಿತಿರುವ ಅದೇ ಸೀಟಿನಲ್ಲಿ ಕುಳಿತುಕೊಂಡು, ಹೇಳುತ್ತಿದ್ದರು; ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳೆಲ್ಲವೂ ಶ್ರೇಷ್ಠ. ಆದರೆ ಇವೆಲ್ಲವುಗಳನ್ನು ಆಯ್ಕೆ ಮಾಡುವುದು ಮತದಾರ. ಪ್ರಜಾಪ್ರಭುತ್ವದಲ್ಲಿ ಮತದಾರನೇ ಅತ್ಯಂತ ಶ್ರೇಷ್ಠ ಎನ್ನುವಂತಹ ಮಾತುಗಳನ್ನು ಹೇಳುತ್ತಿದ್ದರು. ದುರಾದೃಷ್ಟಕ್ಕೆ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ಕಟ್ಟಕಡೆಯದಾಗಿ ಮತದಾರರಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆ ಬಂದಿದೆ ಎನ್ನುವಂತಹ ಆತಂಕಗಳು ನಮ್ಮನ್ನು ಕಾಡುವಂತಹ ಪರಿಸ್ಥಿತಿಯಲ್ಲಿದ್ದೇವೆ ಎಂದು ನಮಗೆ ಅನಿಸುತ್ತದೆ. ನೀವೆಲ್ಲಾ ಹೇಳಿದ ಪ್ರಕಾರ ಒಂದು ಚುನಾವಣೆಗೆ ಸುಮಾರು ಹತ್ತರಿಂದ ನಲವತ್ತು ಕೋಟಿ ರೂಪಾಯಿಗಳಾದರೆ; ಪ್ರಜಾಪ್ರಭುತ್ವದಲ್ಲಿ ಗಟ್ಟಿಯಾಗಿದ್ದರೆ, ಡಾ॥ ಬಿ.ಆರ್. ಅಂಬೇಡ್ಕರ್‌ರವರು ಬರೆದಂತಹ ಸಂವಿಧಾನ ನಮಗೆ ರಕ್ಷಣೆ ಕೊಡದೇ ಹೋದರೆ, ಎಲ್ಲಿಯಾದರೂ ಹಣ ಕೊಟ್ಟು, ಓಟು ಪಡೆದಂತಹ  ಜನ ಪ್ರತಿನಿಧಿಯೊಬ್ಬ ನಾನು ಕೊಟ್ಟ ಹಣಕ್ಕೂ ನೀನು ಕೊಟ್ಟ ಓಟಿಗೂ ಚುಕ್ತಾ ಆಯಿತು ಎಂದು ಹೇಳಿಬಿಟ್ಟು ಸುಮ್ಮನೆ ಕುಳಿತುಕೊಂಡು ಬಿಟ್ಟರೆ ಏನು ಮಾಡುವುದು? ಸ್ವಲ್ಪ ಆಸೆ ಇರುವುದು ಎಲ್ಲಿ ಎಂದು ಹೇಳಿದರೆ, ಹಣ ಖರ್ಚು ಮಾಡಿ, ಜನ ಪ್ರತಿನಿಧಿಯಾಗಿದ್ದಾರೆಂಬುದು ಅವರ ಉದ್ದೇಶವಿರಬಹುದು. ಇದನ್ನು ಯೋಚನೆ ಮಾಡಿ ನೋಡಿ. ಮೂವತ್ತು ಕೋಟಿ, ನಲವತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದೊಂದು ಓಟಿಗೆ ಇಂತಿಷ್ಟು ಸಾವಿರ ರೂಪಾಯಿಗಳನ್ನು ಕೊಟ್ಟು, ನಂತರ  ನಾನು ಕೊಟ್ಟ ಹಣಕ್ಕೂ, ನೀನು ಕೊಟ್ಟ ಓಟಿಗೂ  ಲೆಕ್ಕ ಚುಕ್ತಾ ಆಯಿತು, ನನ್ನ ಹತ್ತಿರ ಬರಬೇಡ ಎಂದು ಹೇಳಿಬಿಟ್ಟರೆ, ಈ ಸಂವಿಧಾನ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವನ್ನು ಎಲ್ಲಿ ನೋಡಿಕೊಳ್ಳೋಣ. ಅಂತಹ ಸಂದರ್ಭದಲ್ಲಿ ಅವನು ಯಾಕೆಂದರೆ, ಇನ್ನೊಮ್ಮೆ ಗೆಲ್ಲಬೇಕೆಂಬ ಆಸೆ ಆತನಿಗೆ ಇರಬಹುದು. ಆ ಕಾರಣಕ್ಕೋಸ್ಕರವಾಗಿಯೇ ಇದ್ದಾನೆ ಎನ್ನುವುದು ಗೊತ್ತಿಲ್ಲ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನಬದ್ಧವಾಗಿ ಕೊಟ್ಟಿರುವಂತಹ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕೆಲಸಗಳನ್ನು ಮಾಡುವುದಕ್ಕೆ ನಾವೆಲ್ಲರೂ ಒಟ್ಟಾಗಿ ದುಡಿಯುವುದಕ್ಕೆ ಇದೊಂದು ಅವಕಾಶವಾಯಿತು  ಎಂದು ನಮಗೆ ಎನಿಸುತ್ತದೆ.

ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ಹೇಳುತ್ತಿದ್ದರು. ಇವತ್ತು ಅವರು ಮನೆಯಲ್ಲಿದ್ದಾರೆ. ನಿಮಗೆಲ್ಲಾ ರಾಜಕಾರಣ ಎಂದು ಹೇಳಿದರೆ ರಾತ್ರಿ ಕಳೆದು ಬೆಳಕು ಆಗುವುದರೊಳಗೆ ಗ್ರಾಮ ಪಂಚಾಯಿತಿ ಸದಸ್ಯ, ತಾಲ್ಲೂಕು ಪಂಚಾಯತ್ ಸದಸ್ಯ, ಜಿಲ್ಲಾ ಪಂಚಾಯತ್ ಸದಸ್ಯ ಎಂ.ಎಲ್.ಎ.ಗಳು  ಮಿನಿಸ್ಟರ್‌ಗಳಾಗಿ ಬಿಡುತ್ತೀರಿ. ರಾಜಕಾರಣವನ್ನುಇಡೀ ಬದುಕನ್ನು ಸಾರ್ವಜನಿಕರಿಗೆ ಮುಡುಪಾಗಿಟ್ಟು, ಹೋರಾಟ ಮಾಡಿ, ಜೈಲು ವಾಸವನ್ನು ಅನುಭವಿಸಿ, ಪೊಲೀಸ್‌ರ ಬೂಟು ಕಾಲಿನಿಂದ ಹೊಡೆತ ತಿಂದು, ಎಂತೆಂಥ ವಿವಾದಗಳಾಗಿರುವ ಕೆಲವರು ಇವತ್ತು ಗ್ರಾಮ ಪಂಚಾಯ್ತಿ ಸದಸ್ಯರಾಗಿಲ್ಲ ಎನ್ನುವಂತಹ ಮಾತುಗಳನ್ನು ಹೇಳುತ್ತಿರುವುದನ್ನು ನಾವು ಕಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಒಂದಿಷ್ಟು ಜನಪರವಾದ ಹೋರಾಟದ ಮೂಲಕ ಬಂದಂತಹ ವ್ಯಕ್ತಿಗಳಿಗೆ, ಜನರ ಸಮಸ್ಯೆಗಳೇನಾದರೂ ಅರ್ಥವಾಗುತ್ತಿದೆ ಎಂದು ನನಗೆ ಅನಿಸುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ, ನಾವು ಈ ಸಂವಿಧಾನದ ಬಗ್ಗೆ ಏನು ಅರ್ಥಪೂರ್ಣವಾದ ಮಾತಗಳನ್ನಾಡಿದ್ದೇವೆ. ಈ ಅರ್ಥಪೂರ್ಣವಾದಂತಹ ಮಾತುಗಳ ಜೊತೆಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ಮುಂದಿನ ದಿನಗಳಲ್ಲಿ ಆರೋಗ್ಯಕರವಾದಂತಹ ಚರ್ಚೆಗಳನ್ನು ಮಾಡೋಣ. ನಮ್ಮಲ್ಲೇನಾದರೂ ಲೋಪಗಳಿದ್ದರೆ, ನಾವು ಅದನ್ನು ಸರಿಪಡಿಸಿಕೊಳ್ಳೋಣ. ಡಾ|| ಬಿ.ಆರ್. ಅಂಬೇಡ್ಕರ್‌ರವರು ನೀಡಿರುವಂತಹ ಈ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಈ ರಾಷ್ಟ್ರಕ್ಕೆ ಗೌರವ ತರುವಂತಹ ಕೆಲಸಗಳು ನಮ್ಮೆಲ್ಲರಿಂದಲೂ ಆಗಲಿ ಎನ್ನುವಂತಹ ಆಸೆ-ಆಶಯಗಳನ್ನು ಸ್ಮರಣ ಮಾಡಿಕೊಳ್ಳುತ್ತಾ, ಪ್ರಜಾಪ್ರಭುತ್ವ ಎಷ್ಟೇ ಕೆಟ್ಟು ಹೋದರೂ ಕೂಡ ಅತ್ಯುತ್ತಮವಾಗಿರುವಂತಹ ಸರ್ವಾಧಿಕಾರಿಗಳಿಗಿಂತ ಪ್ರಜಾಪ್ರಭುತ್ವ ಶ್ರೇಷ್ಠ. ಯಾರಾದರೊಬ್ಬರಿಗೆ 'ಇಲ್ಲ, ಕದ್ದವನಿಗೆ ಕೈ ಕತ್ತರಿಸಬೇಕು, ನಿಂತ ಕ್ಷಣದಲ್ಲಿ ಶಿಕ್ಷೆ ಕೊಡಬೇಕು' ಎನ್ನುವಂತಹ ಯೋಚನೆ ಇದೆಯೆಲ್ಲಾ, ನಿಮಗೆ ನಿರಂಕುಶ ಆಡಳಿತದ ವ್ಯವಸ್ಥೆಗಳು ಬಹಳ ಒಳ್ಳೆಯದಿದೆ ಎನ್ನುವಂತಹ ಭಾವನೆಗಳು ಬಂದರೂ ಕೂಡ ಅದರ ಎದುರುಗಡೆ ಕೆಟ್ಟು ಹೋಗಿರುವಂತಹ ಪ್ರಜಾಪ್ರಭುತ್ವವೇ ಮನುಕುಲಕ್ಕೆ ಹೆಚ್ಚು ಶ್ರೇಷ್ಠ ಎಂಬುದು ಸಂವಿಧಾನದ ಆಶಯಗಳಲ್ಲೊಂದು ಎಂದು ನಾನು ಅಂದುಕೊಂಡಿದ್ದೇನೆ. ಹಾಗಾಗಿ ಕೆಲವು ವಿಚಾರಗಳನ್ನು ಹೇಳಬೇಕೆಂದು ನನಗೆ ಅನಿಸುತ್ತದೆ. ಆದರೆ ವಿವಾದಗಳು ಬೇಡ. ಅದು ಚೆನ್ನಾಗಿರುವುದಿಲ್ಲ ಎಂಬ ಕಾರಣಕ್ಕೆ....

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾನಾಯಕರೇ, ಹೇಳಿ ಕೇಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಭೋಜೇಗೌಡರೆ,ನನ್ನ ಅನುಭವದ ಪ್ರಕಾರ ಹೇಳಿ ಎನ್ನುವುದು ನೀವೇ, ಕೊನೆಗೆ ಗಲಾಟೆ ಮಾಡಲು ಬರುವುದೂ ನೀವೇ. ಮಾನ್ಯ ಸಭಾಪತಿಯವರೇ, ಭೋಜೇಗೌಡರು ಹೇಳಿ ಎನ್ನುವುದೇ ಗಲಾಟೆ ಮಾಡುವುದಕ್ಕೆ.

ಮಾನ್ಯ ಸಭಾಪತಿಯವರೇ. ಇವೆಲ್ಲಾ ಆಶಯಗಳ ಜೊತೆಯಲ್ಲಿ ಯಾವ ರೀತಿ ಮಾನ್ಯ ಮಾಧುಸ್ವಾಮಿಯವರು ಅತ್ಯಂತ ಪರಿಣಾಮಕಾರಿಯಾಗಿ ಸಂವಿಧಾನದ ವಿಚಾರಗಳನ್ನು ಮತ್ತು ಆಶಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಚರ್ಚೆ ಮಾಡಿ, ಅದನ್ನು ಮಂಡನೆ ಮಾಡುವುದಕ್ಕೋಸ್ಕರ ಪ್ರಸ್ತಾವಿಕವಾದ ಮಾತುಗಳನ್ನಾಡಿದರು. ತಮಗೂ ಮತ್ತು ಕೆಳಮನೆಯ ಸಭಾಧ್ಯಕ್ಷರಿಗೆ ನಾನು ಅತ್ಯಂತ ಭಾವುಕನಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಳಮನೆಯ ಸಭಾಧ್ಯಕ್ಷರು ಮತ್ತು ಮೇಲ್ಮನೆ ಸಭಾಪತಿಯವರಾದ ತಾವು ಈ ಸಂವಿಧಾನ ವಿಚಾರವನ್ನು ಕೇಳಿ ತಿಳಿದುಕೊಂಡು, ಇಷ್ಟೊಂದು ಪ್ರಮಾಣದಲ್ಲಿ ಚರ್ಚೆ ಮಾಡುವುದಕ್ಕೆ ನನ್ನಂತಹ ಸಾಮಾನ್ಯನೊಬ್ಬನಿಗೆ ಅವಕಾಶ ಮಾಡಿಕೊಟ್ಟಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಾನು ಮೇಲ್ಮನೆಯ ಸಭಾನಾಯಕನಾದಾಗ, ಒಂದು ಪತ್ರಿಕೆಯಲ್ಲಿ ‘ಕಿರಾಣಿ ಅಂಗಡಿಯಿಂದ ಮೇಲ್ಮನೆಯ ಸಭಾನಾಯಕನವರೆಗೆ ‘ಕೋಟ’ ಎಂಬ ಹುಡುಗ’ ಎಂಬ ಒಂದು ಲೇಖನ ಬಂದಿತ್ತು. ನಾನು ಐದನೇ ತರಗತಿ ಓದುತ್ತಿರುವಾಗ, ಶಾಲೆ ಮುಗಿಸಿಕೊಂಡು ಬಂದ ನಂತರ ಕಿರಾಣಿ ಅಂಗಡಿಗೆ ಬಿಲ್ ಬರೆಯುವುದಕ್ಕೆ ಹೋಗುತ್ತಿದ್ದೆ. ಆಗ ನನಗೆ ಮೂವತ್ತು ರೂಪಾಯಿ ಸಂಬಳ ಕೊಡುತ್ತಿದ್ದರು. ಆಗ ಅಲ್ಲಿ ಯಾರೋ ಹಿರಿಯರು ನನ್ನನ್ನು ನೋಡಿದ್ದಾರೆ. ಅವರು ಯಾರೋ ‘ಕಿರಾಣಿ ಅಂಗಡಿಯಿಂದ ಮೇಲ್ಮನೆಯ ಸಭಾನಾಯಕನವರೆಗೆ’ ಎಂದು ಹೇಳಿ ಪತ್ರಿಕೆಯಲ್ಲಿ ನನ್ನ ಬಗ್ಗೆ ಬರೆಯುತ್ತಾರೆ. ಡಾ|| ಬಿ.ಆರ್. ಅಂಬೇಡ್ಕರ್‌ರವರು ಕೊಟ್ಟಿರುವಂತಹ ಸಂವಿಧಾನದ ಆಶಯಗಳಲ್ಲಿ ನಮ್ಮಂತಹ ಸಾಮಾನ್ಯ ಮನುಷ್ಯರು ಕೂಡ ಈ ಅದ್ಭುತವಾದಂತಹ ಅವಕಾಶಗಳನ್ನು ಪಡೆದುಕೊಂಡು, ಈ ಆಡಳಿತ ಯಂತ್ರದಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವಾಯಿತು ಎನ್ನುವುದನ್ನು ನೆನಪು ಮಾಡಿಕೊಳ್ಳುತ್ತೇನೆ. ಈ ಚರ್ಚೆಯಲ್ಲಿ ಸುದೀರ್ಘವಾಗಿ ಪಾಲ್ಗೊಂಡಂತಹ ನನ್ನ ಸನ್ಮಿತ್ರರಾದ ಶಾಸಕರಿಗೆ ಮತ್ತು ಮಧ್ಯೆ ಪ್ರವೇಶ ಮಾಡಿದಂತಹ ಮಾನ್ಯ ಸಚಿವರಿಗೆ ಹಾಗೂ ಪ್ರಾರಂಭ ಮಾಡಿದಂತಹ ಮಾನ್ಯ ಸಾಧುಸ್ವಾಮಿಯವರಿಗೆ ಸುಮಾರು ಎರಡೂವರೆ ಗಂಟೆಗಳ ಕಾಲ ವಿಮರ್ಶೆ ಮಾಡಿದಂತಹ ಪ್ರಜಾಪ್ರಭುತ್ವದಲ್ಲಿ,

**(579) 19.03.2020 1.10 ಟಿಸಿಹೆಚ್–ವಿಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):–**

ಪ್ರಜಾಪ್ರಭುತ್ವ ಯಾವ ರೀತಿ ಇರಬೇಕೆಂಬ ಚರ್ಚೆಗಳು ಬಂದಾಗ, ಶಿವರಾಂ ಕಾರಂತರವರು “ಸುತ್ತಲೂ ಲತ್ತೆ ಹೊಡೆಯುವ ಕತ್ತೆಯಂತೆ ಇರಬೇಕು”ಎಂದು ಹೇಳಿದ್ದಾರೆ. ಅದು ಸುತ್ತಲೂ ಲತ್ತೆ ಹೊಡೆಯುವಂತಿರಬೇಕು. ಟೀಕೆ ಮಾಡಬೇಕು, ಟಿಪ್ಪಣಿ ಮಾಡಬೇಕು, ವೈವಿಧ್ಯತೆ ಮಾಡಬೇಕು, ವ್ಯಂಗ್ಯ ಮಾಡಬೇಕು, ಮೊನಚು ಮಾಡಬೇಕು ಹಾಗೂ ಹಾಸ್ಯಗಳನ್ನು ಮಾಡಬೇಕು. ಇವೆಲ್ಲವುಗಳ ನಡುವೆ ಕೂಡ ಎಲ್ಲರೂ ಒಪ್ಪುವಂತಹ ಸರ್ವ ಸಮ್ಮತವಾದಂತಹ ನಿರ್ಣಯಕ್ಕೆ ಪ್ರಜಾಪ್ರಭುತ್ವ ಬರಬೇಕು. ಎನ್ನುವಂತಹ ಚರ್ಚೆಗಳನ್ನು ಮಾಡುವ ಸಂದರ್ಭವಾಗಿದ್ದು, ತಾವು ಅತ್ಯಂತ ಅರ್ಥಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಅವಕಾಶಗಳನ್ನು ಮಾಡಿಕೊಟ್ಟಿದ್ದೀರಿ. ಅದಕ್ಕೆ ಸರ್ಕಾರದ ಪರವಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಧನ್ಯವಾದಗಳು.

**ಸಭಾಪತಿಯವರು:–** ಈ ಮೇಲ್ಮನೆಯಲ್ಲಿ ನಡೆದ **“ಭಾರತದ ಸಂವಿಧಾನ”** ಕುರಿತಾದ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡ ಈ ಸದನದ ಎಲ್ಲಾ ಗೌರವಾನ್ವಿತ ಶಾಸಕರು, ಸಚಿವ ಸಂಪುಟದ ಸದಸ್ಯರು,

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಉಪ ಸಭಾಪತಿಯವರು, ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಸರ್ಕಾರದ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರುಗಳು ಸೇರಿದಂತೆ ಎಲ್ಲರಿಗೂ ಧನ್ಯವಾದಗಳು.

ಭಾರತದ ಸಂವಿಧಾನವನ್ನು ನಾವುಗಳು ಸಮರ್ಪಿಸಿಕೊಂಡು 70 ವರ್ಷಗಳು ಸಂದಿರುವ ಹಿನ್ನೆಲೆಯಲ್ಲಿ ಆಚರಿಸಲಾಗುತ್ತಿರುವ **"ಸಂವಿಧಾನ ದಿವಸದ"** ಆಚರಣೆಯ ಪ್ರಯುಕ್ತ ವಿಧಾನ ಮಂಡಲದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಹಮ್ಮಿಕೊಂಡಿದ್ದ ಸಂವಿಧಾನ ಕುರಿತಾದ ವಿಶೇಷ ಚರ್ಚೆಯನ್ನು ಅವಿಸ್ಮರಣೀಯಗೊಳಿಸಿ ಯಶಸ್ವಿಯಾಗಿ ಪೂರ್ಣಗೊಳ್ಳಲು ಸಹಕರಿಸಿದ ತಮ್ಮೆಲ್ಲರಿಗೂ ಧನ್ಯವಾದಗಳು.

ಭಾರತವು ಸೇರಿದಂತೆ ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯ ಪಡೆದ ಸುಮಾರು 63 ದೇಶಗಳ ಪೈಕಿ, ಮೂಲ ಸಂವಿಧಾನದೊಂದಿಗೆ 70 ವರ್ಷಗಳನ್ನು ಪೂರೈಸಿರುವ ಏಕೈಕ ದೇಶವೆಂದರೆ, ಅದು **ಭಾರತ**. ಇದರ ಸಂಪೂರ್ಣ ಶ್ರೇಯಸ್ಸು ಡಾ||ಬಿ.ಆರ್.ಅಂಬೇಡ್ಕರ್‌ರವರು ರಚಿಸಿರುವ ಸಂವೇದನಾಶೀಲ ಮತ್ತು ಜೀವಂತ ದಾಖಲೆಯಾದ ನಮ್ಮ ಸಂವಿಧಾನಕ್ಕೆ ಸಲ್ಲುತ್ತದೆ.

ಈ ಮೇಲ್ಮನೆಯು ಇಡೀ ದೇಶದ ಸಂಸದೀಯ ವ್ಯವಸ್ಥೆಗಳಲ್ಲಿಯೇ ಬಹಳ ಉತ್ತಮ ಹೆಸರನ್ನು ಹೊಂದಿದ್ದು, ಅದಕ್ಕೆ ಮತ್ತಷ್ಟು ಮೆರಗು ನೀಡುವ ರೀತಿಯಲ್ಲಿ ತಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಿರುವುದು ಶ್ಲಾಘನೀಯ.

ಈ ವಿಶೇಷ ಚರ್ಚೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸುಮಾರು 36 ಸದಸ್ಯರು ಪಾಲ್ಗೊಂಡು, 8 ದಿನಗಳಿಂದ 25.33 ಗಂಟೆಗಳ ಕಾಲ ಭಾಗವಹಿಸಿ ಪಕ್ಷಾತೀತವಾಗಿ ತಮ್ಮ ವಿಚಾರಧಾರೆಗಳನ್ನು ಮಂಡಿಸಿರುವುದು ತುಂಬಾ ಸಂತೋಷವುಂಟು ಮಾಡಿದೆ. ಎಲ್ಲರೂ ಹಲವಾರು ಮಹತ್ವಪೂರ್ಣ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಿದ್ದು, ಈಗಿನ ವಿಶೇಷ ಚರ್ಚೆಯಿಂದ ಪ್ರೇರೇಪಿತಗೊಂಡಿರುವ ನಾವುಗಳು ಮುಂದಿನ ದಿನಗಳಲ್ಲಿ ಸಂವಿಧಾನದ ಚರ್ಚೆ ರೀತಿಯಲ್ಲಿಯೇ ಪ್ರತೀ ವರ್ಷದ ಅಧಿವೇಶನದಲ್ಲಿ ಕನಿಷ್ಠ ಒಂದು ದಿನವಾದರು **ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಬಸವಣ್ಣನವರು ಸೇರಿದಂತೆ ಇತರೆ ಸ್ಫೂರ್ತಿದಾಯಕ ಮಹನೀಯರ** ವಿಚಾರಧಾರೆಗಳ ಕುರಿತಾದ ವಿಶೇಷ ಚರ್ಚೆಗೆ ಸಮಯ ನಿಗಧಿಪಡಿಸುವುದು ಸೂಕ್ತವೆಂದು ಭಾವಿಸುತ್ತೇನೆ.

ಸಭಾಪತಿ ಹುದ್ದೆ ಅಲಂಕರಿಸುವ ಪೂರ್ವದಲ್ಲಿ ಮಾಡಿದ್ದ ಒಂದು ಸಣ್ಣ ಪ್ರಯೋಗಾತ್ಮಕ ಪ್ರಯತ್ನವನ್ನು ಸದನದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಏನೆಂದರೆ, ಈ ವರ್ಷ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಗುತ್ತಿರುವ ಪ್ರಯುಕ್ತ, ಮಹಾತ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗಾಂಧಿಯವರ ಜೀವನ ಚರಿತ್ರೆ ಕುರಿತಾದ **"ನನ್ನ ಸತ್ಯಾನ್ವೇಷಣೆ"** ಪುಸ್ತಕಗಳ ತಲಾ 50 ಪ್ರತಿಗಳನ್ನು ಉಡುಪಿ ಜಿಲ್ಲೆಯ ನನ್ನ ಭಾಗದ ಕೆಲವು ಪ್ರೌಢಶಾಲೆಗಳಿಗೆ ನೀಡುವ ಮೂಲಕ ಸೂಕ್ತ ಸಮಯಾವಕಾಶವನ್ನು ನೀಡಿ, ಅಲ್ಲಿನ ಶಿಕ್ಷಕರ ಮೂಲಕ ಪ್ರಶ್ನೆ ಪತ್ರಿಕೆಯೊಂದನ್ನು ಸಿದ್ದಪಡಿಸಿ, ಪ್ರೌಢಶಾಲಾ ಮಕ್ಕಳಿಗೆ ಪರೀಕ್ಷೆ ಏರ್ಪಡಿಸಿ, ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವ ಕೆಲಸ ಮಾಡುವುದರೊಂದಿಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಗಾಂಧೀಜಿಯವ್ವರ ವಿಚಾರಧಾರೆಗಳನ್ನು ಅರ್ಥ ಮಾಡಿಸಲು ಪ್ರಯತ್ನ ಮಾಡಿರುತ್ತೇನೆ.

ಜನಪ್ರತಿನಿಧಿಗಳಾದ ನಾವುಗಳು, **ಸಂವಿಧಾನದ** ಕುರಿತು ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಇದೇ ಮಾದರಿಯನ್ನು ಅಳವಡಿಸಿಕೊಂಡಲ್ಲಿ ಶಿಕ್ಷಕರು ಸೇರಿದಂತೆ, ಮುಂದಿನ ಯುವ ಪೀಳಿಗೆಗೆ ಸರಳ ರೀತಿಯಲ್ಲಿ ಸಂವಿಧಾನವನ್ನು ಮತ್ತು ಸಂವಿಧಾನ ರಚನೆಯಲ್ಲಿ ತೊಡಗಿದ್ದ **ಡಾ॥ಬಿ.ಆರ್.ಅಂಬೇಡ್ಕರ್**ರವರು **ಸೇರಿದಂತೆ ಇತರೆ ಎಲ್ಲಾ ಮಹನೀಯರ** ವಿಚಾರಧಾರೆಗಳನ್ನು ಅರ್ಥ ಮಾಡಿಕೊಳ್ಳಬಹುದು ಎಂಬುದು ನನ್ನ ನಂಬಿಕೆ.

ಭಾರತ ಸಂವಿಧಾನದ ಮೂಲ ಆಶಯ ಮತ್ತು ಮೌಲ್ಯಗಳನ್ನು ರಾಜ್ಯದ ಜನರಿಗೆ ಈ ಸದನದ ಮೂಲಕ ತಿಳಿಸಿರುವುದು ಎಷ್ಟು ಮುಖ್ಯವೋ, ಅದರ ಆಶಯ ಮತ್ತು ಮೌಲ್ಯಗಳನ್ನು ನಮ್ಮ ರಾಜಕೀಯ/ಸಾರ್ವಜನಿಕ ಜೀವನದಲ್ಲಿ ಸಹ ಅಳವಡಿಸಿಕೊಳ್ಳುವುದು ಅಷ್ಟೇ ಮುಖ್ಯ. ಆಗ ಮಾತ್ರ ಈ ಚರ್ಚೆ ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

ನಮ್ಮ ದೇಶದ ಮೇಲೆ ನಮಗೆ ಎಷ್ಟು ಹೆಮ್ಮೆ ಇದೆಯೋ, ಅಷ್ಟೇ ಗೌರವ ನಮ್ಮೆಲ್ಲರಿಗೂ ನಮ್ಮ ಸಂವಿಧಾನದ ಮೇಲೆ ಇರಬೇಕು. ಆಗ ಮಾತ್ರ ಬಲಿಷ್ಠ ಭಾರತ ನಿರ್ಮಾಣದ ಕನಸ್ಸು ಸಾಕಾರಗೊಳ್ಳುತ್ತದೆ. ಜೊತೆಗೆ ತ್ಯಾಗ ಬಲಿದಾನಗಳಿಂದ ಸ್ವಾತಂತ್ರ್ಯ ದೊರಕಿಸಿಕೊಟ್ಟ ಮಹನೀಯರು, ಪ್ರಜಾತಂತ್ರ ವ್ಯವಸ್ಥೆಗೆ ಅಡಿಪಾಯವಾಗಿ ಸಂವಿಧಾನವನ್ನು ರಚಿಸಿದ ಮಹನೀಯರಿಗೆ ಗೌರವ ನೀಡಿದಂತಾಗುತ್ತದೆ.

ಈ ನಿಟ್ಟಿನಲ್ಲಿ ನಾವೆಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡೋಣ ಮತ್ತು ಹೆಚ್ಚು ಸರಳ ರೀತಿಯಲ್ಲಿ ಮುಂದಿನ ಪೀಳಿಗೆಗೆ ಸಂವಿಧಾನದ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸೋಣ. ಇದರೊಂದಿಗೆ ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲು ಬಯಸುತ್ತೇನೆ. ಜೈ ಹಿಂದ್ ಜೈ ಕರ್ನಾಟಕ.

**(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ಚಪ್ಪಾಳೆ ತಟ್ಟುವ ಮೂಲಕ ಬೆಂಬಲ ವ್ಯಕ್ತಪಡಿಸಿದರು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಮೇಲ್ಮನೆಯ ಗೌರವಾನ್ವಿತ ಶಾಸಕರು ಈ ಸದನದಲ್ಲಿ ನಡೆದ ಸಂವಿಧಾನ ಕುರಿತಾದ ವಿಶೇಷ ಚರ್ಚೆಯ ಸಮಯದಲ್ಲಿ ವ್ಯಕ್ತಪಡಿಸಿದ ಅವರ ಭಾವನೆಗಳನ್ನು ಗಣನೆಗೆ ತೆಗೆದುಕೊಂಡು, ಈ ಸದನದ ಭಾವನೆಯಾಗಿ ಪರಿಗಣಿಸಿ, ನಿರ್ಣಯದ ಪ್ರಸ್ತಾಪನೆಯನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತಿದ್ದೇನೆ. ಅದೇನೆಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರುಗಳಾದ ನಾವು ಭಾರತದ ಸಂವಿಧಾನವನ್ನು ಅಂಗೀಕರಿಸಿದ 70ನೇ ವರ್ಷದ ಸ್ಮರಣೆಗಾಗಿ ಸಂವಿಧಾನದ ದಿನವನ್ನು ಆಚರಿಸುತ್ತಾ, ಸಂವಿಧಾನದ ಕುರಿತಾಗಿ ವಿಶೇಷ ಚರ್ಚೆಯನ್ನು ಹಮ್ಮಿಕೊಂಡು ಸಂವಿಧಾನ ರಚನೆಗೆ ಕಾರಣೀಭೂತರಾದ ಎಲ್ಲಾ ಮಹನೀಯರ ವಿಚಾರಧಾರೆಗಳನ್ನು ಕೃತಜ್ಞತಾ ಪೂರ್ವಕವಾಗಿ ನೆನಪಿಸಿಕೊಂಡು, ಅವರಿಗೆ ಈ ಸದನದ ಮೂಲಕ ಗೌರವವನ್ನು ಸಲ್ಲಿಸಬಯಸುತ್ತೇವೆ. ಸಂವಿಧಾನದ ಆದರ್ಶ ಮತ್ತು ತತ್ವಗಳ ಮೇಲಿನ ನಮ್ಮ ಬದ್ಧತೆಯನ್ನು ದೃಢೀಕರಿಸುತ್ತಾ, ಈ ಕೆಳಕಂಡಂತೆ ನಿರ್ಣಯಿಸುತ್ತಿದ್ದೇವೆ.

"ಸಂವಿಧಾನದ ಪಾವಿತ್ರ್ಯತೆ ಮತ್ತು ಸರ್ವೋಚ್ಚತೆಯನ್ನು ಎತ್ತಿಹಿಡಿಯುತ್ತೇವೆ ಮತ್ತು ಪಾಲಿಸುತ್ತೇವೆ. ಸಂವಿಧಾನಿಕ ಸಂಸ್ಥೆಗಳು ಅವುಗಳ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಗೌರವಿಸುತ್ತೇವೆ. ನಮ್ಮ ದೇಶದ ಸಾರ್ವಭೌಮತ್ವ, ಅಖಂಡತೆ, ವೈವಿಧ್ಯತೆಯಲ್ಲಿ ಏಕತೆ ಮತ್ತು ಸಮಗ್ರತೆಯನ್ನು ಹಾಗೂ ಅದರ ಪ್ರಜಾಪ್ರಭುತ್ವದ ಸಮಾಜವಾದಿ ಹಾಗೂ ಜಾತ್ಯಾತೀತ ಗುಣಗಳನ್ನು ರಕ್ಷಿಸುತ್ತೇವೆ. ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆಯನ್ನು ಪಾಲಿಸುತ್ತೇವೆ ಹಾಗೂ ನಮ್ಮನ್ನು ನಾವು ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕೆ ಸಮರ್ಪಿಸಿಕೊಳ್ಳುತ್ತೇವೆ ಮತ್ತು ಸಧೃಡ ಗಣರಾಜ್ಯ ನಿರ್ಮಾಣ ಕಾರ್ಯಕ್ಕೆ ಎಲ್ಲರೂ ಒಟ್ಟಾಗಿ ತೊಡಗಿಸಿಕೊಳ್ಳುತ್ತೇವೆ." ಎಂಬ ನಿರ್ಣಯವನ್ನು ಸದನದ ಪರವಾಗಿ ಮಂಡಿಸುತ್ತಿದ್ದೇನೆ.

**ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಾವು ಈಗ ಏನು ಸಂವಿಧಾನ ಕುರಿತು ಸಮಾರೋಪ ಭಾಷಣವನ್ನು ಓದಿದ್ದಿರಿ. ನಾವು ಈ ವರ್ಷಕ್ಕೆ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚಾರಣೆಯನ್ನು ಆಚರಿಸಲಾಗುತ್ತದೆ. ಆದರೆ ತಾವು ಓದುವಾಗ ಎರಡು ವರ್ಷಗಳ ಹಿಂದೆ 2018ರ ಅಕ್ಟೋಬರ್ ತಿಂಗಳಿನಲ್ಲಿ ಮಹಾತ್ಮ ಗಾಂಧೀಜಿಯವರ 125ನೇ ಜಯಂತಿ ಎಂದು ಓದಿದ್ದೀರಿ. ಅದು ಕರೆಕ್ಷನ್ ಆಗಬೇಕು ಅಷ್ಟೆ.

**ಸಭಾಪತಿಯವರು:-**ಶ್ರೀ ಎಂ.ನಾರಾಯಣ ಸ್ವಾಮಿಯವರೇ, ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್( ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಂಡಿಸಿರುವ ನಿರ್ಣಯದ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಮಂಡಿಸಿದ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಅನುಮೋದಿಸಿದ ಈ ನಿರ್ಣಯವನ್ನು ಸದನವು ಸರ್ವಾನುಮತದಿಂದ ಅಂಗೀಕರಿಸಿರುತ್ತದೆ ಎಂದು ಭಾವಿಸುತ್ತೇನೆ. ಈ ನಿರ್ಣಯವನ್ನು ಲೋಕಸಭೆ ಮತ್ತು ರಾಜ್ಯಸಭೆಗೆ ಕಳುಹಿಸಿಕೊಡಲಾಗುವುದು.

**(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ಚಪ್ಪಾಳೆ ತಟ್ಟುವ ಮೂಲಕ ಬೆಂಬಲ ವ್ಯಕ್ತಪಡಿಸಿದರು)**

**ನಿರ್ಣಯ ಅಂಗೀಕರಿಸಲ್ಪಟ್ಟಿತು ಹಾಗೂ ನಿರ್ಣಯಕ್ಕೆ ಒಪ್ಪಿಗೆ ದೊರೆಯಿತು.**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೋತ್ತರ ತೆಗೆದುಕೊಳ್ಳಬಹುದು.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ತೆಗೆದುಕೊಳ್ಳಬಹುದು, ಆದರೆ, ಮಾನ್ಯ ಮುಖ್ಯಮಂತ್ರಿಗಳು ಆಮೇಲೆ ಬರುತ್ತೇನೆಂದು ಹೇಳಿದ್ದಾರೆ. ಆದಕಾರಣ ಪ್ರಶ್ನೋತ್ತರ ಅವಧಿಯನ್ನು ಅರ್ಧದಲ್ಲಿಯೇ ನಿಲ್ಲಿಸುವುದಕ್ಕೆ ಆಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಉತ್ತರವನ್ನು ಕೊಟ್ಟು, ಮುಗಿಸಿಕೊಡುತ್ತೇವೆ.

**ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಒಂದು ನೊಟೀಸ್‌ಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ.

**3. ರಾಜ್ಯದಲ್ಲಿ ಕೊರೊನಾ ವೈರಸ್ ಹರಡುತ್ತಿರುವುದರಿಂದ ಸರ್ಕಾರ ಶಾಲಾ–ಕಾಲೇಜುಗಳಿಗೆ ರಜೆಯನ್ನು ನೀಡಲಾಗಿದ್ದು ಅದರಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ರಜೆಯ ಸೌಲಭ್ಯವನ್ನು ನೀಡುವ ಬಗ್ಗೆ**

– – –

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ನಿಯಮ 59 ರಡಿಯಲ್ಲಿ ಮಾತನಾಡಲು ನೊಟೀಸ್ ಕೊಟ್ಟಿದ್ದೇನೆ. ತಾವು ನಿಯಮ 68 ರಡಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಕಾಶ ಕೊಡಲಾಗುವುದೆಂದು ಹೇಳಿದ್ದೀರಿ. ಅದಕ್ಕಿಂತ ಮೊದಲು ನಿನ್ನೆ ದಿವಸ ನಾನು ಗೋವಾಗೆ ಹೋಗುವುದರ ಬಗ್ಗೆ ಹೇಳಿದ್ದೇನೆ. ಆದ್ದರಿಂದ ದಯಮಾಡಿ ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ದಯಮಾಡಿ ಮಧ್ಯಾಹ್ನ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ದಯಮಾಡಿ ಯಾರೂ ಕೂಡ ತಪ್ಪು ತಿಳಿದುಕೊಳ್ಳಬಾರದು.

ಎರಡನೆಯದಾಗಿ, ಸರ್ಕಾರ ಶಾಲಾ-ಕಾಲೇಜುಗಳಿಗೆ ರಜೆ ನೀಡಿದೆ. ಆದರೆ, ಶಿಕ್ಷಕರಿಗೆ ಮಾತ್ರ ರಜೆ ಕೊಟ್ಟಿಲ್ಲ. ಒಂದೊಂದು ಶಾಲೆಯಲ್ಲಿ ಸುಮಾರು 60 70, 80 ಮತ್ತು 90 ಜನ ಸಿಬ್ಬಂದಿ ಇದ್ದಾರೆ. ಅವರೆಲ್ಲರೂ ಒಂದು ಕಡೆ ಕುಳಿತುಕೊಂಡು ವಿನಾಕಾರಣ ಚರ್ಚೆ ಮಾಡುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ, ಪ್ರಸ್ತುತ ಶಾಲಾ-ಕಾಲೇಜುಗಳಿಗೆ ರಜೆ ಕೊಟ್ಟಿದ್ದೀರಿ. ಕಚೇರಿ ಎಂದರೆ ಕೆಲಸ ಮಾಡಬಹುದು, ಆದರೆ ಶಾಲೆಯಲ್ಲಿ ಆ ರೀತಿ ಆಗುವುದಿಲ್ಲ. ಅವರು ಶಾಲೆಯಲ್ಲಿ ವಿನಾಕಾರಣ ಕುಳಿತುಕೊಂಡು ಚರ್ಚೆಗಳನ್ನು ಮಾಡುತ್ತಾರೆ. ಅದಕ್ಕೆ ದಯಮಾಡಿ ಮಕ್ಕಳಿಗೆ ರಜೆಯನ್ನು ಕೊಟ್ಟಾಗ, ಶಿಕ್ಷಕರಿಗೂ ರಜೆಯನ್ನು ಕೊಡುವುದು ಬಹಳ ಒಳ್ಳೆಯದು. ನಾನು ಎರಡು ಬಾರಿ ಎಲ್ಲರಿಗೂ ಹೇಳಿದ್ದೇನೆ. ಬೇರೆ ಬೇರೆ ಚುನಾವಣೆ ಇದೆ ಎನ್ನುವುದಲ್ಲ. ಸಾರ್ವಜನಿಕರ ಬದುಕಿನಲ್ಲಿ ನಡೆದಂತಹ ವಿಚಾರವನ್ನು ನನಗೆ ಅನೇಕ ಮಂದಿ ಹೇಳಿರುವುದನ್ನು ಹೇಳುತ್ತಿದ್ದೇನೆ. ನಾನು ಇಲ್ಲಿ ಚುನಾವಣೆ ಬಗ್ಗೆ ಮತ್ತು ಓಟಿನ ಬಗ್ಗೆ ಮಾತನಾಡುವುದಿಲ್ಲ. ಹುಬ್ಬಳ್ಳಿಯಲ್ಲಿ 92 ಜನ ಸಿಬ್ಬಂದಿ ಇರತಕ್ಕಂಥ ರೋಟರಿ ಶಾಲೆ ಹಾಗೂ Lions English Medium School ನಲ್ಲಿ 60 ಜನ ಸಿಬ್ಬಂದಿ ಇದ್ದಾರೆ. ಅವರೆಲ್ಲರೂ ಒಂದು ಕಡೆ ಕುಳಿತುಕೊಂಡಾಗ ಏನಾದರೂ ಸೀನಿದರೆ ಮತ್ತು ಕೆಮ್ಮಿದರೆ ಸಮಸ್ಯೆ ಬರಬಹುದು.

**(580)19.3.2020/1.20/ಎಂ-ವಿ.ಕೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-**

ಅವರೆಲ್ಲಾ ಒಂದು ಕಡೆ ಕುಳಿತುಕೊಂಡಿರುತ್ತಾರೆ, ಒಬ್ಬರಿಗೊಬ್ಬರು ಸೀನಿದರೆ, ಕೆಮ್ಮಿದರೆ ಸಂಶಯ ಬರುತ್ತದೆ. ತರಗತಿ ನಡೆಯುವಾಗ ಅವರು ತರಗತಿಯಲ್ಲಿರುತ್ತಾರೆ. ಆದರೆ ಈಗ ಅದು ಬಹಳ ದೊಡ್ಡದಾದ ಪರಿಣಾಮವಾಗಿದೆ. ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ಅವರಿಗೆ ರಜೆಯನ್ನು ಘೋಷಣೆ ಮಾಡಿ ಅಥವಾ ತರಗತಿ ನಡೆಸುವ ಹಾಗಿದ್ದರೆ ನಡೆಸಿ, ಅವರು ತರಗತಿಯನ್ನು ನಡೆಸುತ್ತಾರೆ ಇಲ್ಲದಿದ್ದರೆ ಸುಮ್ಮನೆ ಕುಳಿತಿರುತ್ತಾರೆ ಆಗ ಸಮಸ್ಯೆ ಬರುತ್ತದೆ. ಎಲ್ಲಾ ಕಡೆಯಿಂದ ಬರುವ ಸುದ್ದಿಯನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಇದಕ್ಕೊಂದು ತೀರ್ಮಾನವನ್ನು ತಿಳಿಸಿ. ಮೊನ್ನೆ ದಿವಸ ಶಿಕ್ಷಣ ಸಚಿವರ ಜೊತೆ ಚರ್ಚಿಸಿ ಸದನದಲ್ಲಿ ಹೇಳುತ್ತೇನೆಂದು ಹೇಳಿದ್ದಿರಿ ಅದನ್ನು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತಾವು ನೋಟ್ ಮಾಡಿಕೊಳ್ಳಬೇಕು. ಸದನದಲ್ಲಿ ನೀವು ಏನೇನು ಹೇಳುತ್ತೀರಿ ಅದನ್ನು ಸಭಾನಾಯಕರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಮಾನ್ಯ ಸಭಾನಾಯಕರು ಇನ್ನೆರಡು ದಿನಗಳಲ್ಲಿ ರಜಾ ವಿಚಾರವಾಗಿ ಹೇಳುತ್ತೇವೆ ಎಂದು ತಿಳಿಸಿದ್ದರು. ತಮ್ಮ ಮೂಲಕ ಸಭಾನಾಯಕರ ಗಮನಕ್ಕೆ ತರುವುದೇನೆಂದರೆ;

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಯಾವ ನಿಯಮದಡಿ ತಾವು ಮಾತನಾಡುತ್ತಿದ್ದೀರಿ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸಭಾನಾಯಕರಿಗೆ ತಿಳಿಸಿದ್ದೆವು, ಶಾಲಾ ಕಾಲೇಜುಗಳಿಗೆ;

**ಸಭಾಪತಿಯವರು:-** ನಿಯಮ 68ರಡಿ ಪ್ರಸ್ತಾಪ ಮಾಡುತ್ತಿದ್ದೀರಾ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಈಗ ಸೆಮಿಸ್ಟರ್ ಸ್ಕೀಂನಲ್ಲಿ ಶಾಲಾ ಕಾಲೇಜುಗಳಿಗೆ ರಜಾ ಕೊಟ್ಟಿದ್ದಾರೆ. ಈಗ ಶಿಕ್ಷಕರು ವಿಶೇಷ ತರಗತಿಗಳನ್ನು ತೆಗೆದುಕೊಂಡು ಪಾಠ ಪ್ರವಚನಗಳನ್ನು ಮಾಡಬೇಕಾಗಿ ಬರುತ್ತದೆ, syllabus cover ಮಾಡಬೇಕಾಗುತ್ತದೆ. ಆದ್ದರಿಂದ ವಿಶೇಷ ತರಗತಿಗಳನ್ನು ಕೂಡ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ಮೈಸೂರಿನ 'ಮಹಾರಾಣಿ' ಕಾಲೇಜಿನಲ್ಲಿ 9,000 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಅಷ್ಟು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವಂತಹ ಅಧ್ಯಾಪಕರುಗಳು ಎಷ್ಟು ಸಂಖ್ಯೆಯಲ್ಲಿ ಇರಬಹುದು? ಬೆಳಗಾದರೆ ಬಂದು ಕೂರುತ್ತಾರೆ. ಅವರಿಗೆಲ್ಲರಿಗೂ ರಜಾ ಅವಧಿ ಮುಗಿದ ಮೇಲೆ ವಿಶೇಷ ತರಗತಿಗಳನ್ನು ತೆಗೆದುಕೊಂಡು ಪಾಠ ಮಾಡಬೇಕಾಗುತ್ತದೆ. ಆ ದೆಸೆಯಿಂದ ದಯಮಾಡಿ ಎಲ್ಲಾ ಶಿಕ್ಷಕರಿಗೂ ರಜೆಯನ್ನು ಘೋಷಣೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಮೊದಲನೇ ಬಾರಿಗೆ 'ಕೊರೋನಾ'ದಿಂದ ಡೆತ್ ಆಗಿರುವುದು ಗುಲ್ಬರ್ಗಾದಲ್ಲಿ. ಒಂದು ಕಾಲೇಜಿನಲ್ಲಿ 42 ಶಿಕ್ಷಕರು ಮತ್ತು ಉಪನ್ಯಾಸಕರು ಕಾಲೇಜಿಗೆ ಬಂದು ಚಹಾ ಕುಡಿಯುವುದಕ್ಕೆ ಬಂದಿದ್ದಾರೆ. ಪೋಲೀಸರು ಬಂದು ಗುಲ್ಬರ್ಗಾದಲ್ಲಿ ಸೆಕ್ಷನ್ 144 ಅನ್ನು ಘೋಷಣೆ ಮಾಡಲಾಗಿದೆ ಈ ರೀತಿ ನಿಲ್ಲಬಾರದು ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಇದನ್ನು ಕೂಡ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 'ಕೊರೋನಾ' ಭಯದಿಂದ ರಾಜ್ಯದಲ್ಲಿ ಎಲ್ಲರಿಗೂ ರಜೆಯನ್ನು ಕೊಟ್ಟಿದ್ದಾರೆ. ರಾಜ್ಯದ ಯಾವುದೇ ಕಾರ್ಖಾನೆಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿಗೆ ರಜೆಯನ್ನು ಕೊಡಲಿಲ್ಲ. ಐ.ಟಿ., ಬಿ.ಟಿ ಮತ್ತು ವಿದ್ಯಾವಂತರಿಗೆ ಮಾತ್ರ ಈ ಕಾಯಿಲೆ ಅಂಟಿಕೊಳ್ಳುತ್ತದೆ ಎಂದಲ್ಲ, ಬಡ ಕಾರ್ಮಿಕರು ಬೆಳಿಗ್ಗೆಯಿಂದ ಸಂಜೆಯವರೆಗೂ ಇರುತ್ತಾರೆ, ಪಾಳಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ, ನೂರಾರು ಸಂಖ್ಯೆಯಲ್ಲಿ ಒಂದೇ ಕಡೆ ಇರುವಂತಹ ಕಾರ್ಮಿಕರಿಗೆ ವೇತನ ಸಹಿತ ರಜೆಯನ್ನು ಸರ್ಕಾರ ಘೋಷಣೆ ಮಾಡಬೇಕು, ಅಕಸ್ಮಾತ್ 'ಕೊರೋನಾ' ಅಲ್ಲಿ attack ಆದರೆ ಬಹಳ ದೊಡ್ಡ ಪ್ರಮಾಣದಲ್ಲಿ ಬಡವರ ಕೇರಿಗಳಲ್ಲಿ ಹರಡುತ್ತದೆ. ಆದ್ದರಿಂದ ಸರ್ಕಾರವು ಎಲ್ಲಾ ಕಾರ್ಖಾನೆಗಳಿಗೂ ರಜೆಯನ್ನು ಘೋಷಣೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಮೊನ್ನೆ ಗೋವಾ ಕನ್ನಡಿಗರ ಬಗ್ಗೆ ಹೇಳಿದ್ದರು ಇವತ್ತು ಮುಖ್ಯಮಂತ್ರಿಯವರು ಬರುತ್ತಾರೆ, ಅವರ ಜೊತೆಯಲ್ಲಿ ಚರ್ಚೆ ಮಾಡಿ ಉತ್ತರ ಕೊಡಿಸುತ್ತೇವೆ. ಶಿಕ್ಷಕರ ಬಗ್ಗೆ ಮಾನ್ಯ ಮರಿತಿಬ್ಬೇಗೌಡರು ಮತ್ತು ಮಾನ್ಯ ಆಯನೂರು ಮಂಜುನಾಥ್‌ರವರು ಕಾರ್ಮಿಕರ ಬಗ್ಗೆ ಹೇಳಿದ್ದಾರೆ, ಸರ್ಕಾರ ಆಯಾ ಇಲಾಖೆಗಳ ಜೊತೆ ಚರ್ಚೆ ಮಾಡಿ ಉತ್ತರ ಕೊಡಿಸುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 2 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗುವುದು.

**(581) 19-03-2020/ 02-30/ ಕೆಹೆಚ್-ಬಿಎನ್‌ಎನ್**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 23 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 2 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ನಿಯಮ 68 . . .

**ಸಭಾಪತಿಯವರು:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಅವರದ್ದು ಆಗಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:**-ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರದ್ದು ಆದ ನಂತರ ನಿಯಮ 68 ಅನ್ನು ತೆಗೆದುಕೊಳ್ಳುತ್ತೀರಾ.

**ಸಭಾಪತಿಯವರು:-** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಮಾನ್ಯ ಮುಖ್ಯಮಂತ್ರಿಯವರದ್ದು ಆದ ನಂತರ ತೆಗೆದುಕೊಳ್ಳೋಣ.

**04. ಪ್ರಶ್ನೋತ್ತರಗಳು**

**ಅ)ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 1447**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ತಿಪ್ಪಣ್ಣ ಕಮಕನೂರ:–**ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಕಲ್ಯಾಣ ಕರ್ನಾಟಕದ ಭಾಗ್ಯದ ಬಾಗಿಲು ತೆರೆಯುವಂತಹ ರೀತಿಯಲ್ಲಿ ಬಹಳ ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಸುಮಾರು 400 ದಾಲ್‌ಮಿಲ್‌ಗಳು ಇವೆ. ಅದರಲ್ಲಿ ಸುಮಾರು 250 ದಾಲ್ ಮಿಲ್‌ಗಳು ಮುಚ್ಚಿವೆ. ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಸವಿವರವಾದಂತಹ ಉತ್ತರವನ್ನು ಒದಗಿಸಿದ್ದಾರೆ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವ ಲಿಖಿತ ಉತ್ತರದಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ದಾಲ್‌ಮಿಲ್‌ಗಳ ಸಂಖ್ಯೆ ಎಷ್ಟು; ದಾಲ್‌ಮಿಲ್‌ಗಳು ಎಷ್ಟು ಕಾರ್ಯನಿರ್ವಹಿಸುತ್ತಿವೆ; ಎಷ್ಟು ಮುಚ್ಚಿವೆ? ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಈ ರೀತಿ ದಾಲ್ ಮಿಲ್‌ಗಳು ಮುಚ್ಚಿ ಹೋಗುವುದಕ್ಕೆ ಒಂದು ನೀತಿ, ಎರಡನೆಯದು ಎ.ಪಿ.ಎಂ.ಸಿ. ಸೆಸ್ ಸಂಗ್ರಹಣೆ, ಮೂರನೆಯದು ಬ್ಯಾಂಕುಗಳ ಕ್ಯಾಷ್ ಕ್ರೆಡಿಟ್ (ಸಿ.ಸಿ.) ಸಾಲದ ಮೇಲೆ ವಿಧಿಸುತ್ತಿರುವ ಬಡ್ಡಿ ದರ ಈ ಮೂರು ಕಾರಣಗಳು ಎಂದು ಹೇಳಿದ್ದಾರೆ. ಇದು ವಾಸ್ತವಾಂಶ ಕೂಡ ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ಮುಂದುವರೆದು, ದಾಲ್‌ಮಿಲ್‌ಗಳನ್ನು ಪುನಃಶ್ಚೇತನಗೊಳಿಸುವ ಹಿನ್ನಲೆಯಲ್ಲಿ ಕಲಬುರಗಿಯ ಜಿಲ್ಲಾಧಿಕಾರಿಗಳು ಮಾಡಿರುವ 10 ಶಿಫಾರಸ್ಸುಗಳ ಬಗ್ಗೆಯೂ ಸಹ ಲಿಖಿತ ಉತ್ತರದಲ್ಲಿ ವಿವರಿಸಿದ್ದಾರೆ. ಈ ಶಿಫಾರಸ್ಸುಗಳಲ್ಲಿ 5 ವರ್ಷಗಳವರೆಗೆ ಎ.ಪಿ.ಎಂ.ಸಿ. ಸೆಸ್ ಸಂಗ್ರಹಣೆಯಿಂದ ವಿನಾಯಿತಿ ನೀಡುವುದು. ಮುಂದಿನ 3 ವರ್ಷಗಳ ಅವಧಿಗೆ ಉತ್ಪಾದಿಸಿದ ಪ್ರತಿ ಕ್ವಿಂಟಾಲ್‌ಗೆ 2000 ರೂಪಾಯಿಗಳಂತೆ ಪ್ರೋತ್ಸಾಹಧನ ನೀಡುವುದು.

**(582) 19/03/2020/2:40/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ತಿಪ್ಪಣ್ಣ ಕಮಕನೂರ(ಮುಂದು):–**

ಮುಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ಯೂನಿಟ್ ವಿದ್ಯುತ್ತಿಗೆ ಎರಡು ರೂಪಾಯಿಗಳ ವಿನಾಯಿತಿಯನ್ನು ನೀಡುವುದು. ಬ್ಯಾಂಕಿನಿಂದ ನೀಡುತ್ತಿರುವ ಸಾಲವನ್ನು ‘ಆದ್ಯತಾ ವಲಯ’ವೆಂದು ಪರಿಗಣಿಸಿ, ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ಪರಿಗಣಿಸುವುದು ಇತ್ಯಾದಿ ಅಂಶಗಳನ್ನು ಲಿಖಿತ ಉತ್ತರದಲ್ಲಿ ಹೇಳಲಾಗಿದೆ. ಇವುಗಳೆಲ್ಲವೂ ಅತ್ಯಂತ ಸೂಕ್ತವಾಗಿವೆ. ಇದರ ಜೊತೆಗೆ ಹತ್ತು ಪರ್ಯಾಯಗಳನ್ನು ಪರಿಶೀಲಿಸುವುದಾಗಿ ಸರ್ಕಾರವು ತಿಳಿಸಿದೆ. ಮೇಲ್ಕಂಡ ಎಲ್ಲಾ ಅಂಶಗಳನ್ನು ನಾನು ಒಟ್ಟಾರೆಯಾಗಿ ಒಪ್ಪುತ್ತೇನೆ. ಆದರೆ ಇವುಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಜಾರಿಗೆ ತರುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕ್ರಮಗಳಾಗಬೇಕು. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಜಾರಿಗೊಳಿಸಿದರೆ ಹೈದರಾಬಾದ್–ಕರ್ನಾಟಕ ಭಾಗದ ರೈತರು ಸದಾ ಇವರಿಗೆ ಚಿರಋಣಿಯಾಗಿರುತ್ತಾರೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ.

ದೇಶದ ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿರುವ ಭಾವಾಂತರ ಯೋಜನೆಯನ್ನು ನಮ್ಮ ರಾಜ್ಯದಲ್ಲಿಯೂ ಸಹ ಜಾರಿಗೊಳಿಸಬೇಕು. ಈ ಯೋಜನೆಯಲ್ಲಿ ಯಾವಾಗ ಪದಾರ್ಥಗಳ ಬೆಲೆ ಕಡಿಮೆಯಾಗುತ್ತದೆಯೋ ಆ ಸಂದರ್ಭದಲ್ಲಿ ಸರ್ಕಾರ ಮಧ್ಯಸ್ಥಿಕೆ ವಹಿಸಿ ಉತ್ಪಾದನಾ ಪ್ರಮಾಣವನ್ನು ಗಮನಿಸಿ, ...

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಭಾವಾಂತರ ಯೋಜನೆಯನ್ನು ಜಾರಿಗೆ ತರುವುದರಿಂದ ಎ.ಪಿ.ಎಂ.ಸಿ.ಯಲ್ಲಿ 50 ಸಾವಿರ ಜನರಿಗೆ ಉದ್ಯೋಗ ಸಿಗುತ್ತದೆ. ಭಾವಾಂತರ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೊಳಿಸಲು ಸಾಧ್ಯವೇ? ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪಣ್ಣ ಕಮಕನೂರ ರವರ ಪ್ರಶ್ನೆಗೆ ಸಮಗ್ರವಾದ ಉತ್ತರವನ್ನು ನೀಡಲಾಗಿದೆ. ಒಟ್ಟು 307 ದಾಲ್‌ಮಿಲ್‌ಗಳ ಪೈಕಿ ಪ್ರಸ್ತುತ 269 ಘಟಕಗಳು ಕಾರ್ಯನಿರ್ವಹಿಸುತ್ತಿವೆ ಮತ್ತು 38 ಘಟಕಗಳು ಮುಚ್ಚಿವೆ. ಇದಕ್ಕೆ ಇರುವ ಕಾರಣಗಳ ಮಾಹಿತಿಯನ್ನೆಲ್ಲಾ ನಾನು ನೀಡಿದ್ದೇನೆ. ಸರ್ಕಾರವು ಆ ದಾಲ್‌ಮಿಲ್‌ಗಳ ಪುನಶ್ಚೇತನಕ್ಕೆ ಸಂಬಂಧಪಟ್ಟಂತೆ 10 ಪರಿಹಾರ ರಿಯಾಯಿತಿಗಳ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ. ಈ ಮಾಹಿತಿಯನ್ನೂ ಸಹ ನೀಡಲಾಗಿದೆ. ಈ ವಿಚಾರದಲ್ಲಿ ಬಂದಿರುವ ಶಿಫಾರಸ್ಸುಗಳ ಬಗ್ಗೆ ತಕ್ಷಣವೇ ವಿಶೇಷ ಗಮನ ನೀಡಿ, ಮುಚ್ಚಿರುವ ಎಲ್ಲಾ ದಾಲ್‌ಮಿಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬೀದರ್ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸುಮಾರು 20 ಕ್ವಿಂಟಾಲ್ ತೊಗರಿ ಬೇಳೆಯನ್ನು ರೈತರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದಾಗಿ ಭರವಸೆ ನೀಡಿದ್ದಾರೆ. ಇದನ್ನು ಕೇಳಿ ನಮ್ಮ ಭಾಗದ ರೈತರು ಬಹಳ ಸಂತೋಷ ಪಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ತಕ್ಷಣವೇ ಎಲ್ಲಾ ಕಡೆಗಳಲ್ಲಿ ತೊಗರಿ ಬೇಳೆಯ ಬೆಲೆ ಹೆಚ್ಚಾಗಿತ್ತು. ಆದರೆ ಇನ್ನೂ ಖರೀದಿಯಾಗದೇ ಇರುವುದರಿಂದ ನಮ್ಮ ರೈತರು ಬೇಜಾರಾಗಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಪಾಟೀಲ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಕೆಲವು ಉಪ ಪ್ರಶ್ನೆಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಬಯಸುತ್ತೇನೆ. ದಾಲ್‌ಮಿಲ್‌ಗಳು ಮುಚ್ಚುವುದಕ್ಕೆ ಆಮದು ನೀತಿಯೇ ಮುಖ್ಯ ಕಾರಣವಾಗಿದೆ. ನಮ್ಮ ದೇಶದಲ್ಲಿ ಬಹಳಷ್ಟು ಪ್ರಮಾಣದಲ್ಲಿ ತೊಗರಿ ಬೆಳೆಯನ್ನು ಬೆಳೆಯುತ್ತಿದ್ದರೂ ಸಹ ಕೇಂದ್ರ ಸರ್ಕಾರವು ಆಮದು ನೀತಿಯನ್ನು ಜಾರಿಗೊಳಿಸಿದೆ. ಇವತ್ತಿನ ದಿವಸ ಒಂದು ಕ್ವಿಂಟಾಲ್ ತೊಗರಿ ಬೇಳೆಗೆ 12-15 ಸಾವಿರ ರೂಪಾಯಿಗಳು ಸಿಗಬೇಕು. ಆದರೆ ಪ್ರಸ್ತುತ ದರ 3,600/- ರೂಪಾಯಿಗಳಿಂದ 5,000/- ರೂಪಾಯಿಗಳವರೆಗೆ ಮಾತ್ರವೇ ಇದೆ. ಇತ್ತೀಚೆಗೆ ಖರೀದಿ ಕೇಂದ್ರ ಮಾಡಿದ ನಂತರ ಕ್ವಿಂಟಾಲ್ ಒಂದಕ್ಕೆ 6,100/- ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಈಗಾಗಲೇ ನೋಂದಣಿ ಕಾರ್ಯಗಳು ಪೂರ್ತಿಗೊಂಡಿವೆ. ಆದರೆ ಕ್ವಿಂಟಾಲ್ ಒಂದಕ್ಕೆ 4,200/- ರೂಪಾಯಿಗಳಿಂದ 4,900/- ರೂಪಾಯಿಗಳವರೆಗೆ ಬೆಲೆ ಇದೆ. ಇದಕ್ಕೆಲ್ಲಾ ಆಮದು ನೀತಿಯೇ ಮುಖ್ಯ ಕಾರಣವಾಗಿದೆ. ಕಳೆದ ವರ್ಷ ಖರೀದಿ ಮಾಡಿದ ತೊಗರಿ ಬೇಳೆಯನ್ನು ಇವತ್ತಿನವರೆಗೆ ಸಂಸ್ಕರಣೆ ಮಾಡಲಾಗುತ್ತಿದೆ. ಅದೇ ರೀತಿಯಾಗಿ ಪ್ರಸಕ್ತ ಸಾಲಿನಲ್ಲಿ ಖರೀದಿ ಮಾಡಿದ ತೊಗರಿ ಬೇಳೆಯನ್ನು ಮುಂದಿನ ವರ್ಷ ಸಂಸ್ಕರಣೆ ಮಾಡಲಾಗುವುದು. ಅಷ್ಟು ಪ್ರಮಾಣದಲ್ಲಿ ತೊಗರಿಯನ್ನು ಆಮದು ಮಾಡಿಕೊಂಡಿರುವುದೇ ಇದಕ್ಕೆ ಕಾರಣವಾಗಿದೆ. ಆಮದು ನೀತಿಯಿಂದಾಗಿ ನಮ್ಮಲ್ಲಿನ ದಾಲ್‌ಮಿಲ್‌ಗಳನ್ನು ಮುಚ್ಚುವಂತಾಗಿದೆ. ಇದರ ಪರಿಣಾಮವಾಗಿ ರೈತರಿಗೆ ತೊಂದರೆಯಾಗಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪಣ್ಣ ಕಮಕನೂರ ರವರು ಕೇಳಿರುವ ಪ್ರಶ್ನೆಗೆ. ಸರ್ಕಾರವು 10 ಕ್ವಿಂಟಾಲ್ ತೊಗರಿ ಬೇಳೆಯನ್ನು ಖರೀದಿ ಮಾಡುತ್ತಿದೆ. ಖರೀದಿಯ ಪ್ರಮಾಣವನ್ನು 20 ಕ್ವಿಂಟಾಲ್‌ಗಳಿಗೆ ಹೆಚ್ಚಿಸಬೇಕೆಂದು ಕೇಂದ್ರಕ್ಕೆ ಒತ್ತಾಯ ಮಾಡಲಾಗುತ್ತಿದೆ. ಇದೇ ತಿಂಗಳ 26 ಮತ್ತು 27 ತಾರೀಖಿನ ನಂತರ ನಾನು ದೆಹಲಿಗೆ ಹೋಗುತ್ತೇನೆ. ಆಗ ಸಹ ಮತ್ತೊಮ್ಮೆ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ನೀಡುತ್ತಿದ್ದೇನೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಬಸವರಾಜ ಪಾಟೀಲ ಇಟಗಿಯವರು ಆಮದು ನೀತಿಯಿಂದ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಇದು ಸತ್ಯವಾದುದು. ಕೇಂದ್ರ ಸರ್ಕಾರವು ಬೆಲೆಯೇರಿಕೆಯನ್ನು ನಿಯಂತ್ರಣ ಮಾಡುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಬೇಡಿಕೆಯನ್ನು ಪೂರೈಸಲು ಹೊರದೇಶದಿಂದ ಬೇಳೆ ಕಾಳುಗಳ ಆಮದು ಮಾಡಿಕೊಳ್ಳಲು 2015-16 ನೇ ಸಾಲಿನಲ್ಲಿ ಅವಕಾಶ ಕಲ್ಪಿಸಿತ್ತು. ಇದರಿಂದ ತೊಗರಿ ಬೇಳೆ ಕಾಳುಗಳ ಬೆಲೆಯಲ್ಲಿ ಸಾಕಷ್ಟು ಕುಸಿತ ಕಂಡು ಬಂದಿದೆ. ಈಗ ಆ ರೀತಿಯ ಸಮಸ್ಯೆಗಳು ಇಲ್ಲ. ಈ ಹಿಂದೆ ಆದ ಈ ರೀತಿಯ ಸಮಸ್ಯೆಗಳನ್ನು ಸರಿಪಡಿಸುವುದಕ್ಕಾಗಿ ಅವಶ್ಯವಿರುವ ದಿಕ್ಕಿನಲ್ಲಿ ಎಲ್ಲಾ ಪ್ರಯತ್ನಗಳು ನಡೆದಿವೆ. ಈ ವಿಚಾರದಲ್ಲಿ ಸಮಂಜಸವಾದ ಎಲ್ಲಾ ಉತ್ತರಗಳನ್ನು ನಾನು ನೀಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 1456**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸಿ.ಎ. ನಿವೇಶನಗಳು ಹಗಲು ದರೋಡೆ ರೀತಿಯಾಗಿ ನಡೆಯುತ್ತಿವೆ. ಈ ಸಂಗತಿಯನ್ನು ರಾಜ್ಯದ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ನಗರದ ಜೆ.ಪಿ.ನಗರ ಪ್ರದೇಶದಲ್ಲಿರುವ ಎರಡೂವರೆ ಎಕರೆ ಜಾಗವನ್ನು ಒಂದು ಟ್ರಸ್ಟ್ ಆಗಿ ಮಾಡಿಕೊಂಡು ಆ ಜಾಗವನ್ನು ಉಳಿಸಿಕೊಟ್ಟಿದ್ದಾರೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಪ್ರಸ್ತಾವನೆ ಕಳುಹಿಸಲಾಗಿತ್ತು. ಈಗಿನ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಆ ಜಾಗವನ್ನು ಆಟದ ಮೈದಾನಕ್ಕೆ ಸೀಮಿತಗೊಳಿಸಿದ್ದಾರೆ. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಆಟದ ಮೈದಾನದೊಳಗೆ ...

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಸಿ.ಎ. ನಿವೇಶನಗಳನ್ನು ಗುತ್ತಿಗೆ ಆಧಾರದಲ್ಲಿ ಸಂಘ ಸಂಸ್ಥೆಗಳಿಗೆ ನೀಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ 1,402 ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಈ ವಿಷಯದ ಬಗ್ಗೆ ನಾನು ಪ್ರಾಧಿಕಾರದ ಆಯುಕ್ತರೊಂದಿಗೆ ಚರ್ಚೆ ಮಾಡಿ, ಈ ಎಲ್ಲಾ ಸಂಗತಿಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ಈ ಹಿಂದೆ ರಾಕೇಶ್ ಸಿಂಗ್, ರಾಜ್ ಕುಮಾರ್ ಖತ್ರಿ ಎನ್ನುವ ಅಧಿಕಾರಿಗಳಿದ್ದರು. ಸಿ.ಎ. ನಿವೇಶನಗಳು ಹಗಲು ದರೋಡೆಗಳಾಗಿವೆ. ಏಕೆಂದರೆ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡುತ್ತಾರೆ. ಹೀಗೆ ಉಳಿದ ಜಾಗವನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುತ್ತಿದ್ದಾರೆ. ಯಾವ ಉದ್ದೇಶಕ್ಕಾಗಿ ಸಿ.ಎ. ನಿವೇಶಗಳನ್ನು ಹಂಚಿಕೆ ಮಾಡುತ್ತಾರೋ ಅದನ್ನು ಹೊರತುಪಡಿಸಿ ಇನ್ನುಳಿದ ಉದ್ದೇಶಗಳಿಗಾಗಿ ಬಳಸುತ್ತಾರೆ. ಇಂತಹ ಹಲವಾರು ನಿದರ್ಶನಗಳನ್ನು ನಾನು ಕಳೆದ ಬಾರಿ ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಂದರ್ಭದಲ್ಲಿ ನೀಡಿದ್ದೇನೆ. ಈ ಸಂಗತಿಯನ್ನು ಪ್ರಾಧಿಕಾರದ ಈ ಹಿಂದಿನ ಆಯುಕ್ತರಾದ ಶ್ರೀ ರಾಕೇಶ್ ಸಿಂಗ್‌ರವರಿಗೆ ತಿಳಿಸಿದಾಗ, ಅವರುಗಳು ಎಚ್ಚೆತ್ತುಕೊಂಡು . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಮ್ಮ ಪ್ರಶ್ನೆಯನ್ನು ಕೇಳಿ. ತಾವು ಭಾಷಣ ಮಾಡಿದರೆ ಹೇಗೆ?

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಸಿ.ಎ. ನಿವೇಶನಗಳನ್ನು ಪಡೆದ ಸಂಸ್ಥೆಗಳು ಪಡೆದ ಉದ್ದೇಶಗಳಿಗಾಗಿ ಉಪಯೋಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಟ್ಟು 1,402 ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ನಾನು ಅಧಿಕಾರಕ್ಕೆ ಬಂದ ಮೇಲೆ ಕಳೆದ ಏಳು ತಿಂಗಳಿನಲ್ಲಿ ನಾನು ಈ ರೀತಿಯ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಿಲ್ಲ. ಈ ಹಿಂದೆ ಹಂಚಿಕೆ ಮಾಡಿದ್ದ ಸಿ.ಎ. ನಿವೇಶನಗಳ ಪೈಕಿ 8 ಸಿ.ಎ. ನಿವೇಶನಗಳ ಹಂಚಿಕೆಯನ್ನು ರದ್ದುಗೊಳಿಸಲಾಗಿದೆ. ಆ ಪೈಕಿ ಐದು ನಿವೇಶನಗಳನ್ನು ಹಿಂಪಡೆಯಲಾಗಿದೆ. ಇನ್ನುಳಿದ ಮೂರು ಸಿ.ಎ. ನಿವೇಶನಗಳನ್ನು ಪಡೆದುಕೊಂಡಿರುವವರು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿ ತಡೆಯಾಜ್ಞೆಯನ್ನು ತಂದಿದ್ದಾರೆ. ಆ ತಡೆಯಾಜ್ಞೆಯನ್ನು ತೆರವುಗೊಳಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಹೇಳಿದಂತೆ 1,402 ಸಿ.ಎ. ನಿವೇಶನಗಳನ್ನು ಪಡೆದ ಸಂಸ್ಥೆಗಳು ಪಡೆದ ಉದ್ದೇಶಗಳಿಗಾಗಿ ಉಪಯೋಗಿಸದೇ ದುರುಪಯೋಗ ಪಡಿಸಿಕೊಂಡಿರುವುದು ಸತ್ಯವಾಗಿದೆ. ಈ ವಿಚಾರದಲ್ಲಿ ನಾಲ್ಕು ಅಧಿಕಾರಿಗಳ ತಂಡಗಳನ್ನು ರಚಿಸಿ, ಸರ್ವೆಯನ್ನು ಮಾಡಿಸಲಾಗುತ್ತಿದೆ. ಪ್ರಾಯಶಃ ಎರಡು ತಿಂಗಳಿನಲ್ಲಿ ಸಂಪೂರ್ಣ ವರದಿಯನ್ನು ಪಡೆದುಕೊಂಡು, ಸಿ.ಎ. ನಿವೇಶನವನ್ನು ಪಡೆದು ದುರುಪಯೋಗ ಮಾಡಿಕೊಂಡಿರುವವರ ವಿರುದ್ಧ ತೀವ್ರತರವಾದ ಕ್ರಮಗಳನ್ನು ತೆಗೆದುಕೊಂಡು, ಹಂಚಿಕೆಯಾದ ನಿವೇಶನಗಳನ್ನು ಹಿಂಪಡೆಯಲಾಗುವುದು ಅಲ್ಲದೇ ಯಾವುದೇ ಮುಲಾಜು ಇಲ್ಲದೇ ತನಿಖೆಯನ್ನು ಮಾಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಹಾಗೂ ವಾಸ್ತವಿಕ ಸ್ಥಿತಿಯನ್ನು ಸದಸ್ಯರ ಗಮನಕ್ಕೆ ತರಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ನಗರದ ಜೆ.ಪಿ.ನಗರ ಬಡಾವಣೆಯಲ್ಲಿ ದೇವಸ್ಥಾನಕ್ಕೆಂದು ಎರಡೂವರೆ ಎಕರೆಗಳಷ್ಟು ಜಾಗವನ್ನು ಪಡೆದಿದ್ದರು. ಈ ವಿಷಯದಲ್ಲಿ ಟ್ರಸ್ಟ್‌ವೊಂದನ್ನು ಮಾಡಿಕೊಂಡು ನಮ್ಮ ಹಿರಿಯ ಸಾಹಿತಿಗಳ ಜೊತೆಗೆ ಹೋರಾಟ ಮಾಡಿದ್ದೇವೆ. ಈ ಹಿಂದೆ ಶ್ರೀ ರಾಜ್‌ಕುಮಾರ್ ಖತ್ರಿ, ಶ್ರೀ ರಾಕೇಶ್ ಸಿಂಗ್ ಎನ್ನುವವರು ಪ್ರಾಧಿಕಾರದ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಆಯುಕ್ತರಾಗಿದ್ದಾಗ ಹಾಲಿ ಶ್ರೀ ಪ್ರಕಾಶ್ ಎನ್ನುವವರು ಪ್ರಾಧಿಕಾರದ ಆಯುಕ್ತರಾಗಿದ್ದಾರೆ. ಈ ಮೂರು ಆಯುಕ್ತರುಗಳಿಗೆ ವಿಷಯವನ್ನು ತಿಳಿಸಲಾಯಿತು. ಆದರೆ ಅವರುಗಳು ವರ್ಗಾವಣೆ ಹೊಂದಿದರು. ಅದೇ ರೀತಿಯಾಗಿ ರಾಜ್ಯದಲ್ಲಿ ಮೂರು ಮುಖ್ಯಮಂತ್ರಿಗಳು ಬದಲಾದರು. ನಾನು ಸತತವಾಗಿ ಆರು ವರ್ಷಗಳಿಂದ ಹೋರಾಟ ಮಾಡಿದ ಫಲವಾಗಿ ಈ ಜಾಗ ಈಗ ದೊರೆತಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಆದೇಶ ನೀಡಿದ್ದರು. ಆದ್ದರಿಂದ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಗರದ ಜಯನಗರದಲ್ಲಿರುವ ಒಂದು ಸಿ.ಎ. ನಿವೇಶನದ ಮಾಹಿತಿಯನ್ನು ಮುಖ್ಯಮಂತ್ರಿಗಳಿಗೆ ನೀಡುತ್ತೇನೆ. ಅದರ ಮೂಲ ಮಾಲೀಕರ ಹೆಸರು ನಾರಾಯಣ ರಾಜ್ ಆಗಿದ್ದು ಅದರ ಮೂಲ ನೋಂದಣಿ ಸಂಖ್ಯೆ 1573 ಆಗಿರುತ್ತದೆ. ಅದರಲ್ಲಿ ಮಾಲೀಕರು ಮನೆಯನ್ನು ನಿರ್ಮಿಸಿದ್ದರು. ಆದರೆ ಪ್ರಾಧಿಕಾರವು ಅದಕ್ಕೆ 1477 ಎಂಬ ಸಂಖ್ಯೆಯನ್ನು ನೀಡಿದೆ. ಆದರೆ ಮಾಲೀಕರು ನಿವೇಶನದ ಸಂಖ್ಯೆಯನ್ನು ತೆಗೆದು ಅದೇ ಜಾಗದಲ್ಲಿ ಮನೆಯನ್ನು ಕಟ್ಟಿಸಿ ಹತ್ತು ಲಕ್ಷ ರೂಪಾಯಿಗಳಿಗೆ ಅಲ್ಲಿ ಬಾಡಿಗೆಗೆ ನೀಡಿದ್ದಾರೆ. ಈ ಸಂಗತಿಯನ್ನು ನಾನು ಪ್ರಾಧಿಕಾರದ ಆಯುಕ್ತರ ಹಾಗೂ ಪೊಲೀಸ್ ಅಧೀಕ್ಷಕರರವರ ಗಮನಕ್ಕೆ ತಂದಿದ್ದೇನೆ. ಆದರೆ ಅವರುಗಳು ತಮ್ಮ ಬಳಿ ಸಿಬ್ಬಂದಿಗಳಿಲ್ಲ ಎಂದು ಹೇಳುತ್ತಾರೆ. ಇನ್ನು 2–3 ನಿಮಿಷಗಳ ಕಾಲಾವಕಾಶವನ್ನು ನೀಡಿದರೆ ನಾನು ಈ ವಿಚಾರದ ಬಗ್ಗೆ ಹೆಚ್ಚು ತಿಳಿಸಿಬಿಡುತ್ತೇನೆ. ಈ ವಿಷಯದ ಬಗ್ಗೆ ನಾನು ಸತತವಾಗಿ ಆರು ವರ್ಷಗಳ ಕಾಲ ಹೋರಾಟ ಮಾಡುತ್ತಿರುವುದರಿಂದ ನನಗೆ ಬೆದರಿಕೆ ಕರೆಗಳು ಬರುತ್ತಿವೆ.

**(583)/19–3–2020/2–50/ಎಲ್‌ಎಚ್/ಜಿಆರ್**

**ಶ್ರೀ ಎಂ.ಸಿ.ವೇಣುಗೋಪಾಲ(ಮುಂದು):–**

ಎರಡನೆಯದಾಗಿ, ಅವರು ಬೇರೆಯವರ ಮುಖಾಂತರ ನನಗೆ influence ಮಾಡಿಸುತ್ತಿದ್ದಾರೆ. "ಅಂಗೈ ಹುಣ್ಣಿಗೆ ಕನ್ನಡಿ ಯಾಕೆ" ಎನ್ನುವ ಮಾತಿನಂತೆ ಜಾಗ ಪ್ರತ್ಯೇಕ್ಷವಾಗಿ ಕಣ್ಣಿನ ಮುಂದೆ ಇದೆ. ಲಕ್ಷಾಂತರ ರೂಪಾಯಿಗಳ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಬಿ.ಡಿ.ಎ., ಜಾಗ, ಅದರ ವಿಚಾರವಾಗಿ ಅಧಿಕಾರಿಗಳು ಸಹ ಏನು ಮಾಡಲು ಆಗುವುದಿಲ್ಲ. ಅಧಿಕಾರಿಗಳು ಕೋರ್ಟ್‌ಗೆ ಹೋಗಿ ಸ್ಟೇ ತರುತ್ತಾರೆ. ಬಿ.ಡಿ.ಎ., ಪರ ವಕೀಲರು ಸ್ಟೇ ಮಾಡಿಸುತ್ತಾರೆ. ನಾನು ಬಿ.ಡಿ.ಎ., Commissioner ರವರನ್ನು ದೊಷಿಸುತ್ತಿಲ್ಲ. B.D.A., Advocates (ಮಧ್ಯ ಪ್ರವೇಶ ಮಾಡಿ) stay ಮಾಡಿಸುತ್ತಾರೆ. ಆಮೇಲೆ ಬಿ.ಡಿ.ಎ., Assistant Engineers, Executive Engineers ಗಳು ಅವರ ಜೊತೆಯಲ್ಲಿ ಸೇರಿಕೊಂಡಿರುತ್ತಾರೆ. ಬಿ.ಡಿ.ಎ., ದಲ್ಲಿ ಈ ರೀತಿ ಅನಾಹುತಗಳಾದರೆ ಇದು ಬಹಳ ಕಷ್ಟ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ, ಬಿ.ಡಿ.ಎ., ದಲ್ಲಿ ಈ ರೀತಿಯಾಗುತ್ತಿರುವುದನ್ನು ತಡೆಯಲು ಒಂದು Special Court ನ್ನು ಮಾನ್ಯ ಮುಖ್ಯಮಂತ್ರಿಗಳು ರಚನೆ ಮಾಡಬೇಕು. Commissioner ರವರಿಗೆ ಹೇಳಿದರೆ, ಕೋರ್ಟ್ ಇದೆ ಅನ್ನುತ್ತಾರೆ, ಮಂತ್ರಿಗಳ ಹತ್ತಿರ ಹೋಗಬೇಕು ಅನ್ನುತ್ತಾರೆ. ಅದಕ್ಕಾಗಿ ಅಲ್ಲಿ ನಡೆದಿರುವ ಅನಾಹುತಗಳನ್ನು ಕಂಡುಹಿಡಿಯಲು ಒಂದು Special Court ರಚನೆ ಮಾಡಬೇಕು. ಇನ್ನೊಂದು ಪ್ರಕರಣವಿದೆ, ಸಿಎ ಸೈಟ್‌ಗಳನ್ನು ಬ್ಯಾಂಕ್ ಕಟ್ಟಲು, ಅಂಗಡಿಗಳನ್ನು ಕಟ್ಟಲು ಬಾಡಿಗೆ ಆಧಾರದ ಮೇಲೆ ಕೊಡುತ್ತಿದ್ದಾರೆಯೇ? ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಹೇಳಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಿ.ಎ., ಸೈಟ್‌ಗಳು ದುರುಪಯೋಗವಾಗುತ್ತಿವೆ. ಯಾವ ಉದ್ದೇಶಕ್ಕೆ ತೆಗೆದುಕೊಂಡಿರುತ್ತಾರೆ ಆ ಉದ್ದೇಶಕ್ಕಾಗಿ ಕೊಟ್ಟಿರುವ ಸಮಯದಲ್ಲಿ ಬಳಸಿಕೊಳ್ಳುವುದಿಲ್ಲ. ಆ ಖಾಲಿ ನಿವೇಶನಗಳು garbage ಕೇಂದ್ರಗಳಾಗಿವೆ. ಸುತ್ತ ಮನೆಯವರು ಅಲ್ಲಿ ವಾಸ ಮಾಡಲು ಆಗುತ್ತಿಲ್ಲ. ನಿರ್ಧಿಷ್ಟ ಉದ್ದೇಶಕ್ಕಾಗಿ ಸೈಟ್‌ಗಳನ್ನು ತೆಗೆದುಕೊಂಡು ಅದನ್ನು ಬಳಸಿಕೊಳ್ಳದೆ ಇದ್ದರೆ ಅಂತಹ ಸೈಟ್‌ಗಳನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಯಾವುದೋ ಉದೇಶಕ್ಕೆ ತೆಗೆದುಕೊಳ್ಳುತ್ತಾರೆ ಇನ್ನಾವುದೊ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಾರೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಗಳೆ, ನಾನು ಮಾನ್ಯ ಸದಸ್ಯರು ಹೇಳಿರುವಂತೆ ಅಲ್ಲಿ ದುರುಪಯೋಗವಾಗಿರುವುದು ನಿಜ, ನಾನು ನಾಲ್ಕು ತಂಡಗಳನ್ನು ರಚನೆ ಮಾಡಿ ಒಂದುವರೆ ಎರಡು ತಿಂಗಳಲ್ಲಿ ವರ್ದಿ ತರಿಸಿಕೊಳ್ಳುತ್ತೇನೆ. ಅದನ್ನು ಸಾರ್ವಜಿಕವಾಗಿ ಹರಾಜು ಮಾಡಿದರೆ ಹಣಕಾಸಿನ ಸ್ಥಿತಿ ಸರಿ ಇಲ್ಲದ ಈ ಸಮಯದಲ್ಲಿ ನಮ್ಮ ಬೊಕ್ಕಸಕ್ಕೆ ಹಣ ಬರುತ್ತದೆ. ಮಾನ್ಯ ಸದಸ್ಯರು ಎರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕಳುಹಿಸಿಕೊಡಲಿ. ಯಾರು 10 ಲಕ್ಷ ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ ಅದರ ಬಗ್ಗೆ ಸಮಗ್ರವಾಗಿ ತಕ್ಷಣ ತನಿಖೆ ಮಾಡಿಸುತ್ತೇನೆ. ಮುಂದೆ ಈ ರೀತಿಯಾಗದಂತೆ ಕ್ರಮ ತೆಗೆದುಕೊಳ್ಳುತ್ತೇನೆ. ಇದು ಹಿಂದೆ ಕೊಟ್ಟಿರುವುದು. ನಮ್ಮ ಸರ್ಕಾರ ಬಂದ ಮೇಲೆ ಯಾವುದೆ ಸಿ.ಎ., ಸೈಟ್‌ಗಳನ್ನು ಕೊಟ್ಟಿರುವುದಿಲ್ಲ. ತಮ್ಮ ಹತ್ತಿರ ಇರುವ ಮಾಹಿತಿಯನ್ನು ಕಳುಹಿಸಿ ಕೊಡಿ ಖಂಡಿತವಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಯಾವುದೇ ಮುಲಾಜಿಲ್ಲದೆ ತನಿಖೆ ಮಾಡಿಸಿ ಏನು ಶಿಕ್ಷೆ ಕೊಡಬೇಕು ಕೊಡುತ್ತೇವೆ ಮತ್ತು ಆ ಆಸ್ತಿಯನ್ನು ನಮ್ಮ ವಶಕ್ಕ ತೆಗೆದುಕೊಳ್ಳುತ್ತೇವೆ. ಈ ಕಾರ್ಯಕ್ಕೆ ಎಲ್ಲರೂ ಸಹಕರಿಸಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 1448**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಗಳೆ, ನನ್ನ ಮೊದಲ ಪ್ರಶ್ನೆಗೆ, ಹಾಸನ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯವು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮೂರನೇ ಪ್ರಶ್ನೆ, ವಿಮಾನ ನಿಲ್ದಾಣದ ಒಟ್ಟು ವೆಚ್ಚ ಎಷ್ಟು: ಇದುವರೆವಿಗೂ ಖರ್ಚಾಗಿರುವ ಹಣ ಎಷ್ಟು: ಯಾವ ಕಾಲಮಿತಿಯೊಳಗೆ ಈ ಕಾಮಗಾರಿ ಪೂರ್ಣಗೊಂಡು ವಿಮಾನ ಹಾರಾಟ ಪ್ರಾರಂಭಿಸಲಾಗುವುದು ಎನ್ನುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು  ಹಾಸನ ವಿಮಾನ ನಿಲ್ದಾಣವನ್ನು ಈಗಾಗಲೇ ಕಲಬುರಗಿ ವಿಮಾನ ನಿಲ್ದಾಣದ ಅಭಿವೃದ್ಧಿಯನ್ನು ಕೈಗೊಂಡಿರುವ ಮಾದರಿಯಲ್ಲಿಯೇ 175 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿ ಪ್ರಸ್ತುತ 536 ಎಕರೆ ಜಮೀನನ್ನು 34.00 ಕೋಟಿ ರೂ.ಗಳ ವೆಚ್ಚದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ, ಪ್ರಸ್ತುತ ಮೆ: ರೈಟ್ಸ್ ಸಂಸ್ಥೆಯಿಂದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ. ಯೋಜನಾ ವರದಿಯು ತಯಾರಾದ ನಂತರದಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳಲು ಕ್ರಮವಹಿಸಲಾಗುತ್ತದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ರೈತರ 536 ಎಕರೆ ಜಮೀನನ್ನು 34 ಕೋಟಿ ರೂ.ಗಳನ್ನು ಕೊಟ್ಟು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಆದರೆ ಹಣ ಬಿಡುಗಡೆಯೇ ಆಗಿರುವುದಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ನಾನು ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಅಧಿಕಾರಿಗಳು ಹಣ ಬಿಡುಗಡೆ ಮಾಡುವ ವಿಚಾರದಲ್ಲಿ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಗೋಪಾಲ ಸ್ವಾಮಿಯವರಿಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ, 536 ಎಕರೆ ಜಮೀನನ್ನು 34 ಕೋಟಿ ರೂ.ಗಳನ್ನು ಕೊಟ್ಟು ಸ್ವಾದೀಪಡಿಸಿಕೊಂಡಿದ್ದೇವೆ. ಸದಸ್ಯರು ಹೇಳುವುದು ಕೆಲವರಿಗೆ ಪೇಮೆಂಟ್ ತಲುಪಿಲ್ಲ ಎಂದು. ತಕ್ಷಣ ಅದನ್ನು ಪರಿಶೀಲನೆ ಮಾಡುತ್ತೇನೆ. ನಾವು ಒಂದು ಬೆಲೆಯನ್ನು ನಿಗದಿ ಮಾಡಿ ಭೂಮಿಯನ್ನು ಕೊಂಡಿದ್ದೇವೆ. ಭೂಮಿ ಕೊಟ್ಟಿವರಲ್ಲಿ ಯಾರಿಗೆ ಹಣ ತಲುಪಿಲ್ಲ ಅಂತವರಿಗೆ ತಕ್ಷಣ ಹಣವನ್ನು ತಲುಪಿಸುವಂತಹ ಕೆಲಸವನ್ನು ಮಾಡುತ್ತೇವೆ. ಡಿಸಿ ಯವರಿಂದ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. 34

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಕೋಟಿ ರೂ.ಗಳಲ್ಲಿ ಯಾರಿಗೆ ಹಣ ತಲುಪಿಲ್ಲ ಅವರಿಗೆ ಹಣ ತಲುಪುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಆದಷ್ಟು ಬೇಗ ವಿಮಾನ ನಿಲ್ದಾಣ ಪ್ರಾರಂಭವಾಗುವುದಕ್ಕೆ ನಮ್ಮಿಂದ ಏನು ಆಗಬೇಕು ಅದನ್ನು ಪ್ರಮಾಣಿಕವಾಗಿ ಮಾಡಿ, ವಿಮಾನ ನಿಲ್ದಾಣದ ಕೆಲಸವನ್ನು ಮಾಡಿಕೊಡುತ್ತೇವೆ. ಪರಿಹಾರವನ್ನು ಕೊಟ್ಟಿರುವುದಿಲ್ಲ ಎಂದರೆ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಗಳೆ, ಹಣವೇ ಬಿಡುಗಡೆಯಾಗಿಲ್ಲ, ಹಣ ಬಿಡುಗಡೆಯಾಗಿದೆ ಎಂದು ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಮಾನ್ಯ ಸಭಾಪತಿಗಳೆ, ಅಧಿಕಾರಿಗಳು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. 34 ಕೋಟಿ ರೂ.ಗಳ ಪರಿಹಾರವನ್ನು ರೈತರಿಗೆ ತಲುಪಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 1452, 1453**

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಗಳೆ, ಇಂಧನ ಇಲಾಖೆ ಅತ್ಯಂತ ಶೀಘ್ರವಾಗಿ ಬೆಳೆಯುತ್ತಿರುವಂತಹ ಇಲಾಖೆ. ಇಂಜಿನಿಯರ್‌ಗಳು ಹಾಗೂ ಲೈನ್‌ಮನ್‌ಗಳು ಇಲ್ಲದಿದ್ದರೆ ಕಾರ್ಯನಿರ್ವಹಿಸುವುದು ಕಷ್ಟವಾಗುತ್ತದೆ. ಸುಮಾರು 3646 ಹುದ್ದೆಗಳು ಖಾಲಿ ಇವೆ. ಆ ಹುದ್ದೆಗಳನ್ನು ತುಂಬಿಕೊಳ್ಳುವ ಸಮಯದಲ್ಲಿ ಚುನಾವಣೆಗಳು ಬಂದವು, ಈಗ ಕರೋನಾ ವೈರಸ್ ಬಂದಿರುವುದರಿಂದ ತಡವಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುತ್ತದೆ ಎನ್ನುವ ಬಗ್ಗೆ ಇಲಾಖೆಗೆ ಗೈಡ್‌ಲೈನ್ಸ್ ಏನಾದರೂ ಕೊಡಲಾಗಿದೆಯೇ? ಅತ್ಯಂತ ಶೀಘ್ರವಾಗಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆನ್ನುವುದು ನಮ್ಮ ವಿನಂತಿ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಗಳೆ, ನಿರ್ದಿಷ್ಟವಾಗಿ ಇಷ್ಟೆ ಸಮಯದಲ್ಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳುವುದಿಲ್ಲ, ಆದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡು ಯಾವ-ಯಾವ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯ ಆ ಕೆಲಸವನ್ನು ಖಂಡಿತವಾಗಿ ಮಾಡುತ್ತೇನೆ. ಆ ದಿಕ್ಕಿನಲ್ಲಿ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 1497**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ವಿಧಾನಸೌಧ, ವಿಕಾಸಸೌಧ, ಎಂ.ಎಸ್.,ಬಿಲ್ಡಿಂಗ್ ಮತ್ತು ಹೈಕೋರ್ಟ್ ಹತ್ತಿರ ಪ್ರತಿದಿನ ವಿದೇಶಿ ಪ್ರವಾಸಿಗರು ಬರುತ್ತಾರೆ. ಅಂತವರಿಗಾಗಿ ಒಂದು toilet ಕೂಡಾ ಸುತ್ತ-ಮುತ್ತ ಇಲ್ಲ. ತಾವು ಲೋಕೋಪಯೋಗಿ ಇಲಾಖೆಯವರಿಗೆ ಸೂಚನೆ ನೀಡಿ toilet ವ್ಯವಸ್ಥೆ ಮಾಡಿಸಬೇಕು. ಬೆಂಗಳೂರು ನೋಡಲು ಬಂದವರು ವಿಧಾನಸೌಧವನ್ನು ನೋಡಲು ಬರುತ್ತಾರೆ. ಅವರು ರೆಸ್ಟ್ ರೂಂ ಗೆ ಹೋಗಬೇಕು ಎಂದರೆ ಒಂದು toilet ಇಲ್ಲ. ಇದು ಬಹಳ ವಿಷಾಧನೀಯ ಸಂಗತಿ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಒಂದು ಕಾಲಮಿತಿಯಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಯು.ಬಿ.ವೆಂಕಟೇಶ್‌ರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ವಿಧಾನಸೌಧ, ಕಬ್ಬನ್‌ಪಾರ್ಕ್, ಲಾಲ್‌ಬಾಗ್, ಕೋರ್ಟ್ ಭಾಗದಲ್ಲಿ ಜನಸಂದಣಿ ಜಾಸ್ತಿ ಇದೆ. ಅಲ್ಲಿ ಶೌಚಾಲಯ ಇಲ್ಲದಿರುವುದರಿಂದ ಪ್ರತಿನಿತ್ಯ ಜನರು ಪರದಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈಗ ನಾನು ಅಧಿಕಾರವನ್ನು ವಹಿಸಿಕೊಂಡ ಮೇಲೆ 27 location ಗಳನ್ನು identify ಮಾಡಲಾಗಿದೆ. 8-10 ಕಡೆಗಳಲ್ಲಾದರೂ ಇನ್ನು 2-3 ತಿಂಗಳಿನಲ್ಲಿ ಶೌಚಾಲಯ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇನೆಂದು ತಮ್ಮ ಮೂಲಕ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಗಳೆ, ವಿಶೇಷವಾಗಿ ವಿಧಾನ ಸೌಧದ ಹತ್ತಿರ ಶೌಚಾಲಯವನ್ನು ನಿರ್ಮಾಣ ಮಾಡಬೇಕು. ನಮ್ಮ ವಾಹನ ಚಾಲಕರಿಗೂ ತುಂಬಾ ತೊಂದರೆಯಾಗಿದೆ. ಅವರಿಗೆ ಶೆಲ್ಟರ್ ಇಲ್ಲ, canteen ಇಲ್ಲ, ಶೌಚಾಲಯ ಇಲ್ಲ ಇದರ ಕಡೆಗೆ ದಯಮಾಡಿ ಗಮನಹರಿಸಬೇಕೆಂದು ವಿನಂತಿ.

**ಶ್ರೀ ಬಿ.ಎಸ್.ಯಡಿಯೂರಪ್ಪ:-**ಮಾನ್ಯ ಸಭಾಪತಿಗಳೆ, ವಿಧಾನಸೌಧದ, ಕಬ್ಬನ್ ಪಾರ್ಕ್ ಮತ್ತು ಕೋರ್ಟ್ ಸುತ್ತ-ಮುತ್ತ ಶೌಚಾಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಗಳೆ, ತೋಟಗಾರಿಕಾ ಇಲಾಖೆಯಿಂದ ಕಬ್ಬನ್ ಪಾರ್ಕ್‌ನಲ್ಲಿ ಶೌಚಾಲಯ ನಿರ್ಮಾಣ ಮಾಡಲು ಸ್ಥಳವನ್ನು identify ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಟ.ಎ.ಶರವಣ:–** ಮಾನ್ಯ ಸಭಾಪತಿಗಳೆ, ಹಳೆಯ ಸಾರಿಗೆ ಬಸ್‌ಗಳನ್ನು toilets ಆಗಿ convert ಮಾಡಿರುವುದನ್ನು ನಾನು ಮೊನ್ನೆ ಪೇಪರನಲ್ಲಿ ನೋಡಿದ್ದೆ. ಅಂತಹ 1–2 mobile toilet ಅನ್ನು ಇಲ್ಲಿ ಅಲಾಟ್ ಮಾಡಿದರೆ ಈ ಭಾಗದ ಜನರಿಗೆ ಅನುಕೂಲವಾಗುತ್ತದೆ.

**ಶ್ರೀ ಲಕ್ಷ್ಮಣ ಸವದಿ:–** ಮಾನ್ಯ ಸಭಾಪತಿಗಳೆ, ಇಂತಹ mobile toilet ಗಳನ್ನು ತಯಾರು ಮಾಡಲು ಕಳುಹಿಸಲಾಗಿದೆ. ಅವುಗಳು ಬಂದ ತಕ್ಷಣ ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲಿಗೆ ಅಲಾಟ್ ಮಾಡಲಾಗುತ್ತದೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಗಳೆ, 500 ಮೀಟರ್‌ಗೆ ಒಂದು toilet ನಿರ್ಮಾಣ ಮಾಡಿರುವುದನ್ನು ನೋಡಿದ್ದೇವೆ. ಆ ರೀತಿ ಪ್ಲಾನ್ ಮಾಡಿ ನಿರ್ಮಾಣ ಮಾಡಿದರೆ ಸರಿಯಾಗುತ್ತದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಮಾನ್ಯ ಸಭಾಪತಿಗಳೆ, ವಿಧಾನಸೌಧ ಸುತ್ತ–ಮುತ್ತ ಶೌಚಾಲಯಗಳು ಇಲ್ಲದೆ ಜನರಿಗೆ ತೊಂದರೆಯಾಗಿದೆ. ಹೆಣ್ಣುಮಕ್ಕಳ ಸಮಸ್ಯೆಗಳನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಈಗಾಗಲೇ 15 ರಿಂದ 17ಸ್ಥಳಗಳನ್ನು identify ಮಾಡಿದ್ದೇವೆ. ತಕ್ಷಣಕ್ಕೆ 4–5 ಶೌಚಾಲಯಗಳನ್ನು ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1488**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಗಳೆ, ಹೈದ್ರಾಬಾದ್-ಕರ್ನಾಟಕ ಕಲ್ಯಾಣ ಯೋಜನೆ ಹುಟ್ಟಿದಾಗಿನಿಂದ, ಬಜೆಟ್‌ನಲ್ಲಿ allocate ಮಾಡಿದ್ದಾರೆ. ಅದರಲ್ಲಿ ಪ್ರತಿ ವರ್ಷ ಶೇಕಡ 60 ರಷ್ಟು ಕೂಡಾ ಉಪಯೋಗಿಸುವುದಿಲ್ಲ.

**(584)19-03-2020(03-00)ಬಿಎಸ್‌ಡಿ- ಜಿಆರ್**

**ಅಲ್ಲಂ ವೀರಭದ್ರಪ್ಪ (ಮುಂದು):-**

ಪ್ರಾರಂಭ ಆದಾಗಿನಿಂದಲೂ sixty per cent ಕೂಡ ಪ್ರತಿವರ್ಷ ಉಪಯೋಗಿಸಿಲ್ಲ. ಪ್ರಾರಂಭ ಆದಾಗಿನಿಂದಲೂ ರೂ.500ರಿಂದ ರೂ.1000 ಅಥವಾ ರೂ.1,500 ಕೋಟಿಗಳನ್ನು allocate ಮಾಡಿದ್ದು, ಇದನ್ನು ಯಾವತ್ತೂ full-fledged ಆಗಿ ಉಪಯೋಗಿಸಿಲ್ಲ. ಇದಕ್ಕೆ ಏನು ಕಾರಣ ಎಂದರೆ, ಇಲ್ಲಿ planning late ಆಗಿರುತ್ತದೆ, ಅಲ್ಲಿ sanctions ಆಗಿರುತ್ತದೆ, ಆ ಹಿನ್ನೆಲೆಯಲ್ಲಿ ಇವತ್ತು ರೂ.25 ಲಕ್ಷ, ರೂ.30 ಲಕ್ಷ ಎಂದು ಕೊಟ್ಟಿದ್ದಾರೆ, ಇದು ಆಗುತ್ತಿಲ್ಲ. ನಾವು ಬೆಳಗಾವಿ........

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸದಸ್ಯರು ಶಾಸಕರ ಪ್ರದೇಶಾಭಿವೃದ್ಧಿಗೆ ಸಂಬಂಧಪಟ್ಟ 1428 ನೇ ಪ್ರಶ್ನೆಯನ್ನು ಕೇಳುತ್ತಿದ್ದಾರೆಯೇ?

**ಶ್ರೀ ಅಲ್ಲಂ ವೀರಭದ್ರಪ್ಪ:-** ಹೌದು, ಇವತ್ತು ಅನುದಾನವನ್ನು ನೀಡಿದ್ದು, ನಿಗದಿತ ಕಾಲಕ್ಕೆ ಅನುದಾನ ಬಿಡುಗಡೆಯಾಗದೇ ಇರುವುದಕ್ಕೆ ಕಾರಣ ಏನು ಎಂದು ಕೇಳಿದ್ದೇನೆ. ಅದಕ್ಕೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು amount allocate ಮಾಡುತ್ತಾರೆ, ನಾನು ಹೋದ ಸಾರಿ ಬೆಳಗಾಂ session ನಲ್ಲಿ ಈ amount lapse ಆಗಬಾರದು, ಪ್ರತಿ ವರ್ಷ ಈ amount lapse ಆಗುತ್ತಿದೆ, Budgetನಲ್ಲಿ SC-ST ರವರುಗಳಿಗೆ allocate ಮಾಡುತ್ತಾರೆ, ಆ ಹಣ ಆ ವರ್ಷ ಖರ್ಚಾಗದಿದ್ದರೆ ಮುಂದಿನ ವರ್ಷಕ್ಕೆ ಹೋಗುತ್ತದೆ. ಅದೇ ರೀತಿ ಈ amount ಕೂಡ ಹೋಗಬೇಕೆಂದು ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಮೊನ್ನೆ ಈ ವಿಚಾರದ ಬಗ್ಗೆ ತಮ್ಮ ಕಡೆ ಮಾತನಾಡಿದ್ದು, ಈಗ ರೂ.2 ಕೋಟಿಗಳನ್ನು ಶಾಸಕರ ನಿಧಿಗೆ ಕೊಟ್ಟಿದ್ದಾರೆ. ಈ ರೂ.2 ಕೋಟಿಗಳಲ್ಲಿ ಇಲ್ಲಿಯವರೆಗೆ 2019-20ನೇ ಸಾಲಿಗೆ ಕೇವಲ ರೂ.50 ಲಕ್ಷ ಮಾತ್ರ ಬಿಡುಗಡೆಯಾಗಿದೆ. ಅವರು 2019-20ನೇ ಸಾಲಿನಲ್ಲಿ ಹಣ ಉಳಿದಿದ್ದು, ರೂ.948.97 ಕೋಟಿ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳ P.D., ಖಾತೆಯಲ್ಲಿದೆ ಎಂದು ಹೇಳಿದ್ದಾರೆ. ನನಗೆ ಪ್ರಧಾನ ಕಾರ್ಯದರ್ಶಿಗಳು phone ಮಾಡಿದ ಸಲುವಾಗಿ ಮೈಸೂರು ಜಿಲ್ಲಾಧಿಕಾರಿಗಳಿಗೆ ಬಳಿಗೆ ಹೋದೆ, ಅವರು ನಮ್ಮ ಇಡೀ ರೂ.2 ಕೋಟಿಗಳನ್ನು ಕಾರ್ಯಕ್ರಮದ ಅನುಮೋದನೆಯಲ್ಲಿ ಕೊಟ್ಟುಬಿಟ್ಟರು. ಹಣವನ್ನು ಬೇರೆ ಬೇರೆ ಜಿಲ್ಲೆಗಳಿಗೆ ಕಳುಹಿಸುವಾಗ ಇಡೀ meeting ಮಾಡಿ ಹುಡುಕಿಸಿದರು. ಅಲ್ಲಿ ಹೆಚ್ಚುವರಿ ಇದ್ದದ್ದೇ ರೂ.2 ಲಕ್ಷ. ಉಳಿದ ಅನುಮೋದನೆ ಕೊಟ್ಟಿರುವ ಹಣ ಇದೆ.  ಕಾಮಗಾರಿಗಳಿಗೆ ಸಂಬಂಧಪಟ್ಟಂತೆ Bill ಬಂದಾಗ payment  ಮಾಡಲು ರೂ.2 ಲಕ್ಷದ ಮೇಲೆ ಹೆಚ್ಚುವರಿ ಹಣ ಇಲ್ಲ ಎಂದು ಹೇಳುತ್ತಾರೆ. ಎಲ್ಲಾ ಜಿಲ್ಲಾಧಿಕಾರಿಗಳ ಬಳಿ ಹೆಚ್ಚುವರಿ ಹಣ ಇಲ್ಲ. ಈಗಾಗಲೇ ಕಳೆದ ವರ್ಷ ಅನುಮೋದನೆಗೊಂಡು Billಗಳಿಗಾಗಿ ಕಾಯ್ದಿರಿಸಿರುವ ಹಣ. ಹಾಗಾಗಿ ದಯಮಾಡಿ ಮಾರ್ಚ್ 31 ರೊಳಗೆ ಉಳಿದ ರೂ.2 ಕೋಟಿ ಹಣವನ್ನು ಕೊಡದಿದ್ದರೆ ನಮ್ಮ ಹಣ lapse ಆಗುತ್ತದೆ ಮತ್ತು ನಮ್ಮ quota ಹೋಗುತ್ತದೆ. ಏಕೆಂದರೆ 2018-19 ರಲ್ಲಿ ರೂ.50 ಲಕ್ಷ ಹೋಯಿತು. ಹಿಂದೆ ಸದನದಲ್ಲಿ ಮಾತು ಕೊಟ್ಟಿದ್ದಾರೆ. ದಯಮಾಡಿ ಎಲ್ಲ ಸದಸ್ಯರುಗಳಿಂದ ರೂ.450 ಕೋಟಿ ಬಿಡುಗಡೆಯಾಗಬೇಕು. ನಮ್ಮ ಕಾರ್ಯಕ್ರಮಗಳೆಲ್ಲವೂ ಅನುಮೋದನೆಯಾಗಿವೆ. ಅದನ್ನು ಮಾರ್ಚ್ 31ರೊಳಗೆ ಬಿಡುಗಡೆ ಮಾಡದಿದ್ದರೆ lapse ಆಗುತ್ತದೆ. ದಯಮಾಡಿ ಕೊಡಬೇಕು ಎಂದು ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು Governor's Address ಮೇಲೆ ಚರ್ಚೆ ಮಾಡುವಾಗ ಸದನಕ್ಕೆ ಹೇಳಿದ್ದರು. 2020-21ರಲ್ಲಿ ರೂ.50 ಲಕ್ಷ ಕೊಟ್ಟಿದ್ದಾರೆ. Rs.200 lakhs ನಲ್ಲಿ Rs.150 lakhs ಖರ್ಚು ಉಳಿಯಿತು. ಮತ್ತೆ 2019-20ರ ರೂ.39 ಲಕ್ಷದಷ್ಟು ಹಣ ಬಾಕಿ ಉಳಿದಿದ್ದು, ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಇದು ಬೇಗನೆ ಬಿಡುಗಡೆ ಆಗಲಿಲ್ಲ ಎಂದರೆ ಬಹಳ ಸಮಸ್ಯೆ ಆಗುತ್ತದೆ. ತಾವು ಕೆಳಮನೆಯಲ್ಲಿ ಹಂತ ಹಂತವಾಗಿ ಬಿಡುಗಡೆ ಮಾಡುತ್ತೇನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಎಂದು ಹೇಳಿರುವ ಹೇಳಿಕೆ ನಮ್ಮ ಗಮನಕ್ಕೆ ಬಂದಿತ್ತು. ದಯಮಾಡಿ ಆ point ಅನ್ನು clarify ಮಾಡಿದರೆ ಬಹಳ ಒಳ್ಳೆಯದಾಗುತ್ತದೆ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ, ಕಳೆದ discussion on Governor's Address ಸಮಯದಲ್ಲಿ ಕೊಡುತ್ತೇವೆ ಎಂದು ಮಾನ್ಯ ಶ್ರೀಕಂಠೇಗೌಡರ ಪ್ರಶ್ನೆಗೆ ಉತ್ತರ ಕೊಟ್ಟಿದ್ದರು. ಆದರೆ ಒಂದು paper ನಲ್ಲಿ ನೋಡಿದ ಸಂದರ್ಭದಲ್ಲಿ ಹಂತಹಂತವಾಗಿ ಬಿಡುಗಡೆ ಮಾಡುತ್ತೇವೆ ಎನ್ನುವ ವಿಷಯವನ್ನು ಹೇಳಿದ್ದಾರೆ. ಇವೆರಡು contradict ಆಗುತ್ತದೆ, ಇದನ್ನು ಸರಿಪಡಿಸುವ ಬಗ್ಗೆ ಒಂದು ವಿಚಾರ. ಎರಡನೆಯದಾಗಿ ಈ ಬಾರಿ ಏಳೆಂಟು ಜನ ಜೂನ್‌ಗೆ retire ಆಗುವವರಿದ್ದೇವೆ. ನಾವೆಲ್ಲರೂ ಜೂನ್‌ಗೆ retire ಆಗುತ್ತೇವೆ. ನಮಗೆ ಜೂನ್ ಆದಮೇಲೆ ಹಣ ಬಂದರೆ ಉಪಯೋಗಕ್ಕೆ ಬರುವುದಿಲ್ಲ. ನಮ್ಮ ಪರಿಸ್ಥಿತಿಯನ್ನು ಯೋಚನೆ ಮಾಡಿ, ನಮಗೆ ಬರಬೇಕಾದ್ದನ್ನು ದಯವಿಟ್ಟು release ಮಾಡಿಕೊಡಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ದಿನಾಂಕ 1–4–2019ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಉಳಿತಾಯ ಖಾತೆಯಲ್ಲಿ ಈ ಬಾಬ್ತು ರೂ.948.97 ಕೋಟಿ ಇದೆ. ಈಗಾಗಲೇ ತಲಾ ರೂ.50 ಲಕ್ಷಗಳಂತೆ ಎಲ್ಲರಿಗೂ ಎರಡು ಕಂತುಗಳನ್ನು ಬಿಡುಗಡೆ ಮಾಡಲಾಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದೇ ಕಂತು ಬಿಡುಗಡೆಯಾಗಿದೆ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:–** ಒಂದು ನಿಮಿಷ, ಎಲ್ಲರೂ ಕುಳಿತುಕೊಳ್ಳಿ, ನಂತರ ಏನು ಬೇಕಾದರೂ clarification ಕೇಳಲಿ.

**ಶ್ರೀ ಹೆಚ್.ಎಂ. ರೇವಣ್ಣ:–** ಕಳೆದ ಸಾರಿ ರೂ.900 ಕೋಟಿ ಬಗ್ಗೆ ಹೇಳಿದರು.

**ಶ್ರೀ ಬಿ.ಎಸ್. ಯಡಿಯೂರಪ್ಪ:–** ಅವರಿಗೆ ಇಷ್ಟು ಭರವಸೆ ಕೊಡುತ್ತೇನೆ, 2019–20ನೇ ಸಾಲಿನ Action Plan ಗೆ ರೂ.2 ಕೋಟಿಗಳಿಗೆ ಪೂರ್ಣ ಅನುಮೋದನೆ ಕೊಡಬೇಕೆಂದುಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಯಾವ್ಯಾವ work ಬೇಕು ಎಂದು ಕೊಡಲಿ, ಯಾರೇ ಜಿಲ್ಲಾಧಿಕಾರಿ ಮೂರ್ನಾಲ್ಕು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ದಿವಸಗಳಲ್ಲಿ ಅವರು ಕೊಟ್ಟಂತ work ಗೆ Action Plan ಮಾಡಿ ಕೆಲಸ ಶುರು ಮಾಡಿಸುತ್ತೇನೆ. ಹಣಕ್ಕೆ ಬರ ಇಲ್ಲ. ಎರಡನೆಯದಾಗಿ, ತಪ್ಪು ಗ್ರಹಿಕೆಯಿಂದ ಆಗಿರಬಹುದು. ತಲಾ ರೂ.50 ಲಕ್ಷಗಳಂತೆ ಎರಡು ಕಂತುಗಳನ್ನು ಬಿಡುಗಡೆ ಮಾಡಿದ್ದೇನೆ. ಅದಲ್ಲದೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಯೂ ಸಹ ನಮ್ಮ ಹತ್ತಿರ more than Rs.800 crore ಬಾಕಿ ಇದೆ. ಮೂರನೆಯದಾಗಿ ಯಾವುದೇ ಕಾರಣಕ್ಕೆ lapse ಆಗುವುದಿಲ್ಲ ಎಂಬ ಭರವಸೆಯನ್ನು ಎಲ್ಲ ಸದಸ್ಯರಿಗೂ ಕೊಡುತ್ತೇನೆ. ಮೇ-ಜೂನ್‌ನಲ್ಲಿ retire ಆಗುವವರು ಮುಂಚೆಯೇ Action Plan ಕೊಟ್ಟು clear ಮಾಡಿಸಿಕೊಂಡಿರುತ್ತಾರೆ. ಅದು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ, ಅದನ್ನು ಪೂರ್ಣ ಮಾಡಿಸಿಕೊಡುವ ಜವಾಬ್ದಾರಿ ನನ್ನದು.

**ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಶಾಸಕರಿಗೂ ಒಂದು ಪತ್ರವನ್ನು ಬರೆದಿದ್ದು, ಅದರಲ್ಲಿ ಶಾಸಕರ ನಿಧಿಯನ್ನು ಸದುಪಯೋಗಪಡಿಸಿಕೊಂಡಿಲ್ಲ, ಕೂಡಲೇ ಅದರ ವಿವರಗಳನ್ನು D.C., ರವರಿಗೆ ಕೊಡಬೇಕೆಂದು ಪತ್ರ ಬರೆದಿದ್ದಾರೆ. ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಸುಳ್ಳು ಮಾಹಿತಿ ಕೊಟ್ಟಿರಬಹುದೇನೋ, ಗೊತ್ತಿಲ್ಲ. ಏಕೆಂದರೆ ಎರಡು ಸಾರಿ ಅವರ ಪತ್ರ ಬಂದಿದೆ. ಈಗಾಗಲೇ ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಕಳುಹಿಸಿದ್ದೇವೆ. ರೂ.50 ಲಕ್ಷಗಳ ಅನುದಾನಕ್ಕೆ ತಕ್ಕಂತೆ ಪೂರಕವಾಗಿ ಪತ್ರವನ್ನು ಕಳುಹಿಸಿದ್ದೇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳ ಪತ್ರ ಬರುವುದಕ್ಕೂ ಮುಂಚೆ ಕೊಟ್ಟಿದ್ದೇವೆ. ಅಧಿಕಾರಿಗಳು ಅವರಿಗೆ ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು ಜಿಲ್ಲಾಧಿಕಾರಿಗಳ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ನಾನೊಬ್ಬ ಮುಖ್ಯಮಂತ್ರಿಯಾಗಿ ಮತ್ತು ಹಣಕಾಸಿನ ಸಚಿವನಾಗಿ ಭರವಸೆ ಕೊಡುತ್ತಿದ್ದೇನೆ. ರೂ.2 ಕೋಟಿಗಳಿಗೆ Action Plan ಮಾಡಬೇಕು, work ಪ್ರಾರಂಭ ಮಾಡಬೇಕು. ಯಾರಾದರೂ ಒಬ್ಬ Deputy Commissioner ಇನ್ನು ಮೂರ್‍ನಾಲ್ಕು ದಿವಸಗಳಲ್ಲಿ ಒಂದು ವ್ಯತ್ಯಾಸ ಮಾಡಿದರೆ, I will take action against that Officer. I will take that responsibility.

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2017-18ರಲ್ಲಿ ನಾವು M.L.C., ಆಗಿ ರೂ.2 ಕೋಟಿಗಳಿಗೆ Action Plan ಮಾಡಿ ಕಳುಹಿಸಿದ್ದೆವು. Sanction ಆಯಿತು. 2017-18ರಲ್ಲಿ Action Plan ಅನ್ನು approve ಮಾಡಿ D.C., ಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

Sanction Letter ಕೊಟ್ಟರು. ನಾನು ಹಡಗಲಿ ಕ್ಷೇತ್ರಕ್ಕೆ ರೂ.22 ಲಕ್ಷಗಳ grant ಕೊಟ್ಟಿದ್ದೆನು. ಅದು sanction ಆಯಿತು. ಅದಾದ ಮೇಲೆ ಆ Engineer ಒಂದೂವರೆ ವರ್ಷ ಅದನ್ನು ಕೆಳಗೆ ಹಾಕಿಕೊಂಡು ನಂತರ administrative approval ಗೆ ಕಳುಹಿಸಿದ. Administrative approval ಗೆ ಬರುವ ಹೊತ್ತಿಗೆ Planning Department ನಿಂದ Circular ಹೋಯಿತು. ಈ ಹಣವನ್ನು ಖರ್ಚು ಮಾಡದೇ ಇರುವುದರಿಂದ withdraw ಮಾಡಿದ್ದೇವೆ ಎಂದು ಆಯಿತು. ಇದು ಯಾರ ತಪ್ಪು? M.L.C.,ಗಳ ತಪ್ಪು ಅಲ್ಲವಲ್ಲ!

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಅಲ್ಲಿ local administrative problems ಗಳು ಇರುತ್ತವೆ. Sanction ಮಾಡಿದ ನಂತರ ಜಿಲ್ಲಾ ಪಂಚಾಯತ್ ಅಥವಾ Land Army ಯ Engineer ಮಾಡದಿದ್ದರೆ, it is the duty of the Deputy Commissioner to take action. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಗೆ ಮಾಡುತ್ತಾರೆ?

**ಶ್ರೀ ಕೆ.ಸಿ. ಕೊಂಡಯ್ಯ:-** ಅದು correct. ಆದರೆ ಹಣ withdraw ಮಾಡಿದರಲ್ಲ! Spend ಮಾಡಿಲ್ಲ ಎಂದು Planning Commission ರವರು withdraw ಮಾಡಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸರಿ, ಅಲ್ಲಿ ಮಾಡದೇ ಇರುವುದಕ್ಕೆ ಮಾಡಿದ್ದಾರೆ, ಅವರು local ನಲ್ಲಿ ಸರಿಮಾಡಿಕೊಳ್ಳಬೇಕು.

**ಶ್ರೀ ಕೆ.ಸಿ. ಕೊಂಡಯ್ಯ:-**ಮಾನ್ಯ ಸಭಾಪತಿಯವರೇ, local ಅಲ್ಲ. Planning Secretary ರವರಿಂದ ಪತ್ರ ಹೋಗಿದೆ. ನಾನು ನಾಳೆ ಆ ಪತ್ರಗಳನ್ನು ತೆಗೆದುಕೊಂಡು ಬಂದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಾಸಕರ ನಿಧಿಯಿಂದ ಬಂದ ಹಣವನ್ನು ಸರ್ಕಾರ release ಮಾಡಿದರೂ ಯಾವುದೇ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಮೂರು ವರ್ಷಗಳಾದರೂ implement ಆಗುವುದಿಲ್ಲ. ಇದರ ಬಗ್ಗೆ enquiry ಮಾಡಿಸಬೇಕು. ನಾವು ಕೊಟ್ಟಿರುವ ಪಟ್ಟಿ ಹಾಗೂ ಸರ್ಕಾರ release ಮಾಡಿರುವ ಹಣವನ್ನು ಏಕೆ ಬಳಕೆ ಮಾಡುತ್ತಿಲ್ಲ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಏನು ಕಾರಣ? 30–40% ವಸೂಲಿ ನಡೆಯುತ್ತಿದೆ. ನಾನು ಸತ್ಯವನ್ನು honest ಆಗಿ ಹೇಳುತ್ತಿದ್ದೇನೆ. ದಯವಿಟ್ಟು ಯಾವ್ಯಾವ ಜಿಲ್ಲಾಧಿಕಾರಿಗಳಲ್ಲಿ ಸರ್ಕಾರದ ಹಣ ಮತ್ತು ನಾವು ಕೊಟ್ಟಿರುವ ಪಟ್ಟಿಯಲ್ಲಿನ ಕೆಲಸಗಳು ಏಕೆ implement ಆಗಲಿಲ್ಲ? ಎಷ್ಟು ದಿವಸ delayಆಗಿದೆ.? ಅವರ ಮೇಲೆ ಯಾವ ಕ್ರಮ ಕೈಗೊಳ್ಳುತ್ತಾರೆ? ಅವರ ಮೇಲೆ ಕ್ರಮ ಕೈಗೊಳ್ಳಬೇಕು.

**(585)/19.03.2020/3.10/ಹೆಚ್‌ವಿ–ಎಂಡಿ**

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಹೇಳಿರುವಂತಹ ಮಾತುಗಳನ್ನು ನಾನು ಕೇಳಿದ್ದೇನೆ. ಕೆಲವು ಜಿಲ್ಲಾಧಿಕಾರಿಗಳು ಕೆಲವು ಕಡೆ ಶಾಸಕರು ಕೊಟ್ಟಂಥ ಕೆಲಸಕ್ಕೆ ಸಂಬಂಧಪಟ್ಟಂತೆ Action Plan clear ಮಾಡದೇ, ಕೆಲಸವನ್ನು ಪ್ರಾರಂಭ ಮಾಡದೇ ಇರುವಂತಹ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ತಕ್ಷಣವೇ ಈ ಬಗ್ಗೆ ನಿರ್ದೇಶನ ನೀಡುತ್ತಿದ್ದೇನೆ. ನಮ್ಮ ನಿಯಮಾವಳಿಗಳ ಪ್ರಕಾರ ಎರಡು ಕೋಟಿ ರೂಪಾಯಿಗಳಲ್ಲಿ ಯಾವ ಕೆಲಸವನ್ನು ತೆಗೆದುಕೊಳ್ಳಬೇಕೆನ್ನುವುದು ಮಾನ್ಯ ಶಾಸಕರುಗಳಿಗೆ ಸಂಬಂಧಪಟ್ಟ ವಿಚಾರವಾಗಿದೆ. ಇದರಲ್ಲಿ ಏನಾದರೂ ವ್ಯತ್ಯಾಸ ಮಾಡಿದ ಜಿಲ್ಲಾಧಿಕಾರಿಗಳ ಮೇಲೆ I will take action. ಇವತ್ತೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಮೂಲಕ ಎಲ್ಲರನ್ನು ಸಂಪರ್ಕಿಸಿ, ಪ್ರತಿಯೊಂದು ಜಿಲ್ಲೆಯ ವರದಿಯನ್ನು ತರಿಸಿಕೊಂಡು ಸರಿಪಡಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಈ ಗೊಂದಲ ಮತ್ತೊಮ್ಮೆ ಮುಂದುವರೆಯದಂತೆ ನೋಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ:1470

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಶರಣಪ್ಪ ಮಟ್ಟೂರ:–** ಸನ್ಮಾನ್ಯ ಸಭಾಪತಿಯವರೇ, 'ಎರವಲು ಸೇವೆ ಮತ್ತು ಓ.ಓ.ಡಿ. ಮೇಲೆ ಬಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ/ನೌಕರರ ಸಂಖ್ಯೆಯೆಷ್ಟು ಮತ್ತು ಪ್ರಾಧಿಕಾರದಿಂದ ನಿವೃತ್ತಿ ಹೊಂದಿದ ಅಧಿಕಾರಿ/ನೌಕರರನ್ನು ಸೇವೆಯಲ್ಲಿ ಮುಂದುವರಸಿದ್ದರೆ ಅವರುಗಳ ಸಂಖ್ಯೆಯೆಷ್ಟು' ಎನ್ನುವ ನನ್ನ ಪ್ರಶ್ನೆಗೆ, 'ಪ್ರಾಧಿಕಾರದ ಅಧಿಕಾರಿ ಮತ್ತು ನೌಕರರುಗಳ ಸಂಖ್ಯೆ ಒಟ್ಟು 202, ಎರವಲು ಮತ್ತು ಅನ್ಯ ಸೇವೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರರ ಸಂಖ್ಯೆ 207 ಆಗಿದೆ. ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ 22 ಎಂದು ಇದೆ. ಅದೇ ಸರ್ಕಾರ ಕೊಟ್ಟಿರುವ ಅನುಬಂಧದ ರೀತಿಯಲ್ಲಿ ಪ್ರಾಧಿಕಾರದಲ್ಲಿ ನಿವೃತ್ತಿ ಹೊಂದಿ ಪುನಃ ಸೇವೆಯಲ್ಲಿ ಮುಂದುವರೆದಿರುವ ನೌಕರರ ಸಂಖ್ಯೆಯನ್ನು ಕೊಟ್ಟಿದೆ. ಈ ರೀತಿ ನಿವೃತ್ತಿ ಆಗಿರುವವರನ್ನು ಪುನಃ ಸೇವೆಗೆ ತೆಗೆದುಕೊಂಡರೆ, ಅವರ ಮೇಲೆ ಯಾವುದೇ ರೀತಿಯಾದ ಜವಾಬ್ದಾರಿಯನ್ನು ನಿಗದಿಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆಕಾರಣಕ್ಕಾಗಿಯೇ ಸಾಕಷ್ಟು ಅಪರಾಧಗಳು ಆಗುತ್ತಿವೆ. ಅನುಕಂಪದ ಆಧಾರದ ಮೇಲೆ ಸಾಕಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದು ಬಾಕಿ ಉಳಿದಿದೆ. ಅವುಗಳನ್ನು ಪರಿಗಣನೆಗೆ ತೆಗೆದುಕೊಂಡು ಅವರುಗಳಿಗೆ ನೇಮಕಾತಿಯನ್ನು ಕೊಡಬೇಕಾಗಿದೆ. ಪ್ರಾಧಿಕಾರದಲ್ಲಿ ಸಾಕಷ್ಟು ಖಾಲಿ ಹುದ್ದೆಗಳಿವೆ ಅವುಗಳನ್ನು ತುಂಬುವುದಕ್ಕೆ ಸರ್ಕಾರಕ್ಕಿರುವ ತೊಂದರೆಯೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸುಮಾರು 389 ಹುದ್ದೆಗಳು ಖಾಲಿ ಇವೆಯೆಂದು ಸರ್ಕಾರ ಲಿಖಿತ ಉತ್ತರದಲ್ಲಿ ನೀಡಿದ್ದಾರೆ. ಅವುಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಆದಷ್ಟು ಬೇಗ ಕ್ರಮಕೈಗೊಳ್ಳಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸುಮಾರು 10 ಜನ ನಿವೃತ್ತಿ ಆಗಿರುವ ನೌಕರರನ್ನು ನೇಮಕ ಮಾಡಿಕೊಂಡಿದ್ದೇವೆ. ಅವರುಗಳು ಮೇಲಾಧಿಕಾರಿಗಳಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ಹೊರತು, ಅವರಿಗೆ ಬೇರೆ ಯಾವುದೇ ಜವಾಬ್ದಾರಿಗಳು ಇಲ್ಲ. ಬಹಳ ವರ್ಷಗಳಿಂದ ನೇಮಕಾತಿ ಆಗಿಲ್ಲ, ನೇಮಕಾತಿ ಮಾಡಬೇಕಾಗಿತ್ತು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದೇರೀತಿ 2015ರಿಂದ ಸುಮಾರು 43 ಜನ ನೌಕರರು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ್ದಾರೆ, ಇಲ್ಲಿ ಯಾವುದೇ ಪೆಂಡಿಂಗ್ ಉಳಿಸಿಕೊಂಡಿಲ್ಲ. ಯಾರನ್ನು ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾತ್ಕಾಲಿಕವಾಗಿ ಸೇವೆಗೆ ತೆಗೆದುಕೊಂಡಿದ್ದೇವೆ, ಅವರ ಅಗತ್ಯವಿಲ್ಲವೆಂದರೆ, ಅವರನ್ನು ನಾಳೆಯೇ ಕೈಬಿಡೋಣ. ಇವರುಗಳ ಮೇಲೆ ಯಾವುದೇ ಜವಾಬ್ದಾರಿಗಳಿಲ್ಲ, ಇವರು ಮೇಲಾಧಿಕಾರಿಗಳ ಸಹಾಯಕರಾಗಿ ಮಾತ್ರ ಇರುತ್ತಾರೆನ್ನುವ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರಃ–** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ02.03.2016ರಂದು ಸರ್ಕಾರ ತಂದಿರುವ ಒಂದು ಆದೇಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ; 'ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡತಕ್ಕದ್ದಲ್ಲ ಮತ್ತು ನಿವೃತ್ತರಿಗಾಗಿ ಪುನರ್ ನೇಮಕಾತಿಯ ಆಧಾರದ ಮೇಲೆ ಮುಂದುವರೆದ ಅಧಿಕಾರಿ/ನೌಕರರ ಸೇವೆ ಅಗತ್ಯವಾಗಿದೆಯೇ ಎನ್ನುವುದನ್ನು ಪರಿಶೀಲಿಸಿ ಸೇವೆಯನ್ನು ಕೂಡಲೇ ಜಾರಿಗೆ ಬರುವಂತೆ ಮುಕ್ತಾಯಗೊಳಿಸಿ ರಿಕ್ತ ಸ್ಥಾನಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ತುಂಬುವ ಬಗ್ಗೆ ಪರಿಶೀಲಿಸಬೇಕೆಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ' ಎಂದು ಇದೆ. ನಿವೃತ್ತರಾಗಿರುವವರನ್ನು ಪುನರ್ ನೇಮಕ ಮಾಡಬಾರದೆಂದು ಸರ್ಕಾರವೇ ಆದೇಶವನ್ನು ಹೊರಡಿಸಿದೆ. ಇದನ್ನು ಸಹ ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹೊಟ್ಟೆ ತುಂಬಿದವರಿಗೆ ಊಟ ಹಾಕುವುದಲ್ಲ, ಹೊಟ್ಟೆ ಹಸಿವಿದ್ದವರಿಗೆ ಊಟ ಹಾಕಬೇಕಾಗಿದೆ. ಬಹಳಷ್ಟು ಜನ well experienced youngsters ಇದ್ದಾರೆ. ನಿವೃತ್ತಿ ಹೊಂದಿರುವವರನ್ನು ಪುನಃ ಸೇವೆಗೆ ತೆಗೆದುಕೊಂಡರೆ ಅವರಿಗೆ ಏನು ಜವಾಬ್ದಾರಿ ಇರುತ್ತದೆ? ಹೊಸದಾಗಿ ನೇಮಕ ಮಾಡಿಕೊಂಡರೆ ಅವರಿಗೆ ಜವಾಬ್ದಾರಿ ಇರುತ್ತದೆ, ಕೆಲಸನೂ ಗೊತ್ತಿರುತ್ತದೆ. 'ಇದ್ದಾಂಗ ಆಗಲಿ ಮಾದಪ್ಪನ ಜಾತ್ರೆ' ಎನ್ನುವವರನ್ನು, ಏನೂ ಜವಾಬ್ದಾರಿ ಇಲ್ಲದವರಿಗೆ ಮತ್ತು ನಿವೃತ್ತಿ ಹೊಂದಿರುವವರನ್ನು ಕೆಲಸಕ್ಕೆತೆಗೆದುಕೊಳ್ಳುವ ಉದ್ದೇಶವೇನಿದೆ? ಬಹಳ ಜನ ಯುವಕರಿಗೆ ಉದ್ಯೋಗವಿಲ್ಲ ಅಂತಹವರಿಗೆ ಈ ಕೆಲಸವನ್ನು ಕೊಟ್ಟರೆ ಅನುಕೂಲವಾಗುತ್ತದೆನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, 10 ಜನ ನಿವೃತ್ತಿ ಹೊಂದಿರುವಂತಹ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಯಾವುದೇ ಜವಾಬ್ದಾರಿ ಇರುವುದಿಲ್ಲ. ಅವರು ಮೇಲಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ. ಇದು ನಾನು ಮಾಡಿರುವ ನೇಮಕಾತಿಯಲ್ಲ. ಹಿಂದೆ ಆಗಿರುವುದು. ಬೇಕಾದರೆ ಅದನ್ನು ಕೈಬಿಡೋಣ. 2015ನೇ ಇಸವಿಯಿಂದ ಅನುಕಂಪದ ಆಧಾರದ ಮೇಲೆ 43 ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ. ಯಾವುದೇ ಪೆಂಡಿಂಗ್ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ:1541+1540**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಚೌಡರೆಡ್ಡಿ:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಬಿವೃದ್ಧಿ ನಿಗಮ ನಿಯಮಿತದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 48 ಗುತ್ತಿಗೆ ನೌಕರರ ಪೈಕಿ ಎಷ್ಟು ನೌಕರರನ್ನು ಖಾಯಂಗೊಳಿಸಿ ಕಂಪನಿ ಸೇವೆಯಲ್ಲಿ ವಿಲೀನಗೊಳಿಸಲಾಯಿತು ಎನ್ನುವ ನನ್ನ ಪ್ರಶ್ನೆಗೆ '....48 ಗುತ್ತಿಗೆ ನೌಕರರ ಪೈಕಿ 33 ಮಂದಿ ನೌಕರರ ಸೇವೆಯನ್ನು ನಿರ್ದೇಶಕ ಮಂಡಳಿಯ ಅನುಮೋದನೆಯೊಂದಿಗೆ ವಿಲೀನಗೊಳಿಸಲಾಗಿದೆ. ಉಳಿದ 15 ಜನ ನೌಕರರನ್ನು ಖಾಯಂಗೊಳಿಸಿಲ್ಲ' ಎನ್ನುವ ಉತ್ತರವನ್ನು ನೀಡಿದ್ದಾರೆ. ಈ ಹಿಂದೆಯೂ ನಾನು ಈ ಪ್ರಶ್ನೆಯನ್ನು ಕೇಳಿದ್ದೆ ಆಗಲೂ ಸಹ ತಪ್ಪು ಉತ್ತರವನ್ನು ಸರ್ಕಾರ ನೀಡಿತ್ತು, ಇವತ್ತು ಸಹ ತಪ್ಪು ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರಿಗಳು ನೀಡಿದ್ದಾರೆ. ಇದಕ್ಕೊಂದು ಉದಾಹರಣೆಯನ್ನು ನಾನು ನೀಡುವುದಕ್ಕೆ ಬಯಸುತ್ತಿದ್ದೇನೆ. ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ 48 ಜನರ ಪೈಕಿ ಶ್ರೀನಿವಾಸ ಮೂರ್ತಿ ಮತ್ತು ಗೀತಾ ಚೋಗಲೆ ಎನ್ನುವವರು ದಿನಾಂಕ:01.07.2005ರಂದು KREDL (Karnataka Renewable Energy Development Ltd) ಸಂಸ್ಥೆಯ ಸೇವೆಗೆ ಒಂದೇ ದಿನ ಕೆಲಸಕ್ಕೆ ಸೇರಿರುತ್ತಾರೆ. ನಂತರ 33 ಜನರನ್ನು ವಿಲೀನಗೊಳಿಸಬೇಕಾದರೆ, ಗೀತಾ ಚೋಗಲೆ ಅವರನ್ನು ವಿಲೀನಗೊಳಿಸುತ್ತಾರೆ. ಶ್ರೀನಿವಾಸ ಮೂರ್ತಿಯನ್ನು ಕೈಬಿಡುತ್ತಾರೆ. ಉಳಿದ 15 ಜನರನ್ನು ಯಾವ ಕಾರಣದಿಂದಾಗಿ ಕೈಬಿಡಲಾಗಿದೆ ಎಂದು ನಾವು ಪ್ರಶ್ನೆ ಮಾಡಿದರೆ. ಅವರನ್ನು ಹೊರಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ ಎಂದು ಹೇಳುತ್ತಾರೆ. ನಂತರ ಈ 15 ಜನ ನೌಕರರು ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದಾರೆ. ಉಚ್ಚ ನ್ಯಾಯಾಲಯದಲ್ಲಿ ಈ 15 ಜನರು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿದ್ದಾರೆ. ಅವರನ್ನು ಸೇವೆಯಲ್ಲಿ ವಿಲೀನಗೊಳಿಸಬೇಕೆಂದು ತೀರ್ಮಾನ ಹೊರಬರುತ್ತದೆ. ಉಚ್ಚ ನ್ಯಾಯಾಲಯದ ಈ ತೀರ್ಮಾನವನ್ನು ಸರ್ಕಾರದ ಗಮನಕ್ಕೆ ತಂದಾಗ, ಅಂದಿನ ಸಚಿವರು ಇವರುಗಳ ಸೇವೆಯನ್ನು ವಿಲೀನಗೊಳಿಸಬೇಕೆಂದು ಒಂದು ಆರ್ಡರ್ ಕಳುಹಿಸಿಕೊಡುತ್ತಾರೆ. ಆದರೆ, ಅಧಿಕಾರಿಗಳು, 'ಇಲ್ಲ ಅವರನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ' ಎಂದು ಅದನ್ನು ಹಾಗೆಯೇ ಪೆಂಡಿಂಗ್‌ನಲ್ಲಿಟ್ಟಿದ್ದಾರೆ. ಆ 48 ಜನರು ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ಸೇರಿರುತ್ತಾರೆ. ಅವರಲ್ಲಿ 33 ಜನರನ್ನು ಸೇವೆಯಲ್ಲಿ ವಿಲೀನಗೊಳಿಸಲಾಗುತ್ತದೆ. ಒಂದೇ ದಿನ ಕೆಲಸಕ್ಕೆ ಸೇರಿದ ಇಬ್ಬರ ಪೈಕಿ ಒಬ್ಬರನ್ನು ವಿಲೀನಗೊಳಿಸಿ, ಮತ್ತೊಬ್ಬರನ್ನು ಕೈಬಿಡುತ್ತಾರೆ. ಆದರೆ, ಅಧಿಕಾರಿಗಳು ಆ 15 ಜನರು ಹೊರಗುತ್ತಿಗೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಧಾರದ ಮೇಲೆ ಸೇವೆ ನೇಮಕಗೊಂಡಿದ್ದಾರೆಂದು ಹೇಳುತ್ತಿದ್ದಾರೆ. ಆ 15 ಜನರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದರೆನ್ನುವುದು ಖಚಿತವಾದರೆ, ಆ ಬಗ್ಗೆ ಸಿ.ಓ.ಡಿ. ತನಿಖೆಯಾಗಲಿ ನಾನು ರಾಜೀನಾಮೆಯನ್ನು ನೀಡುತ್ತೇನೆ. ಏತಕ್ಕೋಸ್ಕರ ಈ ರೀತಿಯ ಅನ್ಯಾಯವನ್ನು ಎಸಗಲಾಗುತ್ತಿದೆ? 33 ಜನರಿಗೊಂದು ನ್ಯಾಯ ಈ 15 ಜನರಿಗೊಂದು ನ್ಯಾಯವೇ? ಆ 15 ಜನರು ಬಡ ಕುಟುಂಬದಿಂದ ಬಂದವರು ಅವರು ನ್ಯಾಯಾಲಯಕ್ಕೆ, ಸರ್ಕಾರಿ ಕಛೇರಿಗಳಿಗೆ ಮತ್ತು ನಮ್ಮ ಬಳಿ ಸುತ್ತಿಸುತ್ತಿ ಸಾಕ್ಾಗಿ ಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಚೌಡರೆಡ್ಡಿ ಮತ್ತು ನಾನು ಒಟ್ಟಿಗೆ ಈ ಪ್ರಶ್ನೆಯನ್ನು ಕೊಟ್ಟಿದ್ದೇವೆ. ದಿನಾಂಕಃ18.07.2019ರಲ್ಲಿ ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನು ಕೇಳಿದ್ದೇವು, ಆಗ ಇದೇ ಉತ್ತರವನ್ನು ನೀಡಲಾಗಿತ್ತು. ಮಾನ್ಯ ಚೌಡರೆಡ್ಡಿಯವರು ಹೇಳಿದಂತೆ ಈ 48 ಜನರು ಕ್ರೆಡಲ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ. ಇವರಲ್ಲಿ ಶ್ರೀನಿವಾಸ ಮೂರ್ತಿ ಮತ್ತು ಗೀತಾ ಚೋಗಲೆ ಎನ್ನುವವರು ದಿನಾಂಕಃ01.07.2005ರಂದು KREDLಸಂಸ್ಥೆಯ ಸೇವೆಗೆ ಒಂದೇ ದಿನ ಕೆಲಸಕ್ಕೆ ಸೇರಿರುತ್ತಾರೆ.ಗೀತಾ ಚೋಗಲೆ ಅವರನ್ನು ವಿಲೀನಗೊಳಿಸುತ್ತಾರೆ. ಶ್ರೀನಿವಾಸ ಮೂರ್ತಿಯವರನ್ನು ಕೈಬಿಡುತ್ತಾರೆ. ಉಚ್ಚ ನ್ಯಾಯಾಲಯ 15 ಜನರನ್ನು ಸೇವೆಯಲ್ಲಿ ವಿಲೀನಗೊಳಿಸಬೇಕೆಂದು ತೀರ್ಪು ಕೊಟ್ಟಿದ್ದರು ಸಹ ಹಿಂದಿನ ಮಂತ್ರಿಗಳಿಗೂ ತಪ್ಪು ಮಾಹಿತಿಯನ್ನು ನೀಡಿದ್ದಾರೆ, ಈಗ ತಮಗೂ ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಯಾರೋ ಒಬ್ಬ ಅಧಿಕಾರಿ ತಪ್ಪು ಮಾಡಿದರೆ, ಈಗಾಗಲೇ ಕೆಲಸ ಮಾಡಿರುವ ಈ 15 ಜನರ ಜೀವನವನ್ನು ಏತಕ್ಕೋಸ್ಕರ ಹಾಳು ಮಾಡುತ್ತಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ರೀತಿ ತಪ್ಪು ಮಾಡಿದ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ಎಸ್.ಯಡಿಯೂರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಆ 15 ಜನರಲ್ಲಿ 8 ಜನರು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದರು. 04 ಜನರು 2006ರ ನಂತರ ನೇಮಕವಾದವರು, ಇಬ್ಬರು ಒಂದೇ ಒಂದು ವರ್ಷ ಸೇವಾವಧಿಯನ್ನು ಪೂರ್ಣಗೊಳಿಸದೇ ಇರುವವರು, ಒಬ್ಬರು ಅರ್ಹರಿದ್ದರೂ ಖಾಯಂ ಮಾಡಲಾಗಿಲ್ಲ. ಈ 15 ಜನರನ್ನು ದಿನಾಂಕಃ31.01.2009ರಂದೇ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಈಗ ನಾನೇನು ಮಾಡಬಹುದು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಎರಡನೆಯದಾಗಿ, ಕೆಲವರು ಉಚ್ಚ ನ್ಯಾಯಾಲಯದ ಮೊರೆ ಹೋಗುತ್ತಾರೆ. KREDLನವರು, ದಿನಾಂಕಃ04.08.2008ರಲ್ಲಿ ಅರ್ಜಿದಾರರು ನೀಡಿದ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಅಂಗೀಕಾರಕ್ಕೆ ಅರ್ಹವಲ್ಲವೆಂದು ಅರ್ಜಿಯನ್ನು ತಿರಸ್ಕರಿಸಿ ಹಿಂಬರಹವನ್ನು ನೀಡಿರುತ್ತಾರೆ. ಈ ವಿಚಾರವಾಗಿ ದಿನಾಂಕಃ22.07.2016 ರಂದು ಮತ್ತು ದಿನಾಂಕಃ10.11.2016ರಂದು ಎರಡು ಬಾರಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದುಕೊಳ್ಳಲಾಯಿತು. ದಿನಾಂಕಃ22.07.2016ರಲ್ಲಿ ಪರಿಶೀಲಿಸಬಹುದೆಂದು ಮತ್ತು ಹಿಂಬರಹದ ವಿರುದ್ಧ ನ್ಯಾಯಾಲಯದಲ್ಲಿ ಚಾಲೆಂಜ್ ಮಾಡಬಹುದೆಂದು ಹೇಳಲಾಗಿತ್ತು. ಆದರೆ, ಅವರು ಪುನಃ ನ್ಯಾಯಾಲಯದಲ್ಲಿ ಚಾಲೆಂಜ್ ಮಾಡಲಿಲ್ಲ. ಆದ್ದರಿಂದ ಈ 15 ಜನ ಸಿಬ್ಬಂದಿಗಳನ್ನು ದಿನಾಂಕಃ 31.01.2009ರಂದೇ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಈಗ ನಾನೇನು ಮಾಡುವ ಸ್ಥಿತಿಯಲ್ಲಿಲ್ಲ. ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ, ಅರ್ಜಿ ಪರಿಶೀಲನೆಗಾಗಿ ಸಲ್ಲಿಸಲಾಗಿದ್ದು, ಮಂಡಲಿಯವರು ಅವರು ಅರ್ಹರಿಲ್ಲವೆಂದು ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಈ ಹಂತದಲ್ಲಿ ಪುನಃ ಅವರನ್ನು ಖಾಯಂಗೊಳಿಸುವುದು ಮತ್ತು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಅಧಿಕಾರವಿಲ್ಲ, ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

**(586) 19.32020 3.20 ಪಿಕೆ:ಎಂಡಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:**-ಮಾನ್ಯ ಮುಖ್ಯಮಂತ್ರಿಗಳೇ, ನಿಮಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. 15 ಜನರಲ್ಲಿ 12 ಜನ ಹೊರಗುತ್ತಿಗೆಯವರು ಎಂದು ತಾವೇ ಹೇಳಿದಿರಿ. ಆದರೆ ನಿಗಮವೇ ಕೋರ್ಟ್‌ಗೆ affidavit ಸಲ್ಲಿಸಿ 15 ಜನ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದೆ. ಈ ಹೆಣ್ಣು ಮಗಳನ್ನು ಮತ್ತು ಶ್ರೀನಿವಾಸಮೂರ್ತಿಯವರನ್ನು ಒಂದೇ ದಿನ ನೇಮಿಸಿಕೊಂಡಿದ್ದರೂ, ಹೆಣ್ಣು ಮಗಳನ್ನು ಖಾಯಂ ಮಾಡಿ ಶ್ರೀನಿವಾಸಮೂರ್ತಿಯವರನ್ನು ಏಕೆ ಖಾಯಂ ಮಾಡಲಿಲ್ಲ? ತಾವು ದಯವಿಟ್ಟು ಇದರ ದಾಖಲೆಗಳನ್ನು ತೆಗೆದು ನೋಡಿ. ನಾನೇ ಕಛೇರಿಗೆ ಹೋಗಿ 3 ಎಂಡಿಗಳ ಗಮನ ಸೆಳೆದಿದ್ದೇನೆ. ಅಧಿಕಾರಿಗಳು ತಮಗೆ ಬೇಕಾದ ಹಾಗೆ affidavit ಸಲ್ಲಿಸುವುದು ಮತ್ತು ತಮಗೆ ತಪ್ಪು ಮಾಹಿತಿ ಕೊಟ್ಟರೆ ಹೇಗೇ? ದಯವಿಟ್ಟು ನೀವು ಚೆಕ್ ಮಾಡಿಸಿ. ಶ್ರೀಮತಿ ಚೌಗಲೇ ಅವರನ್ನು ಖಾಯಂ ಮಾಡಿ ಶ್ರೀನಿವಾಸಮೂರ್ತಿಯವರನ್ನು ಖಾಯಂ ಮಾಡಿಲ್ಲ. ಇದು ತಪ್ಪಲ್ಲವೇ? ಸಂಬಂಧಪಟ್ಟ ಎಂಡಿಗೆ ಈ ಕುರಿತು ಸಾಕಷ್ಟು ಸಲ explain ಮಾಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹಾಗಾದರೆ ಅವರು '15 ಜನ ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಿದ್ದಾರೆ' ಎಂದು ಏಕೆ affidavit ಕೊಟ್ಟರು? ಅಧಿಕಾರಿಗಳು ಈ ರೀತಿ ಸದನಕ್ಕೆ ಉತ್ತರ ಕೊಡುವ ಕೆಲಸ ಮಾಡಿದರೆ ಹೇಗೆ?

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಗಳೆ, ಈ ಎಲ್ಲಾ 15 ಜನರನ್ನು ದಿನಾಂಕ 31.1.2009 ರಂದು ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ಅವರ್‍ಯಾರೂ ಸಹ ಉಚ್ಚನ್ಯಾಯಾಲಯದ ಮುಂದೆ ಮತ್ತೆ ಹೋಗಲಿಲ್ಲ. ಹಾಗಾಗಿ ಈಗ ನಾನು ಏನೂ ಮಾಡುವ ಸ್ಥಿತಿಯಲ್ಲಿಲ್ಲ. ಹಿಂದೆ ಆಗಿರುವಂತಹ ಅನಾಹುತವನ್ನು ನಾನು ಹೇಗೆ ಸರಿಪಡಿಸುವುದಕ್ಕೆ ಆಗುತ್ತದೆ? ಉಚ್ಚನ್ಯಾಯಾಲಯಕ್ಕೆ ಹೋದರು, ಅವರು ಇದನ್ನು ತಿರಸ್ಕಾರ ಮಾಡಿದರು. ಅದಾದ ಮೇಲೆ ಇವರು ಅಪೀಲ್ ಹೋಗದೇ ಇದ್ದುದಕ್ಕೆ ತಿರಸ್ಕಾರ ಆಯಿತು. ಇದರ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ಚಾಲೆಂಜ್ ಮಾಡಬಹುದಾಗಿತ್ತು. ಆದರೆ ಅವರು ಚಾಲೆಂಜ್ ಮಾಡಲಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಗೀತಾ ಚೌಗಲೆ ಎನ್ನುವವರು ದಿನಾಂಕ 1.7.2005ರಲ್ಲಿ ನೇಮಕವಾಗಿ ನಂತರ ಅವರನ್ನು ಪರ್ಮಿನೆಂಟ್ ಮಾಡಿದರು. ಆದರೆ ಶ್ರೀನಿವಾಸಮೂರ್ತಿಯವರೂ ಸಹ ದಿನಾಂಕ 1.7.2005ರಲ್ಲಿ ನೇಮಕವಾದರೂ ಅವರನ್ನು ಕೈಬಿಟ್ಟಿದ್ದಾರೆ. ಅಧಿಕಾರಿಗಳು ಕೋರ್ಟ್‌ನಲ್ಲಿ affidavit ಕೊಟ್ಟು ಅಲ್ಲೊಂದು ಹೇಳುತ್ತಾರೆ, ಸದನದಲ್ಲಿ ಉತ್ತರ ಕೊಡುವಾಗ ಇನ್ನೊಂದು ರೀತಿಯಲ್ಲಿ ಹೇಳಿಸುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದಾಗ ಹೈಕೋರ್ಟ್ ಇವರನ್ನು ಖಾಯಂ ಮಾಡಿ ಎಂದು ಹೇಳಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅ ಎಲ್ಲಾ ಪ್ರಕ್ರಿಯೆಗಳು ಮುಗಿದು ಅಲ್ಲಿ ನ್ಯಾಯ ಸಿಗದೇ ಇರುವಾಗ ನಮ್ಮ ಹತ್ತಿರ ಬಂದಿದ್ದಾರೆ. ಇಲ್ಲೂ ಸೂಕ್ತ ರೀತಿಯಲ್ಲಿ ಸ್ಪಂದಿಸದೇ ಹೋದರೆ ಹೇಗೇ? ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಗಳೇ, ಪ್ರಶ್ನೆಗಳಿಗೆ ತಪ್ಪು ಉತ್ತರಗಳನ್ನು ಅಥವಾ ತಪ್ಪು ಮಾಹಿತಿ ಕೊಡುತ್ತಿರುವ ಬಗ್ಗೆ ಕಳೆದ 3 ದಿನಗಳಿಂದ ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳು ಕೊಡುವ ಉತ್ತರದ ಮಾಹಿತಿಯಾದರೂ ಸರಿಯಾಗಿ ಇರಬೇಕು ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಗಳೇ, ಇಲ್ಲಿ ಉಮಾದೇವಿ ಪ್ರಕರಣ ಅನ್ವಯಿಸುವುದಿಲ್ಲ. ಇಂಧನ ಇಲಾಖೆಯ ವ್ಯಾಪ್ತಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ KREDL (Karnataka Renewable Energy Development Ltd)ಅಡಿ ಬರುತ್ತಿದ್ದು, ಇದು ಒಂದು ಸರ್ಕಾರದ ಉದ್ದಿಮೆ ಆಗಿರುತ್ತದೆ. ನೌಕರರ ನೇಮಕಾತಿಗೆ ಸಂಬಂಧಪಟ್ಟಂತೆ ಸಿ & ಆರ್ ವೃಂದ ಮತ್ತು ನೇಮಕಾತಿ ನಿಬಂಧನೆಗಳು 2001ರ ಪುಟ ಸಂಖ್ಯೆ 5 ರಲ್ಲಿ 3.8 ಒಳಗೊಳ್ಳುವಿಕೆಯ ಪ್ರಾವಧಾನವಿದ್ದು, ಯಾರೇ ಒಬ್ಬ ವ್ಯಕ್ತಿ ಕಂಪನಿಯಲ್ಲಿ ಗುತ್ತಿಗೆ ಅಡಿಯಲ್ಲಾಗಲಿ ಅಥವಾ ಅಡಾಕ್ ಮಾನವ ಶಕ್ತಿ ಏಜೆನ್ಸಿ ಮುಖಾಂತರವಾಗಲಿ, ಎರಡು ವರ್ಷಗಳ ಕಾಲ ಕಾರ್ಯನಿರ್ವಹಿಸಿದರೆ ಅವರನ್ನು ಕಂಪನಿ ಸೇವೆಯಲ್ಲಿ ವಿಲೀನ ಮಾಡಬೇಕು ಎಂದು ಸಿ & ಆರ್ ನಿಯಮದಲ್ಲಿದೆ. ಆದರೆ ಅದನ್ನು ತಿದ್ದುಪಡಿ ಮಾಡಿಕೊಂಡು, ಸರ್ಕಾರವು ಕಂಪನಿ ಸಿ. & ಆರ್ ವೃಂದ ಮತ್ತು ನೇಮಕಾತಿ ನಿಯಮ 2001ರ ಪುಟ ಸಂಖ್ಯೆ 5 ರಲ್ಲಿ 3.8 ಒಳಗೊಳ್ಳುವಿಕೆ, ಪ್ರಾವಧಾನಕ್ಕೆ ತಿದ್ದುಪಡಿ ಮಾಡಿ ಕನಿಷ್ಠ ಸೇವಾ ಅವಧಿಯನ್ನು 2 ವರ್ಷದಿಂದ 1 ವರ್ಷಕ್ಕೆ ಇಳಿಸಿ ದಿನಾಂಕ 28.7.2006 ರಂದು ಅನುಮೋದನೆ ನೀಡಿರುತ್ತದೆ. ಇದು ಉಮಾದೇವಿ ಪ್ರಕರಣಕ್ಕೆ ಸಂಬಂಧಪಡುವುದಿಲ್ಲ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ನನ್ನ ಇತಿಕಟ್ಟಿನಲ್ಲಿ ಏನಾದರೂ ನ್ಯಾಯ ಒದಗಿಸಿ ಕೊಡುವುದಕ್ಕೆ ಸಾಧ್ಯವಾದರೆ ಪರಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ. ನಿಮ್ಮ ಜೊತೆ ಚರ್ಚೆ ಮಾಡುತ್ತೇನೆ. ಅಧಿಕಾರಿಗಳ ಜೊತೆ ಸಹ ಚರ್ಚೆ ಮಾಡುತ್ತೇನೆ. ಇದು ದಿನಾಂಕ 30.1.2009ರಲ್ಲೇ 15 ಜನ ಸಿಬ್ಬಂದಿಯನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭ ಇದ್ದಾಗ ಸಂಬಂಧಪಟ್ಟ ಅಧಿಕಾರಿಗಳು ಎಚ್ಚರಿಕೆಯಿಂದ ಮಾಹಿತಿ ಒದಗಿಸಿ ಕೊಡಬೇಕಾಗುತ್ತದೆ. ಈ ರೀತಿ ತಪ್ಪು ಮಾಹಿತಿ ಕೊಡುವುದು ಸರಿಯಲ್ಲ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ನಾನು ಕೊಟ್ಟಿರುವ ಉತ್ತರದಲ್ಲಿ ಏನೂ ವ್ಯತ್ಯಾಸ ಇಲ್ಲ. ಉತ್ತರ ಸರಿಯಾಗಿದೆ. ನಿಮ್ಮನ್ನು ಚರ್ಚೆಗೆ ಕರೆಯುತ್ತೇನೆ. ಇದರ ಬಗ್ಗೆ ಪುನರ್ಪರಿಶೀಲನೆ ಮಾಡಿ ಅವರಿಗೆ ನ್ಯಾಯ ಒದಗಿಸುವುದಕ್ಕೆ ಅವಕಾಶ ಇದ್ದರೆ, ಆ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಒಬ್ಬರಿಗೊಂದು, ಇನ್ನೊಬ್ಬರಿಗೊಂದು ನ್ಯಾಯ ಆಗಬಾರದು.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಈ ನಿಟ್ಟಿನಲ್ಲಿ ಚರ್ಚೆ ಮಾಡಿ ಸೂಕ್ತ ಕ್ರಮ ಕೈಗೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ : 1420 + 1548

### (ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಒದಗಿಸಿರುವುದಕ್ಕೆ ಧನ್ಯವಾದಗಳನ್ನು ಹೇಳುತ್ತೇನೆ. ಬಾಂಗ್ಲಾ ವಲಸಿಗರನ್ನು ಕಂಡುಹಿಡಿದು ಅವರನ್ನು ವಾಪಸ್ಸು ಕಳುಹಿಸುವ ನಿಟ್ಟಿನಲ್ಲಿ 6 ತಿಂಗಳಿಂದ ಏನು ಕಾರ್ಯನಿರತರಾಗಿದ್ದಾರೋ ಅದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆಗಲೇ ವಿರೋಧ ಪಕ್ಷದ ಮಾನ್ಯ ಹಿರಿಯ ಸದಸ್ಯರೊಬ್ಬರು, ಪ್ರಶ್ನೋತ್ತರವನ್ನು ತೆಗೆದುಕೊಳ್ಳುವ ಮೊದಲೇ ಆ ಉತ್ತರದಲ್ಲಿನ ಒಂದು ಅಂಶವನ್ನು ಕೋಟ್ ಮಾಡಿ 600 ಜನ ಮಾತ್ರ ವಲಸಿಗರಿದ್ದಾರೆ ಎಂದು ಹೇಳಿದರು. ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸಾವಿರಾರು ಜನ ಬಾಂಗ್ಲಾ ವಲಸಿಗರು ಇದ್ದಾರೆ. ತಾವು ಕೇಂದ್ರ ಸರ್ಕಾರದ ಜೊತೆ ಕೈಜೋಡಿಸಿ ವಲಸಿಗರನ್ನು ಗುರುತಿಸಲು ಒಂದು Task Force ಮಾಡಬೇಕು. ಬಾಂಗ್ಲಾ ದೇಶೀಯರು ಇಲ್ಲಿಗೆ ಜೀವನಕ್ಕೆಂದು ಬಂದು ಭಯೋತ್ಪದನಾ ಚಟುವಟಿಕೆಗಳಲ್ಲಿ ತೊಡಗಿದ್ದಾರೆ, ಡ್ರಗ್ ಮಾಫಿಯಾಗಳ ಜೊತೆ ಕೈಜೋಡಿಸಿದ್ದಾರೆ. ಇದನ್ನು ನಿಯಂತ್ರಣ ಮಾಡಲು ಒಂದು Task Force ರಚನೆ ಮಾಡಬೇಕು. ಈ ಜನ ಸರ್ಕಾರಿ ನೌಕರರ ಜೊತೆ ಕೈಜೋಡಿಸಿ ಆಧಾರ್ ಕಾರ್ಡ್‌ಗಳನ್ನು ಮಾಡಿಸಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಸರ್ಕಾರಿ ಕರ್ಮಚಾರಿಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರಾಮನಗರದಲ್ಲೂ ಇವರು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವ ವಿಷಯ ಕೇಳಿಬಂತು. ಇಂಥದ್ದನ್ನು ಸರ್ಕಾರ ನಿಯಂತ್ರಣ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಬಾಂಗ್ಲಾದೇಶದಿಂದ ಬಂದಿರುವ ವಲಸಿಗರನ್ನು ವಿಂಗಡಿಸಿದ್ದೇವೆ. ಕೆಲವರು ಅನಧಿಕೃತ ದಾಖಲೆಯ ಮೇಲೆ ಬಂದಿದ್ದಾರೆ. ಕೆಲವರು ಬಂದು ಅವರ ವೀಸಾ ಅವಧಿ ಮುಗಿದಿದೆ. ಇನ್ನು ಕೆಲವರು ಪಶ್ಚಿಮ ಬಂಗಾಳದಲ್ಲಿ 180 ದಿವಸ ಇದ್ದು, ಆಧಾರ್ ಕಾರ್ಡ್‌ಗಳನ್ನು ಮಾಡಿಕೊಂಡು ಬಂದಿರುವವರೂ ಇದ್ದಾರೆ. ಕೆಲವರು ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ, ಕೆಲವರು ಅಕ್ರಮ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾರೆ. ಇದು ಕೇವಲ ಬೆಂಗಳೂರಿಗೆ ಸೀಮಿತವಲ್ಲ, ಅವರು ಕರಾವಳಿ ಪ್ರದೇಶಗಳಿಗೂ ಹೋಗುತ್ತಿದ್ದಾರೆ. ನಮ್ಮ ಮಾಹಿತಿ ಪ್ರಕಾರ 577ಜನರನ್ನು ಗುರುತಿಸಿದ್ದೇವೆ. ಅದರಲ್ಲಿ 179 ಜನರನ್ನು through diplomatic channels ಮತ್ತು ಕೋರ್ಟ್ ಆದೇಶದ ಮೇಲೆ ವಾಪಸ್ಸು ಕಳುಹಿಸಿದ್ದೇವೆ. ಇನ್ನು 395ಪ್ರಕರಣಗಳು ಬಾಕಿ ಇವೆ. ಅವುಗಳು ಕೋರ್ಟ್‌ನಲ್ಲಿ ತೀರ್ಮಾನವಾದ ತಕ್ಷಣ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾನ್ಯ ಸಭಾಪತಿಯವರೇ, ಆ ಜನ ಬೇರೆ ಬೇರೆ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ಎನ್ನುವ ಶಂಕೆ ಏನಿತ್ತು ಅದು ಹಲವಾರು ಪ್ರಕರಣಗಳಲ್ಲಿ ದೃಢಪಟ್ಟಿದೆ. ಕೇವಲ ಬಾಂಗ್ಲಾದೇಶದವರಲ್ಲ, ನೈಜೀರಿಯಾ, ಕೀನ್ಯಾ ದೇಶದ ಜನ ಕೂಡ ಇದ್ದು, ಕಾನೂನಿಗೆ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಂಡಿರುವುದು ಕಂಡು ಬಂದಿದೆ. ನಮಗೆ ಸಣ್ಣ ಆತಂಕ ಇರುವುದು ಏನೆಂದರೆ, ಅವರನ್ನು ಗುರುತಿಸಿ ಹೊರಗೆ ಹಾಕುವಾಗ ನಮಗೆ ಕೇಂದ್ರ ಸರ್ಕಾರದ ಸಹಕಾರ ಬೇಕಾಗುತ್ತದೆ ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಸಹಕಾರ ಸಹ ಬೇಕಾಗುತ್ತದೆ. ಮೊನ್ನೆ ನಾವು 63 ಜನರನ್ನು ವಾಪಸ್ಸು ಕಳುಹಿಸುವಂತಹ ಸಂದರ್ಭದಲ್ಲಿ ಹೌರಾ ಸ್ಟೇಷನ್‌ನಲ್ಲಿ ಮೂರು ದಿವಸ ಯಾರದೇ ಸಹಾಯ ಇಲ್ಲದೇ ಇಟ್ಟುಕೊಳ್ಳುವ ಪ್ರಸಂಗ ಬಂತು. ಕೊನೆಗೆ BSF (Border Security Force) Chief ಗೆ ನಮ್ಮ DG (Director General) ಯವರು ಮಾತನಾಡಿ ಬಾಂಗ್ಲಾ ಬಾರ್ಡರ್‌ಗೆ ಕಳುಹಿಸುವಂತಹ ಕೆಲಸವಾಯಿತು. ಇಷ್ಟೆಲ್ಲಾ ತೊಂದರೆಗಳ ಮಧ್ಯೆಯೂ ನಾವು ಶಿಸ್ತಿನ ಕ್ರಮ ಜರುಗಿಸುತ್ತೇವೆ. ಯಾರ್‍ಯಾರು ಅಕ್ರಮವಾಗಿ ನೆಲೆಸಿದ್ದಾರೋ ಅವರನ್ನು ಕಾನೂನಾತ್ಮಕ ಪ್ರಕ್ರಿಯೆಯ ಮುಖಾಂತರ ಬಾಂಗ್ಲಾ ದೇಶಕ್ಕೆ ಕಳುಹಿಸಲು ಕ್ರಮ ವಹಿಸುತ್ತೇವೆ.

ಮಾನ್ಯ ಸದಸ್ಯರು ಇನ್ನೊಂದು ಉಪಪ್ರಶ್ನೆ ಕೇಳಿದರು. ನಕಲಿ ಆಧಾರ್ ಕಾರ್ಡ್ ಯಾರು ಒದಗಿಸುತ್ತಿದ್ದರೋ ಅವರನ್ನು ಗುರುತಿಸಲಾಗಿದೆ. ಅವರಲ್ಲಿ ಜಯನಗರದ ಜನರಲ್ ಆಸ್ಪತ್ರೆಯಲ್ಲಿ ಶ್ರೀಮತಿ ಸಿ.ಎಂ.ನಾಗಲಕ್ಷ್ಮೀ ಎನ್ನುವವರು ಇಂತಹ ಕಾರ್ಯದಲ್ಲಿ ತೊಡಗಿದ್ದರು. ಅವರ ಮೇಲೆ ಈಗಾಗಲೇ ಕೇಸ್ ಹಾಕಿದ್ದೇವೆ.

**(587) 19-03-2020 3.30 ಡಿಎಸ್-ಎಕೆ**

**ಶ್ರೀಬಸವರಾಜ ಬೊಮ್ಮಾಯಿ(ಮುಂದು):-**

ಬೆಳಂದೂರು ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣ ಇದೆ. ಅಲ್ಲಿ ನಕಲಿ ಆಧಾರ್ ಕಾರ್ಡ್ ಕೊಡುವುದಕ್ಕೆ ಸಹಕಾರ ಮಾಡಿದ್ದಾರೆ. ಅವರ ಮೇಲೂ ಕೂಡ ಕೇಸ್ ಹಾಕಿದ್ದೇವೆ. ಕುಮಾರಸ್ವಾಮಿ ಲೇಔಟ್‌ನಲ್ಲಿ ಹಲವಾರು ಪ್ರಕರಣಗಳು ದಾಖಲಾಗಿವೆ. ಎಲ್ಲೆಲ್ಲಿ ಈ ರೀತಿಯ ಚಟುವಟಿಕೆಗಳು ನಡೆದಿವೆ ಅವರ ಮೇಲೆ ಕ್ರಮ ಜರುಗಿಸಿದ್ದೇವೆ. ಮುಂದೆ ನಿಗಾವಹಿಸುತ್ತೇವೆ ಮತ್ತು ಕ್ರಮ ಜರುಗಿಸುತ್ತೇವೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಬಾಂಗ್ಲಾ ದೇಶದ್ದು ಹೇಳಿದ್ದಾರೆ. ನೈಜೀರಿಯಾ, ಕೀನ್ಯಾದವರು, ಲಿಂಗರಾಜಪುರಂ ಮತ್ತು ಬಾಣಸವಾಡಿಯಲ್ಲಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೋರಮಂಗಲದಲ್ಲಿ ಬಹಳ ಜನ ಈ ಡ್ರಗ್ ಮಾಫಿಯಾದಲ್ಲಿ ಭಾಗಿಯಾಗಿದ್ದಾರೆ. ಇದರ ಬಗ್ಗೆ ಸೂಕ್ತವಾದ ನಿರ್ದೇಶನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಹಿಂದೆಯೂ ಕೂಡ ಮಾನ್ಯ ಸದಸ್ಯರು ಡ್ರಗ್ ಮಾಫಿಯಾ ವಿರುದ್ಧ ಉಲ್ಲೇಖ ಮಾಡಿದ್ದರು. 658 ಮಂದಿ ವಿದೇಶಿ ಪ್ರಜೆಗಳ ಮೇಲೆ ಕೇಸ್ ಹಾಕಿ ಗೃಹ ಇಲಾಖೆ ಅತ್ಯುತ್ತಮ ಕೆಲಸ ಮಾಡಿದೆ. ಹೊರ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಕಾರ ಬೇಕಾಗಿರುವುದರಿಂದ, ವೆಸ್ಟ್ ಬೆಂಗಾಲ್‌ನಲ್ಲಿ ಅವರೇನು ಕಷ್ಟಗಳನ್ನು ಅನುಭವಿಸಿದರು diplomatic channels ಮೂಲಕ ಆ ಕಾನೂನುಗಳನ್ನು ಪಾಲನೆ ಮಾಡಲೇಬೇಕಾಗುತ್ತದೆ. ಅಂಥವರನ್ನು ಪತ್ತೆ ಹಚ್ಚುವುದಕ್ಕೆ ರಾಜ್ಯ ಸರ್ಕಾರಗಳು ಸಹಕಾರ ಮಾಡಬೇಕು. ಅವರನ್ನು deport ಮಾಡುವುದಕ್ಕೆ ಕಾನೂನು ತೊಡಕುಗಳು ಇದ್ದಲ್ಲಿ ನಮ್ಮ ಕಾನೂನು ಇಲಾಖೆ ತಿದ್ದುಪಡಿಗಳನ್ನು ತಂದು ಗಮನಿಸಬೇಕು. ಗೃಹ ಸಚಿವಾಲಯ ಉತ್ತಮ ಕಾರ್ಯ ಮಾಡುತ್ತಿದೆ. ಆ ಇಲಾಖೆಯನ್ನು ನಾನು ಮತ್ತೊಮ್ಮೆ ಶ್ಲಾಘಿಸುತ್ತೇನೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಡ್ರಗ್ ಮಾಫಿಯಾ ಹೆಬ್ಬಾಳ, ಶಿವಾಜಿನಗರ, ಈ ಭಾಗಗಳಲ್ಲಿ ಜಾಸ್ತಿ ಇದೆ.

**ಶ್ರೀ ಕೆ. ಗೋವಿಂದರಾಜು:-**ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ನೈಜೀರಿಯಾ, ಸೌತ್ ಆಫ್ರಿಕಾ ದೇಶದಿಂದ ಬಂದಂಥವರು ಲಿಂಗರಾಜಪುರ, ಬಾಣಸವಾಡಿ, ಕಲ್ಯಾಣನಗರ, ಈ ಭಾಗಗಳಲ್ಲಿ ಒಂದು ರೀತಿಯಾಗಿ ವ್ಯವಸ್ಥಿತವಾಗಿ ಅವರು ಕಾರ್ಯಾಚರಣೆಯನ್ನು ಮಾಡುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಗೃಹ ಸಚಿವರೇ, ಮುಂದೆ ಇದೇ ಪ್ರಶ್ನೆ ಇದೆ. ಆಗ ತಾವು ಉತ್ತರವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಬಸವರಾಜ ಬೊಮ್ಮಾಯಿ:–** ಅದಕ್ಕೆ ನಾನು ಸುಮ್ಮನಿದ್ದೆ, ಆದರೆ ಮಾನ್ಯ ಸದಸ್ಯರುಗಳು ಬಿಡುತ್ತಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:1495**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಒಟ್ಟು 29 ಕೆರೆಗಳಿವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಎರಡು ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸುವುದಕ್ಕೆ ಕಾಲಮಿತಿಯನ್ನು ಹೇಳಿಲ್ಲ. ನಾನು ಸಚಿವರಿಗೆ ಮನವಿ ಮಾಡುವುದೇನೆಂದರೆ, ಕೊಡಗು ಜಿಲ್ಲೆಯಲ್ಲಿ ಬಾರಿ ಮಳೆಯಾಗುತ್ತದೆ. ಮಳೆಯಾಗುವಂತಹ ಸಂದರ್ಭದಲ್ಲಿ ಕಾವೇರಿ ನೀರು ನಮಗೆ ಉಪಯೋಗಕ್ಕೆ ಬರುವುದಿಲ್ಲ. ಹೊರ ಜಿಲ್ಲೆಗಳಿಗೆ, ಹೊರ ರಾಜ್ಯಗಳಿಗೆ ಉಪಯೋಗಕ್ಕೆ ಬರುತ್ತದೆ. ಈ ಕೆರೆಕಟ್ಟೆಗಳು ತುಂಬಿ ಚೆನ್ನಾಗಿದ್ದರೆ ನಮಗೆ ಎಲ್ಲಾ ರೀತಿ ಅನುಕೂಲವಾಗುತ್ತದೆ. ನಾವು ಕಾನೂನು ರೀತಿಯಲ್ಲಿ ಓಳನೀರನ್ನು ಬಳಸುವಾಗಿಲ್ಲ. ನಾವೇನಾದರೂ sprinkling ಮಾಡುತ್ತೇವೆಂದರೆ ಅಧಿಕಾರಿಗಳು ಬರುತ್ತಾರೆ, ಇದು ಕುಡಿಯುವ ನೀರಿಗೆ ಬೇಕಾಗುತ್ತದೆ, ಇದನ್ನು ಬಳಸಬಾರದು ಎಂದು ಕಾನೂನು ಹೇಳುತ್ತಾರೆ. ಹಾಗಾಗಿ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ನಮ್ಮ ಕೆರೆಕಟ್ಟೆಗಳನ್ನು ಉಳಿಸಿಕೊಡಬೇಕು. ಏಕೆಂದರೆ, ಕಾಡು ಪ್ರಾಣಿಗಳು, ಆನೆಗಳು ಊರಿಗೆ ಬರುತ್ತವೆ. ಊರಿಗೆ ಬಂದಂತಹ ಸಂದರ್ಭದಲ್ಲಿ ಕೆರೆ ನೀರನ್ನು ಕುಡಿದು, ಸ್ನಾನ ಮಾಡಿ ಆರಾಮವಾಗಿ ಹೋಗುತ್ತದೆ. ಅದಕ್ಕಾಗಿ ಕೆರೆಕಟ್ಟೆಗಳನ್ನು ಚೆನ್ನಾಗಿ ಉಳಿಸಿಕೊಡಬೇಕು, ಅದಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಒಟ್ಟು 29 ಕೆರೆಗಳಿವೆ. 15 ಕೆರೆ ಒತ್ತುವರಿಯಾಗಿತ್ತು. ಅದರಲ್ಲಿ 13 ಕೆರೆಗಳನ್ನು ತೆರವುಗೊಳಿಸಿದ್ದೇವೆ. ಇನ್ನು ಎರಡು ಕೆರೆ ಬೆಟ್ಟತ್ತೂರು ಕೆರೆ ಮತ್ತು ಇಗ್ಗುತ್ತಪ್ಪ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಬೇಕು. ಬೆಟ್ಟತ್ತೂರು ಕೆರೆ 0.2 ಹೆಕ್ಟೇರ್ ಇದೆ. ಇಗ್ಗುತ್ತಪ್ಪ ಕೆರೆ 0.1 ಹೆಕ್ಟೇರ್ ಇದೆ. ಈ ಕೆರೆಗಳು ಭಾರಿ ಪ್ರಮಾಣದ ಕೆರೆಗಳಲ್ಲ. ಆದರೂ ಕೂಡ ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡು ಈ ತಿಂಗಳು 31ನೇ ತಾರೀಖಿನೊಳಗೆ ಒತ್ತುವರಿ ತೆರವು ಮಾಡಬೇಕೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ನಾವು ಮಾಡಿಕೊಡುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:1421**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ನಾರಾಯಣಪುರ ಬಲದಂಡೆ ಯೋಜನೆ (ಎನ್.ಆರ್.ಬಿ.ಸಿ) ಯಿಂದ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ವಿತರಣಾ ಕಾಲುವೆ ನಂ.1 ರಿಂದ 18 ಜಾಲದಡಿ ಕೆಲವು ವಿತರಣಾ ಕಾಲುವೆ ಹಾಗೂ ಲ್ಯಾಟರಲ್‌ಗಳ ಟೇಲ್ ಆಫ್ (Gravity-flow) ಮುಖಾಂತರ ನೀರನ್ನು ತುಂಬಿಸುತ್ತೇವೆಂದು ಹೇಳಿದ್ದಾರೆ. ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯುವುದೇನೆಂದರೆ, ದೇವದುರ್ಗ ತಾಲ್ಲೂಕಿನಲ್ಲಿ ಸುಮಾರು 72 ಕೆರೆಗಳಿವೆ. ಲಿಂಗಸಗೂರು ತಾಲ್ಲೂಕಿನಲ್ಲಿ ಈ ವ್ಯಾಪ್ತಿಯಲ್ಲಿ ಬರತಕ್ಕಂಥ 20 ರಿಂದ 25 ಕೆರೆಗಳಿವೆ. ಅದಲ್ಲದೆ ರಾಯಚೂರು ತಾಲ್ಲೂಕಿನಲ್ಲಿ ಬರತಕ್ಕಂಥ ಸುಮಾರು 30 ರಿಂದ 40 ಕೆರೆಗಳಿವೆ. ಸರ್ಕಾರ ಸಾಕಷ್ಟು ಹಣ ಖರ್ಚು ಮಾಡಿ ಆ ಜಾಲವನ್ನು ನಿರ್ಮಾಣ ಮಾಡಿದೆ. ಉದಾಹರಣೆಗೆ ಹೇಳಬೇಕೆಂದರೆ, 15ನೇ ವಿತರಣಾ ಕಾಲುವೆ, 16ನೇ ವಿತರಣಾ ಕಾಲುವೆ, 17ನೇ ವಿತರಣಾ ಕಾಲುವೆ, 18ನೇ ವಿತರಣಾ ಕಾಲುವೆ, ಈ ನಾಲ್ಕು ವಿತರಣಾ ಕಾಲುವೆಗಳನ್ನು ಸುಮಾರು 60 ಸಾವಿರ ಹೆಕ್ಟೇರ್ ನೀರಾವರಿ ಪ್ರದೇಶ ಇರತಕ್ಕಂಥ ಏರಿಯಾ ಇದೆ. ಆದರೆ ಇವತ್ತಿಗೂ ಕೂಡ ಸುಮಾರು 72 ಸಾವಿರ ಹೆಕ್ಟೇರ್‌ನೊಳಗೆ 60 ಸಾವಿರ ಹೆಕ್ಟೇರ್ ಈ ನಾಲ್ಕು ವಿತರಣಾ ಕಾಲುವೆಯಲ್ಲಿಯೇ ಬರುತ್ತದೆ. ಅಲ್ಲೂ ಕೂಡ ಶೇಕಡ 50 ರಷ್ಟು ಜಮೀನುಗಳಿಗೆ ಇವತ್ತಿನವರೆಗೂ ನೀರು ಕಂಡಿಲ್ಲ. ಪ್ರಾಜೆಕ್ಟ್ ಆಗಿ 18 ರಿಂದ 20 ವರ್ಷಗಳಾಗಿವೆ. ಅಲ್ಲಿ ನೀರು ಬಂದಿಲ್ಲ. ಇದಕ್ಕೆ ಕಾರಣವೇನೆಂದರೆ, ಗೇಜ್‌ಗಳು ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ. ತಮ್ಮ ಮೂಲಕ ಮಾನ್ಯ ಸಚಿವರಿಗೆ ಏನು ಗಮನ ಸೆಳೆಯ ಬಯಸುತ್ತಿದ್ದೇನೆಂದರೆ, ರಾಮದುರ್ಗ ಕೆರೆ 1200 ಎಕರೆ ಇದೆ, ಜೆನ್ನಾಪುರ ಕೆರೆ 600 ಎಕರೆ ಇದೆ, ಅಲ್ಕೋಡ್ ಕೆರೆ 1400 ಎಕರೆ ಇದೆ. ಮಳೆಗಾಲದಲ್ಲಿ ವಿತರಣಾ ಕಾಲುವೆಗೆ ನೀರನ್ನು ಬಿಡತಕ್ಕಂಥ ಸಂದರ್ಭದಲ್ಲಿ ಜಮೀನಿಗೆ ಮಳೆ ಬಂದಾಗ ಬಹಳಷ್ಟು ನೀರು ರೈತರಿಗೆ ಬೇಕಾಗುವುದಿಲ್ಲ. ಆಗ ಈ ನೀರನ್ನು ಡೈವರ್ಟ್ ಮಾಡಿ ಈ ಎಲ್ಲಾ ಕೆರೆಗಳನ್ನು ತುಂಬಿಸಿ ಕೆರೆಗಳಿಂದ ಲ್ಯಾಟರಲ್‌ಗಳಿಗೆ ಮತ್ತು ವಿತರಣಾ ಕಾಲುವೆಗಳಿಗೆ ಸಂಪರ್ಕ ನಿರ್ಮಿಸಿ ಗೇಜ್ ನಿರ್ವಹಣೆ ಮಾಡಿದಾಗ ಮಾತ್ರ ಕೊನೆ ಭಾಗದ ರೈತರಿಗೆ ನೀರು ಮುಟ್ಟುತ್ತದೆ. ನಾವು ಮನವಿ ಮಾಡಿಕೊಂಡಾಗ ಪಾರಪುರ ಕೆರೆ ಎಂದು ಇದೆ. ಅದು ಸುಮಾರು 1600 ಎಕರೆ ಇದೆ. ಆ ನೀರು ಏನಾದರೂ ಬಂದರೆ 9 ಹಳ್ಳಿಗಳಿಗೆ sufficient ನೀರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗುತ್ತದೆ. ಎಲ್ಲೇ ಪ್ರಾಜೆಕ್ಟ್ ಮಾಡಿದರೂ ಕೂಡ ಇವೆಲ್ಲಾ ಸಂಪರ್ಕ ಜಾಲಗಳಿಗೆ ಅದನ್ನು ಕನೆಕ್ಟ್ ಮಾಡಿದಾಗ ಮಾತ್ರ tail end ಭಾಗದ ರೈತರಿಗೆ ನೀರು ಮುಟ್ಟುತ್ತದೆ. ಅದರ ಬಗ್ಗೆ ಹೆಚ್ಚಿನ ಗಮನ ಸೆಳೆದು ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎನ್.ಎಸ್.ಭೋಸ್‌ರಾಜ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಆ ಸ್ಥಳಕ್ಕೆ ನಾಲ್ಕು ದಿನಗಳ ಹಿಂದೆ ಭೇಟಿ ಕೊಟ್ಟಿದ್ದಾರೆ. ಅಲ್ಲಿಗೆ ಭೇಟಿ ಕೊಟ್ಟಾಗ ಪರಿಸ್ಥಿತಿಯು ಅವಗಾಹನವಾಗಿದೆ. ಆ ಭಾಗದಲ್ಲಿ ಎನ್.ಆರ್.ಬಿ.ಸಿ. ಇರಬಹುದು, ತುಂಗಾಭದ್ರಾ ಇರಬಹುದು, ದೇವದುರ್ಗ, ಲಿಂಗಸಗೂರು, ರಾಯಚೂರು ಮತ್ತು ಮಾನ್ವಿ, ಈ ಎರಡು ಕೆನಾಲ್‌ನಿಂದ, Left Bank Canal and Right Bank Canal ನಿಂದ ಅಲ್ಲಿ ನೀರಾವರಿಗೆ ರೈತರಿಗೆ tail end ಆಗಿದೆ. ಅಲ್ಲಿ ಸಾಕಷ್ಟು ತೊಂದರೆ ಇದೆ. ಇವತ್ತಿನವರೆಗೂ ಆ ಪ್ರದೇಶದಲ್ಲಿ ರೈತರು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಹಾಗಾಗಿ ಆ ಭಾಗದಲ್ಲಿರುವಂತಹ ಕೆರೆಗಳ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಅನೇಕ ಬಾರಿ ಒತ್ತಾಯ ಮಾಡಿದ್ದೇವೆ. Desilt and improvement ಮಾಡಿ ಎಲ್ಲೆಲ್ಲಿ ಕೆನಾಲ್‌ಗಳ ಮೂಲಕ ನೀರು ಕೊಡುವುದಕ್ಕೆ ಸಾಧ್ಯವಿದೆಯೋ ಆ ಕೆರೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಮಾನ್ಯ ಸಚಿವರು ಯೋಜನೆ ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ರಮೇಶ್ ಲ.ಜಾರಕಿಹೊಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಕೇಳಿರುವ ಪ್ರಶ್ನೆಗೆ ಪೂರಕವಾಗಿ ಪ್ರಶ್ನೆ ಕೇಳಿದ್ದಾರೆ. ಈಗಾಗಲೇ ನಾವು ಖಾಸಗಿಯಾಗಿ ಮಾನ್ಯ ಬಸವರಾಜ ಪಾಟೀಲ್ ಇಟಗಿ ಹಾಗೂ ಬೋಸ್‌ರಾಜ್ ರವರ ಜೊತೆ ಮಾತನಾಡಿದ್ದೇವೆ. ಈಗಾಗಲೇ ಸುಮಾರು 12 ಕೆರೆಗಳನ್ನು ತುಂಬಿಸಿದ್ದೇವೆ. ಎರಡು ಕೆರೆಗಳು ಒತ್ತುವರಿಯಾಗಿರುವುದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರುಗಳು ಹೇಳಿರುವಂತಹ ವಿಷಯಗಳನ್ನು ಜಿಲ್ಲಾವಾರು ಸಭೆ ಕರೆದಾಗ ಅವರ ಸಮಕ್ಷಮದಲ್ಲಿ ಅಧಿಕಾರಿಗಳ ಜೊತೆ ಸಭೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಮ್ಮ ಮುಖ್ಯವಾದ ಉದ್ದೇಶವೇನೆಂದರೆ, ಕೆರೆ ತುಂಬಿದ ಮೇಲೆ ಲ್ಯಾಟರಲ್‌ಗಳು ಅಥವಾ ವಿತರಣಾ ಕಾಲುವೆ ಪಕ್ಕದಲ್ಲಿರುತ್ತದೆಯಲ್ಲಾ ಅದಕ್ಕೆ ಕನೆಕ್ಟ್ ಮಾಡಬೇಕು. ಕನೆಕ್ಟ್ ಮಾಡಿದಾಗ ಗೇಜ್ ನಿರ್ವಹಣೆಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಆದಷ್ಟು tail end ಗೆ ಈ ನೀರು ಹೋಗುವಂಥದ್ದಾಗುತ್ತದೆ. ಅದನ್ನು ಮಾನ್ಯ ಸಚಿವರ ಅವಧಿಯಲ್ಲಿ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ರಮೇಶ್ ಲ.ಜಾರಕಿಹೊಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಜಿಲ್ಲಾವಾರು ಸಭೆಗೆ ಬಂದಾಗ ಅವರು ಮತ್ತು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:1555**

**ಸಭಾಪತಿಯವರು:-** ಮಾನ್ಯ ಅರುಣ ಶಹಾಪುರ ರವರ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(588) 19.03.2020 03.50 ಎಸ್‌ವಿ-ಎಕೆ**

**ಪ್ರಶ್ನೆ ಸಂಖ್ಯೆ 1519**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಲಗತ್ತಿಸಲಾಗಿದೆ. ಮಾಗಡಿಗೆ ಹೇಮಾವತಿ ನೀರನ್ನು ತರಬೇಕು ಎನ್ನುವುದು ಹೋರಾಟದ ಫಲವಾಗಿದೆ. 1993ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ವೀರಪ್ಪ ಮೊಯಿಲಿಯವರು ಇದಕ್ಕೆ ಅವಕಾಶವನ್ನು ಕಲ್ಪಿಸಿ ಚಾಲನೆಯನ್ನು ಕೊಟ್ಟು ಸಮಿತಿಯನ್ನು ರಚಿಸಿದ್ದರು. ಸಮಿತಿಯು ನೀಡಿದ ವರದಿಯು 2003ರಲ್ಲಿ ಒಪ್ಪಿಗೆಯಾಗಿ, ಈಗ್ಗೆ ಬಹಳಷ್ಟು ಜನ ಮುಖ್ಯಮಂತ್ರಿಗಳು ಇದರಲ್ಲಿ ಸಹಾಯವನ್ನು ಮಾಡಿದ್ದಾರೆ. ಕೊನೆಗೆ, ಕಳೆದ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ರೂ.325 ಕೋಟಿಗಳ ಮಂಜೂರಾತಿಯನ್ನು ಇದಕ್ಕೆ ಕೊಟ್ಟಿದ್ದರೂ ಸಹ ಇಲ್ಲಿಯವರೆವಿಗೂ ಅದು ಪೂರ್ಣವಾಗಿರುವುದಿಲ್ಲ. ಅವರಿಗೆ ಕೊಟ್ಟಂತಹ ಸಮಯ ಎಷ್ಟು? ಏಕೆ ಇನ್ನೂ ಆಗಿರುವುದಿಲ್ಲ?

ಎರಡನೆಯದಾಗಿ ಲಿಖಿತ ಉತ್ತರದಲ್ಲಿ 2019-20ನೇ ಸಾಲಿಗಾಗಿ ಅನುಮೋದಿಸಲಾದ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವುದರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದನ್ನು ಆರ್ಥಿಕ ಇಲಾಖೆಯು ಕೈಬಿಡುವಂತೆ ಸೂಚಿಸಿದೆ ಎಂದು ಹೇಳಲಾಗಿದೆ. ಅಂದರೆ ಆರ್ಥಿಕ ಇಲಾಖೆಯು ಸೂಚಿಸಿದ ತಕ್ಷಣವೇ ಕೆಲಸವು ನಿಂತು ಹೋಗುತ್ತದೆಯೇ? ಇದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳಲಾಗುವುದು? ಮಾಗಡಿಯಲ್ಲಿ ಮೂರು reservoirs ಇದೆ. ಮಂಚನಬೆಲೆ, ತಿಪ್ಪಗೊಂಡನಹಳ್ಳಿ ಹಾಗೂ ಇನ್ನೊಂದು. ಈ ಮೂರು ನೀರಾವರಿಯಿಂದ ಮಾಗಡಿಗೆ ಏನೂ ಸಹಾಯವಾಗುವುದಿಲ್ಲ. ಈಗಾಗಲೇ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರನ್ನು ಆಚೆಗೆ ಬಿಟ್ಟು ಪಂಪ್ ಸೆಟ್‌ಗಳಲ್ಲಿ ಬಹಳ ತೊಂದರೆಯಾಗಿದ್ದು, ನೀರಿಲ್ಲದಂತೆ ಆಗಿದೆ. ಈ ಕಾರ್ಯ ಗುತ್ತಿಗೆದಾರರಿಗೆ ಕೊಟ್ಟಂತಹ ಅವಧಿಯನ್ನು ಮೀರುತ್ತಿದೆ.

ಮಾನ್ಯ ಸಭಾಪತಿಯವರೇ, ನೀರಾವರಿ ಇಲಾಖೆಯಲ್ಲಿ estimate ಆಗುವುದೇ ಒಂದು. ಕಾಮಗಾರಿ ಮುಗಿಯುವ ವೇಳೆಗೆ ಅದರ ಮೂರರಷ್ಟು ಆಗುವಂತಾಗಿದೆ. ಇಂತಹ ತೊಡಕುಗಳನ್ನು ಯಾವಾಗ ನಿವಾರಣೆ ಮಾಡುತ್ತಾರೆ ಹಾಗೂ ಕಾಮಗಾರಿಯನ್ನು ಯಾವಾಗ ಮುಗಿಸುತ್ತಾರೆಂದು ಕೇಳಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯು 57 ಬಾರಿ ಈ ನಿಟ್ಟಿನಲ್ಲಿ ಸಭೆಯನ್ನು ನಡೆಸಿದ್ದಾರೆ. ಸಿದ್ದಗಂಗಾ ಸ್ವಾಮೀಜಿಯವರ ಆಶಯವೂ ಆಗಿತ್ತು. ಸಿದ್ಧಗಂಗಾ ಮಠದ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಹೇಮಾವತಿ ನೀರಿಗೆ ಸಂಕಲ್ಪ, ಸಿದ್ಧಗಂಗಾ ಶ್ರೀಗಳ ನೇತೃತ್ವದಲ್ಲಿ ಹೋರಾಟ, ಸರ್ವಧರ್ಮೀಯರ ಸಭೆ ಯಶಸ್ವಿ ಎಂದು ಪ್ರಕಟವಾಗಿತ್ತು. ಜೊತೆಗೆ ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಗರವನ್ನು ಕಟ್ಟಿಸಿದವರು ಮಾಗಡಿಯವರಾಗಿದ್ದಾರೆ. 50 ಕಿ.ಮೀ. ಅಂತರದಲ್ಲಿರುವ ಈ ಊರು ಎಲ್ಲಾ ಗುಡ್ಡಗಾಡಿನ ಪ್ರದೇಶವಾಗಿದೆ. ಮಾನ್ಯ ಕೆ.ಎನ್.ನಾಗೇಗೌಡ, ಮಾನ್ಯ ಹೆಚ್.ಎಂ.ರೇವಣ್ಣ, ಮಾನ್ಯ ಕೆ.ಹೆಚ್.ಪಾಟೀಲರು ಹೀಗೆ ನಾಲ್ಕೈದು ಜನ ಮಂತ್ರಿಗಳಾಗಿ ಆದೇಶವನ್ನು ಹೊರಡಿಸಿದ್ದರೂ, 1983ರಿಂದ ಇಲ್ಲಿಯವರೆವಿಗೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವನ್ನು ತಿಳಿಸಬೇಕು. ಚುನಾವಣೆ ಬಂದಾಗ ಮಾತ್ರ ಶಂಕುಸ್ಥಾಪನೆ ಮಾಡಲಾಗುವುದು. ಹೇಮಾವತಿ ಯೋಜನೆ ಜಾರಿಯ ವಿಷಯದಲ್ಲಿ ಪ್ರತಿಷ್ಠೆ ಬೇಡ. ಹೇಮಾವತಿ ಜಲಾಶಯಕ್ಕೆ ನೇತ್ರಾವತಿ ನದಿಯ ನೀರನ್ನು ತರಲಾಗುವುದು, ಮಾಗಡಿಗೆ ಹೇಮಾವತಿ ನೀರು ಈ ರೀತಿ ಎಲ್ಲಾ ಪತ್ರಿಕೆಗಳಲ್ಲಿಯೂ ಜಾಹೀರಾತು ಮಾಡಿ ಅನ್ಯಾಯವಾಗಿದೆ. ಮಾನ್ಯ ಹಿರಿಯ ಸದಸ್ಯರಾದ ರೇವಣ್ಣನವರು ಹೇಳಿದಂತೆ ಕುಡಿಯುವ ನೀರಿಗೂ ಸಮಸ್ಯೆಯಾಗಿದೆ.

**ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ರೇವಣ್ಣನವರು ಕೇಳಿರುವ ಪ್ರಶ್ನೆಗೆ ಈಗಾಗಲೇ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಶ್ರೀರಂಗ ಏತ ನೀರಾವರಿ ಯೋಜನೆಯ ಪಂಪ್ ಹೌಸ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಪಂಪು ಮತ್ತು ಮೋಟಾರ್‌ಗಳ ಅಳವಡಿಕೆ ಪೂರ್ಣಗೊಂಡಿರುತ್ತದೆ. ವಿದ್ಯುತ್ ಸಬ್-ಸ್ಟೇಷನ್‌ನ ಸಿವಿಲ್ ಕಾಮಗಾರಿ ಹಾಗೂ ರೈಸಿಂಗ್ ಮೇನ್‌ನ ಕಾಮಗಾರಿ ಪ್ರಗತಿಯಲ್ಲಿದೆ. ಫೆಬ್ರವರಿ 2020ರ ಅಂತ್ಯಕ್ಕೆ ರೂ.163.38 ಕೋಟಿಗಳು ವೆಚ್ಚವಾಗಿರುತ್ತದೆ.

ಅವರು ಕಾಮಗಾರಿ ವಿಳಂಬವಾಗಿರುವುದಕ್ಕೆ ಕಾರಣವನ್ನು ಕೇಳಿರುತ್ತಾರೆ. ನೂತನ ಭೂಸ್ವಾಧೀನ ಕಾಯ್ದೆ 2013ರ ಅನ್ವಯ Environmental Impact Assessment/Social Impact Assessment ಮಾಡಬೇಕಾಗಿದ್ದರಿಂದ, ಸದರಿ ಕಾಮಗಾರಿಯ ಪಂಪ್ ಹೌಸ್ ಮತ್ತು ವಿದ್ಯುತ್ ಸಬ್-ಸ್ಟೇಷನ್ ನಿರ್ಮಿಸಲು ಖಾಸಗಿ ಜಮೀನು ದೊರೆಯದ ಕಾರಣ ಸಮೀಪದಲ್ಲೇ ಇದ್ದ ಗೊಟ್ಟಿಕೆರೆ ಹಿರೆಕೆರೆ ಕೆರೆಯ ಸರ್ಕಾರಿ ಜಾಗಕ್ಕೆ ಸ್ಥಳ ಬದಲಾಯಿಸಿದ್ದರಿಂದ, ಸರ್ಕಾರಿ ಜಾಗಕ್ಕೆ ಸ್ಥಳ ಬದಲಾಯಿಸಿ ಪಂಪ್‌ಹೌಸ್ ನಿರ್ಮಿಸುವುದರಿಂದ ರೈಸಿಂಗ್ ಮೈನ್ 1ರ ಪೈಪ್‌ನಲ್ಲಿ 410 ಮೀ. ಮತ್ತು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈಸಿಂಗ್ ಮೈನ್ 2ರ ಪೈಪ್‌ನಲ್ಲಿ 275 ಮೀ. ಹೆಚ್ಚುವರಿಯಾಗಿರುವುದರಿಂದ ಹಾಗೂ ಸದರಿ ಯೋಜನೆಯ ಗ್ರಾವಿಟಿ ಮೈನ್‌ನಲ್ಲಿ ಪೈಪ್ ಬದಲಾವಣೆ ಹಾಗೂ ಅಲೈನ್‌ಮೆಂಟ್ ಬದಲಾವಣೆಯಿಂದಾಗಿ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗಿದ್ದು, ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿದ್ದು, ಕಾವೇರಿ ನೀರಾವರಿ ನಿಗಮದಲ್ಲಿ 2019-20ನೇ ಸಾಲಿಗಾಗಿ ಅನುಮೋದಿಸಲಾದ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವುದರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದನ್ನು ಕೈಬಿಡುವಂತೆ ಆರ್ಥಿಕ ಇಲಾಖೆಯು ಸೂಚಿಸಿರುವುದರಿಂದ ವಿಳಂಬವಾಗಿದೆ.

ಭೂಸ್ವಾಧೀನ ಹೊರತುಪಡಿಸಿ/ಮಿತಿಗೊಳಿಸಿ ರಸ್ತೆ ಬದಿಯ ಮುಖಾಂತರ ಅಲೈನ್‌ಮೆಂಟ್ ಅಂತಿಮಗೊಳಿಸಿ, ಪೈಪ್‌ಲೈನ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ಕಾಮಗಾರಿಗಳನ್ನು 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಆದ್ಯತೆಯ ಮೇಲೆ ಅಗತ್ಯ ಅನುದಾನದೊಂದಿಗೆ ಕೈಗೊಳ್ಳಲು ಕ್ರಮ ವಹಿಸಲಾಗುವುದು.

ಜೊತೆಗೆ ಆ ಭಾಗದ ಎಲ್ಲಾ ಮುಖಂಡರ ಸಭೆಯನ್ನು ನಡೆಸಿ, ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಆರ್ಥಿಕ ಇಲಾಖೆಯು ಯಾವಾಗಲೂ ಯಾವುದಕ್ಕೆ ಆದರೂ ಅನುಮತಿಯನ್ನು ನೀಡಬೇಕಾದರೆ ಬಹಳ ಕಷ್ಟವಿದೆ. ನಾನೂ ನೋಡಿದ್ದೇನೆ. ಬಹಳಷ್ಟು ಜನ ಮುಖ್ಯಮಂತ್ರಿಗಳು ಆಗಿ ಹೋಗಿದ್ದಾರೆ. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿಯಾದರೂ ಇದಕ್ಕೆ ಒಂದು ಗತಿ ಕಾಣಿಸಬೇಕು. ಈ ಯೋಜನೆ 1993ರಲ್ಲಿ ಪ್ರಾರಂಭವಾಗಿದೆ. ಇದುವರೆವಿಗೂ ಒಂದಲ್ಲಾ ಒಂದು ತೊಂದರೆಯಿಂದ ಕುಂಟುತ್ತಾ ಸಾಗುತ್ತಿದೆ. ಬೆಂಗಳೂರನ್ನು ಕಟ್ಟಿದ ಮಾಗಡಿ ಜನತೆ ಬಕಪಕ್ಷಿಯಂತೆ ಕಾಯುತ್ತಿದ್ದಾರೆ. ಜನರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದು, ಜರೂರಾಗಿ ಇದನ್ನು ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ:-** ಮಾನ್ಯ ಸಭಾಪತಿಯವರೇ, ಆ ಭಾಗದ ಎಲ್ಲಾ ಶಾಸಕ ಮುಖಂಡರ ಸಭೆಯನ್ನು ಕರೆದು, ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 1465**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಕೇಳುತ್ತಿರುವ ಪ್ರಶ್ನೆಯನ್ನು ಮಾನ್ಯ ಸಚಿವರು ಸ್ವಲ್ಪ ಗಮನಿಸಬೇಕು. ಇದು ಬಹಳಷ್ಟು ಗಂಭೀರವಾದ ಪ್ರಶ್ನೆ. ಕೇವಲ ಇಂದು ಮಾತ್ರವಲ್ಲ, ಹಿಂದಿನ ಸರ್ಕಾರವಿದ್ದಾಗಲೂ ನಾವು ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಇದಕ್ಕೆ ಏನಾದರೂ ಪರಿಹಾರ ಇದುವರೆವಿಗೂ ಸಿಕ್ಕಿದೆಯೇ ಎಂಬುದನ್ನು ನಾವು ಪ್ರಾಮಾಣಿಕವಾಗಿ ಯೋಚನೆ ಮಾಡಬೇಕು. ಬಹಳಷ್ಟು ಗಂಭೀರವಾದ ಸಮಸ್ಯೆ ಇದಾಗಿದೆ.

ನನ್ನ ಪ್ರಶ್ನೆ ಏನೆಂದರೆ ಇತ್ತೀಚೆಗೆ ಬೆಂಗಳೂರು ನಗರದ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡ್ರಗ್ ಮಾಫಿಯಾ ತನ್ನ ಎಲ್ಲೆಯನ್ನು ಮೀರಿ ಬೆಳೆಯುತ್ತಿದ್ದು, ಪ್ರತಿಯೊಂದು ಗಲ್ಲಿ ಗಲ್ಲಿಗಳಲ್ಲಿಯೂ, ಸಣ್ಣ ಪುಟ್ಟ ದಿನಸಿ ಅಂಗಡಿಗಳಲ್ಲಿಯೂ ರಾಜಾರೋಷವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಲಿಖಿತ ಉತ್ತರದಲ್ಲಿ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಪೊಲೀಸ್ ಠಾಣೆಗಳನ್ನು ಹೆಸರಿಸಲಾಗಿದೆ. ಅದರಲ್ಲಿ ಸದರಿ ಪೊಲೀಸ್ ಠಾಣಾ ವ್ಯಾಪ್ತಿಗಳ ಸಣ್ಣಪುಟ್ಟ ದಿನಸಿ ಅಂಗಡಿಗಳಲ್ಲಿ ಮಾದಕ ವಸ್ತುಗಳ ಮಾರಾಟ ಮಾಡಲು ಅವಕಾಶವಾಗದಂತೆ ಪೊಲೀಸ್ ಬಿಗಿ ಗಸ್ತು ಏರ್ಪಡಿಸಲಾಗಿದೆ ಹಾಗೂ ಈ ಬಗ್ಗೆ ಕಾನೂನಿನಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರಿಗೆ ಇದರ ಬಗ್ಗೆ ಕಾಳಜಿಯಿದೆ. ಅಷ್ಟೇ ಅಲ್ಲ, ಇಲ್ಲಿರತಕ್ಕಂತಹ ಸದಸ್ಯರೆಲ್ಲರಿಗೂ ಇದೆ. ಆದರೆ ಅಧಿಕಾರಿಗಳು ಯಾವ ರೀತಿ ದಾರಿ ತಪ್ಪಿಸುತ್ತಾರೆ ಎಂಬುದಕ್ಕೆ ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಯಾರೂ ಕೂಡ ಗಸ್ತು ತಿರುಗುತ್ತಿಲ್ಲ. ಈ ರೀತಿಯಾಗಿ ಡ್ರಗ್ ಮಾಫಿಯಾದಲ್ಲಿ ತೊಡಗಿರುವವರನ್ನು ಎಷ್ಟು ಜನರನ್ನು ಕಾನೂನುರೀತ್ಯಾ ಬಂಧಿಸಲಾಗಿದೆ? ತಾವು ನಮ್ಮ ಕ್ಷೇತ್ರಕ್ಕೆ ಬರಬೇಕು. ಯಾವುದೇ ಒಂದು ಸಣ್ಣ ಬೇಕರಿಯಂತಹ ಕಡೆಗಳಲ್ಲಿ, ಗಲ್ಲಿ–ಗಲ್ಲಿಗಳಲ್ಲಿ ಡ್ರಗ್ಸ್ ಮಾರಾಟವಾಗುತ್ತಿದೆ. ಚೀತಾದಲ್ಲಿ ಗಸ್ತು ತಿರುಗಲು ಬರುವವರು ಸ್ವಲ್ಪ ಹಣವನ್ನು ಕೊಟ್ಟರೆ ತೆಗೆದುಕೊಂಡು ಹೋಗುತ್ತಿದ್ದಾರೆ. ಯಾರು ಮಾರಾಟ ಮಾಡುತ್ತಾರೆಂಬುದು ಖಂಡಿತವಾಗಿ ಪೊಲೀಸರಿಗೆ ತಿಳಿದಿದೆ. ಆದರೆ ಅವರನ್ನು ಹಿಡಿಯುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿಲ್ಲ.

ಮಾದಕ ವಸ್ತುಗಳ ಸೇವನೆ ಮಾಡುವವರ ವಿರುದ್ಧ NDPS (Narcotic Drugs and Psychotropic Substances) ಕಾಯ್ದೆಯ ಕಲಂ 27(ಬಿ)ರ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತದೆ. ಡ್ರಗ್ಸ್ ಅನ್ನು ಮಾರಾಟ ಮಾಡುವವರ ವಿರುದ್ಧ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಮ ಕೈಗೊಳ್ಳದೆ, ಡ್ರಗ್ಸ್ ಅನ್ನು ಸೇವನೆ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಇದು ನ್ಯಾಯವೇ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಸಾಮಾಜಿಕ ಪಿಡುಗು. ಶಾಲೆಗೆ ಹೋಗುವ ಸಣ್ಣ ಸಣ್ಣ ಮಕ್ಕಳಿಗೂ ಸಹ ಡ್ರಗ್ಸ್ ಅನ್ನು ಸೇವನೆ ಮಾಡಲು ಪ್ರೇರೇಪಣೆ ಮಾಡುವಂತಹ ಒಂದು ವರ್ಗವಿದೆ. ಎರಡು ತರಹ ಡ್ರಗ್ ಇದೆ. ಒಂದು ಗಾಂಜಾ ಮತ್ತೊಂದು ಸಿಂಥೆಟಿಕ್ ಡ್ರಗ್ಸ್. ಹಿಂದೆ ನಾವು raid ಮಾಡಿದಾಗ ನಮಗೆ ಸಿಗುತ್ತಿದ್ದುದು ಗಾಂಜಾ. ಈಗ ಸಿಂಥೆಟಿಕ್ ಡ್ರಗ್ ಸಣ್ಣ ಸಣ್ಣ form ನಲ್ಲಿ ಬರುತ್ತದೆ. ಚಾಕೊಲೇಟ್‌ನಲ್ಲಿ, ಬಿಸ್ಕೆಟ್‌ನಲ್ಲಿ, ಬ್ರೆಡ್‌ನಲ್ಲಿ, chalk ನಲ್ಲಿ ಹೀಗೆ ನಾನಾ ರೂಪದಲ್ಲಿ ಬರುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ, ವಿದ್ಯಾರ್ಥಿನಿಲಯಗಳಲ್ಲಿ, ವಿಶೇಷವಾಗಿ professional college ಗಳಲ್ಲಿ, ಕಾಲೇಜಿನ ಅಕ್ಕಪಕ್ಕವಿರುವ ಬೀಡಾ ಅಂಗಡಿಗಳಲ್ಲಿ ಇದರ ಮಾರಾಟವಾಗುತ್ತಿದೆ. ಇದು ಒಂದು ಸಾಮಾಜಿಕ ಪಿಡುಗಾಗಿದ್ದು, ಕಳೆದ 8–10 ವರ್ಷಗಳಿಂದ ಅತಿ ಹೆಚ್ಚಾಗಿದೆ. ಯಾವಾಗ ಅದು ಸಿಂಥೆಟಿಕ್ ಆಗಿ convert ಆಯಿತೋ, ಆಗಿನಿಂದ ಹೆಚ್ಚಾಗಿದೆ.

**(589) 03.50 19.3.2020 KG RN**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):–**

ನಮ್ಮದು ಡ್ರಗ್ಸ್ ಬಗ್ಗೆ zero tolerance. ಈಗ ಮಾನ್ಯ ಸದಸ್ಯರು ಡ್ರಗ್ಸ್ ಗಲ್ಲಿ ಗಲ್ಲಿಯಲ್ಲಿ ಸಿಕ್ಕಿದೆ ಎಂದು ಹೇಳಿದ್ದಾರೆ. ಅದಕ್ಕೆ ನಾವು ವ್ಯಾಪಕವಾದಂತಹ ಗಸ್ತನ್ನು ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಹಲವಾರು ಪ್ರಕರಣಗಳಲ್ಲಿ ಸಿಕ್ಕಿದ್ದಾರೆ. ಉದಾಹರಣೆಗೆ ಬೆಂಗಳೂರು ನಗರದ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಪ್ರಕರಣ ದಾಖಲಾಗಿದೆ. 2017 ರಲ್ಲಿ 44 ಪ್ರಕರಣಗಳು, 2018 ರಲ್ಲಿ 22 ಮತ್ತು ಕಳೆದ ವರ್ಷ 67 ಪ್ರಕರಣಗಳು ದಾಖಲಾಗಿವೆ ಮತ್ತು 89 ಜನರನ್ನು ಬಂಧಿಸಿದ್ದೇವೆ. ಅದರಲ್ಲಿ 84 ಜನರು ಸ್ಥಳೀಯರು ಮತ್ತು 5 ಜನರು ವಿದೇಶಿಯರು ಇದ್ದಾರೆ. ಅವರನ್ನು ಸಹ ನಾವು ಬಂಧಿಸಿದ್ದೇವೆ. ಇದು ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಇದೆ. ಇದನ್ನು ಒಂದೇ ಕ್ಷೇತ್ರಕ್ಕೆ ಸೀಮಿತವಾಗಿ ನೋಡುವುದಕ್ಕೆ ಆಗುವುದಿಲ್ಲ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡುವಂತಹ ವಿಚಾರ ಇದು. ಹೀಗಾಗಿ, ವಿಶೇಷವಾಗಿ ಬೆಂಗಳೂರಿನಲ್ಲಿ ಡ್ರಗ್ಸ್ ಮಾಫಿಯಾ ಬಗ್ಗೆ ಬಹಳ ದೊಡ್ಡ ಪ್ರಮಾಣದ ಕಾರ್ಯಚರಣೆಯನ್ನು ಮಾಡುತ್ತಿದ್ದೇವೆ. ಇದರಲ್ಲಿ ಯಾರ್ಯಾರು ಇದ್ದಾರೆ ಎನ್ನುವಂತಹ ಸಂಪೂರ್ಣವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ವಿವರವನ್ನು ಹೆಸರು ಮತ್ತು ಪ್ರಕರಣದ ಸಂಖ್ಯೆಗಳ ಸಮೇತವಾಗಿ ಹಾಗೂ ಎಷ್ಟೇಷ್ಟು ತೂಕದ ಡ್ರಗ್ಸ್‌ನ್ನು (600 ಗ್ರಾಂ, 4 ಕೆ.ಜಿ) ವಶ ಪಡಿಸಿಕೊಳ್ಳಲಾಗಿದೆ ಎಂಬುದನ್ನು ಸಹ ಕೊಡುತ್ತೇನೆ. ನಾವು ಕೇವಲ ಸೇವನೆ ಮಾಡುವವರನ್ನು ಮಾತ್ರ ಹಿಡಿದಿಲ್ಲ. ಅದನ್ನು ಮಾರಾಟ ಮಾಡುವವರನ್ನು ಸಹ ಹಿಡಿದಿದ್ದೇವೆ. ಇದರಲ್ಲಿ ಕೆಲವರು transporters ಗಳು ಇದ್ದಾರೆ. ಅವರನ್ನು ಸಹ ಹಿಡಿದ್ದೇವೆ. Entire gang ಏನಿದೆ, ಆ gang ಅನ್ನು ಸೆದೆ ಬಡಿಯುವಂತಹ ಕೆಲಸವನ್ನು ಪ್ರಥಮ ಬಾರಿಗೆ ಸರ್ಕಾರ ಇದನ್ನು ಸಮರೋಪಾದಿಯಲ್ಲಿ ಮಾಡುವಂತಹ ಕ್ರಮವನ್ನು ಜರುಗಿಸಿದೆ. ಅದರ ಜೊತೆಗೆ ಕಾನೂನಿನ ಒಂದು ದುರುಪಯೋಗವನ್ನು ಅವರು ಮಾಡಿಕೊಳ್ಳುತ್ತಿದ್ದಾರೆ. ನಾವು ಎಷ್ಟೇ ಜನರನ್ನು ಬಂಧಿಸಿದರೂ ಸಹ, ಅವರು ವಕೀಲರನ್ನು ಹಿಡಿದು bail ಮೇಲೆ ಹೊರಗಡೆ ಬರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ನಾವು ಈಗ ತಾನೇ Nigeria and Kenya ಬಗ್ಗೆ ಮಾತನಾಡುತ್ತಿದ್ದೇವು. It is an organized crime. ಯಾರ್ಯಾರು ವಿದೇಶಿಯವರು Nigerians ಮತ್ತು Africans ಏನಿದ್ದಾರೆ, ಅವರು ತಮ್ಮ Student Visa ಮುಗಿದ ಮೇಲೆ ಅವರು ಮುಂದುವರಿಯುವುದಕ್ಕೆ ಅವರು ಕ್ರಿಮಿನಲ್ ಹಾದಿಯನ್ನು ಹಿಡಿದಿದ್ದಾರೆ. ಅವರೇ ಸ್ವತಃ ಯಾವುದಾದರೊಂದು ಪ್ರಕರಣದಲ್ಲಿ ಬುಕ್ ಮಾಡಿಸಿಕೊಳ್ಳುತ್ತಾರೆ, ನಂತರ ಆ ಕೇಸ್ ಮುಗಿಯುವರೆಗೂ ಅವರು ಇಲ್ಲಿಯೇ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. Continuous ಅಪರಾಧಗಳನ್ನು ಮಾಡುವುದು ಮತ್ತು ನಿರ್ಭಯವಾಗಿ ಅಪರಾಧಗಳನ್ನು ಮಾಡುತ್ತಾರೆ. ಅವರೆಲ್ಲರೂ ಒಂದೇ ಏರಿಯಾದಲ್ಲಿ ಇರುತ್ತಾರೆ. ಬೆಂಗಳೂರಿನಲ್ಲಿ ಕಲ್ಯಾಣನಗರ ಎಂದು ಇದೆ, ನಾವು ಅಲ್ಲಿಗೆ ಹೋಗಿಬಿಟ್ಟರೆ ನಮಗೆ ನಾವು ನಮ್ಮ ದೇಶದಲ್ಲಿ ಇದ್ದವೆಯೋ ಅಥಾವ ಆಫ್ರಿಕಾದಲ್ಲಿ ಇದ್ದೇವೆಯೋ ಎನ್ನುವಂತಹ ಅನುಮಾನ ಬರುವ ರೀತಿಯಲ್ಲಿ ಇದೆ. ಅದನ್ನು crackdown ಮಾಡಬೇಕೆಂದರೆ ಅವರಿಗೆ set of lawyers ಇದ್ದಾರೆ, within twenty-four hours ನಲ್ಲಿ ಅವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ approach ಆಗುತ್ತಾರೆ. ಅಷ್ಟು organized ಇದ್ದಾರೆ. ಅದನ್ನು break ಮಾಡುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ವಕೀಲರ ಕೆಲಸವೇ ಅದು. ಸಚಿವರು ಈ ರೀತಿ ಹೇಳಿದರೆ ಹೇಗೆ;

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಭೋಜೇಗೌಡರವರು ಈ ರೀತಿ ಹೇಳಿದ್ದು ತಪ್ಪು ಅಲ್ಲವೇ, client ವಕೀಲರ ಮನೆಗೆ ಬಂದಾಗ ಅವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸವನ್ನು ಮಾಡಲೇಬೇಕಾಗುತ್ತದೆ. ಅದು ನಂಬಿಕೆ ಅಲ್ಲವೇ; ವಕೀಲರ ಕೆಲಸವೇ ಅದು. ಮತ್ತೆ ವಕೀಲರು clients ಮನೆಗೆ ಹೋಗುತ್ತಾರೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾವು ದಂಡನೀಯವಾದಂತಹ ಕಾನೂನನ್ನು ಪ್ರಯೋಗ ಮಾಡುತ್ತಿದ್ದೇವೆ. ಗೂಂಡಾ ಕಾಯಿದೆಯಲ್ಲಿ ಪ್ರಥಮ ಬಾರಿಗೆ 1998ರ ಒಂದು ಕಾನೂನು ಇದೆ. ಆ ಕಾನೂನನ್ನು Prevention of Illicit *Traffic in* Narcotic *Drugs* and Psychotropic Substances ಕಾನೂನಿಡಿಯಲ್ಲಿ ಪ್ರಥಮ ಬಾರಿಗೆ *Narcotic* Drugs and Psychotropic Substances Act, 1998 ರಲ್ಲಿ ಒಂದು ತಿದ್ದುಪಡಿಯಾಗಿದೆ. ಪ್ರಥಮ ಬಾರಿಗೆ ನಾವು *Narcotic* Drugs and Psychotropic Substances Act, 1988 ಇದರಡಿಯಲ್ಲಿ ಬುಕ್ ಮಾಡಿದ್ದೇವೆ, ಇದರಡಿಯಲ್ಲಿ ಹೋದರೆ ಗುಂಡಾ ಕಾಯಿದೆ ತರಹ ಅವರು ಎರಡು ವರ್ಷಗಳ ಕಾಲ ಆಚೆಗೆ ಬರುವುದಕ್ಕೆ ಆಗುವುದಿಲ್ಲ. ಕಠಿಣವಾದಂತಹ ಶಿಕ್ಷೆಯನ್ನು ಪ್ರಥಮ ಬಾರಿಗೆ ರಾಜ್ಯದಲ್ಲಿ ಪ್ರಯೋಗ ಮಾಡಿದ್ದೇವೆ. ಈ ಕಾಯಿದೆಯಡಿಯಲ್ಲಿ ಕೇಸ್‌ಗಳನ್ನು ದಾಖಲಿಸುತ್ತೇವೆ. ಯಾರು repeat offenders ಇದ್ದಾರೆ. ಅವರೆಲ್ಲರನ್ನು ಇದರಡಿ ತರಬೇಕೆಂದು ಮಾಡಿದ್ದೇವೆ. ಈಗಾಗಲೇ ಒಬ್ಬ ನೈಜೀರಿಯಾದ Henry ಎನ್ನುವವನು ದೊಡ್ಡ ಪ್ರಾಮಾಣದ drug peddler ಸಿಕ್ಕಿದ್ದಾನೆ. ಅವನು repeat offender ಸಹ ಆಗಿದ್ದಾನೆ. ಅವನನ್ನು ಈ ಕಾನೂನಿನ ಅಡಿಯಲ್ಲಿ ದಾಖಲಿಸಿದ್ದೇವೆ, ಮುಂದಿನ ಎರಡು ವಾರಗಳಲ್ಲಿ ಹಲವಾರು ಜನರು ಇದರಲ್ಲಿ ಬುಕ್ ಆಗುತ್ತಾರೆ ಅವರನ್ನು ಶಾಶ್ವತವಾಗಿ ಜೈಲಿಗೆ ಕಳುಹಿಸುವಂತಹ ಕೆಲಸವನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಈ ಮಾಫಿಯಾ ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ತಮಗೂ ಗೊತ್ತಿದೆ. ಮಂಗಳೂರು, ಮಣಿಪಾಲ, ಕಾರವಾರ, ಬೆಳಗಾವಿ ನಗರಗಳಲ್ಲಿಯೂ ಇದೆ. ನಾವು ಈಗ ಬೆಳ್ಳಗೂಡಿ ಕ್ರಾಸ್‌ನಲ್ಲಿ 4 ಜನರನ್ನು ಹಿಡಿದ್ದೇವೆ. ಅವರ ಬಳಿ Brown Sugar drug material, two covers ಸಿಕ್ಕಿದೆ. ಅವರನ್ನು ಸಹ ಹಿಡಿದು ಕೇಸ್ ಬುಕ್ ಮಾಡಿದ್ದೇವೆ. ಅವರು ಕಾರವಾರದಿಂದ ಹುಬ್ಬಳಿಗೆ ದೊಡ್ಡ ಪ್ರಮಾಣದಲ್ಲಿ ಡ್ರಗ್ಸ್ ತೆಗೆದುಕೊಂಡು ಹೋಗುತ್ತಿದ್ದರು, little low quality cocaine ಎಂದು ಗುರುತಿಸಿದ್ದಾರೆ. ಅದನ್ನು ಲ್ಯಾಬ್‌ಗೂ ಸಹ ಕಳುಹಿಸಬೇಕಾಗುತ್ತದೆ. ಈ ರೀತಿ ರಾಜ್ಯದಲ್ಲಿ ನಾವು 1600 ಕ್ಕಿಂತ ಹೆಚ್ಚು ಕೇಸ್‌ಗಳನ್ನು ಕೇವಲ 6 ತಿಂಗಳಿನಲ್ಲಿ ದಾಖಲಿಸಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಬಹಳ ದೊಡ್ಡ ಪ್ರಮಾಣದಲ್ಲಿ crackdown ಮಾಡುತ್ತಿದ್ದೆವೆ. Dark Web ಅದರ ಮುಖಾಂತರ internet training ಆಗುತ್ತಿತ್ತು. Dark Web ಎಂದರೆ, international drug racket ಅದು. ಯಾರು ಸುಲಭವಾಗಿ ಅದರಲ್ಲಿ enter ಆಗುವುದಕ್ಕೆ ಆಗುವುದಿಲ್ಲ. ಅದಕ್ಕೆ ಹಲವಾರು codes ಇರುತ್ತವೆ. ಯಾರು ಸಹ ಅದನ್ನು enter ಮಾಡುವುದಕ್ಕೆ ಆಗುವುದಿಲ್ಲ. Only by invitation ಇರುತ್ತದೆ. ಅದರಲ್ಲಿ ಕೇವಲ ಡ್ರಗ್ಸ್ ಅಷ್ಟೆ ಅಲ್ಲ, small arms and light weapons ಎಲ್ಲವೂ ಅದರಲ್ಲಿ ದೊಡ್ಡ ಮಟ್ಟದಲ್ಲಿ deal ಆಗುತ್ತದೆ. ಅದನ್ನು ಪ್ರಥಮ ಬಾರಿಗೆ ಕರ್ನಾಟಕ ಪೊಲೀಸರು crackdown ಮಾಡಿದ್ದಾರೆ. crackdown ಮಾಡಿ ಅದರಲ್ಲಿ deal ಮಾಡುವವರನ್ನು ಹಿಡಿದಿದ್ದೇವೆ. ಅದರಲ್ಲಿ ಒಬ್ಬ ಕೆನಡಿಯನ್ ಇಲ್ಲಿ ವಾಸ ಇದ್ದ. ಅವನ ಲಿಂಕ್ ದೆಹಲಿಯಲ್ಲಿತ್ತು ಆತನನ್ನು ಸಹ ಹಿಡಿದಿದ್ದೇವೆ. ಹೀಗೆ we are going to the root. ಯಾರು ಡ್ರಗ್ಸ್ international dealers ಇದ್ದಾರೆ, followers ಇದ್ದಾರೆ. ಅವರನ್ನು ಸಹ ಹಿಡಿಯುತ್ತಿದ್ದೇವೆ. ಕೇವಲ ಸೇವನೆ ಮಾಡುವವರಲ್ಲ, we are going to the root of the total menace and we have determined. ಯಾವುದೇ ಕಾರಣಕ್ಕೂ ಬಿಡದೇ ಇದನ್ನು ನಿಲ್ಲಿಸುತ್ತೇವೆ. ಇದಕ್ಕೆ ಸಮಾಜದ ಸಹಕಾರ ಸಹ ಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು, ಅವರ ಏರಿಯಾದ ಅಂಗಡಿಗಳಲ್ಲಿ ಡ್ರಗ್ಸ್ ವ್ಯಾಪಕವಾಗಿ ಸಿಗುತ್ತದೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ಎಲ್ಲೆಲ್ಲಿ ಅನುಮಾನ ಬರುತ್ತದೆ ಎಂಬುದನ್ನು ನೋಡಿ ನಮ್ಮ ಇಲಾಖೆಗೊಂದು message ಕೊಟ್ಟರೆ, within a hours we will see that and raided and seized. ಅದರಲ್ಲಿ zero tolerance ಇದನ್ನು ನಾವು ಬಗ್ಗು ಬಡಿಯುವುದಕ್ಕೆ ತೀರ್ಮಾನ ಮಾಡಿದ್ದೇವೆ. ಇದಕ್ಕೆ ಎಲ್ಲರ ಸಹಕಾರವು ಬೇಕಾಗಿದೆ. ಏಪ್ರಿಲ್ ತಿಂಗಳಿನಲ್ಲಿ ಇದರ ಬಗ್ಗೆ awareness campaign ಬಹಳ ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದ್ದೇವೆ. We are involving all college managements also ಮತ್ತು ಅವರದ್ದು ಸಹ ಇದರಲ್ಲಿ ಜವಬ್ದಾರಿ ಇದೆ. ಅವರ ಹಾಸ್ಟೆಲ್‌ಗಳಲ್ಲಿ ಡ್ರಗ್ಸ್ ವ್ಯವಹಾರ ಮಾಡುತ್ತಿದ್ದಾರೆ. ಅವರು ಸಹ ಇದರಲ್ಲಿ ಭಾಗಿಯಾದಂತೆ ಆಗುತ್ತದೆ. ಅದರಿಂದ ನಾವು ಎಲ್ಲರಿಗೂ ಸಹ ಇದರ ಬಗ್ಗೆ first

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

awarenessಅನ್ನು create ಮಾಡುತ್ತೇವೆ. ತಪ್ಪು ಮಾಡಿದರೆ ಶಿಕ್ಷೆಯನ್ನು ಸಹ ಕೊಡುತ್ತೇವೆ, ಡ್ರಗ್ಸ್ ಬಗ್ಗೆ ಯಾವುದೇ compromise ಇಲ್ಲ ಎನ್ನುವಂಥದ್ದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಕಾಳಜಿಯನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಚಿವರು ಕಾನೂನು ರೀತಿ ಯಾವ ಕ್ರಮಕೈಗೊಳ್ಳುತ್ತಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಇದನ್ನು ನಿಯಂತ್ರಣಕ್ಕೆ ತರುವುದಕ್ಕೆ ಉತ್ತರದಲ್ಲಿ "ಮಾದಕ ವಸ್ತುಗಳ ಮಾರಾಟದ ನಿಯಂತ್ರಣಕ್ಕಾಗಿ ಪೊಲೀಸ್ ಠಾಣಾ ಸರಹದ್ದಿನ ಪ್ರಮುಖ ಶಾಲೆಗಳ ಹತ್ತಿರ ಮಾದಕ ವಸ್ತುಗಳ ಮಾರಾಟಗಾರರ ಮಾಹಿತಿಯನ್ನು ಪಡೆಯುವ ಸಲುವಾಗಿ ದೂರು ಬಾಕ್ಸ್‌ಗಳನ್ನು ಅಳವಡಿಸಲಾಗಿದೆ" ಎಂದು ತಿಳಿಸಿರುತ್ತಾರೆ. ಯಾವ ಶಾಲೆಯ ಹತ್ತಿರವು ಸಹ ಒಂದು ದೂರು ಬಾಕ್ಸ್‌ನ್ನು ಇಟ್ಟಿಲ್ಲ. ಇದು ಸಮಾಜದ ಒಂದು ಬಹು ದೊಡ್ಡ ಪಿಡುಗು. ನಾವೆಲ್ಲರೂ ಸಹ ಇದರಲ್ಲಿ ಕೈಜೊಡಿಸಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಇವತ್ತು ಸಣ್ಣ ಸಣ್ಣ ಮಕ್ಕಳು ಡ್ರಗ್ಸ್ ತೆಗೆದುಕೊಳ್ಳವುದಕ್ಕೆ ಪ್ರಾರಂಭ ಮಾಡಿ ಮತ್ತೆ ಅದನ್ನು ತೆಗೆದುಕೊಳ್ಳಲಿಲ್ಲವೆಂದರೆ ಹುಚ್ಚರು ಆಡಿದಂತೆ ಆಡುತ್ತಾರೆ. ಅಂತಹ ಮಕ್ಕಳ ತಂದೆ ತಾಯಿಯವರಿಗೆ ಅವರನ್ನು ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ಪ್ರತಿದಿವಸ ಸೇವನೆ ಮಾಡುತ್ತಿರುತ್ತಾರೆ. ಒಂದು ದಿವಸ ಅವರಿಗೆ ಡ್ರಗ್ಸ್ ಸಿಗಲಿಲ್ಲವೆಂದರೆ, ನಾಳೆ ದಿವಸ ಹುಚ್ಚರು ಆಡಿದಂತೆ ಆಡುತ್ತಿರುತ್ತಾರೆ. ಮಾನ್ಯ ಸಚಿವರು ಈಗ ಇದರ ಬಗ್ಗೆ ಏನಾದರೂ ಅನುಮಾನ ಬಂದರೆ ದಯವಿಟ್ಟು ತಿಳಿಸಿ 24 ಗಂಟೆಯೊಳಗೆ ಪೊಲೀಸರನ್ನು ಕಳುಹಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಇದು ಮಾನ್ಯ ಸಚಿವರ ಗಮನಕ್ಕೆ ಇರಲಿ, ನಾನು ಮನಗೆ ಹೋಗಬೇಕಾದರೆ, ದಾರಿಯಲ್ಲಿ ಕೆಲವು ಅಂಗಡಿಗಳು ಮತ್ತು ಬೇಕರಿಗಳು ಸಿಗುತ್ತವೆ, ಅಂಗಡಿಗಳಲ್ಲಿ ಅದನ್ನು ಮಾರಾಟ ಮಾಡುವುದಿಲ್ಲ. ಆದರೆ, ಯುವಕರು ಆ ಅಂಗಡಿಗಳ ಬಳಿಗೆ ಆಟೋದಲ್ಲಿ ಅಥವಾ ದ್ವಿಚಕ್ರ ವಾಹನಗಳಲ್ಲಿ ಬಂದು ಕುಳಿತುಕೊಂಡು ಸಿಗರೇಟ್ ಸೇದುತ್ತಿರುತ್ತಾರೆ. ಆ ಸಿಗರೇಟ್‌ನಲ್ಲಿ ಗಂಜಾ ಮಿಕ್ಸ್ ಆಗಿರುತ್ತದೆ. ನಾವು ಪೊಲೀಸ್‌ನವರಿಗೆ ಫೋನ್ ಮಾಡಿ ಹೇಳಿದಾಗ ತಕ್ಷಣವೇ ಪೊಲೀಸರು ಅಲ್ಲಿಗೆ ಬರುತ್ತಾರೆ. ಪೊಲೀಸರು ಬಂದ ತಕ್ಷಣ ಅವರು ಅಲ್ಲಿಂದ ಓಡಿ ಹೋಗುತ್ತಾರೆ. ಆದರೆ, ಎರಡ ರಿಂದ ಮೂರು ದಿವಸಗಳು ಕಳೆದ ಮೇಲೆ, ಅದೇ ಗ್ಯಾಂಗ್ ಅಲ್ಲಿಗೆ ಮತ್ತೆ ಬರುತ್ತಾರೆ. ಆದರೆ, ಇದರ ಬಗ್ಗೆ ಪೂಲೀಸರಿಗೆ ಸಂಪೂರ್ಣವಾದ ಮಾಹಿತಿ ಇದೆ. ನಾನು ಉದಾಹರಣೆ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಈ ವರ್ಷ 66 ಕೇಸ್‌ಗಳನ್ನು ದಾಖಲಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(590)19-03-2020(4-00)ಎಂವಿ-ಆರ್‌ಎನ್**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 600 ಪ್ರಕರಣಗಳ ಬಗ್ಗೆ ಮಾಹಿತಿಯನ್ನು ನೀಡಬಲ್ಲೆ.

**ಶ್ರೀ ಬಸವರಾಜ ಬೊಮ್ಮಾಯಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಬಹಳ ಜವಾಬ್ದಾರಿಯಿಂದ ಕೇಳಿದ್ದಾರೆಂದು ಭಾವಿಸಿದ್ದೇನೆ. ಅದು ಅವರಿಗೆ ಗೊತ್ತಿದ್ದು, ಅದನ್ನು ಕೊಡದೇ ಇದ್ದರೂ ಕೂಡ ಅಪರಾಧವಾಗುತ್ತದೆ. ಆದುದರಿಂದ ಅವರಲ್ಲಿರುವಂತಹ ಮಾಹಿತಿಯನ್ನು ಕೂಡಲೇ ನೀಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ಹೌದು, ಖಂಡಿತವಾಗಿ ಅದು ಅಪರಾಧವಾಗುತ್ತದೆ. ನಾನು ಈಗಾಗಲೇ ಸಂಬಂಧಪಟ್ಟವರಿಗೆ ಮಾಹಿತಿ ನೀಡಿದ್ದೇನೆ. ಖಂಡಿತವಾಗಿ ಅದನ್ನು ಮಾನ್ಯ ಸಚಿವರಿಗೂ ಸಹ ನೀಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-**ಮಾನ್ಯ ಸಭಾಪತಿಯವರೇ, within an hour I will take action.

**ಶ್ರೀ ಎಂ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ಮೊದಲು ಏನಾಗಿದೆ ಎಂದು ಹೇಳಿದ್ದೇನೆ. ಮಾನ್ಯ ಸಚಿವರೆ ಮೊನ್ನೆ ದಿವಸ ಹೆಣ್ಣೂರು ಬಳಿ, ಒಬ್ಬ ನೈಜೀರಿಯನ್ ಪ್ರಜೆಯನ್ನು ಅರೆಸ್ಟ್ ಮಾಡುವುದಕ್ಕೆ ಪೊಲೀಸರು ಹೋದರು, ಅವನು ಅರೆಸ್ಟ್ ಆದ. ಅವನು ಎಲ್ಲಾ ಕಡೆ ತಂದು ಕೊಡುತ್ತಿದ್ದಂತಹ ದೊಡ್ಡ ಮಾಫಿಯಾ. ಪೊಲೀಸ್‌ನವರು ಅವನನ್ನು ಅರೆಸ್ಟ್ ಮಾಡುವುದಕ್ಕೆ ಹೋದರೆ, ಅವನ ಹೆಂಡತಿ ಪೂರ್ತಿ ತನ್ನ ಬಟ್ಟೆಗಳನ್ನು ಕಿತ್ತುಕೊಂಡು naked ಆಗಿ ಬಿಡುತ್ತಾಳೆ. ಆಗ ಪೊಲೀಸರು ಹಿಡಿಯುವುದಕ್ಕೆ ಭಯ ಪಡುತ್ತಾರೆ. ಆ ಹೆಣ್ಣು ಮಗಳನ್ನು touch ಮಾಡಿದರೆ, ಅವಳು naked ಆಗಿರುವುದರಿಂದ. ಅವಳನ್ನು ಮುಟ್ಟಿದರೆ offence ಆಗುತ್ತದೆ. ಆಗ ಇನ್ನೊಂದು case ಹಾಕಬಹುದು ಎಂದು ಈ ರೀತಿಯಾಗಿ ಭಯಪಡಿಸುವಂತಹ ವಾತಾವರಣವನ್ನು ಬಹಳಷ್ಟು ಕಲಿತುಕೊಂಡು ಬಿಟ್ಟಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-**ಮಾನ್ಯ ಸಭಾಪತಿಯವರೇ, this is a big challenge.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ತಕ್ಷಣ ಅವರು ಹೈಕೋರ್ಟ್‌ಗೆ ಹೋಗಿದ್ದಾರೆ. ಅವರು ಏನೇನು ಬೇಕು ಎಂಬ ಜಾಲಗಳನ್ನು ಮಾಡಿಕೊಂಡಿದ್ದಾರೆ. ಇದು ಸತ್ಯ ಕೂಡ. ಆದುದರಿಂದ ನಿರ್ದಾಕ್ಷಿಣ್ಯವಾಗಿ ಕಾನೂನು ರೀತಿಯಲ್ಲಿ ಕ್ರಮ ಕೈಗೊಂಡು, ನಮ್ಮ young generation ಉಳಿಸುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-**ಮಾನ್ಯ ಸಭಾಪತಿಯವರೇ, ನನಗೆ ಖಂಡಿತವಾಗಿ ಮಾನ್ಯ ಸದಸ್ಯರ ಕಳಕಳಿ ಅರ್ಥವಾಗುತ್ತದೆ. ಬಹುತೇಕವಾಗಿ ಒಂದು ಸರ್ಕಾರವಾಗಿ, right from Home Minister to last Policemen. ನಾವು ಜಾಗ್ರತೆ ಮಾಡಿದ್ದೇವೆ. Zero Tolerance is not only for Drug Peddlers. ನಮ್ಮ ಇಲಾಖೆಯಲ್ಲಿ ಯಾರಾದರೂ ಇದರ ಬಗ್ಗೆ ಮಾಹಿತಿ ಇಟ್ಟುಕೊಂಡು ಕಾರ್ಯಾಚರಣೆ ಮಾಡದೇ ಇದ್ದರೆ, ಅವರಿಗೂ ಕೂಡ zero tolerance. ಮತ್ತೆ ಸ್ಪಷ್ಟವಾದ ಸಂದೇಶವನ್ನು ಸಹ ಕಳುಹಿಸಿದ್ದೇನೆ. ನಾನು ಈಗಾಗಲೇ ಹೇಳಿದ್ದೇನೆ, we have to break the backbone of this Drug Mafia. We will do that. ಅದರಲ್ಲಿ ಎರಡು ಮಾತಿಲ್ಲ. ನಾನು ಬಹಳ ಅತ್ಯಂತ commitment ಆಗಿ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ನಿಮ್ಮೆಲ್ಲರ ಸಹಕಾರ ಬೇಕು. ಮಾನ್ಯ ಸದಸ್ಯರ ಕಡೆ ಇರುವಂತಹ ಮಾಹಿತಿ ನೀಡಲಿ, ನಾವು ಕ್ರಮ ಕೈಗೊಳ್ಳುತ್ತೇವೆ. ನಾನು ಮೊನ್ನೆ ದಿವಸ ವಿಧಾನ ಸಭೆಯಲ್ಲಿ ಇದನ್ನು ಘೋಷಣೆ ಮಾಡಿದ ಮೇಲೆ, War against Drugs, ಕೇವಲ ಮಾತಿನಲ್ಲಿ ಅಲ್ಲ. ಮೊನ್ನೆ ವಿಧಾನ ಸಭೆಯಲ್ಲಿ ಹೇಳಿದ ಮೇಲೆ ಕೇವಲ ಬೆಂಗಳೂರು ನಗರದಲ್ಲಿ ಒಟ್ಟು 31 ಪ್ರಕರಣಗಳು ದಾಖಲಾಗಿವೆ. Consumers 272 ಜನ ಮತ್ತು peddlers ಎಲ್ಲಾ ಸೇರಿ ಒಟ್ಟು 303 ಜನರನ್ನು ಆರೆಸ್ಟ್ ಮಾಡಿದ್ದೇವೆ. Daily breakdown ಮಾಡುತ್ತಿದ್ದೇವೆ. ನಾನು ಎಲ್ಲಾ ಡಿ.ಸಿ.ಪಿ.ಗಳಿಗೆ ತಿಳಿಸಿದ್ದೇನೆ. ನಿಮ್ಮ ನಿಮ್ಮ ಏರಿಯಾದಲ್ಲಿ ನೀವು daily basis ನಲ್ಲಿ raid ಮಾಡಬೇಕು. ಏಕೆಂದರೆ ಅದು ಅಷ್ಟು ವ್ಯಾಪಕವಾಗಿದೆ. ಅದನ್ನು ಖಂಡಿ ಮಾಡಬೇಕು. ಇಲ್ಲದಿದ್ದರೆ stern action will be taken ಎಂಬ ಮಾತನ್ನು ಸಹ ಹೇಳಿದ್ದೇನೆ. ಅವರ ಪ್ರಮುಖವಾದಂತಹ ಕೆಲಸ Drug Mafia ವನ್ನು break ಮಾಡುವುದು ಎಂದು ತಿಳಿಸಿದ್ದೇವೆ. ಏಕೆಂದರೆ, ಇದರ ಜೊತೆಗೆ ಕ್ರೈಮ್ ಕೂಡ ಸೇರಿಕೊಂಡಿದೆ. ಡ್ರಗ್ ಮಾಫಿಯಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕಡಿಮೆಯಾದರೆ ಕ್ರೈಮ್ ಕೂಡ ಕಡಿಮೆಯಾಗುತ್ತದೆ. ಆ ಹಿನ್ನೆಲೆಯಲ್ಲಿ we have taken it very seriously.

**ಶ್ರೀ ಐವನ್ ಡಿ'ಸೋಜಾ:-**ಮಾನ್ಯ ಸಭಾಪತಿಯವರೇ, ಅವರನ್ನು ಹಿಡಿದು ಅವರ ವಿರುದ್ಧ ಪ್ರಕರಣವನ್ನು ದಾಖಲು ಮಾಡುತ್ತಾರೆ. ಅದು ಎಲ್ಲವೂ ಸರಿಯಿದೆ. What is the conviction rate? ಕೋರ್ಟ್‌ಗಳಿಂದ ಅವರು ಬಹಳ ಸುಲಭವಾಗಿ ಹೊರಗೆ ಬರುತ್ತಾರೆ. What is the conviction rate? ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ. That is also important. Without any punishment sending accused to home... ಅದನ್ನು ಮಾಡುತ್ತಾರೆ ಸರಿ ನಾನು ಒಪ್ಪುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-**ಮಾನ್ಯ ಸಭಾಪತಿಯವರೇ, ನಾವು NDPS (Narcotic Drugs and Psychotropic Substances)Act ನಲ್ಲಿ ಮಾಡಿದಾಗ, ಅವರಿಗೆ ಸುಲಭವಾಗಿ ಜಾಮೀನು ಸಿಗುತ್ತಿತ್ತು. ಈಗ ಇದರ ಆಕ್ಟ್ ಅಡಿಯಲ್ಲಿ 1988ರ ಅಮೆಂಡ್‌ಮೆಂಟ್ ಪ್ರಕಾರ, *Prevention of Illicit* Trafficin *Narcotic* Drugs and Psychotropic Substances Act,ಇದು ಗೂಂಡಾ ಆ್ಯಕ್ಟ್ ತರಹ ಇದೆ. ಇಲ್ಲಿ ಒಂದು ಬಾರಿ ಅರೆಸ್ಟ್ ಆದರೆ ಇದಕ್ಕೆ ಜಾಮೀನು ಸಿಗುವುದಿಲ್ಲ ಮತ್ತು ಅವರು ಎರಡು ವರ್ಷ ಸೆರೆಮನೆಗೆ ಹೋಗುತ್ತಾರೆ. ಇವತ್ತು ನಾವು ಈ ಕ್ರಮವನ್ನು ಇಡೀ ರಾಷ್ಟ್ರದಲ್ಲಿ ಪ್ರಯೋಗ ಮಾಡಿದ್ದೇವೆ, ಅದು ಯಶಸ್ವಿಯಾಗುತ್ತದೆ; ಈ ತರಹ ಹಿನ್ನೆಲೆ ಇರುವವರು, *repeat offenders*ಅನ್ನು ಇದರಲ್ಲೇ ದಾಖಲು ಮಾಡುತ್ತೇವೆ. ಆಗ ಅವರಿಗೆ ಜಾಮೀನು ಸಿಗುವುದು ತಪ್ಪುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಈಗ ಕಾಲೇಜುಗಳಲ್ಲಿ ಇರುವಂತಹ ಎಷ್ಟೋ ಹುಡುಗರು ಕಾಲೇಜು ಬಿಟ್ಟಿದ್ದಾರೆ. ದಯಮಾಡಿ ಕಾಲೇಜು ಮತ್ತು ಕಾಲೇಜು ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯಲ್ಲಿ ಒಂದು ಕಮಿಟಿಯೇ ಇರುತ್ತದೆ. ಅವರು ಅದನ್ನು ಗಮನಿಸಿದರೆ ಇನ್ನಷ್ಟು ಕಂಟ್ರೋಲ್ ಆಗುತ್ತದೆ.

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಪ್ರಶ್ನೆ ಸಂಖ್ಯೆ: 1558**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇನ್ನು ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ಅತ್ಯಾಚಾರಗಳು ಆಗುತ್ತಿವೆ. Personal casesಬಹಳ ಮಾಡುತ್ತಿದ್ದಾರೆ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಮೊನ್ನೆ ತಾನೆ ಒಬ್ಬರು ನಿರಪರಾಧಿಗೆ, ಈ ಸಂವಿಧಾನ ಹೇಳುತ್ತದೆ ನೂರು ಜನ ಅಪರಾಧಿಗಳು ತಪ್ಪಿಸಿಕೊಂಡರು ಸಹ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು. ಎರಡು ತಿಂಗಳ ಹಿಂದೆ ಒಬ್ಬ ಸದಸ್ಯರ ಕುಟುಂಬದವರ ಮೇಲೆ false murder case ಹಾಕಿದ್ದರು, ಅದಕ್ಕೆ ಅವರು ಪರಾರಿಯಾಗಿದ್ದರು. ಅವರು ವಾಪಸ್ಸು ಬಂದ ತಕ್ಷಣ ಅವರಿಗೆ ಜಾಮೀನು ಸಿಕ್ಕಿದೆ. ಈಗ ಅವರ ಮೇಲೆ ಇನ್ನೊಂದು attrocity ಪ್ರಕರಣ ಹಾಕಿದ್ದರಿಂದ ಅವರು ಒಂದು ತಿಂಗಳು ಜೈಲಿನಲ್ಲಿದ್ದರು. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅವರು ಆ ಪ್ರಕರಣದ ಬಗ್ಗೆ ಪ್ರಶ್ನೆ ಕೇಳಿಲ್ಲ. ಅವರ ಹೆಸರು ಹೇಳಿಲ್ಲ ಮತ್ತು ಪ್ರಕರಣದ ಸಂಖ್ಯೆಯನ್ನು ನೀಡಿಲ್ಲ. How can we reply about private cases? ಅದು ನನಗೆ ಗೊತ್ತಿಲ್ಲ. Anyhow, raise ಮಾಡಿದ್ದಾರೆ. ಖಂಡಿತವಾಗಿ ಅದರ ಸಂಪೂರ್ಣ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಒಂದು ವಿಷಯವನ್ನು ತಿಳಿದುಕೊಳ್ಳಿ, ಈಗ ಯಾವುದೇ ಪ್ರಕರಣವಾದರೂ ಅದು ತನ್ನದೇ ಆದ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತದೆ. We can’t interfere in investigation part of it. ಮೇಲ್ನೋಟಕ್ಕೆ ಈಗ ಯಾರಿಗಾದರೂ ಅನ್ಯಾಯವಾಗಿರುವುದು ಗೊತ್ತಾದರೆ, ಸರಿಯಾದ ನಿರ್ದೇಶನವನ್ನು ಕೊಡುತ್ತೇನೆ. ಅವರ ಹೆಸರು, ಊರು ಮತ್ತು ಆ ಪ್ರಕರಣದ ಬಗ್ಗೆ ಅವರು ವೈಯಕ್ತಿಕವಾಗಿ ಬಂದು ಮಾಹಿತಿ ನೀಡಲಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 713**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ತಿಪ್ಪಣ್ಣ ಕಮಕನೂರ:-**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೆಳದಂಡೆ ಮುಲ್ಲಾಮಾರಿ ಯೋಜನೆ ಮತ್ತು ಅಮರ್ಜಾ ಯೋಜನೆಯ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಿದ್ದಾರೆ. ಈ ಎರಡು ಯೋಜನಗಳಿಗೆ ಏನು ತಕರಾರು ಇಲ್ಲ. ಈ ಎರಡು ಯೋಜನೆಗಳಿಗೆ ಸಂಬಂಧಪಟ್ಟಂತೆ ಬಹಳ ಉತ್ತಮವಾದ ವರದಿಯನ್ನು ನೀಡಿದ್ದಾರೆ. ನನಗೆ ಮುಖ್ಯವಾಗಿ ಬೇಕಾಗಿರುವುದು 'ಬೆಣ್ಣೆತೋರಾ ಯೋಜನೆ'. ಈ ಬೆಣ್ಣೆತೋರಾ ಯೋಜನೆ ಸುಮಾರು 174 ಕೋಟಿ ರೂಪಾಯಿಗಳ ಯೋಜನೆ. ಇದು ದಿನಾಂಕ: 12.02.2016ರಂದು ಪ್ರಾರಂಭವಾಯಿತು. ದಿನಾಂಕ: 12.11.2019ರಲ್ಲಿ ಒಂಬತ್ತು ತಿಂಗಳ ಒಳಗೆ ಮುಗಿಯಬೇಕಾಗಿತ್ತು. ಆದರೆ, ಸುಮಾರು ನಾಲ್ಕು ವರ್ಷವಾದರೂ ಸಹ ಇದರ ಕೆಲಸ ಮುಗಿದಿಲ್ಲ. ದಯವಿಟ್ಟು ಇದು ಏಕೆ ವಿಳಂಭವಾಗಿದೆ ಎಂಬುದನ್ನು ಹೇಳಬೇಕು.

**ಶ್ರೀ ರಮೇಶ್ ಲ. ಜಾರಕಿಹೊಳಿ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ತಿಪ್ಪಣ್ಣ ಕಮಕನೂರ ರವರ ಭಾವನೆ ಅಲ್ಲಿನ ಕಾಮಗಾರಿ ಬಹಳ ಆಮೇಗತಿಯಲ್ಲಿ ನಡೆದಿದೆ ಎಂದು. ಅದಕ್ಕೆ ಸಂಬಂಧಪಟ್ಟಂತೆ ಅವರು ನಮ್ಮ ಕಚೇರಿಗೆ ಬಂದು ಚರ್ಚೆ ಮಾಡಿದ್ದಾರೆ. ಈಗಾಗಲೇ ಇದರ ಬಗ್ಗೆ ಕೆಳಮನೆಯಲ್ಲಿ ಕೆಲವು ಸದಸ್ಯರಿಗೆ ಉತ್ತರವನ್ನು ತಿಳಿಸಿದ್ದೇನೆ. ಮಾನ್ಯ ಸದಸ್ಯರಿಗೆ ಈ ಸದನದ ಮುಖಾಂತರ ಆಶ್ವಾಸನೆ ಕೊಡುತ್ತೇನೆ. ನಾನು ಅವರ ಬಹಳಷ್ಟು ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು, ಗುಲ್ಬರ್ಗದಲ್ಲಿ ಈ ಕೊರೊನಾ ಸಮಸ್ಯೆ ಮುಗಿದ ನಂತರ, ಜಿಲ್ಲಾವಾರು ಮೀಟಿಂಗ್‌ಗೆ ಹೋದಾಗ ಅವರನ್ನು ಸಹ ಕರೆದು, ಆ ಕಾಮಗಾರಿಗಳ ಬಗ್ಗೆ ಚುರುಕು ಮಾಡಬೇಕು, ಅಲ್ಲಿ ನಡೆದಿರುವ ಘಟನೆ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಅವರ ಭಾವನೆಗೆ ತಕ್ಕಂತೆ ಕೆಲಸ ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

**ಶ್ರೀ ತಿಪ್ಪಣ್ಣ ಕಮಕನೂರ:-**ಮಾನ್ಯ ಸಭಾಪತಿಯವರೇ, ಮಾನ್ಯ ಜಲಸಂಪನ್ಮೂಲ ಮಂತ್ರಿಗಳು ಬಡವರ ಮತ್ತು ರೈತರ ಬಗ್ಗೆ ಏನಾದರೂ ನ್ಯಾಯ ಕೊಡುವಂತಹ ಸಂದರ್ಭ ಬಂದರೆ ಅವರು ಎಂದೂ compromise ಮಾಡಿಕೊಳ್ಳುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಗಮನಕ್ಕೆ ತರುತ್ತೇನೆ. ಈಗ ನಮ್ಮ ಕಥೆ ಏನಾಗಿದೆ ಎಂದರೆ, ಸುಮಾರು 174 ಕೋಟಿ ರೂಪಾಯಿಯ ಯೋಜನೆ ದಿನಾಂಕ: 12.02.2016ರಂದು ಪ್ರಾರಂಭವಾಗಿದೆ. ಆದರೆ, ಇಲ್ಲಿಯವರೆಗೆ ಒಂದು ಎಕರೆಗೆ ಕೂಡ ನೀರಾವರಿಯಾಗಿಲ್ಲ. ಈಗ ಅಲ್ಲಿ ಒಂದೇ ಒಂದು ಎಕರೆ ನೀರಾವರಿಯಾಗಿದೆ ಎಂದರೆ, ತಾವು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನನ್ನು ನೇಣುಗಂಬಕ್ಕೆ ಹಾಕಬೇಕು. ನಾವು ಇಂತಹ ಒಂದು ದರಿದ್ರ ಪರಿಸ್ಥಿತಿಯಲ್ಲಿ ಇದ್ದೇವೆ. ಈ ಯೋಜನೆಯ ದುಡ್ಡು ಏನಾಯಿತು? ಕಂಟ್ರಾಕ್ಟರ್ ಹೆಸರು ಆರ್.ಎನ್.ಎಂ. ಎಂದು ಇದೆ. ನಾವು ಅವನನ್ನು ಎಲ್ಲಿ ಹುಡುಕುವುದು. ಕೆಲಸ ಪ್ರಾರಂಭವಾದಾಗಿನಿಂದ ಅವರು ಬೆಣ್ಣೆತೋರಾ ಸ್ಥಳಕ್ಕೆ ಬಂದಿಲ್ಲ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಬೆಣ್ಣೆತೋರಾ ಜಾಗವನ್ನು ಪರಿಶೀಲನೆ ಮಾಡುವುದಕ್ಕೆ ಬಂದಿದ್ದರು. ಇಲ್ಲಿಯವರೆಗೂ ಒಂದೇ ಒಂದು ಎಕರೆಗೆ ಸಹ ನೀರಾವರಿಯಾಗಿಲ್ಲ. ಈ 174 ಕೋಟಿ ರೂಪಾಯಿಯ ಯೋಜನೆಯನ್ನು ಶಾಸಕರಾದ ಮಾನ್ಯ ಪ್ರಿಯಾಂಕ ಖರ್ಗೆಯವರು ಇದ್ದಾಗ ಇದನ್ನು ಪೂರ್ಣಗೊಳಿಸಬೇಕೆಂದು ಮಂಜೂರು ಮಾಡಿಸಿಕೊಟ್ಟಿದ್ದರು. ಆಗ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಈಗಿನ ಜಲಸಂಪನ್ಮೂಲ ಸಚಿವರು ಕೂಡ ಅಲ್ಲೇ ಇದ್ದರು. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ, ಒಂದು ಎಕರೆ ಸಹ ನೀರಾವರಿಯಾಗಿಲ್ಲವೆಂದರೆ, ಆ ದುಡ್ಡು ಏನಾಯಿತು? ದಯವಿಟ್ಟು ಇನ್ನೊಂದು ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಅವರು ಇದರ ಮಾಹಿತಿಯನ್ನು ಇಟ್ಟುಕೊಳ್ಳಲಿ, ಮುಂದೆ ನೋಡೋಣ. ಈಗ ಇನ್ನು 30 ಕೋಟಿ ರೂಪಾಯಿ ಹಣ ಖರ್ಚಾಗಿಲ್ಲ, ಇನ್ನೂ ಹಾಗೆ ಉಳಿದಿದೆ. ಈಗ ಪುನಃ 10 ಕೋಟಿ ರೂಪಾಯಿ, ಅದು ಏನೋ ಇ.ಎಫ್.ಐ. ಎಂದು, ಅವರು extra work ಮಾಡಿದ್ದಾರೆಂದು, ಎಲ್ಲೋ blasting ಮಾಡಿದ್ದಾರೆಂದು ಹೇಳಿದ್ದಾರೆ. ನಮ್ಮಲ್ಲಿ ಎಲ್ಲೂ blasting ಇಲ್ಲ, ಏನೂ ಇಲ್ಲ. ಅದು ನನ್ನ ಊರು, 25 ವರ್ಷಗಳ ಹಿಂದೆ ನಮ್ಮ ಜಮೀನುಗಳು ಅದಕ್ಕೆ ಹೋಗಿವೆ. ಇಲ್ಲಿ ನೀರಾವರಿಯಾಗುತ್ತದೆ ಎಂದು ನಮ್ಮ ಜಮೀನುಗಳನ್ನು ಕೊಟ್ಟಿದ್ದೇವೆ. ಈಗ ಅಲ್ಲಿ ಬಹಳ ಕಷ್ಟದಲ್ಲಿದ್ದೇವೆ. ಪುನಃ 10 ಕೋಟಿ 39 ಲಕ್ಷ ಕೂಡ ಹೆಚ್ಚುವರಿ ಆರ್ಥಿಕ ಮಂಜೂರಾತಿಯ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

**(591) 19.03.2020 04.10 LL-VK**

**ಶ್ರೀ ತಿಪ್ಪಣ್ಣ ಕಮಕನೂರ (ಮುಂದು):-**

ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಷಯವಾಗಿರುವುದರಿಂದ, ಮಾನವೀಯತೆಯ ದೃಷ್ಟಿಯಿಂದ ನಮಗೆ ಸ್ವಲ್ಪ ಅವಕಾಶ ಕೊಡಬೇಕು. ತಾವು ಗಡಿಬಿಡಿ ಮಾಡಬಾರದು.

**ಸಭಾಪತಿಯವರು:-** ಇಲ್ಲಿ ಯಾರು ಗಡಿಬಿಡಿ ಮಾಡುತ್ತಿಲ್ಲ. ತಾವು ಪ್ರಶ್ನೆ ಕೇಳದೇ ಭಾಷಣ ಮಾಡಿದರೆ ಏನು ಮಾಡಬೇಕು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಸಭಾಪತಿಯವರೇ, ನಮ್ಮ ಪರಿಸ್ಥಿತಿ ಆ ರೀತಿ ಇದೆ. ಅದನ್ನು ನಾವು ಹೇಳಬೇಕಾಗುತ್ತದೆ.

**ಸಭಾಪತಿಯವರು:-** ಪರಿಸ್ಥಿತಿ ಎಲ್ಲಾ ಕಡೆ ಇರುತ್ತದೆ.

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಸಭಾಪತಿಯವರೇ, ಆದರೆ, ನಮ್ಮಲ್ಲಿ ಬೇರೆ ರೀತಿ ಇದೆ.

**ಸಭಾಪತಿಯವರು:-** ಆಯಿತು. ತಾವು ಪ್ರಶ್ನೆ ಕೇಳಿದ್ದು ಮುಗಿದಿದೆಯೇ? ಸಚಿವರೇ ತಮ್ಮ ಉತ್ತರ ತಿಳಿಸಿ.

**ಶ್ರೀ ಜಾರಕಿಹೊಳಿ ರಮೇಶ್ ಲಕ್ಷ್ಮಣರಾವ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಭಾವನೆಯನ್ನು ಹೇಳಿದ್ದಾರೆ. ಈಗಾಗಲೇ ತಮಗೆ ಆಶೋತ್ತರಗಳನ್ನು ಕೊಟ್ಟ ಪ್ರಕಾರ ಇಲಾಖೆಯ ಮುಖಾಂತರ ವರದಿ ಪಡೆದು ಸಂಬಂಧಪಟ್ಟವರೊಂದಿಗೆ ಹಾಗೂ ಮಾನ್ಯ ಸದಸ್ಯರನ್ನು ಆಹ್ವಾನಿಸಿ ಚರ್ಚಿಸಿ, ಅಗತ್ಯವಿದ್ದರೆ ಸ್ಥಳ ಪರಿಶೀಲನೆ ಮಾಡಿ, ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ತಿಪ್ಪಣ್ಣ ಕಮಕನೂರ:-** ಮಾನ್ಯ ಸಭಾಪತಿಯವರೇ, ಸ್ಥಳಕ್ಕೆ ಭೇಟಿ ಕೊಟ್ಟು ನ್ಯಾಯ ಕೊಟ್ಟರೆ ನಮಗೆ ಅನುಕೂಲವಾಗುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸುತ್ತೇನೆ.

**ಶ್ರೀ ಜಾರಕಿಹೊಳಿ ರಮೇಶ್ ಲಕ್ಷ್ಮಣರಾವ್:-** ಮಾನ್ಯ ಸಭಾಪತಿಯವರೇ, ಕೊರೊನಾ ವೈರಸ್ ಬಗ್ಗೆ ಆರೋಗ್ಯ ಇಲಾಖೆ ಸ್ಪಷ್ಟನೆ ನೀಡಿದ ನಂತರ ತಕ್ಷಣವೇ ಸ್ಥಳಕ್ಕೆ ಭೇಟಿ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**–ಮಾನ್ಯ ಸಭಾಪತಿಯವರೇ, ದಿನಾಂಕ:19ನೇ ಮಾರ್ಚ್, 2020 ಸಮೂಹ–IVರ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ 59 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:**– ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ಕೊರೊನಾ ಸೋಂಕಿನ ತಪ್ಪು ತಿಳುವಳಿಕೆಯಿಂದ ಕೋಳಿ ಸಾಕಾಣಿಕೆದಾರರು ಮತ್ತು ಉದ್ದಿಮೆದಾರರು ಭಾರಿ ನಷ್ಟವನ್ನು ಅನುಭವಿಸುತ್ತಿರುವ ಕುರಿತು**

– – –

**ಶ್ರೀ ಐವನ್ ಡಿ'ಸೋಜಾ(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕೊರೊನಾ ಸೋಂಕಿನ ತಪ್ಪು ತಿಳುವಳಿಕೆಯಿಂದ ದೇಶದಲ್ಲಿ ಕುಕ್ಕುಟ ಉದ್ಯಮಕ್ಕೆ ಪ್ರತಿ ದಿನ 160 ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಒಂದು ತಿಂಗಳಿನಲ್ಲಿ ಕರ್ನಾಟಕದಲ್ಲಿ ಉದ್ಯಮಕ್ಕೆ ಸುಮಾರು 5000 ಕೋಟಿ ರೂಪಾಯಿ ನಷ್ಟ ಸಂಭವಿಸಿದೆ. ರಾಜ್ಯದಲ್ಲಿನ ಕೋಳಿ ಸಾಕಾಣಿಕೆದಾರರು ಮತ್ತು ಉದ್ದಿಮೆದಾರರು ಭಾರಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ತಪ್ಪು ತಿಳುವಳಿಕೆಯೇ ಕಾರಣವಾಗಿದೆ.

ರಾಜ್ಯದಲ್ಲಿ 2.2 ಲಕ್ಷ ಕೋಳಿ ಸಾಕಾಣಿಕೆದಾರರಿದ್ದು, 2.75 ಕೋಟಿ ಜನರಿಗೆ ಉದ್ಯೋಗ ದೊರೆತಿದೆ. ಕುಕ್ಕಟ ಉದ್ಯಮ ದೇಶದ ಜಿ.ಡಿ.ಪಿ. ಗೆ 1.23 ಲಕ್ಷ ಕೋಟಿ ರೂಪಾಯಿ ನಷ್ಟು ಕೊಡುಗೆ ನೀಡುತ್ತಿದೆ. ಆದರೆ, ಕೋಳಿ ಮಾಂಸ ತಿಂದರೆ ಕೊರೊನಾ ಸೋಂಕು ಬರುತ್ತದೆ ಎಂಬ ವದಂತಿಯಿಂದಾಗಿ ಉದ್ಯಮ ಅಪಾರ ನಷ್ಟ ಹೊಂದಿದೆ. ಕೆಲ ಕೋಳಿ ಸಾಕಾಣಿಕೆದಾರರು ದಾರಿ ಕಾಣದೇ 10 ರಿಂದ 20 ಲಕ್ಷದಷ್ಟು ಕೋಳಿಗಳನ್ನು ನಾಶ ಮಾಡಿದ್ದಾರೆ. ಇದರಿಂದ, ಕೋಳಿ ಸಾಕಾಣಿಕೆ ಫಾರಂಗಳಿಗೆ ಪ್ರತಿ ದಿನಕ್ಕೆ 160 ಕೋಟಿಗೂ ಅಧಿಕ ನಷ್ಟವಾಗಿದೆ.

ಮಂಗಳೂರಿನಲ್ಲಿರುವ ಐಡಿಯಲ್ ಚಿಕನ್ ಫಾರಂನ ಮಾಲೀಕರು ದಿನವೊಂದಕ್ಕೆ 20 ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಚಿಕನ್ ತಿಂದರೆ ಕೊರೊನಾ ಸೋಂಕು ಬರುತ್ತದೆಂಬ ತಪ್ಪು ಕಲ್ಪನೆ ನಿವಾರಿಸಲು ರಾಜ್ಯ ಸರ್ಕಾರ ಪ್ರತಿ ಜಿಲ್ಲೆಗಳಲ್ಲಿ ಕೋಳಿ ಮಾಂಸ ಮಾರಾಟ ಮೇಳ ಏರ್ಪಡಿಸಿ ಜನರಲ್ಲಿ ತಪ್ಪು ಕಲ್ಪನೆ ಹೋಗಲಾಡಿಸಬೇಕು. ಜನಪ್ರತಿನಿಧಿಗಳು ಮೇಳದಲ್ಲಿ ಮಾಂಸ ಸೇವಿಸಿ ಯಾವುದೇ ಹಾನಿಯಿಲ್ಲ ಎಂಬುದನ್ನು ಮನವರಿಕೆ ಮಾಡಬೇಕು. ಮಾಧ್ಯಮಗಳಲ್ಲಿ ಸರ್ಕಾರವೇ ಜಾಹೀರಾತು ನೀಡಿ ಜನರಲ್ಲಿ ಅರಿವು ಮೂಡಿಸಬೇಕು. ಈ ಉದ್ಯಮದಲ್ಲಿ ಲಕ್ಷಾಂತರ ಸಂಖ್ಯೆ ಸಣ್ಣ ಮತ್ತು ದೊಡ್ಡ ರೈತರು ಇದ್ದಾರೆ. ಹೀಗಾಗಿ, ಉದ್ಯಮಕ್ಕಾಗಿ ನಷ್ಟ ಭರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜನ್ನು ಘೋಷಿಸಬೇಕು. ಅಲ್ಲದೇ, ಇಲಾಖೆಯು ಈ ಬಗ್ಗೆ ಕೂಡಲೇ ಕೋಳಿ ಸಾಕಾಣಿಕೆದಾರರ ಸಭೆಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಏರ್ಪಡಿಸಿ ಅವರ ಕಷ್ಟ ನೆಮ್ಮದಿಗಳಿಗೆ ಸ್ಪಂದಿಸಬೇಕು. ಈ ಮಹತ್ವದ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಈ ಸದನದ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಶೂನ್ಯ ವೇಳೆಯಲ್ಲಿ ಬಹಳ ಗಂಭೀರವಾದ ಪ್ರಶ್ನೆಯನ್ನು ಕೇಳಿದ್ದಾರೆ. ಈ ಕೊರೊನಾ ಸೋಂಕು ದೇಶದಲ್ಲಿ ವ್ಯಾಪಕವಾಗಿ ಹರಡಿದೆ. Social media ದಲ್ಲಿ ಅಥವಾ ಮಾಧ್ಯಮದಲ್ಲಿ ಆಗಿರುವಂತಹ ತಪ್ಪು ಸಂದೇಶದಿಂದ ಕೋಳಿ ಮತ್ತು ಮೊಟ್ಟೆ ತಿನ್ನುವುದನ್ನು ಜನ ಬಿಟ್ಟಿರುತ್ತಾರೆ. ಇದರಿಂದಾಗಿ, ಕೋಳಿ ಮಾಂಸ ತಿಂದರೆ ಕೊರೊನಾ ಸೋಂಕು ಬರುತ್ತದೆಯೆಂದು ತಪ್ಪಾಗಿ ತಿಳಿದಿದ್ದಾರೆ. ಆದರೆ, ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಈ ವಿಷಯ ಗೊತ್ತಾದ ಮೇಲೆ ನಾನು press note ಜಾರಿ ಮಾಡಿದ್ದೇನೆ. ಅಲ್ಲದೇ, ಎಲ್ಲಾ ದಿನಪತ್ರಿಕೆಗಳಲ್ಲಿಯೂ ಸಹ ಈ ಬಗ್ಗೆ ಪ್ರಕಟಣೆ ಮಾಡಲಾಗಿರುತ್ತದೆ ಹಾಗೂ ಇಲಾಖೆ ಕಡೆಯಿಂದ ರೈತರಿಗೆ ಹಾಗೂ ಕುಕ್ಕಟ ಉದ್ಯಮಕ್ಕೆ ನಷ್ಟವಾಗಿದ್ದು, ಅವರನ್ನು ಯಾವ ರೀತಿ ರಕ್ಷಣೆ ಮಾಡಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರದ ICMS (*Indian Council of Medical Research*) ಯವರು ಕೂಡ ಹೇಳಿದ್ದಾರೆ. ಕೋಳಿ ಮಾಂಸ ಮತ್ತು ಮೊಟ್ಟೆಗೂ ಕೊರೊನಾ ಸೋಂಕಿಗೆ ಯಾವುದೇ ಸಂಬಂಧವಿರುವುದಿಲ್ಲ. ಆದುದರಿಂದ, ಜನರು ಕೋಳಿ ಮಾಂಸ ಮತ್ತು ಮೊಟ್ಟೆಯನ್ನು ತಿನ್ನಬಹುದೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಕೂಡ ಜಾಗ್ರತೆ ಮೂಡಿಸಿದ್ದೇನೆ ಹಾಗೂ ಕಾರ್ಯದರ್ಶಿಯವರ ಜೊತೆ ಸಭೆಗಳನ್ನು ನಡೆಸಿರುತ್ತೇನೆ. ಆದಾಗ್ಯೂ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಜೊತೆಗೆ, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ವಿಶೇಷ ಪ್ಯಾಕೇಜ್ ಸಲುವಾಗಿ ಪತ್ರ ಬರೆಯುತ್ತಿದ್ದೇನೆ ಹಾಗೂ ಇದರಿಂದಾಗಿ, ನಮಗೂ ಕೂಡ ಬಹಳ ದುಃಖವಾಗಿರುತ್ತದೆ. ಸರ್ಕಾರದ ಕಡೆಯಿಂದ ಏನೇನು ಮಾಡಬೇಕು, ಅದೆಲ್ಲವನ್ನೂ ನಾವು ಮಾಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ) ರೇಷ್ಮೆ ಭಿತ್ತನೆ ವಲಯಕ್ಕೆ ಅನುದಾನ ಮತ್ತು ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವ ಬಗ್ಗೆ**

– – –

**ಶ್ರೀ ಹೆಚ್.ಎಂ. ರೇವಣ್ಣ(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ರೇಷ್ಮೆ ಬೆಳೆಗಾರರಿಗೆ ಅನುದಾನದ ಕೊರತೆ ಹಾಗೂ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಸಮಸ್ಯೆ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಅನುದಾನ ಹಾಗೂ ಸಿಬ್ಬಂದಿ ಕೊರತೆಯಿಂದ ರಾಜ್ಯ ರೇಷ್ಮೆ ಕೃಷಿಯ ಮೂಲ ಬೇರು ಮೈಸೂರು ರೇಷ್ಮೆ ಭಿತ್ತನೆ ವಲಯ ನಲಗುತ್ತಿದೆ. ಮಿಶ್ರ ತಳಿ ರೇಷ್ಮೆ ಬೆಳೆಯುವ ಶೇಕಡ 85 ರಷ್ಟು ರೈತರು ಮೈಸೂರು ರೇಷ್ಮೆ ಭಿತ್ತನೆ ವಲಯ ಅವಲಂಬಿಸಿದ್ದಾರೆ. ಸರ್ಕಾರದ ನಿರ್ಲಕ್ಷ್ಯದಿಂದ ಮೈಸೂರು ರೇಷ್ಮೆ ಭಿತ್ತನೆ ವಲಯಕ್ಕೆ ಅನುದಾನದ ಜೊತೆಗೆ ಸಿಬ್ಬಂದಿಯ ಸಮಸ್ಯೆ ಎದುರಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ, ಈ ವಲಯ ಸ್ಥಗಿತಗೊಂಡರೂ ಅಚ್ಚರಿಯಿಲ್ಲ. ಏಕೆಂದರೆ, ಸಿಬ್ಬಂದಿ ಕೊರತೆಯಿಂದ ಸೂಕ್ತ ನಿರ್ವಹಣೆ ಕಷ್ಟ. ಅಂತಹ ಸಂದರ್ಭದಲ್ಲಿ ರೇಷ್ಮೆ ಕೃಷಿಗೆ ಮಾರಕವಾಗಿರುವ ಗಂಟು ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಆಗ ಲಕ್ಷಾಂತರ ರೈತರು ಬೀದಿ ಪಾಲಾಗುವುದರ ಜೊತೆಗೆ 600 ಮಂದಿಯ ಖಾಸಗಿ ಮೊಟ್ಟೆ ಉತ್ಪಾದಕರು ಹಾಗೂ 35 ಸರ್ಕಾರಿ ಭಿತ್ತನೆ ಕೊಠಡಿಗಳೂ ಕಣ್ಮರೆಯಾಗಲಿವೆ ಎಂದು ಹಿರಿಯ ಅಧಿಕಾರಿಗಳು ಹೇಳುತ್ತಿದ್ದಾರೆ.

ಮೈಸೂರು ರೇಷ್ಮೆ ಭಿತ್ತನೆ ವಲಯದ ಗೂಡು ಇಲ್ಲದೇ ರಾಜ್ಯದಲ್ಲಿ ರೇಷ್ಮೆ ಕೃಷಿಯೇ ಇಲ್ಲ. ಮಿಶ್ರತಳಿ ರೇಷ್ಮೆ ಮೊಟ್ಟೆ ಮಾಡಲು ಮೈಸೂರು ರೇಷ್ಮೆ ಭಿತ್ತನೆ ಗೂಡಿನ ಹೆಣ್ಣು ಹಾಗೂ ದ್ವಿತಳಿ ರೇಷ್ಮೆ ಗೂಡಿನ ಗಂಡು ಚಿಟ್ಟೆ ಬಳಕೆ ಮಾಡಿ ಮಿಶ್ರತಳಿಯ ಮೊಟ್ಟೆಗಳನ್ನು ಮಾಡಲಾಗುತ್ತಿದೆ. ಈಗ ರಾಜ್ಯದಲ್ಲಿ ಶೇಕಡ 80 ರಷ್ಟು ರೈತರು ಮಿಶ್ರತಳಿ ಬೆಳೆಯನ್ನೇ ಬೆಳೆಯುತ್ತಿದ್ದಾರೆ.

ರೇಷ್ಮೆ ಸಹಾಯಕ ಹುದ್ದೆಯಿಂದ ಹಿಡಿದು 'ಡಿ' ಗ್ರೂಪ್ ನೌಕರರವರೆಗೂ ಭಿತ್ತನೆ ವಲಯದಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ–776. ಈ ಪೈಕಿ 463 ಹುದ್ದೆಗಳು ಖಾಲಿ ಇವೆ. ಇದರ ಬೆನ್ನಲ್ಲೇ ಭಿತ್ತನೆ ವಲಯ ಈಗ ಮತ್ತೆ ರೋಗದ ಆತಂಕ ಎದುರಿಸುತ್ತಿದೆ.

1991–92ರಲ್ಲಿ ಮೈಸೂರು ಭಿತ್ತನೆ ವಲಯದಲ್ಲಿ ಕಾಣಿಸಿಕೊಂಡಿದ್ದ ಗಂಟು ರೋಗ ರೇಷ್ಮೆ ಕೃಷಿಯನ್ನೇ ಅಲುಗಾಡಿಸಿತ್ತು. ನಂತರ, 2005–06ರಲ್ಲಿ ಮತ್ತೆ ಸಣ್ಣ ಪ್ರಮಾಣದಲ್ಲಿ ರೋಗ ಕಾಣಿಸಿಕೊಂಡಿತ್ತು ಎನ್ನುತ್ತಾರೆ ಅಧಿಕಾರಿ ವರ್ಗ. ಆಗಿನ ರೇಷ್ಮೆ ಸಚಿವರಾಗಿದ್ದ ಶ್ರೀ ವೈ.ಕೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ರಾಮಯ್ಯರವರು ವಿಶ್ವ ಬ್ಯಾಂಕಿನಿಂದ 100 ಕೋಟಿ ರೂಪಾಯಿ ಸಾಲ ತಂದು 'ಚಾಕಿ ಸೆಂಟರ್'ಗಳನ್ನು ಪ್ರಾರಂಭಿಸಲು ಮೈಸೂರು ರೇಷ್ಮೆ ಭಿತ್ತನೆ ವಲಯದಲ್ಲಿ ನಿರ್ಮಿಸಿದ್ದ 100 ಕ್ಕೂ ಹೆಚ್ಚು ಕಟ್ಟಡಗಳಲ್ಲಿ ಶೇಕಡ 60 ರಷ್ಟು ನಿರ್ವಹಣೆ ಹಾಗೂ ಅನುದಾನದ ಕೊರತೆಯಿಂದ ಶಿಥಿಲಗೊಂಡಿದೆ. ಈ ಸಮಸ್ಯೆ ಬಗೆಹರಿಸಲು ಮಾನ್ಯ ರೇಷ್ಮೆ ಸಚಿವರ ಗಮನವನ್ನು ಶೂನ್ಯ ವೇಳೆಯಲ್ಲಿ ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ. ರೇವಣ್ಣರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ, ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರಿಂದ ಉತ್ತರ ಒದಗಿಸಲಾಗುವುದು.

**6. <u>ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ</u>**

**ಅ) ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಸಿವಿಲ್ ನ್ಯಾಯಾಲಯ ಸ್ಥಾಪಿಸುವ ಬಗ್ಗೆ**

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 06.03.2020ರಂದು ಮಾನ್ಯ ಸದಸ್ಯರಾದ ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ದತ್ತಾಂಶಗಳ ಮಾಹಿತಿ ಮತ್ತು ಮಧ್ಯಾಹ್ನ ಉಪಹಾರ ಯೋಜನೆ ಅಡಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಕಳೆದ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ 416 ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಸ್ಥಗಿತಗೊಳಿಸುತ್ತಿರುವ ಬಗ್ಗೆ**

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 18.03.2020ರಂದು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಹಾಗೂ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**7. ಶಾಸನ ರಚನೆ**

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## (ಅ) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2020

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕದ ಮಾನ್ಯ ಲೋಕಾಯುಕ್ತರಿಗೆ ಶಾಸನಬದ್ಧವಾದಂತಹ ಅಧಿಕಾರವನ್ನು ಸರ್ಕಾರದಿಂದ ಕೊಡಲಾಗಿತ್ತು, ಯಾವುದೇ ಸನ್ನಿವೇಶದಲ್ಲಿ ಅವರು disable ಆದರೆ, ಅವರ ಅಧಿಕಾರವನ್ನು ಬಳಸುವುದಕ್ಕೆ ಅಶಕ್ತರಾದರೆ, ಅಸಹಾಯಕರಾದರೆ ಅಥವಾ ನಾನು ಇದನ್ನು ಮಾಡಬಾರದು ಎನ್ನುವ ಪರಿಸ್ಥಿತಿಗೆ ಬಂದರೆ ಆ ಅಧಿಕಾರವನ್ನು ಉಪ ಲೋಕಾಯುಕ್ತರಿಗೆ delegate ಮಾಡಿಕೊಡಬಹುದೆಂದು ಈ ಶಾಸನ ಮುಖಾಂತರ ನಾವು ಶಾಸನವನ್ನು ಕೇಳುತ್ತಿದ್ದೇವೆ. ಇದು ಲೋಕಾಯುಕ್ತರಿಂದಲೇ ಬಂದಂತಹ ಸೂಚನೆಯಾಗಿರುತ್ತದೆ. ಲೋಕಾಯುಕ್ತರು disable ಆದರೆ, ಅದನ್ನು delegate ಮಾಡುವುದಕ್ಕೆ ಅಂದರೆ, ಲೋಕಾಯುಕ್ತರು ಯಾವ ಕ್ರಮಗಳನ್ನು ಜರುಗಿಸುತ್ತಿದ್ದರು, ಆ ಎಲ್ಲಾ ಅಧಿಕಾರಗಳನ್ನು ಉಪ ಲೋಕಾಯುಕ್ತರಿಗೆ ದತ್ತ ಮಾಡಿಕೊಡಬೇಕೆಂದು ಈ ವಿಧೇಯಕವನ್ನು ತಂದಿದ್ದೇವೆ. ಈ ವಿಧೇಯಕದ ಬಗ್ಗೆ ವ್ಯಾಪಕವಾದ ಚರ್ಚೆಯಾಗಬೇಕಾದಂತಹ ವಿಧೇಯಕ ಎಂದು ನನಗನ್ನಿಸುವುದಿಲ್ಲ. ಹಾಗಾಗಿ, ಮಾನ್ಯ ಸದಸ್ಯರು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**(592)19.03.2020/4.20/ವೈಎಲ್–ವಿಕೆ**

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರತಕ್ಕಂಥ delegation ಏನಿದೆ, we agree to that. ಆದರೆ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಲೋಕಾಯುಕ್ತವನ್ನು strengthen ಮಾಡಬೇಕಲ್ಲವೇ? That is why, ಈ ವಿಧೇಯಕವನ್ನು ತಂದು pass ಮಾಡಿಕೊಡುವಂತೆ ಕೇಳಿದ್ದಾರೆ. ನಾವು ಮಾಡಿ ಕೊಡಬಹುದು. ಆದರೆ, ಲೋಕಾಯುಕ್ತವನ್ನು strengthen ಮಾಡುವುದರ ಬಗ್ಗೆ ಸ್ವಲ್ಪ ಮಾನ್ಯ ಸಚಿವರು ವಿವರಣೆ ನೀಡಿದರೆ ಒಳ್ಳೆಯದು.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಬಹಳ ಚಿಕ್ಕವನು. ಲೋಕಾಯುಕ್ತ weak ಏತಕ್ಕೆ ಆಯಿತು, ಯಾರು weak ಮಾಡಿದ್ದಾರೆ, parallel ಆಗಿ ಲೋಕಾಯುಕ್ತ ಏನು ಆಯಿತು.

**ಸಭಾಪತಿಯವರು:-** ಚರ್ಚೆ ಆದ ಮೇಲೆ ಹೇಳಿ.

**Sri IVAN D’ SOUZA:-**Strengthening ಬಗ್ಗೆ ಹೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-**ಮಾನ್ಯ ಸದಸ್ಯರು ಏನೇನು ಕೇಳಿದ್ದಾರೆ, ಅದೆಲ್ಲಾ ಇಲ್ಲಿ ಚರ್ಚೆಯಾಗುವುದು ಬೇಡ. ನಮ್ಮ ವಿಧೇಯಕವು, I am confined to the Bill. ಅವರಿಗೆ ಇದ್ದ ಅಧಿಕಾರವನ್ನು ಅವರ disability ನಲ್ಲಿ ಉಪಲೋಕಾಯುಕ್ತರಿಗೆ ಅಧಿಕಾರ ನೀಡುವುದಕೋಸ್ಕರ ಶಾಸನ ಮಾಡುತ್ತಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಒಳ್ಳೆಯ ವಿಧೇಯಕವನ್ನು ತಂದಿದ್ದಾರೆ. ಯಾವುದಾದರೂ ಒಂದು ಕಾರಣದ ಮೇಲೆ ಲೋಕಾಯುಕ್ತರು disable ಆದಾಗ ಉಪಲೋಕಾಯುಕ್ತರಿಗೆ ಅದೇ ಅಧಿಕಾರವನ್ನು empower ಮಾಡಿ ತಂದಿರತಕ್ಕಂಥ ವಿಧೇಯಕವನ್ನು ನಿಜವಾಗಿಯು ಸ್ವಾಗತಿಸುತ್ತೇನೆ. ಈ ಕಾರಣದಿಂದ ಲೋಕಾಯುಕ್ತದಲ್ಲಿ ಸಾಕಷ್ಟು ಪ್ರಕರಣಗಳು ಬಾಕಿ ಇದೆ. I think our Hon’ble Law Minister is aware about this issue. This is a wonderful bill; you have placed this before this House today and I welcome it.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರತಕ್ಕಂಥ ವಿಧೇಯಕವೇನಿದೆ, ಅದರ ಮೇಲೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಲೋಕಾಯುಕ್ತರು disable ಆದಾಗ ಉಪ ಲೋಕಾಯುಕ್ತರಿಗೆ ಅಧಿಕಾರವನ್ನು delegate ಮಾಡುವಂಥದ್ದಾಗಿದೆ. ಲೋಕಾಯುಕ್ತರು ಇಲ್ಲದಾಗ ಉಪಲೋಕಾಯುಕ್ತರಿಗೆ delegate ಮಾಡಲಿಲ್ಲವೆಂದು ಅದು ಒಂದು ಸಮಸ್ಯೆಯಾಗಿ ಉದ್ಭವಿಸುತ್ತದೆ. ಆ ದೃಷ್ಟಿಯಿಂದ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರು ತಂದಿರುವ ವಿಧೇಯಕವನ್ನು ಸ್ವಾಗತಿಸುತ್ತೇನೆ. ಇದು ಒಂದು ಒಳ್ಳೆಯ ವಿಧೇಯಕವಾಗಿದೆ. ಏಕೆಂದರೆ, ನನ್ನ ಒಂದು ಅನುಭವದ ಮಾತನ್ನು ಹೇಳುತ್ತೇನೆ. ನಾನು ಭರವಸೆ ಸಮಿತಿಯ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಲೋಕಾಯುಕ್ತರು delegate ಮಾಡದ ಕಾರಣ 23 ವರ್ಷದಿಂದ ಕನಕಪುರದಲ್ಲಿ ಒಂದು ಪ್ರಕರಣ ಬಿದ್ದಿದೆ. ಇಂತಹ ಹತ್ತಾರು ಪ್ರಕರಣಗಳಿವೆ. ನಾವು ಸಂಬಂಧಪಟ್ಟ Registrar ರವರನ್ನು ಕರೆಸಿದಾಗ ಮೊದಲು ನಮಗೆ ಪತ್ರ ಬರೆದಿದ್ದರು. ಆ ಪತ್ರದಲ್ಲಿ ಲೋಕಾಯುಕ್ತಕ್ಕೆ ಹೋದರೆ corrupt ಆದಂಥವರು ತಪ್ಪಿಸಿಕೊಳ್ಳುವುದಕ್ಕೆ ದಾರಿಯಾಗುತ್ತದೆ ಎಂದು ಬರೆಯಲಾಗಿತ್ತು. ಏಕೆಂದರೆ, ಹತ್ತು, ಹದಿನೈದು ವರ್ಷಗಳಿಗೊಮ್ಮೆ ಪ್ರಕರಣ ಹಿಂದಕ್ಕೆ ಬೀಳುತ್ತದೆ. ಹಾಗಾಗಿ ತುಂಬಾ ವರ್ಷಗಳಾಗಿರುವುದರಿಂದ ಅವರು ತಪ್ಪಿಸಿಕೊಳ್ಳುತ್ತಾರೆ. ಅಲ್ಲಿಯು ಸಹ ಕೆಲವು ಅಧಿಕಾರಿಗಳು corruption ನಲ್ಲಿ involve ಆಗಿರುವುದನ್ನು ತರಿಸಿದ್ದೇವೆ. ಕಾರಣವೇನೆಂದರೆ, ಲೋಕಾಯುಕ್ತರು ಇರುವುದಿಲ್ಲ. ಅವರು ಇಲ್ಲದಿದ್ದಾಗ powers delegate ಮಾಡುವುದಕ್ಕಾಗುವುದಿಲ್ಲ. ಇದರಿಂದಾಗಿ ಉಪಲೋಕಾಯುಕ್ತರಿಗೆ ಅಧಿಕಾರವಿಲ್ಲದೇ ಅವರು ಏನು ಮಾಡುವುದಕ್ಕಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಕರಣವು ಆದಷ್ಟು ಬೇಗ ಇತ್ಯರ್ಥವಾಗಬೇಕಾದರೆ, ಇದೊಂದು ಒಳ್ಳೆಯ ವಿಧೇಯಕವಾಗಿದ್ದು, ನಾನು ಸ್ವಾಗತಿಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ತಂದಿರುವ ವಿಧೇಯಕವು ಸಮರ್ಪಕವಾಗಿದೆ ಮತ್ತು ಅವಶ್ಯಕವಾಗಿರುವುದರಿಂದ ಸ್ವಾಗತಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಾನು ಮೊದಲು ಪುರಸಭೆಯ ಸದಸ್ಯನಾಗಿ ರಾಜಕೀಯ ಪ್ರಾರಂಭ ಮಾಡಿದ್ದು. ಆವತ್ತಿನ ಘಟನೆ ಇವತ್ತಿಗೂ ಲೋಕಾಯುಕ್ತ ಮುಂದೆ ಇದೇ ಎಂದರೆ ನಮಗೆ ಬಹಳ ನೋವಾಗುತ್ತದೆ. ನಾನು ಎರಡು, ಮೂರು ಸಲ ಸಚಿವನಾಗಿ ಆಯ್ಕೆಯಾಗಿ ಬಂದಿದ್ದೇನೆ. ಉದಾಹರಣೆಗೆ ಹೇಳುವುದಾದರೆ, IUDP (Integrated Urban

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

Development *Plan*) scheme, ಮಾನ್ಯ ದಿನೇಶ್ ಗುಂಡೂರಾವ್‌ರವರ ಕಾಲದಲ್ಲಿ ಈ ಯೋಜನೆ ಮಾಗಡಿಯಲ್ಲಿ ಪ್ರಾರಂಭವಾಗಿದ್ದು, ಒಬ್ಬ ವ್ಯಕ್ತಿ ಎಲ್ಲಿಯೋ ಅರ್ಜಿ ನೀಡಿದ ಎಂದು ನಿವೇಶನ ಹಂಚುವುದರಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳಿ ಕಡತ ಸಲ್ಲಿಸಲಾಗಿದ್ದು, ಇಲ್ಲಿಯವರೆಗೂ ಆ ಕಡತ ವಾಪಸ್ಸು ಬಂದಿಲ್ಲ. ಲೋಕಾಯುಕ್ತದಲ್ಲಿಯೇ ಪ್ರಕರಣ ಬಾಕಿ ಇದೆ. ಇದೇ ರೀತಿ ಯಾವ್ಯಾವ ಪ್ರಕರಣಗಳಿವೆ ಎಂಬುದು ಗೊತ್ತಿಲ್ಲ. 30 ವರ್ಷಗಳಾದರೂ ಈ ಸಮಸ್ಯೆ ಇತ್ಯರ್ಥವಾಗಿಲ್ಲವೆಂದರೆ, ಅವರಿಗೆ ಏನು powers delegate ಮಾಡಿದ್ದಾರೆ, ಅದರಿಂದಲಾದರೂ ಕಡತಗಳು ಹೊರಗೆ ಬರುತ್ತದೆ ಎನ್ನುವ ಸದುದ್ದೇಶದಿಂದ ಈ ವಿಧೇಯಕವನ್ನು ಸರ್ವಾನುಮತದಿಂದ ಒಪ್ಪಿಗೆ ನೀಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಜಾರಿಗೆ ತಂದಾಗ ಬಹಳ ನಿರೀಕ್ಷೆಯನ್ನು ಮಾಡಿದ್ದೆ. ಕಾನೂನು ಸಚಿವರಲ್ಲಿ ನಾನು ಒಂದು ವಿನಂತಿ ಮಾಡುವುದೇನೆಂದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ 1985ನೇ ಸಾಲಿನಲ್ಲಿ ಲೋಕಾಯುಕ್ತ ಕಛೇರಿ ಬಂದ ಮೇಲೆ ಇದುವರೆವಿಗೂ ಕೂಡಾ ಯಾವುದೇ ಲೋಕಾಯುಕ್ತರು ಇಂತಹ ಒಂದು ತಿದ್ದುಪಡಿಗೆ ಅಪೇಕ್ಷೆ ಮಾಡಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಉಚ್ಚ ನ್ಯಾಯಾಲಯದಲ್ಲಿಯು ಕೂಡಾ ಯಾವುದಾದರೂ ಪ್ರಕರಣಗಳು ನ್ಯಾಯಾಧೀಶರ ಮುಂದೆ ಬಂದಾಗ, ಅವರು ಆ ಪ್ರಕರಣವನ್ನು hearing ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವಂಥ ಸಂದರ್ಭದಲ್ಲಿ ಮುಖ್ಯ ನ್ಯಾಯಾಧೀಶರು ಅದನ್ನು ವರ್ಗಾವಣೆ ಮಾಡುವುದಕ್ಕೆಲ್ಲಾ ಸಾಮಾನ್ಯ ನಿಯಮವಾಗಿದೆ ಎಂದು ಭಾವಿಸಿಕೊಂಡಿದ್ದೇನೆ. ಆದರೆ, ಲೋಕಾಯುಕ್ತರೆ ಈ ರೀತಿ ಒಂದು ತಿದ್ದುಪಡಿ ಬಯಸಿದ್ದಾರೆ ಎಂದು ಕಾನೂನು ಸಚಿವರು ಹೇಳಿದರು. ನಾವು ಕಾನೂನು ಸಚಿವರಿಗೆ ತಿಳಿಸುವುದೇನೆಂದರೆ, ಲೋಕಾಯುಕ್ತವನ್ನು ಇನ್ನೂ ಗಟ್ಟಿಗೊಳಿಸುವಂಥ ಕೆಲಸ ಮಾಡಬೇಕು. ನಮ್ಮ ಭಾರತ ದೇಶದಲ್ಲಿಯೇ ಮಾದರಿಯಾದಂತಹ ಲೋಕಾಯುಕ್ತವೆಂದರೆ, ಅದು ನಮ್ಮ ಕರ್ನಾಟಕ ರಾಜ್ಯದ ಲೋಕಾಯುಕ್ತ. ಯಾರೇ ಬರಲಿ ತುಂಬಾ ಚೆನ್ನಾಗಿ ಕೆಲಸ ಮಾಡಿದ್ದಾರೆ. ಭ್ರಷ್ಟಾಚಾರವನ್ನು ತಡೆಗಟ್ಟುವಂಥ ಕೆಲಸ ಈ ಲೋಕಾಯುಕ್ತದಲ್ಲಿ ಆಗಿದೆ. ಆದರೆ, ಒಂದು ಕಾಲಘಟ್ಟದಲ್ಲಿ ಈ ಲೋಕಾಯುಕ್ತವನ್ನು ನಿಷ್ಕ್ರಿಯ ಮಾಡಿ, ACB (Anti-Corruption Bureau) ಎಂದು ತೆಗೆದುಕೊಳ್ಳಲಾಗಿತ್ತು. ಆ ಎ.ಸಿ.ಬಿ. ಎಂಬುದನ್ನು ತೆಗೆದುಕೊಂಡು ಬಂದಾಗ ಬಿಜೆಪಿ ಪಕ್ಷದವರು ನಾವೆಲ್ಲರೂ ಸೇರಿಕೊಂಡ ಹಾಗೆ ಇದು ಸರಿಯಲ್ಲ, ಇದರಿಂದ ನ್ಯಾಯ ದೊರೆಯುವುದಿಲ್ಲ. ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಲೋಕಾಯುಕ್ತವನ್ನು ಶಕ್ತಿಗೊಳಿಸಬೇಕು, Strengthen ಆಗಿ ಮಾಡಬೇಕೆಂಬ ದೊಡ್ಡ ಚಳುವಳಿಯನ್ನು ವ್ಯಾಪಕವಾಗಿ ಎಲ್ಲಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯಲ್ಲಿಯು ಮಾಡಿದ್ದೇವೆ. ಇವತ್ತು ಆರೇಳು ತಿಂಗಳು ಆಗುತ್ತಾ ಬಂದರೂ ಸಹ ಮಾನ್ಯ ಸಚಿವರು ಈ ತಿದ್ದುಪಡಿಯನ್ನು ತರುವ ಬದಲು ಸಂಪೂರ್ಣವಾಗಿ ಎ.ಸಿ.ಬಿ.ಯನ್ನು ರದ್ದುಪಡಿಸಿ, ಲೋಕಾಯುಕ್ತಕ್ಕೆ ಸಂಪೂರ್ಣವಾಗಿ ಅಧಿಕಾರ ನೀಡುವಂಥ ತಿದ್ದುಪಡಿ ವಿಧೇಯಕ ತಂದಿದ್ದರೆ, ಅದಕ್ಕೆ ಹೆಚ್ಚಿನ ಮಹತ್ವ ಬರುತ್ತಿತ್ತು. ಇವತ್ತು ಎ.ಸಿ.ಬಿ. ಯನ್ನು ತಂದಿರುವುದರಿಂದ ಭ್ರಷ್ಟಾಚಾರ ಹಿಮ್ಮಡಿಯಾಗಿದೆ. ಭಾರತ ದೇಶದಲ್ಲಿಯೇ ಕರ್ನಾಟಕ ರಾಜ್ಯವು ಭ್ರಷ್ಟಾಚಾರದಲ್ಲಿ ಮೊದಲನೆಯ ಅಥವಾ ಎರಡನೆಯ ಸ್ಥಾನಕ್ಕೆ ಹೋಗಿದೆ. ಇಂತಹ ವ್ಯವಸ್ಥೆಯನ್ನು ತಾವು ಮುಂದುವರೆಸಿಕೊಂಡು ಹೋದರೆ ಹೇಗೆ? ಲೋಕಾಯುಕ್ತಕ್ಕೆ ಏನೇನು ಅಧಿಕಾರ ನೀಡಬೇಕು, ಅದೆಲ್ಲವನ್ನು ನೀಡಿ ಎ.ಸಿ.ಬಿ. ಯನ್ನು ಮೊದಲು ತೆಗೆಯುವ ಕೆಲಸವನ್ನು ಮಾಡಿದರೆ, ಮಾನ್ಯ ಸಚಿವರಿಗೆ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೆವು. ಆ ದಿಟ್ಟಿನಲ್ಲಿ ಮಾನ್ಯ ಸಚಿವರು ಆಲೋಚನೆ ಮಾಡಬೇಕಾಗಿತ್ತು ಎಂದು ಭಾವಿಸಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದೇನೆಂದರೆ, ತಾವು ತಂದಿರುವ ವಿಧೇಯಕದಲ್ಲಿ ಕಲಂ 2 ರಲ್ಲಿ ...ಯಾವುದೇ ಒಂದನ್ನು ಆಲಿಸಲು ಅಥವಾ ಪರಿಗಣಿಸಲು ಅಥವಾ ಯಾವುದೇ ರೀತಿಯಲ್ಲಿ ವ್ಯವಹರಿಸಲು ಅಥವಾ ವಿಲೇ ಮಾಡಲು ಆತನು ಅಸಮರ್ಥನಾಗಿದ್ದಲ್ಲಿ... ಈ ಪದದ ಅರ್ಥ 'ಒಬ್ಬ ನ್ಯಾಯಾಧೀಶನಿಗೆ ಒಂದು ಹುದ್ದೆಯಲ್ಲಿ,...

**ಶ್ರೀ ಜೆ.ಸಿ.ಮಾಧುಸ್ವಾಮಿ:-**ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅದು capacity ಎಂದಲ್ಲ, disability ಎಂದರ್ಥ. ಹಾಗಾಗಿ ಮಾನ್ಯ ಸದಸ್ಯರು ದಯವಿಟ್ಟು capacity ಎಂದುಕೊಳ್ಳುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆಂಗ್ಲ ಭಾಷೆಯಲ್ಲಿ disability ಎಂದು ಕರೆಯುತ್ತೇವೆ. ಅವರು ಕೊಟ್ಟಿರುವುದನ್ನು ಓದಿ ತಿಳಿಸುತ್ತೇನೆ.

"*.... he is disabled to hear or consider....*"ಎಂದು ಹೇಳಿದ್ದೀರಿ.

ಈ ಆಂಗ್ಲ ಪದದ ಅರ್ಥ ಏನು? ಒಬ್ಬ ಲೋಕಾಯುಕ್ತರು ಅಸಮರ್ಥರಾದಾಗ, incapable ಎಂಬುದು ಆ ಪದದ ಅರ್ಥ. ಈಗ ಲೋಕಾಯುಕ್ತರ ಮುಂದೆ ಬಹಳಷ್ಟು ಒತ್ತಡದ ಕೆಲಸಗಳು ಬರುತ್ತಿವೆ. ಲೋಕಾಯುಕ್ತರೊಬ್ಬರಿಂದಲೇ ಈ ಎಲ್ಲವನ್ನು ಕೂಡಾ ನಿರ್ವಹಣೆ ಮಾಡುವುದಕ್ಕೆ ಸಕಾಲದಲ್ಲಿ ಆಗುತ್ತಿಲ್ಲ. ಅದಕೋಸ್ಕರ ಈ ಅಧಿಕಾರವನ್ನು ಉಪಲೋಕಾಯುಕ್ತರಿಗೆ ಹಂಚಿಕೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri J.C. MADHU SWAMY:-**That is not the scope. ಈ ವಿಧೇಯಕದ scope ಅದಲ್ಲ. ಯಾವುದೋ ಕಾರಣಕ್ಕೆ ಅವರು disable ಆದರೆ ಮಾತ್ರ ಅನ್ವಯಿಸುತ್ತದೆ. ಈ Bill scope ಅನ್ನು parallel ಆಗಿ ಉಪಲೋಕಾಯುಕ್ತಕ್ಕೆ,...

**Sri MARITHIBBE GOWDA:-**Disable ಎನ್ನುವುದು ಯಾವಾಗ ಬರುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಲೋಕಾಯುಕ್ತರ ಮೇಲೆ ಅಥವಾ ಅವರ ಕುಟುಂಬದವರ ಮೇಲೆ ಅಥವಾ ಅವರ ಹತ್ತಿರದವರ ಮೇಲೆ ದೂರು ಬಂದರೆ, 'biased'. ನಾನು ಅದನ್ನು ಹಿಯರ್ ಮಾಡಬಾರದೆಂಬ ಸನ್ನಿವೇಶ ಸೃಷ್ಟಿಯಾದಂಥ ಸಂದರ್ಭದಲ್ಲಿ 'not before me' ಎಂದು ಮಾನ್ಯ ಸದಸ್ಯರು ಹೇಳಲಾಗಿತ್ತು, ಅದನ್ನು ಬಿಟ್ಟರೆ parallel ಆಗಿ ನಾವು ಉಪಲೋಕಾಯುಕ್ತಕ್ಕೆ ಅಧಿಕಾರ ನೀಡುತ್ತೇವೆ ಎಂದು ಈ ವಿಧೇಯಕದಲ್ಲಿ ತಿಳಿಸಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ತಾವು ಆ ಪೀಠದ ಮೇಲೆ ಕುಳಿತಿದ್ದೀರಿ. ಯಾವುದೋ ಒಂದು ಕಾರಣದಿಂದ ಆ ಪೀಠದಿಂದ ಎದ್ದು ಹೊರಗೆ ಹೋಗಬೇಕಾದ ಸಂದರ್ಭ ಬಂದರೆ, ಉಪಸಭಾಪತಿಯವರನ್ನು ಅಥವಾ panel ನಲ್ಲಿ ಇದ್ದವರನ್ನು ಕರೆಯುತ್ತೀರಿ. ಅಂದರೆ, ಅದರರ್ಥ incapable ಎಂದಲ್ಲ. Disability ಬಂದಿರುವುದಿಲ್ಲ. ಯಾವುದೋ ಕಾರಣಾಂತರದಿಂದ ಆ ಪೀಠವನ್ನು ನಿರ್ಗಮಿಸಬೇಕಾದ ಸಂದರ್ಭದಲ್ಲಿ ಉಪಸಭಾಪತಿಯವರು ಬರುತ್ತಾರೆ ಅಥವಾ panel ಇದ್ದವರು ಬರುತ್ತಾರೆ ಅಥವಾ ಅನಾರೋಗ್ಯದಿಂದಾಗಿ ಒಂದು ದಿವಸ ಬರಲಿಲ್ಲವೆಂದರೆ, ಆ ಸಂದರ್ಭದಲ್ಲಿ ಮತ್ತೊಬ್ಬರು ಆ ಸ್ಥಾನವನ್ನು ಅಲಂಕರಿಸುತ್ತಾರೆ ಎನ್ನುವ ರೀತಿ ಈ ವಿಧೇಯಕ ತರಲಾಗಿದೆ ಎಂದು ಭಾವಿಸಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ,...

**ಸಭಾಪತಿಯವರು:-** ಮೊದಲು ಮಾನ್ಯ ಮರಿತಿಬ್ಬೇಗೌಡರು ಅವರ ಮಾತನ್ನು ಮುಗಿಸಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(593)/19.03.2020/4.30/ಎಸ್‌ಕೆ–ಬಿಎನ್‌ಎಸ್**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 'Disable' ಎನ್ನುವಂತಹ ಪದ ದಯವಿಟ್ಟು, ಬೇರೆ ರೂಪದಲ್ಲಿ ತೆಗೆದುಕೊಂಡು ಬರಲಿ. ಇದು ಒಳಿತಲ್ಲ. ಈಗ ಅನಿವಾರ್ಯ ಸಂದರ್ಭದಲ್ಲಿ, ಸಾಧ್ಯವಿಲ್ಲದ ಸಂದರ್ಭದಲ್ಲಿ ಏಕೆಂದರೆ, ಒಂದು ನ್ಯಾಯ ಪೀಠದಲ್ಲಿರುತಕ್ಕಂತಹ ಹುದ್ದೆಗೆ ನಾನು ಅಸಮರ್ಥ ಎನ್ನುವಂತಹ ಪದ ಈಗ

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವಂತಹ ಪದವನ್ನು ಕಾನೂನಿನಲ್ಲಿ ತಂದರೆ ಆ ಭಾವನೆ ಬರುತ್ತದೆ.  ನಾವು ಹಾಕಿರುವ, 'he is disabled to hear, he is disabled to conduct, he is disabled to pronounce order' ಎನ್ನುವಾಗ ಕೊಡಿ. ಯಾವಾಗ disability ಬರತ್ತದೆಂದರೆ, ನಾವು original law ನಲ್ಲಿ ಅದನ್ನು define ಮಾಡಿರುತ್ತೇವೆ. ಅಂತಹ ಕಾರಣಗಳು ಸನ್ನಿವೇಶ ಸೃಷ್ಟಿಯಾದರೆ, ಅವರಿಗೆ ಇರುವ ಅಧಿಕಾರ ಉಪ ಲೋಕಾಯುಕ್ತರಿಗೆ delegateಆಗುತ್ತದೆ. ಉಪ ಲೋಕಾಯುಕ್ತರಿಗೆ parallelಆಗಿ ಲೋಕಾಯುಕ್ತರ power ನ್ನು ಕೊಡುತ್ತಿಲ್ಲ. ಇದು clear ಆಗಿರಬೇಕು. ಮಾನ್ಯ ಸಭಾಪತಿಯವರಿಗೆ ಒಂದಿಷ್ಟು ಅಧಿಕಾರಿ ಇದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಲೋಕಾಯುಕ್ತ ಕಾಯಿದೆ ಬಂದ ಮೇಲೆ 1985 ನಿಂದ ಇಂತಹ ಪ್ರಕರಣಗಳು ಲೋಕಾಯುಕ್ತರ ಮುಂದೆ ಬಂದಿಲ್ಲವೇ? ಆಗ ಅವರು ಏನು ಮಾಡಿದ್ದಾರೆ? ಈ ರಾಜ್ಯದಲ್ಲಿ ಇಂತಹ ಪ್ರಕರಣಗಳು ಇದುವರೆಗೂ ಬಂದಿಲ್ಲವೇ? ಅವರು hearing ಮಾಡುವುದಕ್ಕೆ ಅವರು ಮುಂದೆ ಬಂದಾಗ, ಯಾವ ರೀತಿ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ? ಇದುವರೆಗೂ ಬಂದಿಲ್ಲವೋ ಅಥವಾ ಬಂದಿದ್ದರೆ ಏನು ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ ಎಂದು ದಯವಿಟ್ಟು ಹೇಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–**ಅಂತಹ ಪ್ರಕರಣಗಳು ಬಂದಿದೆ,

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಕಾನೂನು ಸಚಿವರೇ ನೋಡಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸದಸ್ಯರೇ ತಾವು yield ಆಗಿ ಒಂದು ನಿಮಿಷ. ಅಂತಹ ಪ್ರಕರಣಗಳು ನಿರ್ಮಾಣವಾಗಿರುವ ಅನುಭವದ ಮೇಲೆ ಇವತ್ತು ಈ ಬಿಲ್‌ನ್ನು ತಂದಿರುವಂತಹದ್ದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನನ್ನ presumption ಏನು ಗೊತ್ತಾ. ಈ ರೀತಿಯ ತಿದ್ದುಪಡಿ ತಂದಾಗ, ಲೋಕಾಯುಕ್ತರು ಅವರ ಅಧಿಕಾರಿವನ್ನು ದುರಪಯೋಗ ಮಾಡಿಕೊಂಡು, ಬೇರೊಬ್ಬ ಉಪ ಲೋಕಾಯುಕ್ತರಿಗೆ ಬೇಕಾದಂತಹ ಕೇಸ್‌ನ್ನು ಹಾಕಿ hearing ಮಾಡಿಸತಕ್ಕಂತಹದ್ದು ಕೂಡ ಆಗುತ್ತದೆ ಎನ್ನುವುದು ಕೂಡ ನನಗೆ ಒಂದು ಸಂಶಯ ಇದೆ. ಇವತ್ತು ರಾಮ ಜನ್ಮ ಭೂಮಿಯ ಬಗ್ಗೆ ಐತಿಹಾಸಿಕ ತೀರ್ಪು ಬರೆದಂತಹವರು, ನಿವೃತ್ತಿಯಾಗಿ ನಾಲ್ಕು ತಿಂಗಳು ಕೂಡ ಆಗಿಲ್ಲ. ಆಗಲೇ ರಾಜ್ಯ ಸಭಾ ಸದಸ್ಯರು. ಇವತ್ತು ಭಾರತ ದೇಶದಲ್ಲಿ ನ್ಯಾಯಾಲಯ ಏನಾಗಿದೆ ಎನ್ನುವುದನ್ನು ಇಡೀ ದೇಶದ ಜನರು ನೋಡುತ್ತಿದ್ದಾರೆ. ರಾಮ ಮಂದಿರದ ಐತಿಹಾಸಿಕ ತೀರ್ಪು ಇಡೀ ಪ್ರಪಂಚವೇ ನೋಡುತ್ತಿದೆ. ನಾನು ಈ ಮಾತನ್ನು ಏಕೆ

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–**ಈ ಬಿಲ್‌ಗೂ ಇದಕ್ಕೂ ಏನು ಸಂಬಂಧ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್ :–** ಬಿಲ್ ಬಗ್ಗೆ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ :–** ಇದು ಸರಿ ಅಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ :–**ಅದು ನಿಜನಾ ಸುಳ್ಳಾ?

**(ಗೊಂದಲ)**

**Sri J.C. MADHUSWAMY**:- I am on a point of order. ಅಂತಹ ತೀರ್ಪು ಕೊಡಬಾರದು ಎಂದು ಅವರನ್ನು disable ಮಾಡುತ್ತಿದ್ದೇವೆ. Practical experience .. (interruption) ನಾವು ಬಿಲ್ ತಂದಾಗ ಏನೋ ಚರ್ಚೆ ಮಾಡುತ್ತಾರಲ್ಲ.

**ಶ್ರೀ ಐವನ್ ಡಿ'ಸೋಜಾ :–** ಅಸಮರ್ಥ ಎಂದರೆ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):–** ಯಾವುದೇ ಬಿಲ್ ತಂದಾಗ ಅದರ aims and objects ಬಗ್ಗೆ ಚರ್ಚೆ ಮಾಡಬಾರದೇ? ಚರ್ಚೆ ಮಾಡುವಾಗ ಭಿನ್ನಾಭಿಪ್ರಾಯಗಳು ಬರುತ್ತವೆ. ಅದನ್ನು ಸ್ವಲ್ಪ ತಾಳ್ಮೆಯಿಂದ ಕೇಳಬೇಕು.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–**ಸುಪ್ರೀಂ ಕೋರ್ಟ್ ಜಡ್ಜ್ ವಿಷಯ ಮಾತನಾಡಬಹುದೇ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಇರುವಂತಹ ಸಂಶಯವನ್ನು ಮಾನ್ಯ ಕಾನೂನು ಸಚಿವರಿಗೆ ಕೇಳುತ್ತಿದ್ದೇನೆ. ಈ ಬಿಲ್‌ನಲ್ಲಿ, ಲೋಕಾಯುಕ್ತರು ಅಸಮರ್ಥರಾದಾಗ, ಅಂತಹ ಯಾವುದಾದರೂ ಪ್ರಕರಣಗಳು ಅವರು ಮುಂದೆ ಬಂದಾಗ, ಬೇರೆಯವರಿಗೆ ಹಸ್ತಾಂತರ ಮಾಡುವುದಕ್ಕೆ ಕೊಟ್ಟಿರುವ ನಿದರ್ಶನಗಳಿವೆ? ನಮ್ಮ ಭಾರತದ ನ್ಯಾಯಾಂಗದಲ್ಲಿ ಇವತ್ತು ಇಂತಹದೆಲ್ಲಾ ನಡೆಯುತ್ತಿದೆ ಎನ್ನುವಂತಹದ್ದನ್ನು ಈ ವಿಧೇಯಕ ನನ್ನ ಮುಂದೆ ಬಂದಾಗ ನಾನು ಹೇಳಬೇಕಾದಂತಹ ಅನಿವಾರ್ಯತೆ ಇದೆ. ಇವತ್ತು ಇದರ shelter ತೆಗೆದುಕೊಂಡು ನಾಳೆ ಮುಂದೆ ಬರುವಂತಹ ಲೋಕಾಯುಕ್ತರು ಅವರ ಬೇಕಾದ ಕೇಸ್‌ಗಳನ್ನು ಬೇಕಾದ ಲೋಕಾಯುಕ್ತರಿಗೆ entrust ಮಾಡಬಹುದು. ಶಾಸನ ಸಭೆಯು ನಮಗೆ ಹಕ್ಕು ಕೊಟ್ಟಿದೆ. ಈ ಕೇಸ್ ನಡೆಸುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ, ನಾನು disabled, ನಾನು ಅವರಿಗೆ entrust ಮಾಡಿದ್ದೇನೆ ಎಂದು ಈ ತಿದ್ದುಪಡಿಯಿಂದ ಮಾಡಬಹುದೋ ಇಲ್ಲವೋ? 1985 ರಿಂದ ಇದುವರೆಗೆ ಸೃಷ್ಟಿಯಾಗದೇ ಇರುವಂತಹದ್ದು ಈಗ ತಿದ್ದುಪಡಿ ಏಕೆ ತಂದಿದ್ದಾರೆ?

**ಶ್ರೀ ಎಸ್.ವಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರು ‘disable’ ಎಂಬ ಪದಕ್ಕೆ ವಿವರಣೆ ನೀಡಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಮರಿತಿಬ್ಬೇಗೌಡರೇ ಒಂದು ನಿಮಿಷ. ಒಂದು ವಾಕ್ಯವನ್ನು ನಾನು ಹೇಳುತ್ತೇನೆ. ನಂತರ ಅವರು ಮುಂದೆ ಹೋಗಲಿ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಈ ಒಂದು ಸಣ್ಣ ತಿದ್ದುಪಡಿ ತರುವುದರ ಬದಲು ACB (Anti Corruption Bureau) ಅನ್ನು ರದ್ದುಮಾಡಿ, ಲೋಕಾಯುಕ್ತರವರಿಗೆ ಎಲ್ಲಾ ಅಧಿಕಾರವನ್ನು ಕೊಡಿ. ಎಲ್ಲದಕ್ಕೂ ತಿದ್ದುಪಡಿಯನ್ನು ತನ್ನಿ. ನೀವು ಹೇಳಿದ್ದೀರಿ. **(ಗೊಂದಲ)** ಲೋಕಾಯುಕ್ತಕ್ಕೆ ಕೊಡುವಂತಹ ಅಧಿಕಾರ ನಿಮ್ಮಲ್ಲಿದ್ದರೆ, ತಾವು ಎಸಿಬಿ ಅನ್ನು ರದ್ದು ಮಾಡಿ. ಎಲ್ಲಾ ಸಂಪೂರ್ಣವಾದ ಅಧಿಕಾರವನ್ನು ಲೋಕಾಯುಕ್ತ ಇಲಾಖೆಗೆ ಕೊಡಿ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಿಲ್ ಬಗ್ಗೆ ಚರ್ಚೆಯಾಗಲಿ.

**ಶ್ರೀಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಯಾವುದು ಬೇಕಾದರೂ ತಿದ್ದುಪಡಿಯನ್ನು ತನ್ನಿ. ನಾವೆಲ್ಲರೂ ಕೂಡ ಒಪ್ಪಿಕೊಳ್ಳುತ್ತೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-**ನೋಡಿ ಮಾನ್ಯ ಸಭಾಪತಿಯವರೇ, ತೆವಲಿಗೆ ನಾನು ಬಿಲ್ ತರುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಕಾನೂನು ಸಚಿವರೇ ನಮ್ಮ ತೆವಲಲ್ಲ. ನೀವೇ ಬೀದಿ ಬೀದಿಯಲ್ಲಿ ಸಾರಿಕೊಂಡಿದ್ದೀರಿ. ನಾವು ಅಧಿಕಾರಕ್ಕೆ ಬಂದರೆ, ಲೋಕಾಯುಕ್ತವನ್ನು ಗಟ್ಟಿ ಮಾಡುತ್ತೇವೆಂದು ಹೇಳಿದ್ದೀರಿ. ಇದು ನಮ್ಮ ತೆವಲು ಅಲ್ಲ. ತಾಕುತ್ತಿದ್ದರೆ ತನ್ನಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ತಿದ್ದುಪಡಿಯನ್ನು ಮತ್ತೆ ಏಕೆ ತಂದಿದ್ದಾರೆ?

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಿಂದೆ ಕಾಂಗ್ರೆಸ್ ಪಕ್ಷದವರ ಕೈಯಲ್ಲಿ ಅಧಿಕಾರವಿರಲಿಲ್ಲವೇ? ಆಗ ಏಕೆ ತರಲಿಲ್ಲ ಹೇಳಿ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಲೋಕಾಯುಕ್ತದಲ್ಲಿ ಆಗಿರುವಂತಹ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ನಾವು ಇಂತಹ ತಿದ್ದುಪಡಿಗಳನ್ನು ತಂದಿದ್ದೇವೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೇ ಯಾರೋ ಹೈಕೋರ್ಟ್ ಜಡ್ಜ್ ವರ್ಗಾವಣೆ ಮಾಡುತ್ತಾರೆ. ಯಾರೋ ಹೈಕೋರ್ಟ್ ಜಡ್ಜ್ biased ಎಂದು ಆಚೆ ಕುಳಿತುಕೊಳ್ಳುತ್ತಾರೆ. ಯಾರೋ ಹೈಕೋರ್ಟ್ ಜಡ್ಜ್ ಕೆಲವು ಕೇಸ್‌ಗಳನ್ನು ಕಂಡಕ್ಟ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಪ್ರಾವಿಷನ್ ಅಲ್ಲಿದೆ. ನಮ್ಮ ಗ್ರಹಚಾರಕ್ಕೆ ಲೋಕಾಯುಕ್ತ disable ಆದಾಗ, ಕೇಸ್‌ಗಳನ್ನು ಕಂಡಕ್ಟ್ ಮಾಡುವುದಕ್ಕಾಗುವುದಿಲ್ಲ ಎನ್ನುವುದಕ್ಕೋಸ್ಕರ ಲೋಕಾಯುಕ್ತ disable ಆದಾಗ, ಅವರ ಬದಲು ಉಪಲೋಕಾಯುಕ್ತರು ಕೇಸ್‌ನ್ನು ಕಂಡಕ್ಟ್ ಮಾಡುವುದಕ್ಕೆ ಆದೇಶ ಕೊಡುವುದಕ್ಕೆ, ನಾವು ಕೇಳುತ್ತಿದ್ದೇವೆ. This is the practical difficulty in enforcing the Lokayukta's decision. ನಾವು ಮೂಲ ಲೋಕಾಯುಕ್ತ ಕಾಯಿದೆ ಬಗ್ಗೆ ಮತ್ತು ಮೂಲ ಎಸಿಬಿ ಕಾಯಿದೆ ಬಗ್ಗೆ ಅದನ್ನು ಏಕೆ ತರಲಿಲ್ಲ, ಇದನ್ನು ಏಕೆ ತರಲಿಲ್ಲ ಎಂದು ಕೇಳಿದರೆ ಇದಕ್ಕೆ ನಾನು ಹೇಗೆ ಉತ್ತರ ಹೇಳಲಿ. ನಾವು ತಂದಿರುವುದು ಆಡಳಿತಾತ್ಮಕವಾದ ಸಮಸ್ಯೆಯಿದೆ. ಇಂತಹ ಪ್ರಕರಣಗಳಲ್ಲಿ ಕೇಸ್‌ಗಳನ್ನು ನಡೆಸುವುದಕ್ಕಾಗುತ್ತಿಲ್ಲ. ಹೇಗಾದರೂ ಮಾಡಿ ಕೇಸ್ ನಡೆಸಬೇಕೆಂದು, ಒಂದು ಸಣ್ಣ ತಿದ್ದುಪಡಿಯನ್ನು ಕೇಳಿದರೆ, ಇದನ್ನು ಇಷ್ಟು ಉದ್ದ ಹೇಳಿಕೊಂಡು ಹೋದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–**ಮಾನ್ಯ ಸಭಾಪತಿಯವರೇ, 1985 ರಿಂದ ಇದುವರೆಗೂ ಕೂಡ ಈ ರೀತಿ ಕಾನೂನು ತೊಡಕಿನಿಂದ ಎಷ್ಟು ಪ್ರಕರಣಗಳನ್ನು ನಡೆಸುವುದಕ್ಕಾಗಲಿಲ್ಲ? ಅದರ ಬಗ್ಗೆ ವಿವರಣೆಯನ್ನು ಕೊಡಲಿ. ಮಾನ್ಯ ಸಚಿವರೇ ಎಂತಹ ಸಂದರ್ಭಗಳಲ್ಲಿ ಏನು ಅನಿವಾರ್ಯತೆ ಬಂದಿದೆ ಎಂಬುದರ ಬಗ್ಗೆ ನಾಲ್ಕಾರು ಕೇಸ್‌ಗಳನ್ನು ಹೇಳಲಿ. ನಾವು ಅದಕ್ಕೆ ಒಪ್ಪಿಗೆ ಕೊಡೋಣ. ಇದುವರೆಗೂ ಯಾವ ಲೋಕಾಯುಕ್ತರಾಗಿ ಮಾನ್ಯ ಸಂತೋಷ್ ಹೆಗ್ಡೆ, ಮಾನ್ಯ ವೆಂಕಟಾಚಲಯ್ಯ ಬಂದಂತಹವರು ಇರಬಹುದು. ಎಂತೆಂಥ ಲೋಕಾಯುಕ್ತರು ಬಂದರು. ಅವರ್‍ಯಾರೂ ಕೂಡ ಈ ತಿದ್ದುಪಡಿಗೆ pressಮಾಡಲಿಲ್ಲ. ನಾನು ಈ ತಿದ್ದುಪಡಿಗೆ ವಿರೋಧ ಮಾಡುತ್ತಿಲ್ಲ. ಆದರೆ, ಇದುವರೆಗೆ ಆಗದೇ ಇರತಕ್ಕಂತಹ ಈ ತರಹ ತಿದ್ದುಪಡಿ ಬೇಕೆಂದರೆ ಕಾರಣಗಳನ್ನು ಹೇಳಬೇಕಲ್ಲವೆ?

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**(594) 19.03.2020 4.40 ಟಿಸಿಹೆಚ್-ಬಿಎನ್ಎಸ್**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಅವರು disable ಆದಾಗ, ಅವರ ಕೇಸ್ ಅನ್ನು ಟ್ರಾನ್ಸ್‌ಫರ್ ಮಾಡುವುದಕ್ಕೋಸ್ಕರ ಹಿಯರಿಂಗ್ ಮಾಡುವುದಕ್ಕಾಗಿ ಎಂದು ಒಂದೇ ಒಂದು ಲೈನ್‌ನಲ್ಲಿ ಹೇಳಿಬಿಟ್ಟರೆ, ಇದರಿಂದ ಮುಂದೆ ಸಮಾಜದಲ್ಲಿ ಬೇರೆ ರೀತಿಯ ಪರಿಣಾಮಗಳಾಗುತ್ತವೆ. ದಯವಿಟ್ಟು ತಿದ್ದುಪಡಿಯನ್ನು ಗಮನಿಸಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚರ್ಚೆ ಏಕೆ ಮಾಡುತ್ತಿದ್ದಾರೆಂದು ನನಗಂತು ಅರ್ಥವಾಗುತ್ತಿಲ್ಲ. ನೀವೆಲ್ಲಾ ಬಹಳ ಬುದ್ಧಿವಂತರಿದ್ದೀರಿ ಮತ್ತು ಹಿರಿಯರು ಇದ್ದೀರಿ. ಈ ಬಿಲ್ ಬಗ್ಗೆ ಇಷ್ಟೊಂದು ಚರ್ಚೆ ಮಾಡಬೇಕಾದಂತಹ ಅವಶ್ಯಕತೆ ಕಾಣುತ್ತಿಲ್ಲ. It is very simple. ಒಂದು, in the absence of Lokayukta or incapacity of Lokayukta ಅದು handicap ಆಗಬಾರದು. ಆ ಕೇಸ್‌ಗಳು ಮುಂದುವರೆಯಬೇಕಾಗುತ್ತದೆ.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಪ್ರಾರಂಭ ಮಾಡಿಲ್ಲ.

**ಸಭಾಪತಿಯವರು:-** ಮತ್ತೆ ಈ ಬಿಲ್ ಬಗ್ಗೆ ಏನೂ ಮಾತನಾಡುವ ಅವಶ್ಯಕತೆ ಇಲ್ಲವೆಂದು ಹೇಳಿದಿರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನಿನ್ನು ಪ್ರಾರಂಭ ಮಾಡಿಲ್ಲ. ಹಾಗಾಗಿ, ಈ ಬಿಲ್ ಪಾಸ್ ಮಾಡಲು ಇಷ್ಟೊಂದು ಸರ್ಕಸ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಹೈಕೋರ್ಟ್‌ನಲ್ಲಿ ಜಡ್ಜ್‌ರವರು ಕೆಲವು ಸಲ 'Not before me' ಎಂದು ಹೇಳುತ್ತಾರೆ. ಅದೇ ರೀತಿಯು ಸಂದರ್ಭದಲ್ಲಿ, ಕೆಲವು ಸಲ ಹೈಕೋರ್ಟ್ ಜಡ್ಜ್‌ರವರು 'I am disable' ಎಂದು ಹೇಳುತ್ತಾರೆ. The very word he uses, in case ಅಲ್ಲಿ ಒಂದು ಕೇಸನ್ನು ತೆಗೆದುಕೊಳ್ಳಬೇಕಾದರೆ 'Not before me' ಎಂದು ಹೇಳುತ್ತಾರೆ ಅಥವಾ ಬೇರೆ ಬೇರೆ ಏನಾದರೂ ಇದ್ದರೆ, 'I am disabled in this case' ಎಂದು ಹೇಳುತ್ತಾರೆ. ಆ ಕೇಸ್ ಅಲ್ಲಿಂದ pass

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

on ಆಗಿ ಮತ್ತೆ ಯಾರಿಗೋ ಹೋಗುತ್ತದೆ. ಇಂತಹ ಒಂದು circumstances ನಲ್ಲಿ, rarest cases ನಲ್ಲಿ ಈ ವಿಚಾರ ಬರುತ್ತದೆ. ಹಾಗಾಗಿ, disposal ಹೆಚ್ಚುಕಡಿಮೆ ಒಂದೇ ರೀತಿಯಾಗಿ ಇರುತ್ತದೆ. ಅದು ಬಿಟ್ಟರೆ, ಬೇರೆ ಏನೂ ಇಲ್ಲ. ಈಗ ಬಿಲ್‌ನ್ನು ಏನು ಮಂಡನೆ ಮಾಡಲು ತಂದಿದ್ದಾರೆ, ಅದಕ್ಕೆ ನನಗೆ ಸಂತೋಷವಾಗಿದೆ. ಆದರೆ, 'ಕುರುಡನೋ, ಕುಂಟನೋ, ಯಾರಾದರು ಒಬ್ಬರು ಗಂಡ' ಎಂದು ಇರಬೇಕಲ್ಲವೇ? ಆ ರೀತಿ ಇದೆ, ಬೇರೆ ಏನೂ ಇಲ್ಲ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2020 ರ ಬಗ್ಗೆ ಇಷ್ಟೊತ್ತು ವಾದ-ವಿವಾದವನ್ನು ಮಾಡಿದ್ದೀರಿ. ಮಾನ್ಯ ಸಚಿವರೇ, ಮೊದಲನೆಯದಾಗಿ, ಈ ಹಿಂದೆ ಶ್ರೀ ವೆಂಕಟಾಚಲಯ್ಯ ಮತ್ತು ಶ್ರೀ ಸಂತೋಷ್ ಹೆಗ್ಡೆಯವರು ಲೋಕಾಯುಕ್ತರಾಗಿದ್ದಾಗ, ಲೋಕಾಯುಕ್ತ ಸಂಸ್ಥೆಗೆ ಒಂದು ಗೌರವ ಇತ್ತು. ಆದರೆ, ಇವತ್ತಿನ ದಿವಸ ಸರ್ಕಾರ ಏನು ತಿದ್ದುಪಡಿ ಬಿಲ್‌ನ್ನು ತಂದಿದೆ, First of all, ಇದಕ್ಕೆ parallel ಆಗಿ ACB (Anti Corruption Bureau) ಮಾಡಿಕೊಂಡಿದ್ದೀರಿ. ಇದನ್ನು ಮಾಡಿಕೊಂಡಿರುವುದರಿಂದ, ಲೋಕಾಯುಕ್ತ ಸಂಸ್ಥೆ ಹಲ್ಲು ಕಿತ್ತ ಹಾವಿನಂತಾಗಿದೆ. ಆ ಲೋಕಾಯುಕ್ತ ಸಂಸ್ಥೆಗೆ ಏನೂ ಅಧಿಕಾರವಿಲ್ಲ. ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿದ್ದಂತಹ ಲೋಕಾಯುಕ್ತ ಇವತ್ತಿನ ದಿವಸ ಇಲ್ಲ. ನಾನು ನಮ್ಮ ಸರ್ಕಾರ, ನಿಮ್ಮ ಸರ್ಕಾರವೆಂದು ಹೇಳುತ್ತಿಲ್ಲ, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಆ ಸರ್ಕಾರಗಳಿಗೆ ಯಾವ ನ್ಯಾಯಾಧೀಶರು ಹತ್ತಿರವಾಗಿರುತ್ತಾರೋ ಅವರಿಗೆ ಮಾತ್ರ ಹುದ್ದೆ ಕೊಡತಕ್ಕಂಥ ಕೆಲಸ ಆಗಬಾರದು. ಲೋಕಾಯುಕ್ತಕ್ಕೆ ಸರಿಯಾದಂತಹ ಅಧಿಕಾರ ಕೊಡಿ. ಈ ಹಿಂದೆ ಶ್ರೀ ಸಂತೋಷ್ ಹೆಗ್ಡೆಯವರು ಲೋಕಾಯುಕ್ತರಾಗಿದ್ದರು, ಅವರು ಭ್ರಷ್ಟ ಅಧಿಕಾರಿಗಳಿಗೆ ಸಿಹ್ನಸ್ವಪ್ನರಾಗಿದ್ದರು. ಆ ರೀತಿ ಲೋಕಾಯುಕ್ತರನ್ನು ಕೊಡಿ. ಅದು ಬಿಟ್ಟು, ಸುಮ್ಮನೆ ಏನೋ ಒಂದು ಹುದ್ದೆ ಕೊಡಬೇಕಲ್ಲಾ, ಎಂದು ಕೊಡಬೇಡಿ. ಜನರ ತೆರಿಗೆ ಹಣವನ್ನು ಏತಕ್ಕೋಸ್ಕರ ಹಾಳುಮಾಡಬೇಕು. ದಯಮಾಡಿ ಕಾನೂನು ಸಚಿವರು ಹೇಳಬೇಕು. ಸಾರ್ವಜನಿಕವಾಗಿ ಜನ ಇದರ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಹಾವಿನ ಹಲ್ಲನ್ನು ಕೀಳಬಹುದು, ಆದರೆ ಹಲ್ಲನ್ನು ಚುಚ್ಚುವುದಕ್ಕೆ ಬರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಹಲ್ಲು ಇಲ್ಲ, ಚುಚ್ಚುವುದಕ್ಕೆ ಬರುವುದಿಲ್ಲ. ಸುಮ್ಮನೆ ವೇಸ್ಟ್ ಆಗಿ ನೇಮಕ ಮಾಡಬೇಡಿ. ಏಕೆಂದರೆ, ಅವರಿಗೆ ಒಂದು ಕಾರು ಕೊಡಬೇಕಾಗುತ್ತದೆ, ಅಧಿಕಾರಿಗಳನ್ನು ಕೊಡಬೇಕಾಗುತ್ತದೆ. ಜನರ ಹಣವನ್ನು ಪೋಲು ಮಾಡಿದರೆ, ಏನು ಸುಖ ಬರುತ್ತದೆ ಹೇಳಿ? ಅದಕ್ಕೆ ನಾನು ಹೇಳಿದ್ದು, ಯಾವುದೇ ಸರ್ಕಾರವಾಗಿರಲಿ, ನಾನು ನಮ್ಮ ಸರ್ಕಾರ, ನಿಮ್ಮ ಸರ್ಕಾರವೆಂದು ಹೇಳುವುದಿಲ್ಲ. ಯಾರು ಮಾಡಿದರೇನು, parallel ಆಗಿ ACB ಇದ್ದ ಮೇಲೆ ಲೋಕಾಯುಕ್ತ ಸಂಸ್ಥೆಯನ್ನು ಬಂದ್ ಮಾಡಿ. ಇಲ್ಲವೇ ಲೋಕಾಯುಕ್ತಕ್ಕೆ ಅಧಿಕಾರ ಕೊಡಿ. ದಯಮಾಡಿ ಇವೆರಡರಲ್ಲಿ ಒಂದನ್ನಾದರು ಮಾಡಿ.

**ಸಭಾಪತಿಯವರು:–** ಮಾನ್ಯ ಕಾನೂನು ಸಚಿವರೇ, ತಾವು ಏನಾದರು reply ಕೊಡುವುದು ಇದೆಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ,. . .

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–**ಮಾನ್ಯ ಸಭಾಪತಿಯವರೇ,...

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸರ್ಕಾರ ಏನು ಈ ವಿಧೇಯಕವನ್ನು ತಂದಿದ್ದೆ, ಅದನ್ನು ಲೋಕಾಯುಕ್ತರ ಅಭಿಪ್ರಾಯದ ಮೇಲೆಯೇ ತಂದಿದ್ದಾರೆಂಬುದು ನನ್ನ ಭಾವನೆ. ಇಲ್ಲಿ ಏನಾಗಿದೆಯೆಂದರೆ, ಯಾರೋ ಒಬ್ಬ ವ್ಯಕ್ತಿ ಮಾನ್ಯ ಲೋಕಾಯುಕ್ತರಿಗೆ ಹೊಡೆಯುತ್ತಾರೆ; ಹೊಡೆದಾಗ, ಅವರು 6 ತಿಂಗಳ ಕಾಲ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ಆ ಡ್ಯೂರೇಷನ್‌ನಲ್ಲಿ ಅವರ ಕೆಲಸವನ್ನು ಮಾಡುವುದಕ್ಕೆ ಯಾರು ಇರುವುದಿಲ್ಲ. ಅಂತಹ ಸಮಯದಲ್ಲಿ ಅವರ ಕೆಲಸವನ್ನು delegate ಮಾಡುವುದಕ್ಕೆ ಸೂಚನೆ ಕೊಟ್ಟಿರತಕ್ಕಂತಹ ಈ ತಿದ್ದುಪಡಿಯಾಗಿದೆ ಅಷ್ಟೆ. ಈ ಬಿಲ್ ತಂದಿರುವುದು ಸರಿಯಿದೆ. ಇದರ ಜೊತೆಗೆ ಸರ್ಕಾರ 1 ವರ್ಷ, 2 ವರ್ಷಗಳ ಕಾಲ ಲೋಕಾಯುಕ್ತರನ್ನೇ ನೇಮಿಸಿರುವುದಿಲ್ಲ; ಇದೆಲ್ಲಾ ಆಗಿದೆ. ಅಂತಹ ಸಮಯದಲ್ಲಿ ಲೋಕಾಯುಕ್ತರ ಅಧಿಕಾರವನ್ನು ಉಪ ಲೋಕಾಯುಕ್ತರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಇದರಲ್ಲಿ ಕೊಟ್ಟಿರುವುದು, 'if in the opinion of Lokayukta, he is disabled . . .' ಅಂದರೆ, if Lokayukta is disabled, he can given an opinion that, ನನ್ನ ಕೇಸ್‌ಗಳನ್ನೆಲ್ಲಾ ಮಾನ್ಯ ಉಪ ಲೋಕಾಯುಕ್ತರು ನಡೆಸಬಹುದು ಎಂದು ಕೊಡಬಹುದು. ಆದರೆ, ಇಲ್ಲಿ ಇದರ ಜೊತೆಗೆ ಇನ್ನೊಂದನ್ನು ಕೂಡ ತರಬಹುದು. ಅದೇನೆಂದರೆ, ಲೋಕಾಯುಕ್ತರನ್ನು ನೇಮಿಸದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇದ್ದಾಗ, ಅಂತಹ ಅವಧಿಯಲ್ಲಿ ಉಪ ಲೋಕಾಯುಕ್ತರನ್ನು empower ಮಾಡುವಂಥದ್ದನ್ನು ಪ್ರತ್ಯೇಕವಾಗಿ ತರಬೇಕಾಗುತ್ತದೆ. ಅದನ್ನು ನೀವು ಮಾಡದೇ ಇರುವುದರಿಂದ, ಈಗ ಇರತಕ್ಕಂಥ ಉಪಲೋಕಾಯುಕ್ತರು ಏನು ನೇಮಕವಾಗಿದ್ದಾರೆ, ಅದಕ್ಕಿಂತ ಒಂದು ವರ್ಷಕ್ಕಿಂತ ಹಿಂದೆ ಸುಮಾರು ಒಂದು ವರ್ಷಗಳ ಕಾಲ ಉಪ ಲೋಕಾಯುಕ್ತರನ್ನು ನೇಮಿಸಿರಲಿಲ್ಲ. ಆದರೆ, ಲೋಕಾಯುಕ್ತರು ಇಲ್ಲದೇ ಇರತಕ್ಕಂಥ ಸಮಯದಲ್ಲಿ ಈ ರೀತಿಯ ತಿದ್ದುಪಡಿಯನ್ನು ಅವರ ಅಭಿಪ್ರಾಯವಿಲ್ಲದೇ, ನೇಮಕಾತಿ ಮಾಡತಕ್ಕಂಥದ್ದು ಅಥವಾ delegate ಮಾಡತಕ್ಕಂಥದ್ದಕ್ಕೆ ಒಂದು separate ತಿದ್ದುಪಡಿ ತರಬೇಕೆಂಬುದು ನನ್ನ ಭಾವನೆ.

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕ, 2020 ನ್ನು ತಂದಿದ್ದಾರೆ. ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಅದಕ್ಕೆ ಕಾರಣವೇನೆಂದರೆ, ಲೋಕಾಯುಕ್ತಕ್ಕೆ ಏನು ಕೇಸ್‌ಗಳು ರೆಫರ್ ಆಗಿವೆ, ಅವೆಲ್ಲಾ ಅಲ್ಲೇ ಬಿದ್ದಿವೆ. ಈಗ ಲೋಕಾಯುಕ್ತಕ್ಕೆ ತುರ್ತಾಗಿ ಆ ಕೇಸ್‌ಗಳನ್ನೆಲ್ಲಾ ಕ್ಲಿಯರ್ ಮಾಡಿಕೊಡಿ ಎಂದು ಹೇಳುವಂತಹ ಪರಿಸ್ಥಿತಿಯೂ ಇಲ್ಲ. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಒಂದು ಕೇಸ್ ಲೋಕಾಯುಕ್ತಕ್ಕೆ ರೆಫರ್ ಆಗಿ ಸುಮಾರು 6 ವರ್ಷಗಳಾಯಿತು. 6 ವರ್ಷವಾದರೂ ಕೂಡ ಯಾವ ಕೆಲಸವೂ ಆಗಿಲ್ಲ. ಅಲ್ಲಿ ಒಂದು ಬಡಾವಣೆ ನಿರ್ಮಾಣ ಮಾಡಿದ್ದಾರೆ, ಆ ಬಡಾವಣೆ ನಿರ್ಮಾಣ ಮಾಡಿದಾಗ ರೈತರು ಅದಕ್ಕೆ consent ಕೊಟ್ಟು, ಜಮೀನು ಕೊಟ್ಟಿದ್ದರು. ಆ ಸೈಟ್‌ನ್ನು ಹಂಚುವಂತಹ ಸಂದರ್ಭದಲ್ಲಿ ಅಧ್ಯಕ್ಷರ ವಿವೇಚನಾ ಕೋಟಾದಲ್ಲಿ ಸೈಟ್‌ಗಳನ್ನು ಸರಿಯಾಗಿ ಹಂಚಿಲ್ಲವೆಂದು, ಲೋಕಾಯುಕ್ತಕ್ಕೆ ಆ ಕೇಸ್ ಹೋಗಿತ್ತು. ಆದರೆ, ಈ ಕೇಸ್‌ಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವುದಕ್ಕೆ ಸಹಾಯಕವಾಗುವಂತಹ ರೀತಿಯಲ್ಲಿ ಏನಾದರೊಂದು ವ್ಯವಸ್ಥೆಯನ್ನು ತರಬೇಕೆಂದು ನಾನು ತಮ್ಮ ಮೂಲಕ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಭಾವನೆಗಳು ನಮಗೆ ಅರ್ಥವಾಗಿದೆ. ಲೋಕಾಯುಕ್ತಕ್ಕೆ power ಕೊಡಬೇಕು., ACB ಇರಬೇಕೋ, ಬೇಡವೋ; ಲೋಕಾಯುಕ್ತಕ್ಕೆ ಈಗ power ತೆಗೆದಿರುವುದು ಸರಿಯೋ, ತಪ್ಪೋ ಎನ್ನುವುದನ್ನು ಈ ಬಿಲ್ ಮುಖಾಂತರ ಮಾತನಾಡುವುದಕ್ಕೆ ನಾನು ಅಸಮರ್ಥನಿದ್ದೇನೆ. ಏಕೆಂದರೆ, ಅದು ಚರ್ಚೆಯ ವಿಷಯವಲ್ಲ. ಮಾನ್ಯ ಪಿ.ಆರ್.ರಮೇಶ್‌ರವರು ಹೇಳಿದ್ದು ನಿಜ. ಒಬ್ಬ ಲೋಕಾಯುಕ್ತರೇನೆ ನಾನು ಯಾವುದೋ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸ್ಥಿತಿಯಲ್ಲಿದ್ದೇನೆ, ನನಗೆ ಈಗ ವರ್ಕ್ ಮಾಡುವುದಕ್ಕೆ ಆಗುತ್ತಿಲ್ಲ. ಈ power ನ್ನು delegate ಮಾಡುತ್ತೇನೆ ಎಂದು ಅವರೇ ಇಷ್ಟಪಟ್ಟು, ಅವರ ಕಡೆಯಿಂದ ಅಭಿಪ್ರಾಯ ಬಂದಾಗ ಮಾತ್ರ power delegate ಆಗುತ್ತದೆಯೇ ಹೊರತು, ಸರ್ಕಾರ ಮತ್ತೊಬ್ಬರಿಗೆ power ನ್ನು delegate ಮಾಡುವುದಕ್ಕೆ ತಂದಿರತಕ್ಕಂಥ ವಿಧೇಯಕ ಇದಲ್ಲವೆಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ನಾವು ಉಪ ಲೋಕಾಯುಕ್ತರಿಗೆ ಅದೇ ಎಲ್ಲಾ power ಕೊಟ್ಟು, ವರ್ಷಾನುಗಟ್ಟಲೆ ಲೋಕಾಯುಕ್ತ ಕಛೇರಿ ಖಾಲಿ ಇಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಬಹುದೇನೋ ಅದಕ್ಕೂ ನಾವು ತಯಾರಿಲ್ಲ. ಒಂದು ಬಾರಿ ನಾವು ಉಪ ಲೋಕಾಯುಕ್ತಕ್ಕೆ ಆ ಎಲ್ಲಾ ಅಧಿಕಾರಗಳನ್ನು ಕೊಟ್ಟುಬಿಟ್ಟರೆ, ಆ ಪವರ್ ಅನ್ನು ನಾನೇ ಎಂಜಾಯ್ ಮಾಡುತ್ತೇನೆ, ಲೋಕಾಯುಕ್ತರನ್ನು ನೇಮಿಸಬೇಡಿ ಎಂದು ಏನಾದರು ಪ್ರಾರಂಭವಾದರೆ, ಆ ಹುದ್ದೆಗೆ ಗೌರವ ಮತ್ತು ಘನತೆ ಅಷ್ಟೊಂದು ಇರುವುದಿಲ್ಲ ಎನ್ನುವುದು ನಮ್ಮ ಭಾವನೆ. ಆ ವಿಷಯದ ಚರ್ಚೆ ನಮ್ಮ ಮುಂದೆ ಇಲ್ಲ. ಸರ್ಕಾರ ಆ ಚಿಂತನೆಗೆ ಹೋಗಲಿಲ್ಲ. ನೀವು ಹೇಳಿದ್ದು ನಿಜ. ನಾವೆಲ್ಲಾ ಲೋಕಾಯುಕ್ತ ವ್ಯವಸ್ಥೆಯನ್ನು ಗಟ್ಟಿ ಮಾಡಬೇಕು, ಶಕ್ತಿ ತುಂಬಬೇಕು ಎನ್ನತಕ್ಕಂಥ ಬಲವಾದ ಆಸೆಯನ್ನು ಇಟ್ಟುಕೊಂಡಿರುವವರು. ಇದರಲ್ಲಿ ಬೇರೆ ಏನೂ ಮಾತಿಲ್ಲ, ಇದಕ್ಕೆಲ್ಲಾ ಸಮಯ ತೆಗೆದುಕೊಳ್ಳುತ್ತದೆ. Law amend ಆಗಿದೆ. As per law ಎಸಿಬಿ ಕ್ರಿಯೇಟ್ ಆಗಿದೆ. Parallel Investigation Agencies ಪ್ರಸ್ತುತ ರಾಜ್ಯದಲ್ಲಿ 7 ಅಥವಾ 8 ಇವೆ, ಒಂದೇ ಇಲ್ಲ. ಯಾರ್‍ಯಾರಿಗೆ ಕೇಸ್‌ಗಳು ರೆಫರ್ ಆಗುತ್ತವೊ, ಯಾರ್‍ಯಾರ ವ್ಯಾಪ್ತಿ ಏನು ಎಂಬುದು ಕೂಡ ನಮಗೆ ಗೊತ್ತಿಲ್ಲ. ಈಗ ಆಡಳಿತಾತ್ಮಕವಾದಂತಹ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ದಯಮಾಡಿ ಈ ಬಿಲ್‌ನ್ನು ತಾವೆಲ್ಲರೂ ಒಪ್ಪಿ ಪಾಸ್ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2

**ಸಭಾಪತಿಯವರು:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಗಳೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಲೋಕಾಯುಕ್ತ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಲೋಕಾಯುಕ್ತ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

(595)19.3.2020/4.50/ಎಂ.ಎಂ-ಜಿ.ಆರ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮೊದಲು ನೀವು ಒಂದು ಬಿಲ್ ಎಂದು ಹೇಳಿದಿರಿ ಆಗ ನಾನು ಸುಮ್ಮನಿದ್ದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ದಯಮಾಡಿ ಅವಕಾಶ ಮಾಡಿಕೊಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ಕೇಳುತ್ತಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ನಮಗೂ ಒಂದು ಮಿತಿ ಇದೆ. ಮೂರನೇ ಸಲಕ್ಕೆ ಹಿಂತೆಗೆದುಕೊಂಡಿದ್ದೇನೆ, ಇದಾದ ಮೇಲೆ ತೆಗೆದುಕೊಳ್ಳಿ. ಅರ್ಧ ಗಂಟೆ ಚರ್ಚೆ ನಡೆಯುವಾಗ ಮಾನ್ಯ ಸಚಿವರು ಇಲ್ಲಿಯೇ ಇರಬೇಕಾಗುತ್ತದೆ. ಅವರು ಇಲ್ಲಿಯೇ ಕುಳಿತುಕೊಳ್ಳಲಿ. ನೀವು ಅಪರೂಪಕ್ಕೊಮ್ಮೆ ಇಲ್ಲಿಗೆ ಬರುತ್ತೀರಿ.

**ಡಾ: ಸಿ.ಎನ್. ಅಶ್ವಥ್ ನಾರಾಯಣ್:-** ಮಾನ್ಯ ಬಸವರಾಜ ಹೊರಟ್ಟಿಯವರೇ, ನಾವು ಯಾವಾಗಲೂ ನಿಮ್ಮ ಜೊತೆಗೇ ಇರುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ನಾನು ನಿನ್ನೆ ನಿಯಮ 59ರಡಿಯಲ್ಲಿ;

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೇ, ನಿಮಗೆ ಬಿಲ್ ಪಾಸ್ ಆದಮೇಲೆ ಅವಕಾಶ ಕೊಟ್ಟೇ ಕೊಡುತ್ತೇವೆ. ಪ್ರಶ್ನೆ ಏನೆಂದರೆ, ವಿಧೇಯಕಕ್ಕೆ ಆದ್ಯತೆ ಎಂದು ಇದೆ. ವಿಧೇಯಕಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ಇದೆ.

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಯಾಗಿದ್ದಾಗಲೂ ಕೂಡ ಅದಕ್ಕೇ ಆದ್ಯತೆ ಕೊಡುತ್ತಿದ್ದರು.

**ಸಭಾಪತಿಯವರು:-** ಅದಕ್ಕೇ ನಾನು ಅವರನ್ನು ಕೇಳುತ್ತಿದ್ದೇನೆ.

**ಡಾ: ಸಿ.ಎನ್. ಅಶ್ವಥ್ ನಾರಾಯಣ್:-** ಮಾನ್ಯ ಬಸವರಾಜ ಹೊರಟ್ಟಿಯವರೇ, ನಾನು ನಿಮ್ಮ ಚರ್ಚೆಗೂ ಇಲ್ಲಿಯೇ ಇರುತ್ತೇನೆ.

**ಸಭಾಪತಿಯವರು:-** ಇದಾದ ತಕ್ಷಣವೇ ನಿಮ್ಮದೇ ಇರುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

## ಆ) <u>ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020</u>

### <u>ಪರ್ಯಾಲೋಚನಾ ಪ್ರಸ್ತಾವ</u>

**ಡಾ: ಸಿ.ಎನ್. ಅಶ್ವಥ್ ನಾರಾಯಣ್ (ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಡಾ: ಸಿ.ಎನ್. ಅಶ್ವಥ್ ನಾರಾಯಣ್(ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೆ, ಈ ಕಾಯಿದೆಯನ್ನು ತರುವ ಉದ್ದೇಶವೇನೆಂದರೆ, ಯು.ಜಿ.ಸಿ., ವೇತನ, ಐ.ಸಿ.ಎ.ಆರ್., ವೇತನ ಮತ್ತು ಎ.ಐ.ಸಿ.ಟಿ.ಇ., ವೇತನವನ್ನು ಪಡೆಯುತ್ತಿರುವ ಶಿಕ್ಷಕರು ತಮಗೆ pension and pension benefits ವಿಚಾರದಲ್ಲಿ ಆ ಸಂದರ್ಭದಲ್ಲಿ ಏನು ಅವರು ನಿವೃತ್ತಿಯಾಗಿರುತ್ತಾರೆ ಆ ನಿವೃತ್ತಿಯ ಕಾಲದಲ್ಲಿರುವಂತಹ pay scale ಆಧಾರಿತವಾಗಿ last pay scale draw ಮಾಡಿರುತ್ತಾರೆ ಅದರ ಆಧಾರಿತವಾಗಿ ನಿವೃತ್ತಿ ವೇತನ ನಿಗದಿಯಾಗುತ್ತದೆ. ಯಾವ್ಯಾವಾಗ U.G.C., I.C.A.R., A.I.C.T.E., pay scale revise ಆಗುವುದೋ ಆಗ ನಿವೃತ್ತಿ ವೇತನವು ಹೊಸ ವೇತನ ಶ್ರೇಣಿ ಆಧಾರಿತವಾಗಿ ರಿವೈಸ್ ಆಗಬೇಕೆನ್ನುವುದು ಅವರ ಬೇಡಿಕೆಯಾಗಿತ್ತು. ಕಳೆದ 2009 ರಿಂದಲೂ ಅವರ ಒತ್ತಾಯವಾಗಿತ್ತು. ಆದರೆ ಸರ್ಕಾರದಲ್ಲಿ ಈ ರೀತಿ ಒಂದೊಂದು ವರ್ಗಕ್ಕೆ ಒಂದೊಂದು ನಿವೃತ್ತಿ ವೇತನವನ್ನು ಕೊಡುವುದಕ್ಕೆ ಸಾಧ್ಯವಿಲ್ಲ, uniform pension policy ಇದೆ. Retirement ನಲ್ಲಿ ಎಲ್ಲರೂ ಒಂದೇ ರೀತಿ ಯಾವ ತಾರತಮ್ಯವಿಲ್ಲದೇ ಎಲ್ಲರಿಗೂ ಒಂದೇ ರೀತಿಯ ನಿವೃತ್ತಿ ವೇತನ ಕೊಡುವುದಕ್ಕೆ ಸಾಧ್ಯವಿದೆ ಎಂದು ಸರ್ಕಾರ ಸ್ಪಷ್ಟವಾದ ನಿಲುವು ತೆಗೆದುಕೊಂಡಿದೆ. ಈ ನಿಲುವಿಗೆ ನಿವೃತ್ತಿಯಾದ ಶಿಕ್ಷಕರಲ್ಲಿ ಒಪ್ಪಿಗೆ ಇರಲಿಲ್ಲ. ಆದ್ದರಿಂದ ಅವರು ಕೋರ್ಟ್ ಮೆಟ್ಟಿಲೇರಿದರು, 2015ರಲ್ಲಿ ಅದನ್ನು ಪರಿಗಣಿಸಬೇಕೆಂದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ನಿರ್ದೇಶನ ಬಂದಿತು. ಎರಡೆರಡು ಕ್ಲಾಸ್ ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ, ಎರಡು ಕ್ಲಾಸ್ ಇರುವುದಕ್ಕಾಗುವುದಿಲ್ಲ ಮತ್ತು ನಿವೃತ್ತಿ ವೇತನದ cut-off date fix ಮಾಡುವುದಕ್ಕೆ ಸ್ಪಷ್ಟವಾಗಿ ಸರ್ಕಾರದಲ್ಲಿ ಅಧಿಕಾರ ಇಲ್ಲ ಎನ್ನುವುದನ್ನು ವ್ಯಕ್ತಪಡಿಸಿದ್ದಾರೆ. ಇಂತಹ ನಿರ್ದೇಶನಗಳು ಮತ್ತು 2019ರಲ್ಲಿ ಇವರಿಗೆ new revised pay scale ಆಧಾರಿತವಾಗಿ ನಿವೃತ್ತಿ ವೇತನವನ್ನು ಫಿಕ್ಸ್ ಮಾಡಬೇಕೆಂದು ಮತ್ತೊಮ್ಮೆ ಹೈಕೋರ್ಟ್ ಆದೇಶ ಕೊಡುತ್ತದೆ. ಈ ಆದೇಶ ಕೊಟ್ಟ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಅಧಿಕಾರ ಸ್ಪಷ್ಟತೆಯನ್ನು ಸರ್ಕಾರಕ್ಕೆ ಪಡೆದುಕೊಳ್ಳಬೇಕೆನ್ನುವ ದೃಷ್ಟಿಯಲ್ಲಿ ಈ ಕಾಯಿದೆಯನ್ನು ತಂದಿದ್ದೇವೆ. ಈ ಕಾಯಿದೆ ತರುವಂತಹ ಉದ್ದೇಶ ಈ ರೀತಿ ನಿವೃತ್ತಿ ವೇತನವನ್ನು ಬೇರೆ ಬೇರೆ categorise ಮಾಡುವುದು classification ಅಷ್ಟು ಉಚಿತವಲ್ಲ, ಎಲ್ಲಾ ನಿವೃತ್ತ ನೌಕರರೂ ಒಂದೇ ಎಂದು ಆಧಾರಿತವಾಗಿ ಆರ್ಥಿಕ ಮುಗ್ಗಟ್ಟು ಸರ್ಕಾರದ ಮೇಲೆ ಬಹಳಷ್ಟು ಇರುತ್ತದೆ. ಹಾಗಾಗಿ ಈ ಆರ್ಥಿಕ ಮುಗ್ಗಟ್ಟನ್ನು ತಡೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲ. ಇದರಿಂದ ಸಂಪೂರ್ಣ ಅಧಿಕಾರ ಸರ್ಕಾರದಲ್ಲಿರುತ್ತದೆ, ಯಾವುದೇ ರೀತಿಯ pension revise ಮಾಡುವುದಕ್ಕೆ, pay fix ಮಾಡುವುದಕ್ಕೆ ಎಲ್ಲಾ ಅಧಿಕಾರ ಸರ್ಕಾರದಲ್ಲಿದೆ ಎನ್ನುವುದಕ್ಕೆ ಹಲವಾರು citations ಇದೆ, ಹಲವಾರು ಆದೇಶಗಳಿವೆ, ಎಲ್ಲರ ನಿರ್ಣಯವಿದೆ. ನಿವೃತ್ತಿ ವೇತನವನ್ನು ನಿಗದಿಪಡಿಸುವ ಸಂಪೂರ್ಣ ಅಧಿಕಾರ ಸರ್ಕಾರಕ್ಕೆ ಇದೆ. Pay and pension ಗಳನ್ನು State's available resource ಆಧಾರಿತವಾಗಿ ಅದನ್ನು ಮಾಡುವುದಕ್ಕೆ ಸಾಧ್ಯವಿದೆ. ಇನ್ನೂ ಹೆಚ್ಚಿನ ರೀತಿಯಾದಂತಹ ಅಧಿಕಾರ ಮತ್ತು ಸ್ಪಷ್ಟತೆಯನ್ನು ಪಡೆಯುವುದಕ್ಕೋಸ್ಕರ ಈ ಕಾಯಿದೆಯನ್ನು ತರುತ್ತಿದ್ದೇವೆ, ದಯವಿಟ್ಟು ಎಲ್ಲರೂ ಸಹಕರಿಸಿ ಈ ಬಿಲ್ಲನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಹಿಂದೆ ಆ ಕಡೆ ಕುಳಿತಿರುವ ಸ್ನೇಹಿತರು notional increment ಸಲುವಾಗಿ ಇದೇ ರೀತಿ ಆಗಿತ್ತು. ಎಲ್ಲಾ ಕೋರ್ಟ್‌ಗಳು ಹೈಕೋರ್ಟ್, ಸಿಂಗಲ್ ಬೆಂಚ್, ಡಬಲ್ ಬೆಂಚ್, ಎಲ್ಲಾ ಕೋರ್ಟ್‌ಗಳಲ್ಲಿಯೂ ಶಿಕ್ಷಕರ ಪರವಾಗಿ ಇದೇ ರೀತಿ ಆಗಿತ್ತು. ಅನುದಾನರಹಿತ ಸೇವೆಯನ್ನು ಮಾಡಿದಾಗ ಅವರಿಗೂ ನಿವೃತ್ತಿ ವೇತನ ನೀಡಬೇಕೆಂದು ಮಾಡಿದರು. ಆಗ ಕಾಂಗ್ರೆಸ್ ಸರ್ಕಾರ ಇದ್ದು, ಶ್ರೀ ಆರ್.ವಿ. ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿದ್ದರು. ಶ್ರೀ ಡಿ.ವಿ. ಸದಾನಂದಗೌಡರು ಇಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಎಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನ ಬಿ.ಜೆ.ಪಿ ಸ್ನೇಹಿತರೆಲ್ಲಾ ನಮ್ಮ ಜೊತೆ ಇದ್ದರು, ಈಗ ಸುಮ್ಮನೆ ಕುಳಿತುಕೊಂಡಿದ್ದಾರೆ. ನಾವೆಲ್ಲರೂ ಕೂಡಿಕೊಂಡು ಅವತ್ತು ಬಿಲ್ ಪಾಸ್ ಮಾಡುವುದಕ್ಕೆ ಒಪ್ಪಲಿಲ್ಲ. ಏಕೆಂದರೆ, S.L.P., ಹಾಕಿದ್ದನ್ನು ಸುಪ್ರೀಂ ಕೋರ್ಟ್ ಅದನ್ನು ರಿಜೆಕ್ಟ್ ಮಾಡಿ ಕಳುಹಿಸಿತು. ಇಷ್ಟೆಲ್ಲಾ ಆದಾಗ ಕೊನೆಗೆ ಒಂದು ಒಪ್ಪಂದವಾಯಿತು ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಸಂಕನೂರರವರು ಆಗ ಇನ್ನೂ ಬಂದಿರಲಿಲ್ಲ; ಒಂದು representation ಕೊಟ್ಟರು. ಇಷ್ಟು ಹಣದಲ್ಲಿ Difference amount ಕೆಳಗೆ ನಿವೃತ್ತಿ ವೇತನವನ್ನು ಮಾಡಿಕೊಡುವ ಕೆಲಸ ಮಾಡಿತು ಅದೇ ರೀತಿ ಇವತ್ತು ದಿನಾಂಕ 1-1-1986ರಲ್ಲಿ ಯು.ಜಿ.ಸಿ ಜಾರಿಗೆ ಬಂದಿತು. ತದನಂತರ ಅವರಿಗೆ ಯು.ಜಿ.ಸಿ ಸ್ಕೇಲ್ ಪ್ರಕಾರ ಕೊಡುತ್ತಾ ಬಂದರು. ಆಗ ನೌಕರಿಯನ್ನು ಪ್ರಾರಂಭ ಮಾಡಿದವರಿಗೆ ಸ್ಟೇಟ್ ಸ್ಕೇಲ್ ಇತ್ತು. ಸ್ಟೇಟ್ ಸ್ಕೇಲ್ ಇದ್ದಾಗ ಅದನ್ನು ತೆಗೆದುಕೊಂಡರು, ಆಗ ಅದು ಜಾಸ್ತಿ ಇತ್ತು. ಕೊನೆಗೆ ಯು.ಜಿ.ಸಿ ಸ್ಕೇಲ್ ಬಂದಿತು. ಯು.ಜಿ.ಸಿ ಸ್ಕೇಲ್ ಬಂದಾಗ automatically ಅವರ ವೇತನ ಜಾಸ್ತಿಯಾಯಿತು. ಈಗ ಅವರು ನಿವೃತ್ತಿಯಾಗಿದ್ದಾರೆ. ನ್ಯಾಯಾಲಯವು ಸರ್ಕಾರ ತಪ್ಪಾಗಿ ಮಾಡಿದೆ, ಯಾವಾಗ at the time of last date of the retirement, he is eligible for fifty per cent of pension ಎನ್ನುವಂತಹ rule ತಂದರು. Last day ಏನು salary draw ಮಾಡುವವರಿಗೆ ತಂದರು. ಎಲ್ಲಾ ಸರ್ಕಾರಿ ನೌಕರರಿಗೂ ಹಾಗೇ ಆಗಿದೆ. ಈಗ All India pay scale ಐ.ಎ.ಎಸ್., ಐ.ಪಿ.ಎಸ್., ಅಧಿಕಾರಿಗಳಿಗೆ ಚೇಂಜ್ ಆದಾಗ ನಮ್ಮ ರಾಜ್ಯ ಸರ್ಕಾರದ ಸ್ಕೇಲ್ ಬೇರೆ ಇದೆ, ಅವರದ್ದೇ ಬೇರೆ ಇದೆ. ಆದರೆ ನಿವೃತ್ತಿಯಾಗುವಾಗ ಅವರಿಗೆ ಪೆನ್ಷನ್ ಕೊಡಬೇಕೆಂಬುದು ನಿಯಮ.

**(596) 19-03-2020/ 05-00/ ಕೆಹೆಚ್-ಜಿಆರ್**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-**

ಮಾನ್ಯ ಉಪಮುಖ್ಯಮಂತ್ರಿಗಳಾದ ಡಾ॥ ಸಿ.ಎನ್.ಅಶ್ವತ್ಥನಾರಾಯಣ ರವರು ನಮಗೆ ಆರ್ಥಿಕ ಮುಗ್ಗಟ್ಟು ಇದ್ದು ನಮಗೆ ಅಧಿಕಾರ ಇದೆ. ಹಣಕಾಸಿನ ಹೊರೆಯನ್ನು ತಡೆದುಕೊಳ್ಳುವಂತಹ ಶಕ್ತಿ ಇಲ್ಲ ಎನ್ನುವಂತಹ ಮಾತನ್ನು ಹೇಳಿದರು. ತಮಗೆ ತಡೆದುಕೊಳ್ಳುವುಕ್ಕೆ ಶಕ್ತಿ ಇಲ್ಲವೆಂದರೆ ಅವರಿಗೆ ಬರುವಂತಹ ನಿವೃತ್ತಿ ವೇತನವನ್ನು ಕಡಿತಗೊಳಿಸುವಂತಹ ಅಧಿಕಾರ ತಮಗೂ ಇಲ್ಲ. ನಿವೃತ್ತಿ ವೇತನವನ್ನು ಕೊಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರಕ್ಕೆ ನಾನು ಹೇಳುವುದೇನೆಂದರೆ, ಇವರು ಈ ಕಡೆ ಇದ್ದಾಗ ಈ ವಿಧೇಯಕಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದರು. ಅವರು ಈಗ ಇದಕ್ಕೆ ಬೆಂಬಲ ಕೊಡುತ್ತೇವೆ ಎಂದರೆ, ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೇಗಾಗುತ್ತದೆ ಎಂಬುದನ್ನು ಹೇಳಿ ನೋಡೋಣ. ಮಾನ್ಯ ಸಚಿವರು ಬಸವಣ್ಣ ಕುಳಿತುಕೊಂಡ ಹಾಗೆ ಸುಮ್ಮನೆ ಕುಳಿತುಕೊಂಡಿದ್ದಾರೆ. ಇದರ ಬಗ್ಗೆ ತಾವೇ ಹೇಳಬೇಕಾಗಿತ್ತು. ನಾನು ಹೇಳುವುದೇನೆಂದರೆ, ಇದು ತಪ್ಪಾಗುತ್ತದೆ. ಈಗಾಗಲೇ ನಿವೃತ್ತಿಯನ್ನು ಹೊಂದಿದ್ದಾರೆ. ಅದರಲ್ಲಿ ಕೆಲವರಿಗೆ ಆಗಲೇ ನ್ಯಾಯಾಲಯವು ಕೊಟ್ಟಿದೆ. ಕೆಲವರು ಯಾರೂ nearing eighty years ಇದ್ದಾರೋ, ಅವರಿಗೆಲ್ಲಾ ಆಗಿದೆ. ಕೆಲವರಿಗೆ ಆಗಿಲ್ಲ. ಇದು ನ್ಯಾಯಾಲಯಕ್ಕೆ ಹೋದಾಗ, ನ್ಯಾಯಾಲಯವು ಏನು ಮಾಡಿದೆ ಎಂದರೆ, ಇದನ್ನು ಪರಿಗಣಿಸಬೇಕು. ಇದು ನ್ಯಾಯಬದ್ಧವಾಗಿ ಇದೆ, ಇವರಿಗೆ ಕೊಡಬೇಕೆನ್ನುವ ನಿರ್ದೇಶನವನ್ನು ನೀಡಿತು. ಹೋದ ಸರ್ಕಾರ ಅನಿವಾರ್ಯವಾಗಿ ಈ ವಿಧೇಯಕವನ್ನು ತಂದರು. ಇದಕ್ಕೆ ಒಂದು power ಇದೆ. ನ್ಯಾಯಾಲಯದಲ್ಲಿ ಈ power ವನ್ನು ಉಪಯೋಗ ಮಾಡಿಕೊಂಡರೆ, ಇದನ್ನು ಕಡಿಮೆ ಮಾಡಬಹುದು ಎಂದು ಇದೆ. ಇದಾದ ನಂತರ notional increment ಆದಾಗ ಈ ವಿಧೇಯಕವನ್ನು ಪಾಸ್ ಮಾಡುವುದಕ್ಕೆ ಅಧಿಕಾರ ಇಲ್ಲ, ಇದು ತಪ್ಪು ಇದೆ ಎನ್ನುವಂತಹ ಮಾತನ್ನು ನ್ಯಾಯಾಲಯವು ಹೇಳಿದೆ. ಈ ಹಿನ್ನಲೆಯಲ್ಲಿ ನಿವೃತ್ತಿಯನ್ನು ಹೊಂದಿದವರು ಬಹಳ ಕಡಿಮೆ. ಈ ರೀತಿ ಎಷ್ಟು ಜನ ಇರುತ್ತಾರೆ. ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ನಿವೃತ್ತಿ ವಯಸ್ಸು 60 ವರ್ಷ ಇದ್ದದ್ದನ್ನು, 62 ವರ್ಷ ಮಾಡಿದೆ, ಇನ್ನೆರಡು ವರ್ಷಗಳಲ್ಲಿ 64 ವರ್ಷ ಎಂದು ಮಾಡುತ್ತಾರೆ. ಈ cases ನಿಮಗೆ ಬಂದಿವೆ.

**(ಈ ಹಂತದಲ್ಲಿ ವೈಸ್‌ಛೇರ್ಮನ್‌ರವರಾದ ಶ್ರೀ ಕೆ.ಸಿ. ಕೊಂಡಯ್ಯನವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು.)**

ಯು.ಜಿ.ಸಿ., ಐ.ಸಿ.ಎ.ಆರ್., ಎ.ಐ.ಸಿ.ಟಿ.ಇ., ಇವೆಲ್ಲವೂ ಬಂದಿವೆ. They are eligible for the pension. ಕೊನೆಯ ದಿವಸ ಅವರು ನಿವೃತ್ತಿ ಆಗುವಾಗ ಏನು ಇದೆಯೋ, ಅದರ ಪ್ರಕಾರ ನಿವೃತ್ತಿ ವೇತನವನ್ನು ಕೊಡಬೇಕೆಂಬುದು ಇಡೀ ನಮ್ಮ ರಾಜ್ಯ ಹುಟ್ಟಿದಾಗಿನಿಂದ, ರಾಷ್ಟ್ರ ಹುಟ್ಟಿದಾಗಿನಿಂದ ಬಂದಿರುವಂತಹ ಪದ್ಧತಿ. ಇದಕ್ಕೆ ಮಾನ್ಯ ಸಚಿವರು ನಮಗೆ ದುಡ್ಡಿನ ತೊಂದರೆ ಇದೆ. ಈಗ ನಮ್ಮ ಅಧಿಕಾರ ಇದೆ ಎಂದು ಈ ವಿಧೇಯಕ ತಂದಿರುವುದು ಸರಿಯಾದುದಲ್ಲ. ನಾನು ಹೇಳುವುದೇನೆಂದರೆ, ದಯಮಾಡಿ ನಿವೃತ್ತಿಯನ್ನು ಹೊಂದಿರುವಂತಹ ಜನರಿಗೆ ಮಾನ್ಯ ಸಚಿವರಿಗೆ ಬಹಳ ಜನರು ತಮಗೆ ವೋಟ್‌ನ್ನು ಹಾಕಿರುವಂತಹವರು. ಈಗ ಇವರಿಗೆ ವೋಟ್ ಹಾಕಿ ತಪ್ಪು ಮಾಡಿದ್ದೇವೆ ಎಂದು ಬಂದು ಹೇಳುತ್ತಾರೆ. ಈಗ ಏನು ಮಾಡುವುದಕ್ಕೆ ಆಗುವುದಿಲ್ಲ. ಅವರು ಹೇಳುತ್ತಾರೆ. ತಾವು ನನ್ನ ಬಗ್ಗೆ ಮಾತನಾಡಬೇಡಿ. ದಯಮಾಡಿ, ನಾನು ಇನ್ನು 10 ಬಾರಿ ಹೇಳುತ್ತೇನೆ. ನಿವೃತ್ತಿ ಹೊಂದಿದವರು ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ಎಷ್ಟು ಮಂದಿ ಇದ್ದಾರೆ, ಇದಕ್ಕೆ ಸರ್ಕಾರದಿಂದ ಎಷ್ಟು ದುಡ್ಡು ಆಗುತ್ತದೆ, ಆನೆ ಹಾಗೆ ಹೋಗುತ್ತಿದೆ, ಬಾಲ ಅದರ ಹಿಂದಗಡೆ ಹೋಗುತ್ತಿದೆ. ಈ ಎಲ್ಲಾ ಪಾಪ . . . ನಿವೃತ್ತಿ ಹೊಂದಿದಂತಹ ಜನರು ಎಷ್ಟು ಜನ ಇದ್ದಾರೆ, ಅವರ ಪಾಪ ಮತ್ತು ಮರುಗವನ್ನು ತಾವು ಕಟ್ಟಿಕೊಳ್ಳಬೇಡಿ. ಅದಕ್ಕೆ ಈ ವಿಧೇಯಕವನ್ನು ತಾವು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು. ಇದಕ್ಕೆ ನ್ಯಾಯಾಲಯದಿಂದ ಏನು ಆದೇಶ ಬಂದಿದೆ. ನೀವು ಹೇಳುವುದು ಎಲ್ಲರಿಗೂ ಸಮಾನ ಇಲ್ಲ. ಏಕೆಂದರೆ, 1986, 2006 ಸ್ಕೇಲ್‌ಗಳು ಬದಲಾವಣೆಯಾಗುತ್ತಾ ಬಂದಿವೆ. ರಾಜ್ಯ ಸರ್ಕಾರ Pay Commission ಮಾಡುತ್ತಾ ಬಂದಿದೆ. ಶ್ರೀ ತುಕೋಲ್ ಆಯೋಗದವರು 1971 ರಲ್ಲಿ ಕೊಟ್ಟಿರುವ ಸ್ಕೇಲ್‌ನ್ನು ಈಗ ಕೊಡಿ ಎಂದರೆ ಹೇಗೆ ಆಗುತ್ತದೆ, ಆ ರೀತಿ ಆಗುವುದಿಲ್ಲ. ಶ್ರೀ ಗೋಪಾಲರೆಡ್ಡಿಯವರ ಸಮಿತಿಯಲ್ಲಿ ತೀರ್ಮಾನ ಮಾಡಿ ಆವತ್ತು ಕೊಟ್ಟರು. ಆವತ್ತಿನ ರೀತಿಯಲ್ಲಿ ಆಗುವುದಿಲ್ಲ. ಶ್ರೀ ಎಂ.ಬಿ.ಪ್ರಕಾಶ್‌ರವರು ಕೊಟ್ಟರು. ಈಗ ಏನು ಎಂದರೆ, ಇಡೀ ರಾಜ್ಯ ಸರ್ಕಾರದ ಎಲ್ಲಾ ಸರ್ಕಾರಿ ನೌಕರರುಗಳು ಎಂದರೆ, ಯಾರು ನೇಮಕಾತಿಯಾಗುತ್ತಾರೋ, ಆಗ ಇರುವಂತಹ ಸ್ಕೇಲ್ ನಿವೃತ್ತಿ ಹೊಂದುವಂತಹ ಸಮಯದಲ್ಲಿ ಇರುವುದಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಬದಲಾವಣೆ ಮಾಡುತ್ತದೆ. ಹೀಗಾಗಿ ಮಾನ್ಯ ಸಚಿವರೇ ನಿಮಗೆ ಭಾರ ಆಗುತ್ತದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ನಿವೃತ್ತಿಯನ್ನು ಹೊಂದಿದವರು ಎಷ್ಟು ಮಂದಿ ಇದ್ದಾರೆ, ತಮಗೆ ಆರ್ಥಿಕ ಭಾರ ಬರುತ್ತದೆ ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಿ. ತಾವು ಮಾಹಿತಿಯನ್ನು ಕೊಟ್ಟು, ಇದರ ಬಗ್ಗೆ ವಿವರಣೆಯನ್ನು ಕೊಟ್ಟರೆ ನಾವು ನಿಮಗೆ ಹೇಳುತ್ತೇವೆ. ದಯಮಾಡಿ, ಈ ವಿಧೇಯಕವನ್ನು ನಾವು ಪಾಸ್ ಮಾಡಿ ಕೊಡುವಂತಹ ಪ್ರಮೇಯವನ್ನು ಇಟ್ಟುಕೊಂಡಿಲ್ಲ. ನಿವೃತ್ತಿ ಹೊಂದಿದವರಿಗೆ ಅನ್ಯಾಯ ಮಾಡಬೇಡಿ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದರ ಬಗ್ಗೆ ನನಗೆ ಮಾಹಿತಿಯನ್ನು ಕೊಡಿ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020 ರನ್ನು ಮಾನ್ಯ ಉಪಮುಖ್ಯಮಂತ್ರಿಯವರು ಈ ಸದನಕ್ಕೆ ತಂದಿದ್ದಾರೆ. ಈ ವಿಧೇಯಕದ ಬಗ್ಗೆ ಈಗಾಗಲೇ ಹಿರಿಯ ಸದಸ್ಯರಾದ ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇದರ ಬಗ್ಗೆ ಉದಾಹರಣೆಯನ್ನು ಕೊಟ್ಟಿದ್ದಾರೆ. ಆಗ ನನ್ನ ಸ್ನೇಹಿತರು ಆ ಕಡೆ ಇದ್ದಾರೆ. ಅವರು ಆಗಲೇ ಎಷ್ಟು ಗಲಾಟೆ ಮಾಡಿದರು. ಈಗ ಏಕೆ ಸುಮ್ಮನೆ ಕುಳಿತುಕೊಂಡಿದ್ದಾರೆ ಎನ್ನುವ ಉದಾಹರಣೆಯನ್ನು ಸಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ. ಆದ್ದರಿಂದ, ಇದರ ಬಗ್ಗೆ ಹೆಚ್ಚು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದೇ nature ಇರುವಂತಹ ವಿಧೇಯಕವನ್ನು . . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಲಾಟೆ ಏಕೆ ಮಾಡುವುದು ಎಂದರೆ, ನಿವೃತ್ತಿ ಹೊಂದಿ 5 ರಿಂದ 8 ವರ್ಷಗಳು ಆಗಿವೆ. ಅವರು ವೋಟ್ ಹಾಕುವುದಿಲ್ಲ ಎಂಬುದು ಸಮಸ್ಯೆಯಾಗಿದೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಮಾನ್ಯ ಸಚಿವರ ಗಮನಕ್ಕೆ ಬರಬೇಕು. ಮಾನ್ಯ ಸಚಿವರೇ ತಾವು ಬರಲಿ ಎಂದು ನಾವು ಹಾಗೇ ನಿಂತಿದ್ದೇವೆ. ಮಾನ್ಯ ಸಚಿವರು ಈ ವಿಧೇಯಕವನ್ನು ತಾವು ಏನು ತಂದಿದ್ದೀರಿ? ನಿಜವಾಗಲೂ ಆ ಶಿಕ್ಷಕರಿಗೆ, ನಿವೃತ್ತಿಯಾದವರಿಗೆ, ಇದೇ nature ಇರುವಂತಹ ವಿಧೇಯಕವನ್ನು ಹಿಂದಿನ ಸರ್ಕಾರ ಎಂದರೆ, ನಮ್ಮ ಸರ್ಕಾರ ಸಹ ತೆಗೆದುಕೊಂಡು ಬಂದಿತ್ತು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದಲ್ಲಿ notional increment fitment ಬಗ್ಗೆ ಬಂದಾಗ ಆ ಪ್ರಕರಣವನ್ನು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯವು ಅವರ ಮನವಿಯನ್ನು ಅಲೋ ಮಾಡಿ ಪಿಟಿಷನ್ ಆಯಿತು. ಈ ಪಿಟಿಷನ್ ಆದ ಮೇಲೆ ಸರ್ಕಾರದಲ್ಲಿ financial burden ಆಗುತ್ತದೆ ಎಂಬ ಉದ್ದೇಶವನ್ನು ಇಟ್ಟುಕೊಂಡು ಒಂದು Ordinance ಅನ್ನು ಮಾನ್ಯ ಆರ್.ವಿ.ದೇಶಪಾಂಡೆಯವರು ಸಹ ತಂದಿದ್ದರು. ಇದನ್ನು ತಂದಾಗಲೂ ಕೂಡ ಇದರ ಬಗ್ಗೆ ಸವಾಲನ್ನು ಹಾಕಿದಾಗ ಉಚ್ಚ ನ್ಯಾಯಾಲಯವು struck down ಮಾಡುತ್ತದೆ. ಅದರ ವಿರುದ್ಧ ಎಸ್.ಎಲ್.ಪಿ., ಅನ್ನು ಸರ್ಕಾರ ಫೈಲ್ ಮಾಡಿದಾಗಲೂ ಕೂಡ ಆ ಪಿಟಿಷನ್ dismiss ಆಗಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆದರೆ ಈಗಾಗಲೇ ಅವರು entitle ನಲ್ಲಿ ಕಾನೂನು ಪ್ರಕಾರ ಇದ್ದಾರೆ, ಅದನ್ನು retrospectively effect ಮಾಡುವುದರಿಂದ, ಈ ಒಂದು ವಿಧೇಯಕ ಏನಿದೆಯಲ್ಲವೇ, ಈ ವಿಧೇಯಕದ ಬಗ್ಗೆ ನನಗೆ ಅನಿಸುವುದೇನೆಂದರೆ, ನಿವೃತ್ತಿಯಾಗಿರುವಂತಹ ಮತ್ತು ನಿವೃತ್ತಿಯಾಗುವಂತಹ ಶಿಕ್ಷಕರ ಮರಣ ಶಾಸನ ಬರೆಯುತ್ತದೆ ಎನ್ನುವಂತಹ ನನ್ನ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ದಯಮಾಡಿ ಈ ವಿಧೇಯಕ ಸರಿಯಾದುದಲ್ಲ. ಇದನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು. ಶಿಕ್ಷಕರಿಗೆ ದೊರೆಯುವಂತಹದ್ದನ್ನು ಈಗಾಗಲೇ ತೆಗೆದುಕೊಳ್ಳುತ್ತಿದ್ದಾರೆ. ಮುಂದೆ ತೆಗೆದುಕೊಳ್ಳುವಂತಹವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಬರುವವರೆಗೂ ಕೂಡ ಈ ಒಂದು ವಿಧೇಯಕ ತುಂಬಾ ತೊಂದರೆಯನ್ನು ನೀಡುತ್ತದೆ. ಹಣಕಾಸಿನಿಂದ ಅವರನ್ನು ಕೊಲೆ ಮಾಡಿದಂತಾಗುತ್ತದೆ. ಅವರು ದುಡಿದಿರುವಂತಹ ಸೇವೆಗೆ ಸಿಗುವಂತಹ ಒಂದು ನಿವೃತ್ತಿ ವೇತನವನ್ನು ಕಡಿತಗೊಳಿಸುವುದರಿಂದ ತೊಂದರೆಯಾಗುತ್ತದೆ. ಅದಕ್ಕೋಸ್ಕರ ಈ ವಿಧೇಯಕವನ್ನು ವಾಪಸ್ಸು ಪಡೆಯಬೇಕು ಎನ್ನುವ ಸಲ್ಲಿಕೆಯನ್ನು ಮಾಡುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಳುವ ಪಕ್ಷ ಬಿ.ಜೆ.ಪಿ., ಸರ್ಕಾರದಿಂದ ಈ ವಿಧೇಯಕವನ್ನು ನಿರೀಕ್ಷೆ ಮಾಡಿರಲಿಲ್ಲ. ಮಾನ್ಯ ಎಸ್.ವ್ಹಿ.ಸಂಕನೂರರವರು ಮತ್ತು ನಾವು ಹೋರಾಟಗಾರರು. ಮಾನ್ಯ ಎಸ್.ವ್ಹಿ.ಸಂಕನೂರರವರೇ ದಯಮಾಡಿ ಈ ಕಡೆಗೆ ಬನ್ನಿ. ಈ ಮಾತನ್ನು ಏಕೆ ಹೇಳುತ್ತೇನೆ ಎಂದರೆ, ಒಂದು ಕಾಲದಲ್ಲಿ ಭಾರತೀಯ ಜನತಾ ಪಕ್ಷಕ್ಕೆ ವಿಧಾನ ಪರಿಷತ್ತಿನಿಂದ ಅಸ್ತಿತ್ವ ಬಂದಿರುತ್ತದೆ. ಅದರಲ್ಲಿಯೂ ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದಿಂದ ಅಸ್ತಿತ್ವ ಬಂದಿರುತ್ತದೆ. ವಿಧಾನ ಸಭೆಯಲ್ಲಿ ಒಂದು, ಎರಡೂ ಕೂಡ ಇರುತ್ತಿರಲಿಲ್ಲ. ಅರ್ಥಾತ್ ಈ ಪಕ್ಷಕ್ಕೆ ಜನ್ಮ ಕೊಟ್ಟವರು ಶಿಕ್ಷಕರು ಮತ್ತು ಪದವೀಧರರು. ಅಂತಹ ಶಿಕ್ಷಕರು ಮತ್ತು ಪದವೀಧರರಿಗೆ ಮರಣ ಶಾಸನದ ರೀತಿಯಲ್ಲಿ ಈ ವಿಧೇಯಕವನ್ನು ಏಕೆ ತಂದಿದ್ದಾರೆ ಎಂದು ನಾನು ಚಿಂತೆಗೀಡಾಗಿದ್ದೇನೆ.

**ಡಾ:ಸಿ.ಎನ್. ಅಶ್ವಥನಾರಾಯಣ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ನಾನು ಮಾತನಾಡಿ ಮುಗಿಸುತ್ತೇನೆ. ನಾನು ತಮ್ಮ ಒಳ್ಳೆಯದಕ್ಕೆ ಮಾತನಾಡುತ್ತಿದ್ದೇನೆ. ನೀವು ವಿಧೇಯಕವನ್ನು ಪಾಸ್ ಮಾಡಿದರೆ ನಮಗೆ ಪ್ಲಸ್ ಆಗುತ್ತದೆ ಅಷ್ಟೆ. ನಾನು ಸತ್ಯ ಹೇಳುತ್ತೇನೆ. ನನ್ನ ಸ್ನೇಹಿತರಾದ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಮತ್ತು ನಾಲ್ಕು ಮನೆಗಳನ್ನು ಕಂಡ ಮಾನ್ಯ ಆಯನೂರು ಮಂಜುನಾಥ್‌ರವರು ಈ ಸದನದಲ್ಲಿ ಇದ್ದಾರೆ. ಸಂಘಟನೆಯಿಂದ ಬಂದಂತಹ ಮಾನ್ಯ ಅರುಣ ಶಹಾಪುರ್‌ರವರು ಸದನದಲ್ಲಿ ಇದ್ದಾರೆ. ನಮ್ಮೊಟ್ಟಿಗೆ ಹೋರಾಟದಿಂದ ಬಂದಿರುವಂತಹ ಮಾನ್ಯ ಎಸ್.ವ್ಹಿ.ಸಂಕನೂರ್‌ರವರು ಸದನದಲ್ಲಿ ಇದ್ದಾರೆ. 2006ನೇ ಸಾಲಿನ ನಂತರ ನಿವೃತ್ತಿ ವೇತನವನ್ನು ಕೊಡುವಂತಹ ವ್ಯವಸ್ಥೆ ಇರುವುದಿಲ್ಲ. ನಿವೃತ್ತಿ ವೇತನವನ್ನು ಕೊಡುವಂತಹ ಪದ್ಧತಿಯೇ ನಿಂತು ಹೋಗಿದೆ. 2006ನೇ ಸಾಲಿಗಿಂತ ಮುಂಚೆ ಇರುವವರಿಗೆ ಮಾತ್ರ ನಿವೃತ್ತಿ ವೇತನವನ್ನು ಕೊಡುತ್ತಾರೆ. ಈ ನಿವೃತ್ತಿ ವೇತನವನ್ನು ಕೊಡುವ ವಿಚಾರದಲ್ಲಿ ಉಚ್ಚ ನ್ಯಾಯಾಲಯವು ನಿರ್ದೇಶನವನ್ನು ಕೊಟ್ಟಿದೆ. ಜೀವನ ನಿರ್ವಹಣೆಗಾಗಿ ನಿವೃತ್ತಿ ವೇತನ ಮತ್ತು ಸಂಬಳವನ್ನು ಕೊಡುತ್ತೇವೆ. ಈಗ ಜೀವನ ನಿರ್ವಹಣೆ ದುಬಾರಿಯಾದಾಗ ನಿವೃತ್ತಿ ವೇತನವು ಹೆಚ್ಚಾಗುತ್ತದೆ. According to the UGC guidelines, ಈಗ ನಿವೃತ್ತಿ ವೇತನವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯು.ಜಿ.ಸಿ. ಪ್ರಕಾರ ಕೊಡುತ್ತಿದ್ದಾರೆ. 2006ನೇ ಸಾಲಿನ ಮುಂಚೆ ಮತ್ತು 2006ನೇ ಸಾಲಿನ ನಂತರ ಒಂದು ರೀತಿಯಲ್ಲಿ ನಿವೃತ್ತಿ ವೇತನವನ್ನು ಕೊಡುತ್ತೇವೆಂದರೆ, ಮಾರ್ಕೆಟ್‌ಗೆ ಹೋದರೆ ತರಕಾರಿ ಬೆಲೆ ಇವನಿಗೊಂದು ರೀತಿ, ಅವನಿಗೊಂದು ರೀತಿಯಲ್ಲಿ ಇರುತ್ತದೆಯೇ, ಅಕ್ಕಿ ಬೆಲೆ ಇವನಿಗೊಂದು ರೀತಿ, ಅವನಿಗೊಂದು ರೀತಿಯಲ್ಲಿ ಇರುತ್ತದೆಯೇ. ಬದುಕಿನ ವೆಚ್ಚ ಮತ್ತು ನಿರ್ವಹಣಾ ವೆಚ್ಚ ಇಬ್ಬರಿಗೂ ಒಂದೇ ಇರುತ್ತದೆ. ಹಾಗಾಗಿ ತಾರತಮ್ಯ ಮಾಡುವುದು ಸರಿಯಲ್ಲ. ಇದು ಯಾವ ಕಾರಣಕ್ಕೂ ಆಗಬಾರದು. ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ಈ ಜೊತೆಯಲ್ಲಿ ಏನಾಗಿದೆ ಎಂದರೆ, ಇದರ ಬಗ್ಗೆ ಉಚ್ಚ ನ್ಯಾಯಾಲಯವು ಸೂಚನೆ ಕೊಟ್ಟಿದೆ. ನಾವು ಮತ್ತು ನೀವೆಲ್ಲಾ ಹೋರಾಟ ಮಾಡಿದ್ದೇವೆ. ಈಗ notional increment ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಸೇವೆಗೆ ಸೇರಿದ ದಿನಾಂಕವನ್ನು ಒಪ್ಪಿಕೊಳ್ಳಿ ಎಂದು ಹೇಳಿದರು. ಇದಕ್ಕೆ ಸರ್ಕಾರ ಒಪ್ಪಲಿಲ್ಲ. ಇದರ ಬಗ್ಗೆ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯ ಒಪ್ಪಿಕೊಂಡಿತು. ಇಲ್ಲಿಗೆ ಬಂದಾಗ ಮಾನ್ಯ ಆರ್.ವಿ.ದೇಶಪಾಂಡೆಯವರು ವಿಧೇಯಕವನ್ನು ತಂದರು. 10 ಸಂಘಟನೆಯವರು ಸೇರಿ ದೊಡ್ಡ ಹೋರಾಟವನ್ನೇ ಮಾಡಿದ್ದೆವು. ಮಾನ್ಯ ಡಿ.ವಿ.ಸದಾನಂದಗೌಡರವರು ನಮ್ಮ ಪರ ವಿರೋಧ ಪಕ್ಷದಲ್ಲಿ ನಿಂತುಕೊಂಡು ಹೋರಾಟ ಮಾಡಿದರು. ಇದಕ್ಕೆ ಮಾನ್ಯ ಡಿ.ಎಚ್.ಶಂಕರಮೂರ್ತಿಯವರು ಸಭೆಯನ್ನು ಸೇರಿಸಿದರು. ಕಡೆಗೆ ಒಂದು via media ದಲ್ಲಿ ತೀರ್ಮಾನವಾಯಿತು. ಅದರಂತೆ arrears ಮೊತ್ತವನ್ನು ಕೇಳಬೇಡಿ. Fitment ಅನ್ನು ಕೊಡುತ್ತೇವೆ. 200 ರಿಂದ 300 ಕೋಟಿ ರೂಪಾಯಿಗಳು ಆಗಲಿ ಎಂದು ಹೇಳಿದರು. ಅವರು ಆಯಿತು ಎನ್ನುವ ಷರತ್ತಿನ ಮೇಲೆ ಎಲ್ಲರೂ ವಿಧೇಯಕಕ್ಕೆ ಒಪ್ಪಿಗೆಯನ್ನು ಕೊಟ್ಟುಬಿಟ್ಟೆವು. ಇದು ಇನ್ನು ಜಾರಿ ಆಗಲೇ ಇಲ್ಲ. ಅದರ ಮೇಲೆ ನೀವು ವಿಧೇಯಕವನ್ನು ಮಾಡಿದ್ದೀರಲ್ಲವೇ, ಈ ವಿಧೇಯಕವನ್ನು ಉಚ್ಚ ನ್ಯಾಯಾಲಯವು ಒಪ್ಪಿಕೊಂಡಿತೆ?

**(597) 19/03/2020/5:10/ಎಸ್‌ಪಿಆರ್/ಎಂಡಿ**

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ರಾಜ್ಯದ ಉಚ್ಚ ನ್ಯಾಯಾಲಯವು ವಿಧೇಯಕವನ್ನು ರದ್ದುಗೊಳಿಸಿತು. ಅದೇ ಸ್ಥಿತಿ ಈ ವಿಧೇಯಕಕ್ಕೂ ಬರುತ್ತದೆ. ಉಪ ಮುಖ್ಯಮಂತ್ರಿಗಳು ಏಕೆ ಗಾಬರಿಯಾಗಬೇಕೆಂದರೆ, ಅವರು ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ರಾಜ್ಯದ ಮುಖ್ಯಮಂತ್ರಿಗಳ ನಂತರದ ಸ್ಥಾನದಲ್ಲಿದ್ದಾರೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದ ಶಿಕ್ಷಕ ವಲಯಕ್ಕೆ ಯಾವ ರೀತಿಯಾದ ಸಂದೇಶವನ್ನು ಕೊಡುತ್ತಾರೆ ಎನ್ನುವುದನ್ನು ಉಪ ಮುಖ್ಯಮಂತ್ರಿಗಳು ಗಂಭೀರವಾಗಿ ಯೋಚನೆ ಮಾಡಬೇಕು. ಒಂದು ವೇಳೆ ಪ್ರಸ್ತುತ ವಿಧೇಯಕವನ್ನು ಅನುಮೋದಿಸಿದರೂ ಅದು ಉಳಿಯುವುದಿಲ್ಲ. ಈ ವಿಚಾರದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಒಂದು ಬಾರಿ ತೀರ್ಮಾನವಾದರೆ, ಆ ನಂತರದಲ್ಲಿ ಸರ್ಕಾರವು ಕಾಯ್ದೆಯನ್ನು ಮಾಡುವುದಕ್ಕೆ ಹೊರಟರೆ ಅದನ್ನು ನ್ಯಾಯಾಲಯವು ಒಪ್ಪುವುದಿಲ್ಲ. ಈಗಾಗಲೇ Notional Increment ರುಜುವಾತಾಗಿವೆ. ಈಗ ಹಳೆಯ ಪಿಂಚಣಿ ಪದ್ಧತಿಯು ಸ್ಥಗಿತಗೊಂಡು, ನೂತನ ಪಿಂಚಣಿ ಯೋಜನೆಯು ಜಾರಿಗೆ ಬಂದಿರುವುದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಗಾಬರಿಯಾಗುವ ಅವಶ್ಯಕತೆ ಇಲ್ಲ. ಅಂದರೆ ಶಿಕ್ಷಕರಿಗೆ ನಿವೃತ್ತಿ ವೇತನ ಕೊಡುವ ಪದ್ಧತಿಯು ಇಲ್ಲ. ಈಗ ನಿವೃತ್ತರಾದವರೆಲ್ಲರೂ 2006 ನೇ ವರ್ಷಕ್ಕಿಂತ ಮುಂಚೆ ಸೇವೆಗೆ ಸೇರಿದವರಾಗಿದ್ದಾರೆ ಹಾಗೂ ಈಗ ಅವರುಗಳಿಗೆ 74-75 ವರ್ಷಗಳಾಗಿವೆ. ಇನ್ನು ಎಷ್ಟು ವರ್ಷ ಅವರು ಬದುಕಿರುತ್ತಾರೆ? ಹಲವು ವರ್ಷಗಳ ನಂತರ ಅವರುಗಳು ಈ ಭೂಮಿಯ ಮೇಲೇ ಇರುವುದಿಲ್ಲ. ಈ ಸತ್ಯ ಸಂಗತಿಯನ್ನು ಉಪ ಮುಖ್ಯಮಂತ್ರಿಗಳು ತಿಳಿದುಕೊಳ್ಳಬೇಕು. ಪಿಂಚಣಿದಾರರ ಸಂಖ್ಯೆ ಕಡಿಮೆ ಇದೆ. ಅವರುಗಳು ಬಹಳ ಬೇಗನೇ ಬದುಕಿನಿಂದಲೂ ಸಹ ನಿವೃತ್ತರಾಗುತ್ತಾರೆ. ಜೀವನದ ಕಡೆಯ ಅಥವಾ ಸಾವಿನ ಅಂಚಿನಲ್ಲಿರುವ ಶಿಕ್ಷಕರುಗಳಿಗೆ ನಾವೇಕೆ ಅನ್ಯಾಯ ಮಾಡಬೇಕು? We are giving. ವಯಸ್ಸಾದವರು ಅಥವಾ ನಿವೃತ್ತ ಶಿಕ್ಷಕರು ಮನೆಯಲ್ಲಿದ್ದರೆ ಅವರನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಾರೆ ಅಂದರೆ ಸ್ನಾನ ಮಾಡಿಸುವುದು, ಬಟ್ಟೆ ತೊಡಿಸುವುದು, ಊಟ-ತಿಂಡಿಗಳನ್ನು ನೀಡುವುದು, ಕೋಲು ನೀಡಿ ಬ್ಯಾಂಕಿಗೆ ಕರೆದುಕೊಂಡು ಹೋಗಿ ಪಿಂಚಣಿಯನ್ನು ಪಡೆಯುತ್ತಾರೆ. ಪಿಂಚಣಿ ಬರುವ ಬಹಳ ನಿವೃತ್ತರಾದವರನ್ನು ಮನೆಯವರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಇಂತಹವರು ಇನ್ನೂ ಆರು ತಿಂಗಳುಗಳ ಕಾಲ ಹೆಚ್ಚಾಗಿ ಬದುಕಲಿ ಎಂದು ಹಾರೈಸುತ್ತಾರೆ. ಅಂತಹ ಹಿರಿಯ ವಯಸ್ಸಿನಲ್ಲಿರುವವರಿಗೆ ನಿವೃತ್ತಿ ವೇತನದ ವಿಚಾರದಲ್ಲಿ ಸರ್ಕಾರ ಸರ್ವಥಾ ಅನ್ಯಾಯ ಮಾಡಕೂಡದು ಅದರಲ್ಲಿಯೂ ಸಹ ಬಿ.ಜೆ.ಪಿ. ಪಕ್ಷವು ಅಧಿಕಾರದಲ್ಲಿದ್ದಾಗ ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬಾರದು. ಇಂತಹ ವಿಧೇಯಕವನ್ನು ಕಾನೂನು ಸಹ ಒಪ್ಪುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಮತ್ತು ಇತ್ತೀಚಿನ ದಿನಗಳಲ್ಲಿ ಹಳೆಯ ಪಿಂಚಣಿ ಪದ್ಧತಿಯು ಜಾರಿಯಲ್ಲಿಲ್ಲ. ಈ ಸಂಗತಿಯು ಅಧಿಕಾರಿಗಳಿಗೆ ಅರ್ಥವಾಗಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಈಗ ಹೊಸ ಪಿಂಚಣಿ ಪದ್ಧತಿಯು ಜಾರಿಯಲ್ಲಿರುವುದರಿಂದ ಸರ್ಕಾರ ಗಾಬರಿಯಾಗುವ ಅವಶ್ಯಕತೆ ಇಲ್ಲ. ಮಾನ್ಯ ಎಸ್.ವ್ಹಿ.ಸಂಕನೂರರವರು ಈ ವಿಷಯವನ್ನು ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ಇಲ್ಲವೆಂದಾದರೆ ನಾವು ಜನಕ್ಕೆ ಯಾವ ರೀತಿಯ ಉತ್ತರವನ್ನು ಕೊಡಬೇಕು? ನಾನು ಪ್ರೀತಿಯಿಂದ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗೌರವ ಹಾಗೂ ವಿನಮ್ರಪೂರ್ವಕವಾಗಿ ಸರ್ಕಾರವನ್ನು ಪ್ರಸ್ತುತ ವಿಧೇಯಕವನ್ನು ಹಿಂಪಡೆಯುವಂತೆ ವಿನಂತಿ ಮಾಡಿಕೊಳ್ಳುತ್ತೇನೆ. ಹೀಗೆ ಮಾಡುವುದರಿಂದ ಎಲ್ಲರ ಮರ್ಯಾದೆಯು ಉಳಿಯುತ್ತದೆ ಹಾಗೂ ನಿವೃತ್ತಿಯ ಅಂಚಿನಲ್ಲಿರುವವರು ಸಮಾಧಾನದಿಂದ ಜೀವನ ಸಾಗಿಸುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಅಧಿಕಾರಿಗಳು ಮಾನ್ಯ ಮಂತ್ರಿಗಳಿಗೆ ಯಾವ ರೀತಿಯಾಗಿ ಮಾರ್ಗದರ್ಶನ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಈ ಹಿಂದೆ ಆಡಳಿತ ಪಕ್ಷದ ಸದಸ್ಯರು ಯಾವ ರೀತಿಯ ಸ್ಫೂರ್ತಿಯನ್ನು ತೋರಿಸಿದ್ದರೋ in the interest of the teachers, ಅದೇ ಸ್ಫೂರ್ತಿಯನ್ನು ಆಡಳಿತ ಹಾಗೂ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಪುನಃ ತೋರಿಸಬೇಕು. ಬಹಳ ವರ್ಷಗಳವರೆಗೆ ಸೇವೆ ಮಾಡಿದ ಶಿಕ್ಷಕರುಗಳಿಗೆ ನಾವು ಕೊಡುವ... It is a matter of right. After 2006 there is only NPS (New Pension Scheme) ಅಧಿಕಾರಿಗಳಿಗೆ ಹಾಗೂ ನಮಗೆ ಪಿಂಚಣಿ ದೊರೆಯುವುದಿಲ್ಲವೇ? How to lead their life after retirement? ನಿವೃತ್ತಿಯ ನಂತರವೇ ಅವರಿಗೆ ಶೇಕಡ ನೂರರಷ್ಟು ಪಿಂಚಣಿಯ ಅವಶ್ಯಕತೆ ಇದೆ. ನಿವೃತ್ತಿಯ ನಂತರ ಪಡೆಯುವ ಔಷಧೋಪಚಾರ ಹಾಗೂ ಇನ್ನಿತರೆ ಖರ್ಚುಗಳಿಗಾಗಿ ಪಿಂಚಣಿಯ ಅವಶ್ಯಕತೆ ಇದೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಪ್ರಸ್ತಾಪಿಸಿದಂತೆ, ನಿವೃತ್ತ ಶಿಕ್ಷಕರಿಗೆ ಪಿಂಚಣಿ ದೊರೆಯುತ್ತದೆ ಎನ್ನುವ ಕಾರಣಕ್ಕಾಗಿ ಅವರ ಸೊಸೆ ಅವರಿಗೆ ಒಳ್ಳೆಯ ಅಡಿಗೆ ಮಾಡಿ ಊಟಕ್ಕೆ ಹಾಕುತ್ತಾರೆ ಮತ್ತು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಈ ಸಂಗತಿಯನ್ನು ಉಪಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ವೃದ್ಧಾಪ್ಯ ಕಾಲದಲ್ಲಿ ಅಥವಾ ಜೀವನದ ಅಂತ್ಯ ಕಾಲದಲ್ಲಿ ಇರುವ ನಿವೃತ್ತ ಶಿಕ್ಷಕರಿಗೆ ಸರ್ಕಾರವು ಈ ರೀತಿಯ ಶಿಕ್ಷೆಯನ್ನು ಕೊಡುವುದಕ್ಕೆ ಹೊರಟಿದೆ. ಇದನ್ನು ದೇವರೂ ಸಹ ಕ್ಷಮಿಸುವುದಿಲ್ಲ. ಶಾಸಕರಾದ ನಮಗೆ ಐದಾರು ವರ್ಷಗಳು ಕಳೆದ ಮೇಲೆ ನಾನು ಬದುಕಿರುವವರೆಗೆ ನನಗೆ ಪಿಂಚಣಿ ದೊರೆಯುತ್ತದೆ. ನಾನು ಸತ್ತ ನಂತರ ನನ್ನ ಪತ್ನಿಗೂ ಸಹ ಪಿಂಚಣಿ ದೊರೆಯುತ್ತದೆ. When we tell that, we need pension, ನಿವೃತ್ತ ಶಿಕ್ಷಕರಿಗೂ ಸಹ ಪಿಂಚಣಿಯ ಅವಶ್ಯಕತೆ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನದ ಬಗ್ಗೆ ನಾವು ಕಳೆದ ಏಳು ದಿವಸಗಳಿಂದ ಮಾತನಾಡಿದ್ದೇವೆ. ಆದ್ದರಿಂದ ನಿವೃತ್ತ ಶಿಕ್ಷಕರು ಪಿಂಚಣಿ ಪಡೆಯುವ rights curtail ಮಾಡುವುದಕ್ಕೆ ನಮಗೆ ಯಾವ ಹಕ್ಕುಗಳೂ ಇಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಗಮನ ಹರಿಸಿ, ಈ ರೀತಿಯ ವಿಧೇಯಕಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತೆಗೆದುಕೊಂಡು ಬರಬಾರದು ಎಂದು ಅಧಿಕಾರಿಗಳಿಗೆ ತಿಳಿಸಿ ಹೇಳಬೇಕು. ಈ ವಿಧೇಯಕವನ್ನು ಸರ್ಕಾರ ಹಿಂಪಡೆಯುವುದರಿಂದ ಎರಡು ರೀತಿಯ ಲಾಭಗಳಿವೆ. ನಿವೃತ್ತ ಶಿಕ್ಷಕರಿಗೆ ಪಿಂಚಣಿಯನ್ನು ನೀಡಿದರೆ, ಅವರು ಸರ್ಕಾರ ತಮ್ಮನ್ನು ನೋಡಿಕೊಂಡಿದೆ ಎಂದು ಭಾವಿಸಿ, ಸರ್ಕಾರದ ಪರವಾಗಿರುತ್ತಾರೆ. ಅದೇ ರೀತಿಯಾಗಿ ನಾವು ವಿರೋಧ ಪಕ್ಷದ ಸದಸ್ಯರು ಹೋರಾಟ ಮಾಡಿ ನಿವೃತ್ತ ಶಿಕ್ಷಕರಿಗೆ ಪಿಂಚಣಿಯನ್ನು ಕೊಡಿಸಿದ್ದೇವೆ ಎಂದು ಹೇಳುತ್ತೇವೆ. ನಿವೃತ್ತ ಶಿಕ್ಷಕರಿಗೆ ಪಿಂಚಣಿಯನ್ನು ನೀಡದಿದ್ದರೆ ಸರ್ಕಾರವು ನೂರಕ್ಕೆ ನೂರರಷ್ಟು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತದೆ. ಸರ್ಕಾರವು ಈ ವಿಧೇಯಕವನ್ನು ಪರಿಶೀಲಿಸಬೇಕೆಂದು ನಾನು ಕೋರುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಜಾರಿಯಲ್ಲಿದ್ದ ಪಿಂಚಣಿ ವ್ಯವಸ್ಥೆಯು ಇವತ್ತಿನ ದಿವಸ ಜಾರಿಯಲ್ಲಿಲ್ಲ. ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಎಸ್.ಎಲ್.ಭೋಜೇಗೌಡ ಮತ್ತು ಶ್ರೀ ಶರಣಪ್ಪ ಮಟ್ಟೂರ ರವರುಗಳು ಪ್ರಸ್ತುತ ವಿಧೇಯಕದ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಒಬ್ಬ ಶಿಕ್ಷಕ, ಪ್ರಾಧ್ಯಾಪಕ ಅಥವಾ ಡಿ ವರ್ಗದ ನೌಕರ ಯಾರೇ ಇರಬಹುದು; ಅವರುಗಳೆಲ್ಲಾ ನೇಮಕಾತಿ ಆದೇಶ ಪಡೆದ ದಿನವೇ ನಿವೃತ್ತಿಯ ನಂತರ ಎಲ್ಲಾ ಸವಲತ್ತುಗಳು ಪಡೆಯಲು ಅರ್ಹರಾಗಿರುತ್ತಾರೆ. ನೇಮಕಾತಿಯ ನಂತರ ವೇತನ ಮತ್ತು ಪಿಂಚಣಿ ಪಡೆಯಲು ಅರ್ಹರಾಗಿದ್ದು, ಎಲ್ಲವನ್ನೂ ನೇಮಕಾತಿ ಆದೇಶದಲ್ಲಿ ತಿಳಿಸಲಾಗಿರುತ್ತದೆ. ಈ ರೀತಿಯಾಗಿ ನೇಮಕಗೊಂಡು, *UGC (University Grants Commission*) and *AICTE (All India Council for Technical Education*) ವೇತನ ಶ್ರೇಣಿಗಳನ್ನು ಪಡೆದ ಶಿಕ್ಷಕರಿಗೆ ಈಗ ನಿವೃತ್ತಿಯ ನಂತರ ಪಿಂಚಣಿ ಕೊಡುವುದಕ್ಕಾಗುವುದಿಲ್ಲ ಎಂದು ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ. ನಿಯಮಾವಳಿಗಳ ಪ್ರಕಾರ ಪಿಂಚಣಿ ನೀಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದ್ದಾಗಲೂ ಸಹ ನ್ಯಾಯಾಲಯವು ಆ ರೀತಿಯಾದ ತೀರ್ಪನ್ನು ಏಕೆ ಕೊಡುತ್ತದೆ?

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಗಳು ಮಾನ್ಯ ಸದಸ್ಯರು ಹೇಳುವುದನ್ನು ಕೇಳುತ್ತಿದ್ದಾರೆ. ಮಾನ್ಯ ಸದಸ್ಯರು ಮಾತನಾಡಲು ಪ್ರಾರಂಭ ಮಾಡಿದರೆ ಎಲ್ಲರೂ ಸುಮ್ಮನಾಗಿಬಿಡಬೇಕೇ?

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ವ್ಹಿ.ಸಂಕನೂರರವರೇ, ಉಪ ಮುಖ್ಯಮಂತ್ರಿಗಳು ಬಹಳ ಸಮರ್ಥರು ಹಾಗೂ ಬುದ್ಧಿವಂತರಿದ್ದಾರೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರದ ಎಲ್ಲಾ ಪ್ರತಿನಿಧಿಗಳ ಸಭೆ ಕರೆಯಬೇಕು. ಅದರಲ್ಲಿ ಆರ್ಥಿಕ ಇಲಾಖೆಯವರೂ ಸಹ ಇರಬೇಕು. ನಾವುಗಳು ಮಾತುಕತೆ ನಡೆಸಿ, ಆರ್ಥಿಕ ಇಲಾಖೆಯವರನ್ನು convince ಮಾಡೋಣ ಅಥವಾ ಅವರು ನಮ್ಮನ್ನು convince ಮಾಡಲಿ. ನಾಳೆಯ ಬೆಳಿಗ್ಗೆ ಸಭೆಯನ್ನು ಮಾಡಲಿ. ಅದರಲ್ಲಿ ಅಂತಿಮ ತೀರ್ಮಾನವನ್ನು ತೆಗೆದುಕೊಂಡರೆ ಒಳ್ಳೆಯದಾಗುತ್ತದೆ ಎನ್ನುವ ಸಲಹೆಯನ್ನು ನಾನು ಕೊಡಲಿಚ್ಛಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಸರ್ಕಾರ ಹಿಂಪಡೆಯಬೇಕು. ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವವರು ನಿವೃತ್ತ ಶಿಕ್ಷಕರ ಪರವಾಗಿರಬೇಕು. ಶಿಕ್ಷಕ ಕ್ಷೇತ್ರದ ಜನಪ್ರತಿನಿಧಿಗಳು (ಶ್ರೀ ಅರುಣ ಶಹಾಪುರ) ಈ ಹಿಂದೆ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಾಗ ಮೇಲ್ಛಾವಣಿ ಹಾರಿ ಹೋಗುವ ರೀತಿಯಲ್ಲಿ ಮಾತನಾಡಿದರು. ಆಗ ನಾವು ಆಡಳಿತ ಪಕ್ಷದ ಸ್ಥಾನದಲ್ಲಿದ್ದೆವು. ಈ ದೇಶದಲ್ಲಿ ಪ್ರಜಾಪ್ರಭುತ್ವ ಕ್ಷೀಣಿಸುತ್ತಿದೆ ಎಂದು ನಾನು ಈ ದಿನ ಪೂರ್ವಾಹ್ನ ಹೇಳಿದ್ದೆನು. ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಒಂದು ರೀತಿಯಾಗಿ ಮತ್ತು ಆಡಳಿತ ಪಕ್ಷದ ಸ್ಥಾನದಲ್ಲಿದ್ದಾಗ ಮತ್ತೊಂದು ರೀತಿಯಾಗಿ ಮಾತನಾಡುತ್ತಾರೆ. ನಾನು 'ಗೋಸುಂಬೆ'ಯನ್ನು ಉದಾಹರಣೆಯಾಗಿಟ್ಟುಕೊಂಡು ಹೇಳಿದ್ದೇನೆ. ಗೋಸುಂಬೆಯು ಒಂದು ರೀತಿಯ ಚಮೇಲಿಯಾಗಿದ್ದು ಒಂದು ನಿಮಿಷಕ್ಕೆ ಏಳು ರೀತಿಯ ಬಣ್ಣಗಳನ್ನು ಬದಲಾಯಿಸುತ್ತಿರುತ್ತದೆ. ಆ ರೀತಿಯಾಗಿ ಆಗಬಾರದು. ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಒಂದು ರೀತಿಯಾಗಿ ಮತ್ತು ಆಡಳಿತ ಪಕ್ಷದ ಸ್ಥಾನದಲ್ಲಿದ್ದಾಗ ಮತ್ತೊಂದು ರೀತಿಯಾಗಿ ಮಾತನಾಡಬಾರದು.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಆ ರೀತಿಯಾಗಿ ಮಾಡುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತೆಗೆದುಕೊಳ್ಳುವ ನಿಲುವು ಅಚಲವಾಗಿರಬೇಕು. ಸರ್ಕಾರಿ ಈ ರೀತಿಯಾಗಿ ಮಾಡಿದರೆ, ಅವರಿಗೆ ಎಲ್ಲಿಯೂ ಸಹ ಗೌರವ ಸಿಗುವುದಿಲ್ಲ. ಅವರ ಮಾನ, ಮರ್ಯಾದೆಗಳು ಕಾರಿಗೆ ಪಂಚರ್ ಹಾಕಿದ ರೀತಿಯಂತಾಗುತ್ತದೆ. ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಪ್ರಸ್ತಾಪಿಸಿರುವ ವಿಧೇಯಕವನ್ನು ಹಿಂಪಡೆಯಬೇಕು. ಶಿಕ್ಷಕರ ನಿವೃತ್ತಿ ಜೀವನವು ಒಂದು ವರವಾಗಿರಬೇಕೇ ವಿನಃ ಶಾಪವಾಗಬಾರದು. ಈ ವಿಧೇಯಕವನ್ನು ಅನುಮೋದಿಸುವುದರಿಂದ ಸರ್ಕಾರವು ನಿವೃತ್ತ ಶಕ್ಷಕರ ಶಾಪಕ್ಕೆ ಗುರಿಯಾಗುತ್ತದೆ. ಆ ರೀತಿಯ ಪಾಪದಿಂದಾಗಿ ಸರ್ಕಾರವು ಉದ್ಧಾರವಾಗುವುದಿಲ್ಲ. ನಿವೃತ್ತ ಶಿಕ್ಷಕರ ಪಾಪ ತಟ್ಟಿತೆಂದರೆ ಸರ್ಕಾರದ ಕಥೆಯು ಮುಗಿದು ಹೋಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮೊದಲು ನಾನು ಮಾತನಾಡುತ್ತೇನೆ. ಆಮೇಲೆ ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ನಾವು ಹೋರಾಟ ಮಾಡುವುದನ್ನು ಗುರ್ತಿಸಿ, ಬಹಳ ಖುಷಿಯಿಂದ ಒಂದು ಸಂಗತಿಯನ್ನು ಹೇಳಿದ್ದಾರೆ. ಇದರಲ್ಲಿ ಎರಡು ಮಾತಿಲ್ಲ. ಅವರುಗಳೆಲ್ಲರ ಅಭಿಪ್ರಾಯಗಳಿಗೆ ನಾವು ಮಣಿದು, ಆರ್ಥಿಕ ಇಲಾಖೆಯವರೊಂದಿಗೆ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಈ ವಿಚಾರದಲ್ಲಿ ಪರಿಹಾರವನ್ನು ಕಂಡುಹಿಡಿಯುವ ವಿನಂತಿಯನ್ನು ನಾವು ಮಾಡಿಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಯಾವಾಗಲೂ 'ನುಡಿದಂತೆ ನಡೆಯಬೇಕು' ಎಂದು ಜೋರಾಗಿ ಹೇಳುತ್ತಿರುತ್ತಾರೆ. ಆ ರೀತಿಯಾಗಿ ಮಾತನಾಡುವುದಕ್ಕೆ ನನಗೆ ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಖಂಡಿತವಾಗಿಯೂ ಸಹ ನಮ್ಮ ಹಿರಿಯರಾಗಿದ್ದಾರೆ. ಅವರು ತೋರಿಸಿರುವ ಮಾರ್ಗದರ್ಶನದಲ್ಲಿ ನಾವು ನಡೆಯುತ್ತೇವೆ ಎನ್ನುವ ವಿಶ್ವಾಸವನ್ನು ಅವರು ಇಟ್ಟುಕೊಳ್ಳಲಿ. ಅವರು ನಮಗೆ ಒಳ್ಳೆಯ ಮಾರ್ಗವನ್ನು ತೋರಿಸಿದ್ದಾರೆ. ಹಲವಾರು ವಿಷಯಗಳಲ್ಲಿ ಅವರೇ ನಮ್ಮ ಮಾರ್ಗದರ್ಶಕರಾಗಿದ್ದಾರೆ. ಒಂದು ನಿಮಿಷ ... ನಾನು ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರೇ, ನಿಮಗೆ ಮಾತನಾಡಲು ಅವಕಾಶವಿದೆ. ಆಗ ನೀವು ಮಾತನಾಡಿ.

**(598)/19–3–2020/5–20/ಎಲ್‌ಎಂ/ಎಂಡಿ**

**ಶ್ರೀ ಮರಿತಿಬ್ಬೇಗೌಡ** (ಮುಂದು):

ಮಾನ್ಯ ಸಭಾಪತಿಗಳೆ, ರಾಜ್ಯ ಉಚ್ಚ ನ್ಯಾಯಾಲಯ ಕೊಡಬೇಕು ಎಂದು ಈಗಾಗಲೆ ತೀರ್ಪು ಕೊಟ್ಟಿದೆ. ನಮ್ಮ ರಾಜ್ಯದಲ್ಲಿ ಪಿಂಚಣಿಯನ್ನು ನಿಗದಿಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದ್ದರೂ ಸಹಿತ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಅಶ್ವಥನಾರಾಯಣ ಸಿ.ಎನ್.(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರೆಲ್ಲರೂ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಪದವೀಧರರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವಂತಹ ಎಲ್ಲ ವಿಧಾನ ಪರಿಷತ್ತಿನ ಸದಸ್ಯರ ಜೊತೆಯಲ್ಲಿ ನಾಳೆ ಬೆಳಗ್ಗೆ ಒಂದು ಸಭೆಯನ್ನು ಕರೆದು, ಅವರ ಜೊತೆಯಲ್ಲಿ ಈ ಎಲ್ಲ ವಿಚಾರಗಳನ್ನು ಹಂಚಿಕೊಳ್ಳಲು ಇಚ್ಛೆಪಡುತ್ತೇನೆ. ಅವರಿಂದ ಸಲಹೆಗಳನ್ನು ಪಡೆದು ಈ ವಿಧೇಯಕವನ್ನು ಯಾವ ರೀತಿ ತರಬಹುದು ಎನ್ನುವುದನ್ನು ನಿರ್ಣಯ ಮಾಡುತ್ತೇನೆ. ಅದಕ್ಕೆ ಎಲ್ಲ ಸದಸ್ಯರು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾಳೆ ಬೆಳಗ್ಗೆಯೇ ಸಭೆಯನ್ನು ಕರೆಯುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಹಾಗಿದ್ದರೆ ವಿಧೇಯಕವನ್ನು ಪೆಂಡಿಂಗ್ ಇಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ವಿಧೇಯಕವನ್ನು ವಾಪಸ್ ತೆಗೆದುಕೊಂಡು ಬಿಡಿ.

**ಡಾ: ಅಶ್ವಥನಾರಾಯಣ ಸಿ.ಎನ್.:-** ಮಾನ್ಯ ಸಭಾಪತಿಗಳೆ, ವಿಧೇಯಕವನ್ನು ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಇಲ್ಲ. ನಾಳೆ ಬೆಳಗ್ಗೆ ಸಭೆ ಮಾಡಿ ಮತ್ತೆ ನಾಳೆ ಬಿಲ್‌ನ್ನು ತರುತ್ತೇನೆ.

**ಸಭಾಪತಿಯವರು:-** ವಿಧೇಯಕವನ್ನು ಪೆಂಡಿಂಗ್ ಇಟ್ಟು, ನಾಳೆ ಮತ್ತೆ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಗಳೆ, ಹಿರಿಯರಾದ ವಿರೋಧ ಪಕ್ಷದ ನಾಯಕರಿಗೆ ನಾನು ಕೇಳಬಯಸುವುದು, ನಾವು ಕೂಗಿಕೊಳ್ಳುತ್ತಿದ್ದೇವೆ ಎಂದು ನಮ್ಮ ಅರುಣ ಶಹಾಪುರರಿಗೆ ತಾವು ಹೇಳಿದ್ದೀರಿ. ಹಿಂದೆ ನಾವು ಕೂಡ ಅನೇಕ ಸಾರಿ ಕೂಗಿಕೊಂಡಿದ್ದೇವೆ. ಒಂದು ಸಾರಿಯಾದರೂ ವಿಧೇಯಕಗಳನ್ನು ಪೆಂಡಿಂಗ್ ಇಟ್ಟಿದ್ದೀರಾ? ಇದೇ ನಮ್ಮ ವಿಶೇಷತೆ, ಬೇರೆ ಏನು ಅಲ್ಲ.

**ಶ್ರೀ ಆರ್.ಬಿ.ತಿಮ್ಮಾಪುರ:-** ಸರ್ಕಾರಕ್ಕೆ ತಪ್ಪಿನ ಅರಿವಾಯಿತು. ಅದಕ್ಕೆ ಪೆಂಡಿಂಗ್ ಇಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮ್ಮ ತಪ್ಪಿನ ಅರಿವಾಗಲೇ ಇಲ್ಲ ನಿಮಗೆ. ನಿಮ್ಮ ಇಡೀ ಜೀವನ ಹೀಗೆ ಹೋಯಿತಲ್ಲ ಎಂದು ನಾನು ತಮಗೆ ಹೇಳುತ್ತಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**8. <u>ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯ ಮೇಲೆ ಪೂರ್ವಭಾವಿ ಚರ್ಚೆ</u>**

**ವಿಷಯ:- ಕಾನೂನುಬದ್ಧವಾಗಿ ಕಲ್ಲು ಗಣಿಗಾರಿಕೆಯನ್ನು ಮಾಡುತ್ತಿದ್ದರೂ, ರಾಜಕೀಯ ದ್ವೇಷದಿಂದ ತೊಂದರೆ ನೀಡುತ್ತಿರುವ ಬಗ್ಗೆ.**

\- - -

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಿಯಮ 59ರ ಅಡಿಯಲ್ಲಿ ಒಂದು ನೋಟಿಸ್‌ನ್ನು ಕೊಟ್ಟಿದ್ದೆ. ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಅದನ್ನು ನಿಯಮ 68ಕ್ಕೆ ಬದಲಾವಣೆ ಮಾಡಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ.

ರಾಜ್ಯದಲ್ಲಿ ಕಲ್ಲು ಗಣಿಗಾರಿಕೆಗಾಗಿ ಗುತ್ತಿಗೆಯನ್ನು ನೀಡುತ್ತಿದ್ದು, ಈ ಗುತ್ತಿಗೆಯಿಂದ ರಾಜ್ಯದ ಬೊಕ್ಕಸಕ್ಕೆ ಪ್ರತಿ ಮಾಹೆಯಾನ ಕೋಟ್ಯಂತರ ರೂಪಾಯಿಗಳ ಆದಾಯ ಸಂದಾಯವಾಗುತ್ತದೆ. ಮಂಡ್ಯಾ ಜಿಲ್ಲೆಯಲ್ಲಿ ಸುಮಾರು 223 ಕಲ್ಲು ಪುಡಿ ಮಾಡುವ ಘಟಕಗಳು ಹಾಗೂ 1300 ಕ್ಕೂ ಹೆಚ್ಚು ಕಲ್ಲು ಗಣಿಗಾರಿಕೆ ಮಾಡಲು ಗುತ್ತಿಗೆ ನೀಡಲಾಗಿದ್ದು. ಈ ಘಟಕಗಳಿಂದ ರಾಜ್ಯದ ಬೊಕ್ಕಸಕ್ಕೆ ಪ್ರತಿ ಮಾಹೆಯಾನ ಕೋಟ್ಯಾಂತರ ರೂಪಾಯಿ ರಾಜಧನ, *District Mineral Fund*, GST(Goods & Services Tax)ಮುಂತಾದವುಗಳ ಮೂಲಕ ಸಂದಾಯವಾಗುತ್ತದೆ. ಆದರೆ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಹಿರಿಯ ಭೂ ವಿಜ್ಞಾನ ಅಧಿಕಾರಿಗಳು ಮಂಡ್ಯ ಜಿಲ್ಲೆಯ ಕೆಲವು ಕಲ್ಲು ಪುಡಿ ಮಾಡುವ ಘಟಕಗಳ ಹಾಗೂ ಕಲ್ಲು ಗಣಿಗಾರಿಕೆ ಗುತ್ತಿಗೆದಾರರೊಂದಿಗೆ ಮತ್ತು Crusher ಮಾಲೀಕರೊಂದಿಗೆ ಶಾಮೀಲಾಗಿ ಗಣಿಗಾರಿಕೆಯಿಂದ ಮತ್ತು Crusher ರಿಂದ ಪ್ರತಿದಿನ ಸಾವಿರಾರು ಲೋಡ್‌ನಷ್ಟು ಜಲ್ಲಿ, M-Sand, Bouldersಹಾಗೂ ಇನ್ನಿತರ ಉತ್ಪನ್ನಗಳು ಉತ್ಪಾದನೆಯಾಗುತ್ತಿದ್ದು, ಮಂಡ್ಯ ಜಿಲ್ಲೆ ಹಿರಿಯ ಭೂ ವಿಜ್ಞಾನಿಗಳು, ಅಧಿಕಾರಿಗಳು, ಕಲ್ಲುಪುಡಿ ಮಾಲೀಕರು, ಗಣಿ ಗುತ್ತಿಗೆದಾರರು ಶಾಮೀಲಾಗಿ ಪರವಾನಗಿ ಇಲ್ಲದೆಯೇ ಪ್ರತಿನಿತ್ಯ ಸಾವಿರಾರು ಟನ್ ಜಲ್ಲಿ, M-Sand, Bouldersಹಾಗೂ ಇನ್ನಿತರ ಉತ್ಪನ್ನಗಳನ್ನು ರಾಜಧನ, *District Mineral Fund*, GST ಹಾಗೂ ಇನ್ನಿತರ ತೆರಿಗೆಗಳನ್ನು ಸರ್ಕಾರಕ್ಕೆ ಪಾವತಿಸದೇ ಅಕ್ರಮವಾಗಿ ಸಾಗಿಸುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಪ್ರತಿನಿತ್ಯ ನೂರಾರು ಕೋಟಿ ರೂ.ಗಳ ನಷ್ಟ ಉಂಟಾಗುತ್ತಿದೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ಕಾನೂನು ಪ್ರಕಾರ ಕಲ್ಲು ಗಣಿಗಾರಿಕೆಗೆ ಗುತ್ತಿಗೆಯನ್ನು ಪಡೆದು ನ್ಯಾಯಸಮ್ಮತವಾಗಿ ಗಣಿಗಾರಿಕೆ ಮತ್ತು Crusher ನ್ನು ನಡೆಸುತ್ತಿದ್ದರು ಸಹ ಜಿಲ್ಲಾಡಳಿತ ಮತ್ತು ಗಣಿ ಹಾಗೂ ಭೂವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳು ರಾಜಕೀಯ ಒತ್ತಡ ಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳೀಯ ಮಂತ್ರಿಗಳ ಕುಮ್ಮಕ್ಕನ ಮೇರೆಗೆ ಕಾನೂನು ಪ್ರಕಾರವಾಗಿ ಮತ್ತು ನ್ಯಾಯಬದ್ಧವಾಗಿ ಪಾವತಿಸಬೇಕಾದ ರಾಜಧನ, *District Mineral Fund*, GST ಮುಂತಾದ ತೆರಿಗೆಗಳನ್ನು ಪಾವತಿಸಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಮಾಲೀಕನಿಗೆ ವಿನಾಕಾರಣ ನೋಟಿಸ್ ಜಾರಿ ಮಾಡಿ ಘಟಕ ಮತ್ತು ಕ್ರಷರ್‌ಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರಕ್ಕೆ ಪ್ರತಿನಿತ್ಯ ಸಂದಾಯವಾಗಬೇಕಾದ ನೂರಾರು ಕೋಟಿ ರೂ.ಗಳು ನಷ್ಟವಾಗುತ್ತಿರುವ ಬಗ್ಗೆ ಮತ್ತು ಕಲ್ಲುಪುಡಿ ಘಟಕಗಳ, Crusher ಮಾಲೀಕರ, ಕಲ್ಲು ಗಣಿ ಗುತ್ತಿಗೆದಾರರ ಜೊತೆ ಶಾಮೀಲಾಗಿರುವ ಮೇಲ್ಕಂಡ ಅಧಿಕಾರಿಗಳು ಸರ್ಕಾರಕ್ಕೆ ನೂರಾರು ಕೋಟಿ ರೂ.ಗಳ ನಷ್ಟವನ್ನುಂಟು ಮಾಡುತ್ತಿರುವುದರ ಬಗ್ಗೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದ ಬೊಕ್ಕಸಕ್ಕೆ GST ಹೊರತುಪಡಿಸಿ ನಾನಾ ತೆರಿಗೆಗಳು ಸಂದಾಯವಾಗುತ್ತವೆ. ಪ್ರತಿ ವರ್ಷ ರಾಜ್ಯ ಸರ್ಕಾರಕ್ಕೆ GST ಪರವಾಗಿ ಕೇಂದ್ರಸರ್ಕಾರದಿಂದ ಸಂದಾಯವಾಗುತ್ತಿರುವ, ನವೆಂಬರ್ ತಿಂಗಳಲ್ಲಿ ಸಂದಾಯವಾಗುವಂತಹ ಸುಮಾರು 10,000 ದಿಂದ 12,000 ಕೋಟಿ ರೂ.ಗಳಷ್ಟು ಬಾಕಿ ಇದೆ. ಈ ನಿಟ್ಟಿನಲ್ಲಿ ಸರ್ಕಾರದ ಹಣಕಾಸಿನ ಪರಿಸ್ಥಿತಿ ಗಂಭೀರವಾಗಿರುವಾಗ ತನ್ನದೆ ಸಂಪನ್ಮೂಲವನ್ನು ಕ್ರೂಢಿಕರಿಸುವುದು ಬಹಳ ಮುಖ್ಯವಾಗಿದೆ. ರಾಜ್ಯದಲ್ಲಿ ಈ ರೀತಿ ನಡೆಯುತ್ತಿರುವಾಗ, ಮಂಡ್ಯ ಜಿಲ್ಲೆಯಲ್ಲಿ ಸುಮಾರು 223 ಕಲ್ಲುಪುಡಿ ಮಾಡುವ ಘಟಕಗಳಿದ್ದು, 1300 ಕ್ಕೂ ಹೆಚ್ಚು Crusher ಗಳು ಇಲ್ಲಿ ನಡೆಯುತ್ತಿವೆ. ನ್ಯಾಯವಾಗಿ ಕಾನೂನು ಪ್ರಕಾರ Crusher ಗಳನ್ನು ನಡೆಸುವವರಿಗೆ ಕೋಟಿಗಟ್ಟಲೆ ತೆರಿಗೆ ಕೊಡಬೇಕು ಎಂದು ವಿನಾಕಾರಣ ತೊಂದರೆಯನ್ನು ಕೊಡುತ್ತಿದ್ದಾರೆ. ಇದಕ್ಕೆ ಕಾರಣ ರಾಜಕೀಯದಲ್ಲಿ ಆಗಿರುವ ಬದಲಾವಣೆ. ರಾಜಕೀಯ ವ್ಯಕ್ತಿ ಇವರ ಮೇಲೆ ದ್ವೇಷವಿಟ್ಟುಕೊಂಡು ಈ ರೀತಿ ಮಾಡುತ್ತಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ಕಾನೂನು ಪ್ರಕಾರವಾಗಿ ನಡೆಸುವವರಿಗೆ ತೊಂದರೆಯನ್ನು ಕೊಟ್ಟು, ಬೇಕಾಬಿಟ್ಟಿ ಮಾಡುವವರಿಗೆ ಕುಮ್ಮಕನ್ನು ಕೊಟ್ಟು ಸರ್ಕಾರಕ್ಕೆ ನಷ್ಟವನ್ನುಂಟು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಭಾಗಿಯಾಗುತ್ತಾರೆ. ಅವರ ಅಧಿಕಾರದಿಂದ ಇದೆಲ್ಲವು ನಡೆಯುತ್ತಿದೆ. ಅನೇಕ ಸಮಸ್ಯೆಗಳು ಇವೆ. ಈಗ ನಾನು ಹೇಳುವುದು ನ್ಯಾಯವಾಗಿ Crusher ನಡೆಸುವವರಿಗೆ ಕಾನೂನು ಪ್ರಕಾರ ನ್ಯಾಯವನ್ನು ಕೊಡಬೇಕು. ಯಾರು ಬೇಕಾಬಿಟ್ಟಿ ನಡೆಸುತ್ತಾರೆ ಅವರಿಗೆ ಕುಮ್ಮಕ್ಕು ಕೊಟ್ಟು ಸರ್ಕಾರಕ್ಕೆ ಕೋಟಿ–ಕೋಟಿ ರೂಪಾಯಿಗಳ ನಷ್ಟವನ್ನುಂಟುಮಾಡುವುದು ಸರಿಯಲ್ಲ. ಈ ಹಿನ್ನಲೆಯಲ್ಲಿ ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ, ರಾಜಕೀಯ ಸೇಡಿನಿಂದ ಈ ರೀತಿ ಮಾಡುವುದು ಸರಿಯಲ್ಲ. ಆದ್ದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂಡ್ಯ ಜಿಲ್ಲೆಯಲ್ಲಿ ನ್ಯಾಯವಾಗಿ Crusher ನಡೆಸುವವರಿಗೆ ಅನುಮತಿಯನ್ನು ಕೊಟ್ಟು, ನಷ್ಟವನ್ನುಂಟು ಮಾಡುವವರನ್ನು ಮಟ್ಟಾ ಹಾಕಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:–** **ಇದನ್ನು ನಿಯಮ 68ಕ್ಕೆ ಬದಲಾವಣೆ ಮಾಡಲಾಗಿದೆ. ಇದರ ಬಗ್ಗೆ ಚರ್ಚೆಯನ್ನು ನಾಳೆ ತೆಗೆದುಕೊಳ್ಳಲಾಗುತ್ತದೆ.**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಗಣಿ ವಿಚಾರವಾಗಿ ಚರ್ಚೆ ಮಾಡಲು ನಿನ್ನೆ ಅರ್ಧಗಂಟೆ ಕಲಾವಧಿ ಚರ್ಚೆಗೆ ಅವಕಾಶ ಕೊಡಬೇಕೆಂದು ನೋಟಿಸ್ ಕೊಟ್ಟಿದೆ. ಇದರ ಜೊತೆಗೆ ನನ್ನ ನೋಟಿಸ್‌ನ್ನು ಸೇರಿಸಿ ಅವಕಾಶ ಕೊಡಿ.

**ಸಭಾಪತಿಯವರು:–** ಅದನ್ನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಮಲೆ ಮಹದೇಶ್ವರ ಪ್ರಾಧಿಕಾರದ ಸಭೆಯನ್ನು ಕರೆದಿದ್ದಾರೆ. ಅದಕ್ಕೆ ಸಂಬಂಧಪಟ್ಟ ನಾವೆಲ್ಲರೂ ಹೋಗಬೇಕು. ಆದ್ದರಿಂದ ಗಮನ ಸೆಳೆಯುವ ಸೂಚನೆಯಾದ ತಕ್ಷಣ ಹೋಗಲು ನಮಗೆ ಅನುಮತಿಯನ್ನು ಕೊಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಗೋವಾ ಸಮಸ್ಯೆ ಬಗ್ಗೆ, ಶಿಕ್ಷಕರಿಗೆ ರಜೆ ಕೊಡುವ ಬಗ್ಗೆ ಸರ್ಕಾರದಿಂದ ಯಾವುದೇ ಹೇಳಿಕೆ ಬರಲಿಲ್ಲ. ಎಷ್ಟು ಸಲ ಕೇಳಬೇಕು ನಾವು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಗೋವಾ ವಿಚಾರವಾಗಿ ಮಾನ್ಯ ಹೊರಟ್ಟಿಯವರು ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆ ಮಾಡಿಸಿ ಎಂದು ಹೇಳಿದ್ದಾರೆ. ನಾನು ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದೆ. ಮಾನ್ಯ ಮುಖ್ಯಮಂತ್ರಿಯವರು ಹೋಗುವಾಗ ಮಾನ್ಯ ಹೊರಟ್ಟಿಯವರಿಗೆ ನೆನಪಿರಲಿಲ್ಲ. ಈಗ ಹೋಗಿ ಮಾತನಾಡಿ ಬಂದಿದ್ದೇನೆ. ಲಿಖಿತ ಹೇಳಿಕೆಯನ್ನು ನಾಳೆ ಮಂಡಿಸುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ. ನಂಬಿಕೆ ಉಳಿಸಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅದರ ಬಗ್ಗೆ ಹೇಳಿಕೆ ಮಾಡಿಸುವುದು ಸಭಾನಾಯಕರ ಜವಾಬ್ದಾರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಮುಖ್ಯಮಂತ್ರಿಗಳು ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ಹೊರಟು ಹೋದಮೇಲೆ ಮತ್ತೆ ನಾನು ಅವರೊಂದಿಗೆ ಮಾತನಾಡಿದ್ದೇನೆ. ನಾಳೆ ಹೇಳಿಕೆ ಮಾಡುತ್ತೇನೆ. ನನಗೂ ಅವರಿಗೂ ಇಬ್ಬರಿಗೂ ನೆನಪಿನಲ್ಲಿ ಇರಲಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಗೋವಾದಲ್ಲಿ 4 ಲಕ್ಷ ಜನರು ಕಣ್ಣೀರು ಹಾಕುತ್ತಿದ್ದಾರೆ. ಅಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಹೋದ ಶುಕ್ರವಾರದಿಂದ ಹೇಳುತ್ತಿದ್ದೇವೆ. ಸೋಮವಾರ ಹೇಳಿಕೆ ಮಾಡಿಸುತ್ತೇನೆ ಎಂದು ಹೇಳಿದ್ದೀರಿ, ಇವತ್ತಿನವರೆಗೆ ಹೇಳಿಕೆಯನ್ನು ಮಾಡಿಸಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಲಿಖಿತ ಉತ್ತರವನ್ನು ಕೊಡಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆ ಮಾಡಿಸಿ ಎಂದು ತಾವು ಹೇಳಿದ್ದೀರಿ. ನಾನು ವಿಷಯದ ಗಾಂಭೀರ್ಯತೆಯನ್ನು ಅರಿತುಕೊಂಡು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಹೇಳಿಕೆಯನ್ನು ಕೊಡಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಶಿಕ್ಷಕರ ವಿಚಾರವಾಗಿ ಏನು ಹೇಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಗಳೆ, ಮಾನ್ಯ ಶಿಕ್ಷಣ ಸಚಿವರ ಹತ್ತಿರ ಮಾತನಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಮಾನ್ಯ ಸಭಾಪತಿಗಳೆ, ನಡೆದಿರುವ ಘಟನೆಯನ್ನು ಹೇಳಿದರೆ ಮತ್ತೆ ಇಲ್ಲಿ ದೊಡ್ಡ ಗಲಾಟೆಯಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಕೊರೋನಾ ವಿಚಾರದಲ್ಲಿ ವೈದ್ಯಾಧಿಕಾರಿಗಳಿಗೂ ಸಮಸ್ಯೆ ಇದೆ, ಪೊಲೀಸ್ ಇಲಾಖೆಗೂ ಸಮಸ್ಯೆ ಇದೆ, ಶಿಕ್ಷಣ ಇಲಾಖೆಯಲ್ಲಿಯು ಸಮಸ್ಯೆ ಇದೆ. ನಾನು ಶಿಕ್ಷಣ ಸಚಿವರ ಜೊತೆಯಲ್ಲಿ ಮಾತನಾಡಿ ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:–** ಈಗ ಮುಂದಿನ ವಿಷಯಕ್ಕೆ ಹೋಗೋಣ. ಇನ್ನು ಅರ್ಧ ಗಂಟೆಯಲ್ಲಿ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ. ಸಭಾನಾಯಕರು ಇಲ್ಲಿಯೇ ಇರುತ್ತಾರೆ ತಾವು ಇಲ್ಲಿಯೇ ಇರುತ್ತೀರಿ. ಈಗ ಒಂದು ವಿಷಯದ ಬಗ್ಗೆ ಚರ್ಚಿಸಲು ಕರೆದಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಶಿಕ್ಷಕರ ವಿಚಾರದ ಮೇಲೆ ಒತ್ತಡವನ್ನು ಏಕೆ ಹಾಕುತ್ತಿದ್ದೇವೆ ಎಂದರೆ, ನಿನ್ನೆ ಒಂದು ಶಾಲೆಯಲ್ಲಿ ಘಟನೆ ನಡೆದಿದೆ. ಹೆಸರು ಹೇಳಲು ಹೋಗುವುದಿಲ್ಲ. ಒಂದು ಶಾಲೆಯಲ್ಲಿ ಗರ್ಭಿಣಿ ಆಗಿರುವ ಒಬ್ಬ ಮಹಿಳಾ ಶಿಕ್ಷಕಿಗೆ ಕೆಮ್ಮು ಮತ್ತು ಸೀನು ಬಂದಿರುವುದರಿಂದ ಇವರಿಗೆ ಕೊರೋನಾ ಬಂದಿದೆ ಎಂದು ಬೇರೆ ಎಲ್ಲ ಶಿಕ್ಷಕರು Staff Room

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಟ್ಟು ಓಡಿ ಹೋಗಿದ್ದಾರೆ. ಇದನ್ನು ನೋಡಿದ ಶಿಕ್ಷಕಿಗೆ ದಿಗಿಲು ಬಡಿದ ಹಾಗೆ ಆಗಿ, ದೊಡ್ಡ ಅನಾಹುತವೇ ಆಗುವ ಪ್ರಸಂಗ ಬಂದಿದೆ.

**(599)19-03-2020(05-30)ಬಿಎಸ್‌ಡಿ-ಎಕೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು)**

ಅದಕ್ಕಾಗಿ ವಿನಾಃಕಾರಣ ಅವರನ್ನು ಕೂರಿಸಬಾರದು. ಆದ್ದರಿಂದ ದಯಮಾಡಿ ಉತ್ತರವನ್ನು ಒದಗಿಸಿಕೊಡಬೇಕು.

**9. <u>ಗಮನ ಸೆಳೆಯುವ ಸೂಚನೆಗಳು</u>**

ವಿಷಯಃ- **ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿವಾಜಿನಗರದಿಂದ ನಾಗಾವರದವರೆಗೆ ಕೈಗೊಂಡಿರುವ ಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಭೂಮಾಲೀಕರುಗಳಿಗೆ ಪರಿಹಾರ ನೀಡದಿರುವ ಬಗ್ಗೆ.**

- -

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿವಾಜಿ ನಗರದಿಂದ ನಾಗಾವರದವರೆಗೆ ಕೈಗೊಂಡಿರುವ ಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಭೂಮಾಲೀಕರುಗಳಿಗೆ ಪರಿಹಾರ ನೀಡದಿರುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕರ ಉದ್ದಿಮೆಗಳ ಸಚಿವರ ಗಮನವನ್ನು ಸೆಳೆಯುತ್ತೇನೆ.

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದಿನ ಕಾರ್ಯಸೂಚಿಯಲ್ಲಿ ನನ್ನ, ಮಾನ್ಯ ಪುಟ್ಟಣ್ಣ, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿರವರುಗಳ ಹೆಸರಿನ ಮುಂದೆ ಬಂದಿರುವ ವಿಷಯವೇ ಬೇರೆಯಾಗಿದ್ದು, ನಾವು ಲಿಖಿತವಾಗಿ ಕೊಟ್ಟಿರುವ ವಿಷಯವೇ ಬೇರೆಯಾಗಿರುತ್ತದೆ. ಆದರೆ ಮುದ್ರಣವಾಗಿರುವುದೇ ಬೇರೆಯಾಗಿದೆ. ಅದನ್ನು ದಯವಿಟ್ಟು ತಿದ್ದುಪಡಿ ಮಾಡಿಕೊಳ್ಳಬೇಕಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿವಾಜಿನಗರದಿಂದ ನಾಗಾವರದವರೆಗೆ ಕೈಗೊಂಡಿರುವಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಭೂಮಾಲೀಕರುಗಳಿಗೆ ಪರಿಹಾರ ನೀಡದಿರುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕರ ಉದ್ದಿಮೆಗಳ ಸಚಿವರ ಗಮನ ಸೆಳೆಯುತ್ತೇವೆ ಎಂದು ಕಾರ್ಯಸೂಚಿಯಲ್ಲಿ ಮುದ್ರಿತವಾಗಿದೆ. ಆದರೆ ನಾವುಗಳು ಕೊಟ್ಟಿರುವ ನೋಟೀಸನಲ್ಲಿ " ಮೆಟ್ರೋ 2ನೇ ಹಂತದ ಕಾಮಗಾರಿಯಲ್ಲಿ ಶಿವಾಜಿನಗರದಿಂದ ನಾಗಾವರದವರೆಗೆ underground ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ಸ್ಥಳದಲ್ಲಿ ಭೂಮಾಲೀಕರಿಂದ ದೀರ್ಘಕಾಲದ ಗುತ್ತಿಗೆ ಪಡೆದಿರುವ ನೋಂದಾಯಿತ ಒಪ್ಪಂದ ಮಾಡಿಕೊಂಡು ವ್ಯವಹಾರ ನಡೆಸುತ್ತಿರುವ ಗುತ್ತಿಗೆದಾರರಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಇತರೆ ನ್ಯಾಯಲಯಗಳ ಆದೇಶವಿದ್ದರೂ ಗುತ್ತಿಗೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಸೂಕ್ತ ಪರಿಹಾರ ನೀಡದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಎಂದು ಇದೆ. ಅದನ್ನು ದಯವಿಟ್ಟು ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕು.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕರ ಉದ್ದಿಮೆಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಪುಟ್ಟಣ್ಣನವರು ಹಾಗೂ ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿ ರವರುಗಳು ಕೇಳಿದಂತಹ ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಿದ್ದಾರೆ. ಅದಕ್ಕೆ ನಾನು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇನೆ. ಬಹಳ ಮುಖ್ಯವಾಗಿ KIADB ಮುಖಾಂತರ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು, ಅದರಲ್ಲಿ ಚಂದ್ರಶೇಖರ್ ಬಿನ್ ಕೃಷ್ಣಯ್ಯ, ಸ್ವರಸ್ವತಿ ಕೋಂ ಕೆ. ಚಂದ್ರಶೇಖರ್‌ರವರು owner ಗಳಾಗಿದ್ದಾರೆ. ಅವರುಗಳ ಕಡೆಯಿಂದ ಒಬ್ಬರು 30 ವರ್ಷಗಳವರೆಗೆ ಗುತ್ತಿಗೆ ತೆಗೆದುಕೊಂಡು, ಅಲ್ಲಿ ಒಂದು petrol bunk ನಡೆಯುತ್ತಿದೆ. ಆ ಹಿನ್ನೆಲೆಯಲ್ಲಿ ಅವರ ಜಾಗ ಭೂಸ್ವಾಧೀನವಾಗಿದೆ. ಅದರದ್ದೇ part and parcel, ಅದರದ್ದೇ sub-portion. ಈಗ ಅವರು ಏನು claim ಮಾಡುತ್ತಿದ್ದಾರೆಂದರೆ, they

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

are the land owners and Lessors. ಮಾನ್ಯ ಸದಸ್ಯರು Lessee ಪರವಾಗಿ question ಕೇಳುತ್ತಿದ್ದಾರೆ. ಅದರಲ್ಲಿ Sub-Lessee ಒಬ್ಬರು ಇದ್ದಾರೆ. ಭೂಸ್ವಾಧೀನ ಕಾನೂನು ಪ್ರಕಾರ KIADB ರವರು ಯಾವುದೇ ಒಂದು land acquisition ಮಾಡಿದಾಗ ಪರಿಹಾರವನ್ನು owner ಗೆ ಕೊಡುತ್ತೇವೆ. ಈಗ ಅವರು ಆ ಜಾಗದಲ್ಲಿ structure ಮಾಡಿದ್ದೇವೆ, petrol bunk ನಲ್ಲಿ interior design ಮಾಡಿದ್ದಾರೆ, ಅದರದ್ದೆಲ್ಲವೂ ನಮಗೆ claim ಬರುತ್ತದೆ ಎನ್ನುವ ವಾದ ಇದೆ. ಹೀಗಾಗಿ ಈ ವಿಚಾರ High Court ವರೆಗೂ ಹೋಗಿ, ಕೊನೆಗೆ High Court ನವರು ಇದನ್ನು Land Acquisition Officer ಗೆ ಬಿಟ್ಟಿದ್ದಾರೆ. ಆ relevant para ವನ್ನು ಮಾತ್ರ ಓದುತ್ತೇನೆ. It reads as follows:-

> *"In the light of the above, this Court is of the considered opinion that the third respondent-LAO is required to take into consideration all these aspects while determining the compensation, if the same is not already determined, and if the construction is made legally prior to the preliminary notification. Further, if there is no consent arrived at by the parties, the Land Acquisition officer has to refer the matter for adjudication of title and/or apportionment of the compensation, in accordance with law."*

ಹೀಗಾಗಿ there is no specific direction. ಅವರದ್ದು construction ಏನಿದೆ, ಅದನ್ನು valuation ಮಾಡಿ, ಆ portion compensation ಅನ್ನು ನೇರವಾಗಿ ಅವರಿಗೆ ಕೊಟ್ಟುಬಿಡಿ, ಉಳಿದದ್ದನ್ನು ಮಾಲೀಕರಿಗೆ ಕೊಡಿ ಎಂದು specific direction ಇಲ್ಲ. ಮತ್ತೆ ಅಧಿಕಾರವನ್ನು Land Acquisition Officer ಗೆ in accordance with law ಮಾಡಬೇಕು ಎಂದು ಹೇಳಿದ್ದಾರೆ. ಕಾನೂನು ಪ್ರಕಾರ ಏನು ಮಾಡಬೇಕೋ, ಆ process ಅನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Land Acquisition Officer ಮಾಡುತ್ತಿದ್ದಾರೆ. ಅದರಲ್ಲಿ ಇಬ್ಬರೂ party ಗಳನ್ನು ಕರೆದು, ಕುಳಿತು ಮಾತನಾಡಿ, consensus create ಮಾಡುವಂತಹ ಪ್ರಯತ್ನವನ್ನು ಮಾಡುತ್ತಾರೆ. ಆ process ನಡೆಯುತ್ತಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಈ ಪ್ರಕರಣದಲ್ಲಿ ಕಳೆದ 25 ವರ್ಷಗಳಿಂದ permanent leaseholder ಒಬ್ಬರು petrol bunk ಅನ್ನು ನಡೆಸುತ್ತಿದ್ದಾರೆ. ಭೂಮಾಲೀಕರಿಂದ permanent leaseholder ಆಗಿದ್ದಾರೆ. ಈಗ 25 ವರ್ಷಗಳಲ್ಲಿ 14 ವರ್ಷಗಳ lease ಅವಧಿಯನ್ನು ಮುಗಿಸಿದ್ದು, ಇನ್ನೂ 11 ವರ್ಷಗಳ lease ಅವಧಿ ಇದೆ. ಈ ಸಂದರ್ಭದಲ್ಲಿ ಸಾರ್ವಜನಿಕ purpose ಗೋಸ್ಕರ ಭೂಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ first notification ದಿನಾಂಕ 29–8–2018ಕ್ಕೆ ಆಗುತ್ತದೆ. ಎರಡನೆ notification ದಿನಾಂಕ 17–1–2019ಕ್ಕೆ ಆಗುತ್ತದೆ. ಈ ನಡುವೆ permanent leaseholder ರವರು 14 ವರ್ಷ ಕಳೆದಿದ್ದು, ಇನ್ನೂ 11 ವರ್ಷಗಳ lease ownership ಇದೆ. ಈ ಸಂದರ್ಭದಲ್ಲಿ Sub-Registrar Office ನಲ್ಲಿ permanent ಆಗಿ lease ತೆಗೆದುಕೊಂಡಿದ್ದೇನೆ. ಎಲ್ಲಾ document ಗಳಲ್ಲಿ ನನ್ನ ಹೆಸರು ಇದೆ. ನನ್ನನ್ನು consider ಮಾಡದೇ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಾರದೆಂದು ದಿನಾಂಕ 3–9–2018, 1–2–2019, 19–2–2019 ಮತ್ತು 16–10–2019 ರಂದು ಒಟ್ಟು ನಾಲ್ಕು ಅರ್ಜಿಗಳನ್ನು ಕೊಟ್ಟಿದ್ದಾರೆ. First notification ಆಗುತ್ತಿದ್ದಂತೆ ನಾಲ್ಕು ದಿವಸಗಳಿಗೆ ನಾಲ್ಕು date ಗಳಲ್ಲಿ ನಾಲ್ಕು ಅರ್ಜಿಗಳನ್ನು ಕೊಟ್ಟಿದ್ದಾರೆ. ಆದರೆ ಇಲಾಖೆಯ ಭೂಸ್ವಾಧೀನಾಧಿಕಾರಿ ಅರ್ಜಿಗಳ ಬಗ್ಗೆ ಕ್ಯಾರೆ ಅನ್ನುವುದಿಲ್ಲ. ಅವರು ಅರ್ಜಿಗಳ ಜೊತೆ ಎಲ್ಲಾ ದಾಖಲೆಗಳನ್ನು ಕೊಡುತ್ತಾರೆ. ಅವರಿಗೆ 25 ವರ್ಷಗಳ ಕಾಲ permanent lease ownership ಆಗಿದ್ದು, ಈಗ acquire ಮಾಡುತ್ತಿದ್ದು, ದಯಮಾಡಿ ಅವರ ಮನವಿಯನ್ನು ಕೇಳಬೇಕೆಂದು ಹೇಳಿದ್ದಾರೆ. ತದನಂತರ ದಿನಾಂಕ 31–12–2018 ರಲ್ಲಿ ಇದೇ ಸದನದಲ್ಲಿ ನನಗೆ ಒಂದು ಉತ್ತರ ಬಂದಿದೆ. ಇಂತಹ ಮೆಟ್ರೋ ಕಾಮಗಾರಿಗೋಸ್ಕರ ಭೂಸ್ವಾಧೀನಪಡಿಸಿಕೊಂಡ ಪ್ರದೇಶದಲ್ಲಿ ಯಾರಾದರೂ ಬಾಡಿಗೆದಾರರು ಇದ್ದರೆ ಅಂತಹವರಿಗೆ compensation ಯಾವರೀತಿ ಕೊಡಬೇಕೆಂಬುದಕ್ಕೆ ಮಾಡಿದ್ದಾರೆ. ಅದು ಯಾವ ರೀತಿ ಇದೆ ಎಂದರೆ ಯಾರಾದರೂ 11 ತಿಂಗಳ temporary ಬಾಡಿಗೆದಾರರು ಇದ್ದರೆ, ಅಂತಹವರು ಬದಲಿ ವ್ಯವಸ್ಥೆ ಮಾಡಿಕೊಳ್ಳಲು ಸಾಗಾಣಿಕೆ ವೆಚ್ಚ ರೂ.35

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿ, ವ್ಯಾಪಾರ ನಷ್ಟ ಭತ್ಯೆ ರೂ.1 ಲಕ್ಷ, ವ್ಯಾಪಾರ ಪುನರ್ ಸ್ಥಾಪನೆ ಭತ್ಯೆ ಚದರ ಅಡಿಗೆ ರೂ.240/– ಇದೆ. ಮಾನ್ಯ ಸಭಾಪತಿಯವರೇ ಯಾವುದಾದರೊಂದು ಪೆಟ್ಟಿ ಅಂಗಡಿ ತೆರವಿಗೆ ನಿಗದಿಪಡಿಸಿರುವ ಮಾನದಂಡದಂತೆ ಮಾಡಿದ್ದಾರೆ. ಒಂದು ಪೆಟ್ಟಿ ಅಂಗಡಿಗೂ ಅದೇ ದರ ಮತ್ತು petrol bunk ತೆರವಿಗೂ ಅದೇ ದರ ಆಗುತ್ತದೆಯೇ? ಕಳೆದ 25 ವರ್ಷಗಳಿಂದ 25 ಜನರಿಗೆ ನೌಕರಿಯನ್ನು ಕೊಟ್ಟಿದ್ದು, ಪ್ರತಿ ವರ್ಷ ರೂ.30 ಲಕ್ಷ ವ್ಯಾಪಾರ ತೆರಿಗೆಯನ್ನು ಕಟ್ಟುತ್ತಾರೆ. ಪ್ರತಿ ವರ್ಷದ Audit Report ಸಹ ಇದೆ. 25 ವರ್ಷಗಳ ಕಾಲ ಆ ಭೂಮಿ ಮೇಲೆ ಅಧಿಕಾರ ಇದೆ. ಅದನ್ನು acquire ಮಾಡುವ ಸಮಯದಲ್ಲಿ ಭೂಸ್ವಾಧೀನ ಅಧಿಕಾರಿಗೆ ನಾಲ್ಕು ಅರ್ಜಿಗಳನ್ನು ಕೊಟ್ಟರೂ consider ಮಾಡುವುದಿಲ್ಲ. ಯಾವುದೋ ಕಾಲದಲ್ಲಿ ಪೆಟ್ಟಿ ಅಂಗಡಿ ತೆರವಿಗೆ ನಿಗದಿಪಡಿಸಿದ ದರವನ್ನು ಇದಕ್ಕೂ ಹಾಕಿದ್ದಾರೆ. ಸಾಗಾಣಿಕೆ ಭತ್ಯೆ ರೂ.35 ಸಾವಿರ, ವ್ಯಾಪಾರ ನಷ್ಟಕ್ಕೆ ರೂ.1 ಲಕ್ಷ ಮತ್ತು ಚದರ ಅಡಿಗೆ ರೂ.240/–ಗಳನ್ನು ನಿಗದಿಪಡಿಸಿದಾಗ ಅವರಿಗೆ 10,000 ಚದರ ಅಡಿಯ petrol bunk ವ್ಯಾಪ್ತಿಗೆ ರೂ.40 ಲಕ್ಷ ಆಗುತ್ತದೆ. ಅವರ ಇಡೀ ಜೀವನ ನಿರ್ವಹಣೆಯ ಉದ್ಯೋಗವು ಅದರ ಮೇಲೆಯೇ ಅವಲಂಬನೆಯಾಗಿದೆ. 25 ಜನರು ಕೆಲಸ ಮಾಡುತ್ತಿದ್ದಾರೆ. Supreme Court ನಲ್ಲಿ ಒಂದು ಆದೇಶವಾಗಿದ್ದು, ತಾವು ಓದಿ ಎಂದರೆ ಓದುತ್ತೇನೆ, ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

**ಸಭಾಪತಿಯವರುः–** ಮಾನ್ಯ ಸಚಿವರಿಗೆ ಮನವರಿಕೆ ಮಾಡಿ.

**ಶ್ರೀ ಮರಿತಿಬ್ಬೇಗೌಡः–** ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. Supreme Court ಆದೇಶದಲ್ಲಿ ಸಾರ್ವಜನಿಕ ಉದ್ದೇಶಗಳಿಗೆ ಭೂಮಿಯನ್ನು ಭೂಸ್ವಾಧೀನಪಡಿಸಿಕೊಂಡ ಸಂದರ್ಭಗಳಲ್ಲಿ ಸರ್ಕಾರ ಅಥವಾ ಖಾಸಗಿಯವರು ಇರಬಹುದು, ಯಾರಾದರೂ permanent leaseholder ಇದ್ದರೆ ಅವರಿಗೂ ಕೂಡ apportionment ಕೊಡಬೇಕು ಎಂದು ತೀರ್ಮಾನವಾಗಿದೆ.

**(600)/19.03.2020/5.40/ಹೆಚ್‌ವಿ–ಎಕೆ**

**ಶ್ರೀ ಮರಿತಿಬ್ಬೇಗೌಡ(ಮುಂದು)**

ಸನ್ಮಾನ್ಯ ಸಭಾಪತಿಯವರೇ, 'ಇಂತಹः–ಸಾರ್ವಜನಿಕ ಉಪಯೋಗಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ ಸರ್ಕಾರೀ ಭೂಮಿಯಲ್ಲಿ ಅಥವಾ ಖಾಸಗಿ ಭೂಮಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರಾದರು ಖಾಯಂ ಗುತ್ತಿಗೆದಾರನಿದ್ದರೆ, ಭೂ ಮಾಲೀಕನಿಗೆ ಕೊಡುವಂತಹ ಪರಿಹಾರದಲ್ಲಿ ಆತನಿಗೂ ಕೂಡ ಕನಿಷ್ಟ ಶೇಕಡಾ 25ರಷ್ಟು ಪಾಲು ಕೊಡಬೇಕು' ಎಂದು ಸುಪ್ರೀಂ ಕೋರ್ಟ್ ಹೇಳುತ್ತದೆ. ಸುಪ್ರೀಂ ಕೋರ್ಟ್‌ನ ಈ ಆರ್ಡರ್‌ನ್ನು ಅರ್ಜಿಯ ಜೊತೆಗೆ ಕೊಟ್ಟರೂ ಸಹ ಅಧಿಕಾರಿಗಳು ಯಾರೂ ಇದನ್ನು ಪರಿಗಣಿಸಲಿಲ್ಲ. ನಿರ್ದಿಷ್ಟವಾಗಿ ಮೆಟ್ರೋಗಾಗಿ ಭೂಸ್ವಾಧೀನ ಪಡಿಸಿಕೊಂಡ ಪ್ರಕರಣಕ್ಕೆ ಸಂಬಂಧಪಟ್ಟಂತೆಮದ್ರಾಸ್ ಹೈಕೋರ್ಟ್, 'ಭೂ ಮಾಲೀಕರ ಜಾಗದಲ್ಲಿ ಯಾರಾದರೂ ಗುತ್ತಿಗೆದಾರರು ಇದ್ದರೇ, ಅವರಿಗೆ ಪರಿಹಾರದಲ್ಲಿ ಶೇಕಡಾ 25ರಷ್ಟು ಪಾಲು ಕೊಡಬೇಕು' ಎಂದು ಹೇಳಿದೆ. ಕೇರಳ ರಾಜ್ಯದ ಹೈಕೋರ್ಟ್ ಸಹ ಅದೇ ರೀತಿಯ ತೀರ್ಪನ್ನು ನೀಡುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸದರಿ ಪ್ರಕರಣವನ್ನು ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ. ಆಗ ಸುಪ್ರೀಂ ಕೋರ್ಟ್, ಮದ್ರಾಸ್ ಹೈಕೋರ್ಟ್ ಮತ್ತು ಕೇರಳ ಹೈಕೋರ್ಟ್‌ಗಳು ನೀಡಿದ ತೀರ್ಪುಗಳನ್ನು citation ಮಾಡಿ, ದಿನಾಂಕ:14.01.2020 ರಂದು ತೀರ್ಪು ನೀಡಲಾಗುತ್ತದೆ. ಅದನ್ನೇ ಅವರು ಉಲ್ಲೇಖ ಮಾಡಿ ಹೇಳಿರುವುದು. ಅಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲೇಖ ಮಾಡಿ, 'ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ ಸರ್ಕಾರಿ ಭೂಮಿಯಲ್ಲಿ ಅಥವಾ ಖಾಸಗಿ ಭೂಮಿಯಲ್ಲಿ ಯಾರಾದರು ಖಾಯಂ ಗುತ್ತಿಗೆದಾರನಿದ್ದರೆ, ಭೂ ಮಾಲೀಕನಿಗೆ ಕೊಡುವಂತಹ ಪರಿಹಾರದಲ್ಲಿ ಆತನಿಗೂ ಕೂಡ ಪಾಲು ಕೊಡಬೇಕು' ಎಂದು ರಾಜ್ಯದ ಉಚ್ಚ ನ್ಯಾಯಾಲಯ ಹೇಳಿದೆ. ಉಪ ನೊಂದಾಣಾಧಿಕಾರಿ ಕಛೇರಿಯಲ್ಲಿ ಲೀಸ್ ಡೀಡ್ ರಿಜಿಸ್ಟರ್ ಆಗಿದೆ ಎನ್ನುವುದಕ್ಕೆ ದಾಖಲೆಗಳಿವೆ. Encumbrance Certificate ನಲ್ಲಿ ಆ ಗುತ್ತಿಗೆದಾರನ ಹೆಸರು ಬರುತ್ತದೆ. ಆ ಪೆಟ್ರೋಲ್ ಬಂಕ್ ಇರುವಂತಹ ಜಾಗಕ್ಕೆ ಅವರು ಇಲ್ಲಿಯವರೆಗೆ ಬಿ.ಬಿ.ಎಂ.ಪಿ.ಗೆ ತೆರಿಗೆಯನ್ನು ಕಟ್ಟಿಕೊಂಡು ಬಂದಿದ್ದಾರೆ. ಇದೆಲ್ಲ ದಾಖಲೆಗಳನ್ನು ಕೊಟ್ಟರೂ ಸಹ ಇಲಾಖೆಯ ಭೂಸ್ವಾಧೀನಾಧಿಕಾರಿಗಳು ಕಣ್ಣೇ ತೆರೆಯಲಿಲ್ಲವೆಂದರೆ, ಅವರು ಯಾವ ರೀತಿಯಲ್ಲಿ ನ್ಯಾಯ ದೊರಕಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ? ಇಷ್ಟೆಲ್ಲ ಕೋರ್ಟ್ ಆರ್ಡರ್‌ಗಳು ಮತ್ತು ಸುಪ್ರೀಂ ಕೋರ್ಟ್ ಆರ್ಡರ್‌ಗಳನ್ನು ಕೊಟ್ಟರೂ ಸಹ ಇಲಾಖೆಯ ಭೂಸ್ವಾಧೀನಾಧಿಕಾರಿಗಳು ಇಷ್ಟೊಂದು ಅನ್ಯಾಯ ಮಾಡಿದರೆ ಹೇಗೆ? ಸರ್ಕಾರ ಭೂ ಮಾಲೀಕರಿಗೆ ಎಷ್ಟು ಪರಿಹಾರವನ್ನು ಕೊಡುತ್ತಿದೆಯೆಂದರೆ, ಮೆಟ್ರೋಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಎಂದರೆ, ಭೂ ಮಾಲೀಕರು ಅಧಿಕಾರಿಗಳನ್ನು ಮನೆಗೆ ಕರೆದುಕೊಂಡು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೋಗಿ ಸತ್ಕಾರ ಮಾಡಿ 'ನಮ್ಮ ಭೂಮಿ ಸೇರಿಸಿ....... ನಮ್ಮ ಭೂಮಿ ಸೇರಿಸಿ' ಎಂದು ಒತ್ತಾಯ ಮಾಡುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, 10 ಸಾವಿರ ಚದುರಡಿಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡರೆ, ಪರಿಹಾರವಾಗಿ 12 ಕೋಟಿ ರೂಪಾಯಿಗಳನ್ನು ನೀಡಲಾಗುತ್ತಿದೆ. ಮೆಟ್ರೋಗಾಗಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ನಿಜವಾದ ಭೂ ಮಾಲೀಕ ಯಾರೋ ಪರಿಹಾರ ತೆಗೆದುಕೊಳ್ಳುತ್ತಿರುವವರು ಮತ್ಯಾರೋ ಎನ್ನುವ ಸನ್ನಿವೇಶಗಳು ಇವೆ. ಬಿ.ಡಿ.ಎ. ಸ್ವತ್ತಿಗೆ ಖಾಸಗಿಯವರು ಕೋಟ್ಯಾಂತರ ರೂಪಾಯಿಗಳಷ್ಟು ಪರಿಹಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಕೆ.ಐ.ಎ.ಡಿ.ಬಿ.ಯ ಅಧಿಕಾರಿಗಳು ತೆಗೆದುಕೊಳ್ಳುತ್ತಿರುವ ಕೆಟ್ಟ ನಿರ್ಧಾರಗಳಿಂದ ಈ ರೀತಿಯ ಅನಾಹುತಗಳು ನಡೆಯುತ್ತಿವೆ. ಸಾರ್ವಜನಿಕ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡು ಇಷ್ಟೊಂದು ದೊಡ್ಡ ಮೊತ್ತದ ಪರಿಹಾರವನ್ನು ನೀಡಲಾಗುತ್ತಿದೆ. ಜನರು, 'ನಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಿ.........ನಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಿ' ಎಂದು ಕಿತ್ತಾಡುತ್ತಿದ್ದಾರೆ. ನಾವು ಉಲ್ಲೇಖ ಮಾಡಿರುವ ಪ್ರಕರಣದಲ್ಲಿ ಒಬ್ಬ ಲೀಸ್ ಹೋಲ್ಡರ್ 15 ವರ್ಷಗಳಿಂದ ಅಲ್ಲಿಯೇ ಇದ್ದುಕೊಂಡು, ನೌಕರರನ್ನು ಸಾಕುತ್ತಾ, ವರ್ಷಕ್ಕೆ 30 ಲಕ್ಷ ರೂಪಾಯಿಗಳಷ್ಟು ತೆರಿಗೆಗಳನ್ನು ಕಟ್ಟಿಕೊಂಡು ಇದರ ಜೊತೆಗೆ ಬಾಡಿಗೆಯನ್ನು ಕಟ್ಟುತ್ತಿದ್ದಾರೆ. ಹಲವಾರು ಕೋರ್ಟ್‌ಗಳ ತೀರ್ಮಾನಗಳಿದ್ದರೂ ಭೂಸ್ವಾಧೀನಾಧಿಕಾರಿಗಳು ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡರೆ, ನ್ಯಾಯ ಒದಗಿಸಿಕೊಡುವವರು ಯಾರು? ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ಅವರಿಗೆ ಸೂಕ್ತವಾಗಿರುವ ಪರಿಹಾರದ ಪಾಲನ್ನು ಕೊಡಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು, ಪ್ರಜ್ಞಾವಂತ ಮತ್ತು ಹಿರಿಯ ಸದಸ್ಯರಾಗಿದ್ದಾರೆ. ಅವರು ನೋಟೀಸ್‌ನಲ್ಲಿ ಉಲ್ಲೇಖ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಸೀಮಿತವಾಗಿ ಮಾತನಾಡಿದರೆ ಉತ್ತಮ, ಅದನ್ನು ಬಿಟ್ಟು ಬಿ.ಡಿ.ಎ. ಮತ್ತಿತರ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ. ಈ ಪ್ರಕರಣದಲ್ಲಿ ಯಾರು ಗೇಣಿದಾರನಿದ್ದಾನೆ, ಅವನಿಗೆ ಪರಿಹಾರದ ಹಣದಲ್ಲಿ ಶೇಕಡಾ 25ರಷ್ಟನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಬೇರೆಬೇರೆ ರಾಜ್ಯಗಳ ಉಚ್ಚ ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನು ಉಲ್ಲೇಖ ಮಾಡಿದ್ದಾರೆ. ಅವುಗಳನ್ನು ನನಗೆ ಕಳುಹಿಸಿಕೊಡಲಿ. ಗೇಣಿದಾರ ಯಾರಿದ್ದಾನೆ ಅವನಿಗೆ ಶೇಕಡಾ 25ರಷ್ಟನ್ನು ನಾವು ಕೊಡುತ್ತೇವೆ ಅದರ ಬಗ್ಗೆ ನಮ್ಮ ತಕರಾರಿಲ್ಲ. ಆದರೆ, ಕೋರ್ಟ್ ನೀಡಿರುವ ಆದೇಶದಲ್ಲಿ ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಪಷ್ಟ ನಿರ್ದೇಶನವನ್ನು ನೀಡಬೇಕಾಗಿತ್ತು. ಮಾನ್ಯ ಮರಿತಿಬ್ಬೇಗೌಡರು ರೆಫರ್ ಮಾಡಿರುವ ವಿಷಯಕ್ಕೆ ದಿನಾಂಕ: 14.01.2020 ರಂದು ರೂಲಿಂಗ್ ಕೊಟ್ಟಿದ್ದಾರೆ. ಅದರಲ್ಲಿ ಎಲ್ಲವನ್ನು ರೆಫರ್ ಮಾಡಿ ಕೊನೆಗೆ ಅಡ್ಡಗೋಡೆಯ ಮೇಲೆ ದೀಪ ಇಡುವ ರೀತಿಯಲ್ಲಿ 'ಕಾನೂನಿನ ರೀತ್ಯಾ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳಿ' ಎಂದು ಭೂಸ್ವಾಧೀನಾಧಿಕಾರಿಗೆ ಅಧಿಕಾರವನ್ನು ನೀಡಿದ್ದಾರೆ. ತಾವು ಹೇಳಿರುವ ಎಲ್ಲ ರೂಲಿಂಗ್‌ಗಳನ್ನು ನೋಡಿದರೆ, ಮಾಲೀಕ ಪಡೆದುಕೊಳ್ಳುವ ಪರಿಹಾರದಲ್ಲಿ ಕನ್ನಿಷ್ಠ ಶೇಕಡಾ 25ರಷ್ಟನ್ನು ಪಡೆದುಕೊಳ್ಳುವ ಹಕ್ಕು ಗೇಣಿದಾರನಿಗಿದೆ. 'ಪರಿಹಾರ ಎಷ್ಟು ಕೊಡಬೇಕೆಂದು ಲೆಕ್ಕಾಚಾರ ಮಾಡಿ ಮೌಲ್ಯವನ್ನು ಫಿಕ್ಸ್ ಮಾಡಿ, ಅದರಲ್ಲಿ ಗೇಣಿದಾರನಿಗೆ ಎಷ್ಟು ಪಾಲು ಬರಬೇಕು ಅದನ್ನು ಕೊಟ್ಟುಬಿಡಿ' ಎಂದು ಕೋರ್ಟ್ ನಿರ್ದಿಷ್ಟವಾಗಿ ನಿರ್ದೇಶನವನ್ನು ನೀಡಬೇಕಾಗಿತ್ತು. ಆಗ ನಮ್ಮ ಪಾತ್ರ ಇರುತ್ತಿರಲಿಲ್ಲ. ಒಂದು ಕಡೆ ಮಾಲೀಕ ಒಟ್ಟು ಪರಿಹಾರ ಹಣವನ್ನು ನನಗೆ ಕೊಡಬೇಕೆಂದು ಗಲಾಟೆ ಮಾಡುತ್ತಿದ್ದಾನೆ. ಮಾನ್ಯ ಸದಸ್ಯರುಗಳು, 'ಗೇಣಿದಾರನು ಬಹಳಷ್ಟು ಹಣವನ್ನು ಖರ್ಚು ಮಾಡಿದ್ದಾನೆ, ಕಳೆದ 11 ವರ್ಷಗಳಿಂದ ಅಲ್ಲಿದ್ದಾನೆ' ಎಂದು ಹೇಳುತ್ತಿದ್ದಾರೆ. ನಮ್ಮ ಪ್ರಕಾರ 9 ವರ್ಷಗಳಾಗಿವೆ ಅಷ್ಟೆ. ನಾವು ಯಾರಿಗಾದರೂ ಪರಿಹಾರವನ್ನು ನೀಡಲೇಬೇಕಾಗುತ್ತದೆ. ಅದು ಮಾಲೀಕನಿಗಾದರೂ ಸರಿ, ಗೇಣಿದಾರನಿಗಾದರೂ ಸರಿ. ಕಾನೂನು ಪ್ರಕಾರ ನಾವು ಮಾಲೀಕನಿಗೆ ಕೊಡಬೇಕು. ಟೈಟಲ್ ಯಾರ ಹೆಸರಿನಲ್ಲಿರುತ್ತದೆ ಅವರಿಗೆ ನಾವು ಪರಿಹಾರವನ್ನು ಕೊಡಬೇಕಾಗಿದೆ. ಲೀಸ್ ಡೀಡ್ ನೋಂದಣಿಯಾದರೆ, Encumbrance Certificate ನಲ್ಲಿ ಆತನ ಹೆಸರು ಬಂದೇ ಬರುತ್ತದೆ. ಸುಮಾರು 30 ವರ್ಷಗಳ ಕಾಲ ಲೀಸ್‌ಗೆ ಕೊಟ್ಟಿದ್ದಾರೆ, ಅಲ್ಲಿ ಪೆಟ್ರೋಲ್ ಬಂಕ್ ಇದೆ ಎನ್ನವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಹಣವನ್ನು ಖರ್ಚು ಮಾಡಿ ಪೆಟ್ರೋಲ್ ಬಂಕ್ ಅನ್ನು ನಿರ್ಮಾಣ ಮಾಡಿದ್ದಾನೆ. ಕಂಪನಿಯವರು ಸಹ interior design ಗಾಗಿ ಖರ್ಚು ಮಾಡಿದ್ದಾರೆ. It's an admitted fact. ಆತ ಮಾಲೀಕನ ಮೇಲೆ ಕ್ಲೈಮ್ ಮಾಡಬೇಕಾಗುತ್ತದೆ. ಆತನಿಗೆ ಪರಿಹಾರದಲ್ಲಿ ಪಾಲು ಕೊಡಲು ಮಾಲೀಕ ಒಪ್ಪಿಕೊಳ್ಳಬೇಕಾಗುತ್ತದೆ. ಎರಡರಲ್ಲಿ ಒಂದು ಆಗಬೇಕಾಗಿದೆ. ಕೋರ್ಟ್‌ನಿಂದ ಅಡ್ಡಗೋಡೆ ಮೇಲೆ ದೀಪ ಇಡುವಂತಹ ಆರ್ಡರ್‌ಗಳು ಬರುತ್ತಿವೆ. ಇಲ್ಲಿಯೂ ಅದೇ ಆಗಿದೆ. I will read the relevant portion of the court order. It reads as follows:-

> *"In the light of the above, this Court is of the considered opinion that the third respondent-LAO is required to take into consideration all these aspects*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

> *while determining the compensation, if the same is not already determined, and if the construction is made legally prior to the preliminary notification. Further, if there is no consent arrived at by the parties..."*

*"...no consent arrived at by the parties..."* ಅಂದರೆ ಮಾಲೀಕ ಮತ್ತು ಗೇಣಿದಾರನನ್ನು ಕರೆದು ಮಾತನಾಡಿ, ಇಬ್ಬರನ್ನು ಕೂರಿಸಿ ಹಂಚಿಕೆ ಮಾಡಿ. ಅವರು ಒಪ್ಪದಿದ್ದರೆ? The court order further reads as follows:-

> *"...Further, if there is no consent arrived at by the parties..."*

ಮತ್ತೇ 'parties' ಎಂದು ಬಂದಿದೆ. It further reads,

> *"...the Land Acquisition officer has to refer the matter for adjudication of title and/or apportionment of the compensation, in accordance with law."*

ಅದಕ್ಕೆ ನಾನು ಏನು ಹೇಳುವುದೇನೆಂದರೆ, ಇದರ ಬಗ್ಗೆ ನಾವು ಭೂಸ್ವಾಧೀನಾಧಿಕಾರಿಗೆ, 'ಅವರಲ್ಲಿ consensus create ಮಾಡಿ, ಪರಿಹಾರವನ್ನು ಹಂಚಿಕೆ ಮಾಡಿ' ಎಂದು ನಿರ್ದೇಶನವನ್ನು ಕೊಡುತ್ತೇವೆ. ಅಂತಿಮವಾಗಿ ಕಾನೂನು ಪ್ರಕಾರ ಏನು ಮಾಡಬೇಕು ಅದನ್ನು ಅವರು ಮಾಡುತ್ತಾರೆ. ಏಕೆಂದರೆ, ಅಧಿಕಾರವನ್ನು ಭೂಸ್ವಾಧೀನಾಧಿಕಾರಿಗೆ ಕೊಟ್ಟಿದ್ದಾರೆ. ಇಷ್ಟೆಲ್ಲ ಆದ ಮೇಲೆ ಹೈಕೋರ್ಟ್‌ನವರು 'ಗೇಣಿದಾರರಿಗೆ ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಹಕ್ಕಿದೆ' ಎಂದು ಹೇಳಬೇಕಾಯಿತು. ಲೀಸ್ ಡೀಡ್ ನೋಂದಾವಣಿಯಾಗಿದೆ ಎಂದು ಅವರು ಹೇಳುತ್ತಿದ್ದಾರೆ. ಆ ಲೀಸ್ ಡೀಡ್‌ನಲ್ಲಿ ಭೂಸ್ವಾಧೀನಕ್ಕೊಳಗಾದಾಗ ಪರಿಹಾರವನ್ನು ಕೊಡುತ್ತೇವೆ ಎನ್ನುವುದು ಇರುವುದಿಲ್ಲ. ಅದರಲ್ಲಿ ಇಷ್ಟು ವರ್ಷ ಲೀಸ್‌ಗೆ ಕೊಟ್ಟಿದ್ದೇವೆ, ಇಷ್ಟು ಮೊತ್ತದ ಹಣವನ್ನು ಬಾಡಿಗೆ ಕೊಡಬೇಕು ಎನ್ನುವುದು ಮಾತ್ರ ಇರುತ್ತದೆ. ಇದನ್ನು ಬಿಟ್ಟು ಮುಂದೆ ಏನಾದರೂ ಭೂಸ್ವಾಧೀನಪಡಿಸಿಕೊಂಡರೇ ಗೇಣಿದಾರರಿಗೆ ಇಷ್ಟು ಮೊತ್ತವನ್ನು ಕೊಡಬೇಕೆನ್ನುವುದು ಇರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಲೀಸ್ ಡೀಡ್ ನೋಂದಣಿಯಾಗಿರುತ್ತದೆ. ಭೂಸ್ವಾಧೀನಪಡಿಸಿಕೊಂಡರೇ ಗೇಣಿದಾರರಿಗೆ ಇಷ್ಟು ಮೊತ್ತವನ್ನು ಕೊಡಬೇಕೆನ್ನುವುದು ಇರುವುದಿಲ್ಲ.

**ಶ್ರೀ ಜಗದೀಶ್ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ, ಭೂಸ್ವಾಧೀನಪಡಿಸಿಕೊಂಡರೇ ಗೇಣಿದಾರರಿಗೆ ಇಷ್ಟು ಮೊತ್ತವನ್ನು ಕೊಡಬೇಕೆನ್ನುವುದು ಇರುವುದಿಲ್ಲ. ಭೂಸ್ವಾಧೀನಪಡಿಸಿಕೊಳ್ಳುವುದು ಯಾರಿಗೂ ಗೊತ್ತಿರುವುದಿಲ್ಲ. ಆದ್ದರಿಂದ ಕಾನೂನು ಪ್ರಕಾರವಾಗಿ ಏನು ಮಾಡಬೇಕು ಅದನ್ನೇ ಮಾಡಬೇಕಾಗುತ್ತದೆ.

**(601) 19.3.2020 5.50 ಪಿಕೆ:ಆರ್‌ಎನ್**

**ಶ್ರೀ ಎಸ್.ಆರ್.ಪಾಟೀಲ್:–** ಇದರಲ್ಲಿ apportionment ಮಾಡುತ್ತಾರೆ.

**ಶ್ರೀ ಜಗದೀಶ್ ಶೆಟ್ಟರ್:–** ಅದನ್ನೇ ಹೈಕೋರ್ಟ್‌ನವರು ನಿರ್ದೇಶನ ಕೊಟ್ಟಿದ್ದರೆ ಈ ಸಮಸ್ಯೆ ಬರುತ್ತಲೇ ಇರಲಿಲ್ಲ. ಅಲ್ಲದೇ party consensus create ಮಾಡಿ ಎಂದು ಹೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಇಲ್ಲವಾದಲ್ಲಿ old Land Acquisition provisions ಪ್ರಕಾರ ಅವರು title deed prove ಆಗಲಿಲ್ಲ ಎಂದರೆ refer ಮಾಡಿ ಡೆಪಾಸಿಟ್ ಮಾಡಬೇಕಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:–** ಇದು ಕೊನೆಗೆ, ಕೋರ್ಟ್‌ನಲ್ಲಿ ಡೆಪಾಸಿಟ್ ಮಾಡಿ ಎಂದಾಗುತ್ತದೆ. ಅವರಲ್ಲಿ consensus create ಆದರೆ ಕೊನೆಗೆ ಕೋರ್ಟ್‌ಗೆ ಡೆಪಾಸಿಟ್ ಮಾಡಬೇಕಾಗುತ್ತದೆ. ಒಪ್ಪಿಗೆಯಾದರೆ ಎಲ್ಲವೂ ಮುಗಿದು ಹೋಗುತ್ತದೆ. Owner ಎನಿಸಿಕೊಂಡವನು, ಹೌದಪ್ಪ ನೀನು ಇಷ್ಟು ಖರ್ಚು ಮಾಡಿರುವೆ, 25 ಪರ್ಸೆಂಟ್ ತೆಗೆದುಕೊಂಡು ಬಿಡು ಎಂದು ಹೇಳಿದರೆ ಸಮಸ್ಯೆಯಿಲ್ಲ. ಆದರೆ ಅವನು ಜಗಳ ತೆಗೆದು, ತಕರಾರು ಮಾಡಿದರೆ ಕೋರ್ಟ್‌ಗೆ ಡೆಪಾಸಿಟ್ ಮಾಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಕಾನೂನುರೀತ್ಯ ನಾವು ಕೆಲಸ ಮಾಡುತ್ತೇವೆ. ನಾವು Lessee ಗೆ ಹಕ್ಕಿಲ್ಲ, ಈ ರೂಲಿಂಗ್‌ಗಳ ಪ್ರಕಾರ ಅವನಿಗೆ right ಬರುವುದಿಲ್ಲ ಎಂದು ಹೇಳುವುದಿಲ್ಲ. ಮಾನ್ಯ ಸದಸ್ಯರು ಕೆಲವು ಹೈಕೋರ್ಟ್ ತೀರ್ಪುಗಳನ್ನು ಕೋಟ್ ಮಾಡಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅಷ್ಟೊಂದು ಖರ್ಚು ಮಾಡಿರುತ್ತಾರೆ, Lessee ಆಗಿರುತ್ತಾನೆ, possession ದಲ್ಲಿರುತ್ತಾನೆ, ಆತನಿಗೆ ಒಂದು ನ್ಯಾಯ ಸಿಗಬೇಕು. ಆದರೆ ಈ ಕಾನೂನಿನ within legal purview ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಮ ಕೈಗೊಳ್ಳಬೇಕಾಗುತ್ತದೆ. ಆ ಹಿನ್ನೆಲೆ LandAcquisition Officer ಗೆ ನಾನು ನಿರ್ದೇಶನ ಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಈ ರೀತಿ ಭೂಸ್ವಾಧೀನ ಮಾಡಿದಾಗ ಬಾಡಿಗೆದಾರರಿಗೆ ಏನೇನು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ before acquisition notification 4 ಅರ್ಜಿ ಕೊಟ್ಟರೂ, ಸುಪ್ರಿಮ್ ಕೋರ್ಟ್‌ನ ಆರ್ಡರ್‌ಗಳನ್ನು ಕೊಟ್ಟರೂ ನೀವು ಅದನ್ನು ಪರಗಣಿಸಲಿಲ್ಲ. ಆ ಹಂತದಲ್ಲೇ ನಿಮ್ಮ ಭೂಸ್ವಾಧೀನ ಅಧಿಕಾರಿಗಳು ಗಮನಹರಿಸಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಭೂಮಾಲೀಕನಿಗೆ ಅಷ್ಟೊಂದು ಪ್ರಮಾಣದಲ್ಲಿ ಪರಿಹಾರ ಕೊಟ್ಟು, ಎಲ್ಲಾ ಅವನ ಪ್ರಾಪರ್ಟಿ Lease Holder ಮೇಲಿರುತ್ತದೆ, 25 ವರ್ಷಗಳ ಕಾಲ ಹಕ್ಕಿರುತ್ತದೆ. ಇವರು permanent Lease Holder ಆಗಿರುತ್ತಾರೆ. ಇವರು ಪೆಟ್ರೋಲ್ ಬಂಕ್‌ಗೆ ಕೊಟ್ಟಿಲ್ಲ, ಪೆಟ್ರೋಲ್ ಕಂಪನಿಗೆ ಲೀಜ್ ಹೋಲ್ಡರ್ ಕೊಟ್ಟಿರುತ್ತಾರೆ. ಅಂತಹ ಒಂದು ಲೀಜ್ ಹೋಲ್ಡರ್‌ಶಿಪ್ 25 ವರ್ಷ ಇರುತ್ತದೆ. ಸರ್ಕಾರ ಯಾವುದಾದರೂ ಲೀಜ್ ಕೊಟ್ಟರೆ 30-25 ವರ್ಷಕ್ಕೆ ಕೊಡುತ್ತೇವೆ. ಅದೇ ತರಹದ ಹಕ್ಕು ಈ ಲೀಜ್ ಹೋಲ್ಡರ್ ಡೀಲರ್‌ಶಿಪ್ ಹೊಂದಿರುತ್ತಾನೆ. ಇಂಥದ್ದಕ್ಕೆ apportionment ಕೊಡಬೇಕು ಎನ್ನುವಾಗ ನಿಮ್ಮ ಭೂಸ್ವಾಧೀನ ಅಧಿಕಾರಿಗೆ ಅರ್ಜಿಗಳನ್ನು ಕೊಟ್ಟರೂ, ಕೋರ್ಟ್ ಆದೇಶಗಳನ್ನು ಕೊಟ್ಟರೂ ಗಮನಿಸಲಿಲ್ಲ. ಆದ್ದರಿಂದ ಇಂಥಾ ಅಧಿಕಾರಿಗಳಿಗೆ ತಾವು ನಿರ್ದೇಶನ ಕೊಟ್ಟು ಇವರಿಗೆ ಪರಿಹಾರ ಕೊಡಿಸುವ ಕೆಲಸ ಮಾಡಿ.

**ಶ್ರೀ ಜಗದೀಶ್ ಶೆಟ್ಟರ್:-** ಸೂಕ್ತ ರೀತಿಯಲ್ಲಿ ನಾನು ಅಧಿಕಾರಿಗಳಿಗೆ ನಿರ್ದೇಶನ ಕೊಡುತ್ತೇನೆ.

**10. ನಿಯಮ 330ರ ಮೇರೆಗೆ ಚರ್ಚೆ**

**ವಿಷಯ: ರಾಜ್ಯದಲ್ಲಿ ದಿನನಿತ್ಯ ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ಮಿಶ್ರಿತ ಕಲಬೆರಕೆ ಹೆಚ್ಚಾಗಿ ಜನಸಾಮಾನ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಬಗ್ಗೆ.**

- - -

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ದಿನನಿತ್ಯ ಉಪಯೋಗ ಮಾಡುವ ಎಲ್ಲಾ ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ಮಿಶ್ರಿತ ಕಲಬೆರಕೆ ಹೆಚ್ಚಾಗುತ್ತಿದೆ. ಇದು ಮುಂದಿನ ದಿನಗಳಲ್ಲಿ ಎಲ್ಲಿಗೆ ಹೋಗಿ ಮುಟ್ಟುತ್ತದೆಯೋ ಗೊತ್ತಿಲ್ಲ. ಕಲಬೆರಕೆಯ ಕೆಲಸ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ವ್ಯವಸ್ಥಿತವಾಗಿ ನಡೆಯುತ್ತಿದೆ. ಪರಿಶುದ್ಧವಾದ ಆಹಾರ ಪದಾರ್ಥಗಳು ಎಲ್ಲಿವೆ ಎಂದು ಹುಡುಕಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಲಬೆರಕೆಯಿಂದ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ; ಅನೇಕ ರೋಗಗಳಿಗೆ ತುತ್ತಾಗಬೇಕಾಗುತ್ತದೆ. ಎಲ್ಲಾ ಆಹಾರ ಪದಾರ್ಥಗಳಲ್ಲಿ, ಅದರಲ್ಲೂ ನಿತ್ಯ ಸೇವಿಸುವಂತಹ edible oil ಏನಿದೆ ಅದು ರಾಸಾಯನಿಕ ಮಿಶ್ರಿತ ವಿಷವಾಗಿರುತ್ತದೆ. ಇದು ರಾಕ್ಷಸೀ ರೂಪದಲ್ಲಿ ಪೆಡಂಭೂತವಾಗಿ ಬೆಳೆದಿದೆ. ವ್ಯಾಪರಸ್ಥರು, ಜನರ ಆರೋಗ್ಯ ಹಾಳಾಗಿ ಹೋದರೂ ಅದರ ಬಗ್ಗೆ ಚಿಂತೆ ಮಾಡದೇ ಹಣ ಮಾಡುವ ಉದ್ದೇಶವನ್ನು ಹೊಂದಿದ್ದಾರೆ. ಇಷ್ಟು ಮೋಸದಿಂದ ಕಲಬೆರಕೆಯಾದಂತಹ edible oil ಮಾರಾಟ ಮಾಡುವುದು ನೋಡಿದರೆ ಜೀವ ಝಲ್ ಎನಿಸುತ್ತದೆ. ಮಾರುಕಟ್ಟೆಯಲ್ಲಿ ನಾವು ಚಿಲ್ಲರೆಯಾಗಿ ಅಡಿಗೆಗೋಸ್ಕರ ತೆಗೆದುಕೊಳ್ಳುವ ಎಣ್ಣೆಯಲ್ಲಿ ಎಷ್ಟು ಪರ್ಸೆಂಟ್ ಕಲಬೆರಕೆ ಇರುತ್ತದೆ? ಸುಮಾರು 80-90 ಪರ್ಸೆಂಟ್ ಕಲಬೆರಕೆ ಇರುತ್ತದೆ. 10-20 ಪರ್ಸೆಂಟ್ ಅಷ್ಟು ಮಾತ್ರ ಶುದ್ಧವಾದ ಖಾದ್ಯ ತೈಲ ಇರುತ್ತದೆ. ಇದರ ಬಗ್ಗೆ ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿಜ್ಞಾನಿಗಳು, ಆಹಾರ ತಜ್ಞರು, ವೈದ್ಯರು ಇದರ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿ ಮಾತನಾಡಿದ್ದಾರೆ. ಆ ಎಣ್ಣೆಯ ಜೊತೆ ಕಡಿಮೆ ಬೆಲೆಗೆ ಸಿಗುವಂತಹ ಪೆಟ್ರೋಲಿಯಂ ಉಪಉತ್ಪನ್ನವಾದ mineral oil ಮಿಕ್ಸ್ ಮಾಡುತ್ತಾರೆ. ಖಾದ್ಯ ತೈಲದಲ್ಲಿ ಕಡಿಮೆ ಬೆಲೆಯಲ್ಲಿ ಸಿಗುವ mineral oil ಅನ್ನು ಸೇರಿಸುತ್ತಾರೆ. ಇದರ ಜಾಲ ಅನೇಕ ರಾಜ್ಯಗಳಲ್ಲಿ ಹರಡಿದೆ. ಶೇಕಡ 10 ರಷ್ಟು ಕೊಬ್ಬರಿ ಎಣ್ಣೆಗೆ ಶೇಕಡ 90 ರಷ್ಟು mineral oil ಸೇರಿಸುತ್ತಾರೆ. 10 ಪಸೆಂಟ್ ಅಷ್ಟೇ ಶುದ್ಧವಾದ ಎಣ್ಣೆಯಾಗಿದ್ದು, ಅದರ ಜೊತೆ ಕಡಿಮೆ ಬೆಲೆಯ mineral oil ಮಿಕ್ಸ್ ಮಾಡುತ್ತಾರೆ. ಇದನ್ನು ಪತ್ತೆ ಹಚ್ಚುವುದು ಅಷ್ಟು ಸರಳ ಅಲ್ಲ. It is very difficult to identify. ಬರೀ ಕಣ್ಣಿನಲ್ಲಿ ನೋಡಿದರೆ, ಇದರಲ್ಲಿ ಮಿಕ್ಸ್ ಆಗಿದೆ, ಕಲಬೆರಕೆ ಇದೆ ಎಂದು ಕಂಡುಹಿಡಿಯವುದಕ್ಕೆ ಆಗುವುದಿಲ್ಲ. ಇಂಥದ್ದಕ್ಕೆ ಕಡಿವಾಣ ಹಾಕುವವರು ಯಾರು? ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಇದು ಅವ್ಯಾಹತವಾಗಿ ನಡೆದಿದೆ; ಹೇಳುವವರು, ಕೇಳುವವರು ಯಾರೂ ಇಲ್ಲ. ನಮ್ಮ ಮಾರುಕಟ್ಟೆಯಲ್ಲಿ ಒಂದು ಕೆ.ಜಿ edible oil ಅನ್ನು ಯಾರು ಕಡಿಮೆ ಬೆಲೆಗೆ ಕೊಡುತ್ತಾರೋ ಜನ ಅಲ್ಲಿಗೆ ಹೋಗುತ್ತಾರೆ. ಎಷ್ಟು ದರ ಕಡಿಮೆ ಇರುತ್ತದೆಯೋ ಅಷ್ಟೇ ಅದರಲ್ಲಿ mineral oil ಮಿಕ್ಸ್ ಆಗಿರುತ್ತದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಒಂದು ಕಾನೂನು ಇದೆ. ಇದಕ್ಕಾಗಿ ಒಂದು ಆಯುಕ್ತಾಲಯ ಕೂಡ ಸ್ಥಾಪನೆಯಾಗಿದೆ. ಮಾನ್ಯ ಸಭಾಪತಿಯವರೇ, ಈ ಆಯುಕ್ತಲಾಯದ ಕಚೇರಿ ಕೆಲಸ ಮಾಡುತ್ತಿದೆ. ಆದರೆ ಅಲ್ಲಿ ಸಿಬ್ಬಂದಿಗಳು ಇಲ್ಲ. ಸಿಬ್ಬಂದಿ ಕೊರತೆಯಿಂದ ನರಳುತ್ತಿದೆ. ಅಲ್ಲಿರುವ ಕೆಲವು ಸಿಬ್ಬಂದಿಗಳು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರಿದ್ದಾರೋ ಅವರನ್ನು ಮದರ್ ಡಿಪಾರ್ಟ್‌ಮೆಂಟ್‌ನವರು ಎರವಲು ಪಡೆದು ಕಳುಹಿಸಿ ಕೊಟ್ಟಿರುತ್ತಾರೆ. ಯಾವುದೋ ಒಂದು ಇಲಾಖೆಯಿಂದ ಅನುಭವ ಇಲ್ಲದವರು ಅಲ್ಲಿಗೆ ಬರುತ್ತಾರೆ. ಏಕೆಂದರೆ ಅಲ್ಲಿ ಏನೂ ಕೆಲಸ ಇರುವುದಿಲ್ಲ. ಕಲಬೆರಕೆ ದಂಧೆ ನಿಲ್ಲಿಸುವಂತಹ ಒಂದು ವ್ಯವಸ್ಥೆ ಸುತಾರಾಂ ಇಲ್ಲ. ಆಯುಕ್ತಾಲಯ ಈ ಕೆಲಸದಲ್ಲಿ ಸಂಪೂರ್ಣ ವಿಫಲವಾಗಿದೆ. ಏನೂ ಕೆಲಸ ಮಾಡುತ್ತಿಲ್ಲ. ಮೊದಲೇ ಸಿಬ್ಬಂದಿಗಳಿಲ್ಲ, ಇರುವ ಸಿಬ್ಬಂದಿಗಳು deputation ಮೇಲೆ ಬಂದಿರುತ್ತಾರೆ. ಅವರು ಬೆಣ್ಣೆ, ತುಪ್ಪ ತಯಾರಿಸುವ ಸಂಸ್ಥೆಗಳ ಮೇಲೆ ಅಮಾವಾಸ್ಯೆಗೊಮ್ಮೆ, ಹುಣ್ಣಿಮೆಗೊಮ್ಮೆ ದಾಳಿ ಮಾಡಿರುವ ಉದಾಹರಣೆಗಳಿವೆ. ಅದರಿಂದ outcome ಇಲ್ಲ. ಅವರ ಜೊತೆ collude ಆಗಿ ಕ್ಲೋಸ್ ಮಾಡಿದ ಅನೇಕ ಉದಾಹರಣೆಗಳು ಇವೆ. ಮಾನ್ಯ ಸಭಾಪತಿಯವರೇ, ಮೊದಲು, ನಾವು ತೆಗೆದುಕೊಂಡು ಹೋಗುವ ಶೇಂಗಾ ಬೀಜ ಅಥವಾ ಕುಸುಬಿ ಬೀಜಗಳನ್ನು ಗಾಣಕ್ಕೆ ಕೊಟ್ಟರೆ ನಮ್ಮ ಕಣ್ಣೆದುರಿಗೆ ಅದನ್ನು ಗಾಣಕ್ಕೆ ಹಾಕಿ ಎಣ್ಣೆ ತೆಗೆದುಕೊಡುತ್ತಿದ್ದರು. ಅಲ್ಲಿ ಕಲಬೆರಕೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಅದು ಸುಹಾಸನೆಯಿಂದ ಕೂಡಿರುತ್ತದೆ ಮತ್ತು ಅದರಲ್ಲಿ ಪೋಷಕಾಂಶ ಕೂಡ ಇರುತ್ತದೆ. ಈ ರೀತಿ ಉತ್ಪಾದಿಸಲು ತಗಲುವ ವೆಚ್ಚ ಎಷ್ಟಾಗುತ್ತದೆ ಎಂದು ಹೇಳಿದರೆ ಆಶ್ಚರ್ಯವಾಗಬಹುದು.

**(602) 19–03–2020 6.00 ಡಿಎಸ್–ಆರ್‌ಎನ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ಒಂದು ಕೆ.ಜಿ. ಕಡಲೆಕಾಯಿ ಎಣ್ಣೆ ತೆಗೆಯಬೇಕೆಂದರೆ ಮೂರರಿಂದ ಮೂರೂವರೆ ಕೆ.ಜಿ. ಕಡಲೆಕಾಯಿ ಬೀಜ ಬೇಕಾಗುತ್ತದೆ. ಒಂದು ಕೆ.ಜಿ. ಕಡಲೆಕಾಯಿ ಬೀಜಕ್ಕೆ 120 ರೂಪಾಯಿಗಳೆಂದರೆ ಒಂದು ಕೆ.ಜಿ. ಕಡಲೆಕಾಯಿ ಎಣ್ಣೆ ತೆಗೆಯಬೇಕೆಂದರೆ 415 ರೂಪಾಯಿ ಖರ್ಚು ಬರುತ್ತದೆ. ಒಂದು ಕೆ.ಜಿ. groundnut edible oil ಗೆ 415 ರೂಪಾಯಿಯಷ್ಟು ಖರ್ಚು ಬರುತ್ತದೆ. ಮಾರ್ಕೆಟ್‌ನಲ್ಲಿ ಒಂದು ಕೆ.ಜಿ. ಕಡಲೆಕಾಯಿ ಎಣ್ಣೆ 125 ರೂಪಾಯಿಗೆ ಮಾರಾಟವಾಗುತ್ತಿದೆ. ಪರಿಶುದ್ಧವಾದಂತಹ ಕಡಲೆಕಾಯಿ ಎಣ್ಣೆಗೆ ನಿಜವಾಗಿಯೂ 415 ರೂಪಾಯಿ ವೆಚ್ಚವಾಗುತ್ತಿದೆ. ಆದರೆ, ಮಾರ್ಕೆಟ್‌ನಲ್ಲಿ ಒಂದು ಕೆ.ಜಿ. ಕಡಲೆಕಾಯಿ ಎಣ್ಣೆಯನ್ನು 120 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. How it is possible? ಯಾರಾದರೂ ನಷ್ಟ ಮಾಡಿಕೊಂಡು ಮಾರಾಟ ಮಾಡುತ್ತಾರೆಯೇ? ಈ ದರ ಏನು ವ್ಯತ್ಯಾಸವಿದೆಯಲ್ಲಾ; 415 ರೂಪಾಯಿ ಇರುವುದು 100 ರೂಪಾಯಿ, 80 ರೂಪಾಯಿಗೂ ಮಾರಾಟ ಮಾಡುತ್ತಿದ್ದಾರೆ. ಅಂದಾಜು 300 ರೂಪಾಯಿ ವ್ಯತ್ಯಾಸವಾಗುತ್ತಿದೆ. ಒಂದು ಕೆ.ಜಿ. ಕಡಲೆಕಾಯಿ ಎಣ್ಣೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

300 ರೂಪಾಯಿಗಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿದರೆ ಅದು ಕಲಬೆರಕೆಯಾಗುತ್ತದೆ. ಆ ಕಲಬೆರಕೆ ಎಣ್ಣೆ ನಮ್ಮ ದೇಹದಲ್ಲಿ ಪ್ರವೇಶ ಮಾಡಿದ ಕೂಡಲೇ digestive system ಮೇಲೆ ಏನು ಪರಿಣಾಮ ಬೀರುತ್ತದೆ ಎಂಬುದನ್ನು ಯೋಚಿಸಬೇಕಾಗುತ್ತದೆ. ದೇಹದ ಆರೋಗ್ಯ ಹೇಗೆ ಉಳಿಯುತ್ತದೆ? ಮಿನರಲ್ ಆಯಿಲ್ ಸೇವನೆ ಮಾಡಿದರೆ ದೇಹದ ಮೇಲೆ ದುಷ್ಪರಿಣಾಮ ಆಗಲೇಬೇಕಲ್ಲವೇ? ಮುಂದೆ ಅನೇಕ ರೋಗಗಳಿಗೆ ನಾವು ಸ್ವಾಗತ ಮಾಡಿದ ಹಾಗೆ ಆಗುತ್ತದೆಯಲ್ಲವೆ. ಗಾಣದಲ್ಲಿ ಎಣ್ಣೆ ತೆಗೆಯುವುದು ಪರಿಶುದ್ಧವಾಗಿರುತ್ತದೆ. ಇದೊಂದು ದೊಡ್ಡ ಮಾಫಿಯಾ ಆಗಿದೆ. ಇದನ್ನು ನಿಯಂತ್ರಿಸದಿದ್ದರೆ ಈಗೇನು ಕೊರೊನಾ ಅಥವಾ ಕೋವಿಡ್-19 ಎಂದು ಏನು ಹೇಳುತ್ತೇವೆ ಅದೇ ರೀತಿ ಇದಕ್ಕೊಂದು ಏನಾದರು ವೈರಸ್ ಹುಟ್ಟಬಹುದು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಲಬೆರಕೆ ಆಗಿದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ 1%, 2%, 3%, 4%..ಪ್ರಮಾಣದಲ್ಲಿ ಕಲಬೆರಕೆ ಆಗುತ್ತಿದೆ ಎಂದು ಹೇಳುತ್ತಿದ್ದರು. ಅಕ್ಕಿಯಲ್ಲಿ ಅರಳುಗಳನ್ನು ಆರಿಸುವ ಬದಲು ಅರಳಿನಲ್ಲೇ ಅಕ್ಕಿ ಆರಿಸಿದ ಹಾಗೆ ಶೇಕಡ 90 ರಷ್ಟು ಮಿಕ್ಸ್ ಮಾಡಿರುತ್ತಾರೆ. ಶೇಕಡ 10 ರಷ್ಟು ಮಾತ್ರ ಅಕ್ಕಿ ಇರುತ್ತದೆ. ನೋಡಿದರೆ ಏನೇನು ವ್ಯತ್ಯಾಸ ಕಾಣುವುದಿಲ್ಲ. ಪ್ರಜಾವಾಣಿ ಪತ್ರಿಕೆಯಲ್ಲಿ 'ಕಲಬೆರಕೆ ಮಾಫಿಯಾ' 'ಮಿನರಲ್ ಆಯಿಲ್ ಅಗ್ಗದ ಎಣ್ಣೆಯಲ್ಲಿ ಮಿಶ್ರಣ' ಖಾದ್ಯ ತೈಲದಲ್ಲಿ ವಿಷ. ಅದರಲ್ಲಿ ಮಿಕ್ಸ್ ಆಗುವಂತಹ ಅಂಶ ಏನಿದೆ ಅದು ಮಾನವನ ದೇಹದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂಥದ್ದಲ್ಲ, ಅದು ವಿಷ. That content is purely poisonous. 'ಕಾಯ್ದೆ ಇದ್ದರೂ ಇಲ್ಲ ಕಡಿವಾಣ' ಇದರ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ದೊಡ್ಡ ಆರ್ಟಿಕಲ್ ಬಂದಿದೆ. ಈ ಕಲಬೆರಕೆ ಮಾಡುವವರನ್ನು ಶಿಕ್ಷಿಸುವುದಕ್ಕೆ ಈ ರಾಜ್ಯದಲ್ಲಿ ಕಾನೂನು ಇದೆ. ಅದಕ್ಕೊಂದು ಕಮಿಷನರೇಟ್ ಆಫೀಸ್ ಇದೆ. ಆದರೆ, ಅವರ ಮೇಲೆ ಕಡಿವಾಣ ಇಲ್ಲ. ವ್ಯಾಪಾರಸ್ಥರು ಮತ್ತು ನಮ್ಮ ಕಮಿಷನರೇಟ್ ಆಫೀಸ್ ನಲ್ಲಿರುವಂತಹ ಅಧಿಕಾರಿಗಳು ಸೇರಿ ಈ ರೀತಿ ಮಾಡುತ್ತಿರಬಹುದು. ಅದೊಂದು ದೊಡ್ಡ ಮಾಫಿಯಾ. 'ರಾಜ್ಯದಲ್ಲಿ ಇನ್ನು ಉಸಿರಾಡುತ್ತಿದೆ, ಗಾಣದ ಎಣ್ಣೆ ಉದ್ಯಮ' ಎಂದು ಪತ್ರಿಕೆಯಲ್ಲಿ ಬಂದಿದೆ. ನಾವು ಚಿಕ್ಕವರಾಗಿದ್ದಾಗ ಗಾಣಕ್ಕೆ ಹೋಗಿ ನೋಡಿದ್ದೇವೆ. ಇವತ್ತಿಗೂ ಕೂಡ ಈ ಗಾಣಗಳು ಇವೆ. ನಮ್ಮ ಉತ್ತರ ಕರ್ನಾಟಕದಲ್ಲಿ ಇವತ್ತಿಗೂ ಈ ಗಾಣಗಳನ್ನು ನಡೆಸುತ್ತಿದ್ದಾರೆ. ನಾವು ಒಂದು ಕ್ವಿಂಟಾಲ್, ಎರಡು ಕ್ವಿಂಟಾಲ್ ಅಥವಾ 50 ಕೆ.ಜಿ. ಕಡಲೆಬೀಜ, ಕುಸುಬೆತೆಗೆದುಕೊಂಡು ಹೋಗುತ್ತೇವೆ. ನಮ್ಮ ಎದುರಿನಲ್ಲೇ ಗಾಣ ಹಾಕಿ oil extract ಮಾಡಿ ಅದರಲ್ಲಿ ಎಷ್ಟು ಎಣ್ಣೆ ಬರುತ್ತದೆಯೋ ಅಷ್ಟನ್ನು ಕೊಡುತ್ತಾರೆ. ಅದಕ್ಕೆ ಅವರು ಚಾರ್ಜ್ ಮಾಡುತ್ತಾರೆ. ಒಂದು ಕ್ವಿಂಟಾಲ್‌ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಷ್ಟು ಬೆಲೆ ಎಂದು ಇರುತ್ತದೆ, ಅಷ್ಟನ್ನು ಕೊಟ್ಟು ನಾವು ತೆಗೆದುಕೊಂಡು ಬರುತ್ತೇವೆ. ಅದು ಪರಿಶುದ್ಧವಾಗಿರುತ್ತದೆ. ಅದರಲ್ಲಿ ಕೇಕ್ ಕೂಡ ಮಾಡುತ್ತಾರೆ. ಶೇಂಗಾ..Groundnut cake ನಮ್ಮ cattle ಗೆ feed ಆಗುತ್ತದೆ. ಈ ರೀತಿ ಮಾಡುವುದರಿಂದ ಆರೋಗ್ಯ ಉಳಿಯುತ್ತದೆ. ಈ ಕಲಬೆರಕೆಗೆ ಏನಾದರೂ ಕಡಿವಾಣ ಹಾಕುವುದು ಅವಶ್ಯಕವಾಗಿದೆ. ಇಲ್ಲದಿದ್ದರೆ ದೊಡ್ಡ ದುರಂತಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಕೋವಿಡ್-19 ಎಲ್ಲಿ ಹುಟ್ಟಿತೋ-ಹೇಗೆ ಹುಟ್ಟಿತೋ, ಇದು ತನ್ನಷ್ಟಕ್ಕೇ ತಾನೇ ಉತ್ಪತ್ತಿಯಾಗಿದೆ. ಜನರ ಆರೋಗ್ಯದ ಜೊತೆ ಚೆಲ್ಲಾಟ ಆಡುವಂತಹ ಪರಿಸ್ಥಿತಿ ಉದ್ಭವಿಸಿದರೂ ಕೂಡ ಇವತ್ತು ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಮಾನ್ಯ ಆರೋಗ್ಯ ಸಚಿವರೇ, ಜನರ ಕಡೆ ಲಕ್ಷ್ಯ ಇರಬೇಕಲ್ಲವೇ? It your responsibility. ಜನರ ಆರೋಗ್ಯವನ್ನು ಕಾಪಾಡುವವರು ಯಾರು? ಮಾನ್ಯ ಸಚಿವರು ಕಣ್ತೆರೆದರೆ ಇಂತಹ ಮಾಫಿಯಾವನ್ನು ತಹಬಂಧಿಗೆ ತರಬಹುದು. ಇದಕ್ಕೆ ಸಂಬಂಧಪಟ್ಟ ಇಲಾಖೆ ಸುಮ್ಮನೆ ಕುಳಿತಿದೆ. ಇದು ಆರೋಗ್ಯ ಇಲಾಖೆಗೆ ಮತ್ತು ಆಹಾರ ಹಾಗೂ ನಾಗರೀಕ ಸರಬರಾಜು ಇಲಾಖೆಗೆ ಸಂಬಂಧಪಟ್ಟಿರಬಹುದು. Food Adulteration Act ಕೆಳಗೆ ಈ ಮಾಫಿಯಾವನ್ನು ತಡೆಗಟ್ಟಬಹುದು. ಮಾನ್ಯ ಸಚಿವರ ಕೈಯಲ್ಲಿ men and material ಇವೆ, ಇದರ ಅಂಕುಶ ಮಾನ್ಯ ಸಚಿವರ ಕೈಯಲ್ಲಿದೆ. 400 ರೂಪಾಯಿಗೆ ಒಂದು ಕೆ.ಜಿ. edible oil ಯಾರು ತೆಗೆದುಕೊಳ್ಳುತ್ತಾರೆ? 100 ರೂಪಾಯಿಗೆ ಎಣ್ಣೆ ತೆಗೆದುಕೊಳ್ಳುತ್ತಿದ್ದಾರೆ, ಈತ ಬಹಳ ಒಳ್ಳೆಯ ಮನುಷ್ಯ, ಎಷ್ಟು ಚೀಪಾಗಿ ತೆಗೆದುಕೊಂಡು ಶ್ರೀಮಂತನಾಗುವುದಕ್ಕೆ ಹೊರಟಿದ್ದಾನೆ ಎಂದು ಹೇಳುತ್ತಾರೆ. ಆದರೆ, ಇದರಲ್ಲಿ ಶೇಕಡ 90 ರಷ್ಟು ವಿಷ ಇರುತ್ತದೆ. ಮಿನರಲ್ ಆಯಿಲ್‌ಗೆ ಕೆಮಿಕಲ್ಸ್ ಮಿಕ್ಸ್ ಮಾಡುತ್ತಾರೆ. ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, this is a very serious matter. ಇದು ಇಡೀ ವಿಶ್ವವ್ಯಾಪಿಯಾಗಿ pandemic ಆಗಿ ಬೆಳೆದಿದೆಯಲ್ಲಾ ಕೊರೊನಾ, ಕೋವಿಡ್-19, ಏಕೆಂದರೆ ದಿನಾ ಅದರ ಜೊತೆಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಇಂತಹ ಕಲಬೆರಕೆ ಮಾಡುವುದರಿಂದ ಪರಿಸ್ಥಿತಿ ಬಹಳ ಚಿಂತಾಜನಕವಾಗುತ್ತದೆ. You have to suppress such mafias mercilessly. It is you lookout. You should take care of health of the people in the State. ಈ ಮಾಫಿಯಾ ಬಹಳ ಪೆಡಂಭೂತವಾಗಿ ಬೆಳೆದಿದೆ. ಇವರ ಕಬಂಧ ಬಾಹುಗಳು ಬಹಳ ದೂರವಿದೆ. ಈ ಮಾಫಿಯಾದವರು ಕಮಿಷನರೇಟ್ ಆಫೀಸ್‌ರವರನ್ನು ಖರೀದಿ ಮಾಡುವಷ್ಟು ಸಾಮರ್ಥ್ಯಉಳ್ಳವರಿದ್ದಾರೆ. ನಾನು ನಮ್ಮ ರಾಜ್ಯದ್ದಷ್ಟೇ ಹೇಳುತ್ತಿಲ್ಲ. ಇದು ಬೇರೆ ರಾಜ್ಯಗಳಲ್ಲೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಸ್ತಾರವಾಗಿದೆ. ಈ ರಾಜ್ಯದ ಜನತೆಯ ಆರೋಗ್ಯ ದೃಷ್ಟಿಯಿಂದ ಈ ಕಲಬೆರಕೆ ಖಾದ್ಯ ತೈಲ ಇರಬಹುದು, foodstuffನಲ್ಲಿ ಇರಬಹುದು, ಅನೇಕ ತಿನ್ನುವಂತಹ ವಸ್ತುಗಳಲ್ಲಿ ಏನು ಕಲಬೆರಕೆಯಾಗುತ್ತದೆ ಅದರ ಬಗ್ಗೆ ನಿರ್ದಾಕ್ಷಿಣ್ಯವಾದಂತಹ ಕ್ರಮ ಕೈಗೊಂಡು ಆ ಮಾಫಿಯಾವನ್ನು ಹದ್ದುಬಸ್ತಿಗೆ ತರುವುದರ ಜೊತೆಗೆ ಜನರ ಆರೋಗ್ಯವನ್ನು ಕಾಪಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮನುಷ್ಯರನ್ನು ನಿಧಾನವಾಗಿ ಕೊಲ್ಲುವಂತಹ ಆಹಾರದ ಕಲಬೆರಕೆಯ ವಿಷಯದ ಬಗ್ಗೆ ಮಾತನಾಡುವಂತಹ ಅವಕಾಶ ನಮಗೆ ಸದನದಲ್ಲಿ ಸಿಕ್ಕಿದೆ. ಮಾನ್ಯ ಆರೋಗ್ಯ ಸಚಿವರು ಇಲ್ಲಿ ಕುಳಿತಿದ್ದಾರೆ. ಅವರಿಗೆ ತೀವ್ರವಾಗಿ ಕೋವಿಡ್–19 ಬಗ್ಗೆ ಒತ್ತಡವಿದೆ. ಒತ್ತಡವಿದ್ದರೂ ಇದು ಅತ್ಯಂತ ಮಹತ್ವವಾದ ವಿಚಾರವೆನ್ನುವ ಕಾರಣಕ್ಕಾಗಿ ನಮ್ಮ ಸಮಸ್ಯೆಯನ್ನು ಅವರು ಆಲಿಸುತ್ತಿದ್ದಾರೆ. ನಾವು ಎಲ್ಲಿಗೆ ಹೋಗಿ ನಿಂತಿದ್ದೇವೆ, ಏನಾಗುತ್ತಿದೆ ಎನ್ನುವ ಪರಿಸ್ಥಿತಿಯನ್ನು ನಾವು ವಾಸ್ತವಿಕ ನೆಲೆಗಟ್ಟಿನಿಂದ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ತಲಸ್ಪರ್ಶಿ ನೆಲೆಯಿಂದ ನಾವು ಆರಂಭ ಮಾಡುವುದಾದರೆ ಇವತ್ತು ನಾವು ಬೆಳೆಯುವ ಬೆಳೆಗಳು ಆಹಾರ ಉತ್ಪನ್ನಗಳು ಈಗಾಗಲೇ ವಿಷಯುಕ್ತ, ಅವು ರಾಸಾಯನಿಕ ಅಂದರೆ, ಕೆಮಿಕಲ್ ಮಿಶ್ರಿತ ಎನ್ನುವುದು ರುಜುವಾತಾಗಿದೆ. ನಾವು ಹಸಿರು ಕಾಂತ್ರಿ ನೆಪದಲ್ಲಿ ಸಾವಯವ ಗೊಬ್ಬರವನ್ನು ಬಿಟ್ಟು ಯಾವಾಗ ರಾಸಾಯನಿಕ ಗೊಬ್ಬರವನ್ನು ನಮ್ಮ ಭೂಮಿಗೆ ಒಡ್ಡಿದ್ದೇವೆಯೋ ಅವತ್ತಿನಿಂದಲೇ ಆರು ಉತ್ಪನ್ನಗಳಲ್ಲಿ ಕಲಬೆರಕೆ ಪ್ರಾರಂಭವಾಯಿತು. ಅದು ಒಂದಿಷ್ಟು ಮಟ್ಟಿಗೆ ಸಹಿಸಿಕೊಳ್ಳಲಾಗದಂತಹ ಸಂದರ್ಭ. ಇತ್ತೀಚೆಗೆ ನಮ್ಮ ವಿರೋಧ ಪಕ್ಷದ ನಾಯಕರುಗಳು ಹೇಳಿದ ಹಾಗೆ ಪ್ರಜಾವಾಣಿ ಪತ್ರಿಕೆ ಈ ವಿಚಾರದ ಬಗ್ಗೆ ದೊಡ್ಡ ಕೆಲಸ ಮಾಡಿದೆ. ಒಂದು ತನಿಖಾ ಲೇಖನವನ್ನು ಬಹಳ ವಿಸ್ತಾರವಾಗಿ ಪ್ರಕಟ ಮಾಡಿದೆ. ಅದು 'ಖಾದ್ಯ ತೈಲದಲ್ಲೂ ವಿಷ', 'ಕಲಬೆರಕೆಯ ಮಾಫಿಯಾ' 'ಮಿನರಲ್ ಆಯಿಲ್ ಅಗ್ಗದ ಎಣ್ಣೆ ಮಿಶ್ರಣ', ಅದರ ಜೊತೆಗೆ 'ಕಾಯ್ದೆ ಇದ್ದರು ಇಲ್ಲ ಕಡಿವಾಣ', ಇತ್ಯಾದಿ ವಿಸ್ತಾರವಾದ ಮಾಹಿತಿಗಳನ್ನು ಪ್ರಜಾವಾಣಿ ಪತ್ರಿಕೆ ಪ್ರಕಟ ಮಾಡಿದೆ. ಇವತ್ತು ಉತ್ಪನ್ನಕ್ಕಿಂತ ಶೇಕಡ ಅರ್ಧದಷ್ಟು ಬೆಲೆಯಲ್ಲಿ ಎಣ್ಣೆಗಳು ಮಾರಾಟವಾಗುತ್ತಿದೆ. ಆಹಾರಕ್ಕೆ ಬಳಸುವಂತಹ ಎಣ್ಣೆಗಳು, ಖಾದ್ಯ ತೈಲಗಳು; ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ನಾವು ಡೀಸಲ್, ಪೆಟ್ರೋಲ್, ಸಂಸ್ಕರಣೆಯಾದ ಮೇಲೆ ಉಳಿಯುತ್ತದೆಯಲ್ಲಾ, ಡೀಸಲ್, ಪೆಟ್ರೋಲ್ ನಾವು ವಾಹನಗಳಿಗೆ ಬಳಸುತ್ತೇವೆ. ಸಂಸ್ಕರಣೆ ಆದ ನಂತರ ಉಳಿಯುವಂತಹ ವೈಟ್ ಆಯಿಲ್‌ನ್ನು ಇವತ್ತು ನೇರವಾಗಿ ಯಾವುದೇ ಎಗ್ಗಿಲ್ಲದೆ ಬಹಿರಂಗವಾಗಿ ತೈಲ ಉತ್ಪನ್ನ, ಅಡಿಗೆ ಎಣ್ಣೆಯ ಉತ್ಪನ್ನಗಳಲ್ಲಿ ಬಳಸುತ್ತಿರುವಂತಹ ದೊಡ್ಡ ದಂಧೆ ಅವ್ಯಾಹತವಾಗಿ ಇಡೀ ರಾಜ್ಯ ಮತ್ತು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ದೇಶದಲ್ಲಿ ನಡೆಯುತ್ತಿದೆ. ಇವತ್ತು ಮಂಗಳೂರು ಮತ್ತು ಬೆಂಗಳೂರಿನಲ್ಲಿ ಬರುವಂತಹ ಉಳಿದ ಡೀಸಲ್ ಮತ್ತು ಪೆಟ್ರೋಲ್‌ನ ಪರ್ಯಾಯ ವೈಟ್ ಆಯಿಲ್‌ಗೆ ಬಣ್ಣ ಇಲ್ಲ, ವಾಸನೆ ಇಲ್ಲ.

**(603) 19.03.2020 06.10 ಎಸ್‌ವಿ–ವಿಕೆ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):–**

ಆದರೆ ಇದು ಬಹಳ ಅಪಾಯಕಾರಿಯಾದುದು. ಇದನ್ನು ಯಾವ ಎಣ್ಣೆಯೊಂದಿಗೆ ಬೇಕಾದರೂ ಬೆರೆಸಬಹುದು. ಅವರು ಬಹಳ ಚೆನ್ನಾಗಿ ಹೇಳಿದರು. ಶೇಂಗಾ ಎಣ್ಣೆ ಉತ್ಪನ್ನ ರೂ.400 ಇದ್ದು, ಈ ಎಣ್ಣೆ ರೂ.130ಕ್ಕೆ ಸಿಗುತ್ತದೆ. ಹೇಗೆ ಸಿಗುತ್ತದೆ? ಈ ಎಣ್ಣೆಯನ್ನು ಶೇ.80 ಭಾಗ ಸೇರಿಸಿ ಕೊಡುತ್ತಾರೆ. ಇದರ ಬೆಲೆ ಎಷ್ಟು? ರೂ.40 ರಿಂದ ರೂ.50. waste ಆಗಿ ಬಿಸಾಡುವ ಒಂದು ವಿಷವನ್ನು ತಂದು ಎಲ್ಲಾ ಎಣ್ಣೆಗಳೊಂದಿಗೆ ಸೇರಿಸುತ್ತಿದ್ದಾರೆ. ಅದಕ್ಕೆ ನಮ್ಮ ಡಾ:ಖಾದರ್ ಅವರು ಹೇಳುತ್ತಾರೆ. ಮೈಸೂರು ಅಥವಾ ಇತರ ನಗರಗಳಿಗೆ ಪೂರೈಕೆಯಾದ ಮೇಲೆ ಮಿಶ್ರಣ ಮಾಡುವುದಿಲ್ಲ. ಪ್ಯಾಕ್ ಮಾಡುವ ದೊಡ್ಡಕಂಪನಿಗಳ ಎಣ್ಣೆ ಮಿಲ್‌ಗಳಲ್ಲಿಯೇ ಈ ಕಲಬೆರಕೆ ದಂಧೆ ನಡೆಯುತ್ತಿದೆ. ಇಂತಹ ಪೊಟ್ಟಣಗಳಿಗೆ ಸರ್ಕಾರ ಮುದ್ರೆಯೊತ್ತಿ ಕಳುಹಿಸುತ್ತಿದೆ. ಇಂತಹ ಮಾಫಿಯಾಕ್ಕೆ ಸರ್ಕಾರವೇ ಏಜೆಂಟ್ ಎಂದು ಹೇಳುತ್ತಾರೆ ಆರೋಗ್ಯ ತಜ್ಞ ಡಾ:ಖಾದರ್.

ಮೈಸೂರಿನಲ್ಲಿ *CFTRI (Central Food Technological Research Institute)* ಇದೆ. ಕೇಂದ್ರ ಆಹಾರ ಸಂಶೋಧನಾಲಯ ಮೈಸೂರಿನಲ್ಲಿದೆ. ಅಲ್ಲಿನ ವಿಜ್ಞಾನಿಗಳು ಸಂಶೋಧನೆಯನ್ನು ಮಾಡಿದ್ದು, ಇವು ಯಾವುವೂ ಉಪಯೋಗಕ್ಕೆ ಯೋಗ್ಯವಲ್ಲ ಎಂದು ಹೇಳುತ್ತಾರೆ. ಇಂದು ಮಾರುಕಟ್ಟೆಯಲ್ಲಿ ದೊರೆಯುವ ನಾವು ಉಪಯೋಗಿಸುತ್ತಿರುವ ಆಹಾರದ ಖಾದ್ಯತೈಲಗಳು ಎಲ್ಲವೂ ಕಲಬೆರಕೆಯಾಗಿರುತ್ತವೆ. *Palm Oil* ಸಿಗುವ *raw material* ಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ಮಾತ್ರ ದೊರೆಯುತ್ತವೆ. ಆದರೆ ಇಡೀ ರಾಜ್ಯಕ್ಕೆ ಅದು ಸರಬರಾಜಾಗುತ್ತದೆ. ಇದು ಹೇಗೆ? ಎಲ್ಲಿಂದ ಆಮದು ಮಾಡಿಕೊಳ್ಳುತ್ತಾರೆ? ಕೊಬ್ಬಿನ ಅಂಶ ಹೆಚ್ಚಾಗಿರುವ ಕಡಿಮೆ ಬೆಲೆಯ ತಾಳೆ ಎಣ್ಣೆಯನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಮಲೇಷಿಯಾ ಹಾಗೂ ಇಂಡೋನೇಷಿಯಾಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಅಪಾಯಕಾರಿಯಾದ ಈ ಎಣ್ಣೆಯನ್ನು ಶೇಂಗಾ ಹಾಗೂ ಇತರ ಎಣ್ಣೆಗಳೊಂದಿಗೆ ಮಿಶ್ರಣ ಮಾಡಿ ಮಾರಲಾಗುತ್ತಿದೆ. ಇಂಡೋನೇಷಿಯಾ ಮತ್ತು ಮಲೇಷಿಯಾದ *Palm Oil* ಅನ್ನು ನಮ್ಮ ಶೇಂಗಾ ಎಣ್ಣೆಯೊಂದಿಗೆ ಮಿಶ್ರಣ ಮಾಡಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಹಾರ ತಜ್ಞ ವಿಜ್ಞಾನಿಗಳ ಒಂದು ಸಂಶೋಧನೆ ಹೇಳುತ್ತದೆ. ಮಾರುಕಟ್ಟೆಯಲ್ಲಿ ಸಿಗುತ್ತಿರುವ ಅಡಿಗೆ ಎಣ್ಣೆಗಳಿಗೆ ಬೇಕಾದಂತಹ *raw material* ಗಳು ನೂರು ಪಟ್ಟು, ಸಾವಿರ ಪಟ್ಟು ಹೆಚ್ಚು ಉತ್ಪತ್ತಿಯಾಗುತ್ತಿದೆ. ಅದಕ್ಕೆ ಈ *White Paraffin Oil* ಕಾರಣ ಎಂದು ಹೇಳುತ್ತಾರೆ. ಅದು ವಿಷ. ಅದಕ್ಕೆ ಪರ್ಯಾಯ ಏನು? ಆಹಾರದಲ್ಲಿ ಕಲಬೆರಕೆಯಾಗುತ್ತಿರುವುದಕ್ಕೆ ನಾವು ಏನು ಪರ್ಯಾಯವನ್ನು ಹುಡುಕಿದ್ದೇವೆ? ಸಿರಿಧಾನ್ಯಗಳನ್ನು ಬಳಸಲು ಪ್ರಾರಂಭಿಸಿದೆವು. ಹಾರಕ, ಕೊರ್ಲ ಮುಂತಾದವುಗಳನ್ನು ಹುಡುಕಿದೆವು. ಈಗ ಎಲ್ಲಾ ವೈದ್ಯರು ನಮ್ಮ ಪೂರ್ವಿಕರು ಬಳಸುತ್ತಿದ್ದ ಬೆಳೆಗಳನ್ನು ಬಳಸಿದರೆ ಯಾವುದೇ ರೋಗಗಳು ಬರುವುದಿಲ್ಲವೆಂದು ಹೇಳಿದರು. ಈ ಕಲಬೆರಕೆಗೆ ಏನು ಪರ್ಯಾಯ? ಗಾಣಗಳು. ಹುಚ್ಚೆಳ್ಳು ತೆಗೆದುಕೊಂಡು ಗಾಣಕ್ಕೆ ಹೋದರೆ ಪರಿಶುದ್ಧವಾದ ಹುಚ್ಚೆಳ್ಳೆಣ್ಣೆಯನ್ನು ಕೊಡುತ್ತಾರೆ. ಶೇಂಗಾ ತೆಗೆದುಕೊಂಡು ಹೋದರೆ ಪರಿಶುದ್ಧವಾದ ಶೇಂಗಾ ಎಣ್ಣೆಯನ್ನು ಕೊಡುತ್ತಾರೆ. ಮಹಾತ್ಮಾ ಗಾಂಧಿಯವರು ಗುಡಿಕೈಗಾರಿಕೆಗಳಿಗೆ ಒತ್ತು ಕೊಡಬೇಕು; ನಮಗೆ ಬೇಕಾದಂತಹ ಆಹಾರ ಉತ್ಪನ್ನಗಳನ್ನು ನಾವೇ ತಯಾರು ಮಾಡಿಕೊಳ್ಳಬೇಕು ಎಂದು ಹೇಳಿದ್ದರು. ಇವತ್ತು ಎಣ್ಣೆ ಗಾಣಗಳ ಕಡೆಗೆ ಯಾರೂ ತಲೆಯನ್ನೇ ಹಾಕುವುದಿಲ್ಲ. ಅಂಗಡಿಯವನು ಚೆನ್ನಾಗಿ ಪ್ಯಾಕ್ ಮಾಡಿ ಕಳುಹಿಸುತ್ತಾನೆ. ಟಿವಿಯಲ್ಲಿ ಜಾಹೀರಾತು ತೋರಿಸುತ್ತಾರೆ. ಅದನ್ನು ತಂದು ನಮಗೆ ನಾವೇ ವಿಷವನ್ನು ಕುಡಿಯುವುದು. ನೇರವಾಗಿ ಈ ಟಿಕ್ ಟ್ವೆಂಟಿ ಕುಡಿಯುವ ಬದಲು indirect ಆಗಿ ಇವುಗಳನ್ನು ಸೇವಿಸುತ್ತಿದ್ದೇವೆ. ಅಕ್ಷರಶಃ ಇಂತಹ ಪರಿಸ್ಥಿತಿಗೆ ನಾವು ಬಂದು ನಿಂತಿದ್ದೇವೆ. ಮೂರು ವರ್ಷಗಳಲ್ಲಿ ಸಾಯುವವರು ಮೂರು ತಿಂಗಳಲ್ಲಿ ಸಾಯುತ್ತಾರೆ. ಮತ್ತೇಕೆ ಹೀಗೆ ಆಸ್ಪತ್ರೆಗಳಲ್ಲಿ ಜನ ತುಂಬಿರುತ್ತಾರೆ. ಇದರಿಂದುಂಟಾಗುವ ಕಾಯಿಲೆಗಳಿಂದ ನರಳುತ್ತಾರೆ. ಶುದ್ಧವಾದ ಆಹಾರವನ್ನು ಸೇವನೆ ಮಾಡುತ್ತಿಲ್ಲ. ಮತ್ತೊಂದು ಕಡೆ ದೇಹವನ್ನು ದಂಡಿಸುವುದಿಲ್ಲ.

ಎಲ್ಲಿ ಕ್ರೀಡಾಂಗಣಗಳು ಖಾಲಿ ಇರುತ್ತವೆಯೋ, ಎಲ್ಲಿ ಶುದ್ಧವಾದ ಆಹಾರ ಇರುವುದಿಲ್ಲವೋ ಅಂತಹ ಕಡೆಗಳಲ್ಲಿ ಆಸ್ಪತ್ರೆಗಳು ತುಂಬಿರುತ್ತವೆ. ಎಲ್ಲಿ ಕ್ರೀಡಾಂಗಣಗಳು ತುಂಬಿರುತ್ತವೆಯೋ, ಶುದ್ಧವಾದ ಆಹಾರವನ್ನು ಸೇವನೆ ಮಾಡುತ್ತಿರುತ್ತಾರೆಯೋ ಅಲ್ಲಿ ಜನರು ಆರೋಗ್ಯಕರವಾಗಿರುತ್ತಾರೆ. ಈ ಸಮಾಜಕ್ಕೆ ಸದೃಢವಾದ, ಆರೋಗ್ಯವಂತ ಪ್ರಜೆಗಳು ಬೇಕಲ್ಲವೆ? ಈ ದಿಸೆಯಲ್ಲಿ *CFTRI* ಆಗಲೀ ಅಥವಾ ಆಹಾರ ನಿಯಂತ್ರಣ ಕಾಯಿದೆಯಾಗಲೀ ಏನು ಮಾಡುತ್ತಿದೆ? ಆಹಾರ ಇಲಾಖೆಯ ಆಯುಕ್ತಾಲಯದಲ್ಲಿ ಇದನ್ನೆಲ್ಲಾ ತಡೆಯಲು ಜನರೇ ಇಲ್ಲ. ಎಲ್ಲರೂ ಬೇರೆ ಬೇರೆ ಕಡೆಗಳಿಗೆ ನಿಯೋಜನೆಯನ್ನು ಹೊಂದಿದ್ದಾರೆ. ಇಂತಹ ವೈಜ್ಞಾನಿಕ ಯುಗದಲ್ಲಿ, ಆವಿಷ್ಕಾರ ಯುಗದಲ್ಲಿ ವಿಜ್ಞಾನವನ್ನು ಬೆಳೆಸಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

*Testing* ಮಾಡಿಸಬೇಕು. ತಡೆಗಟ್ಟಲು *raid* ಮಾಡಿಸಬೇಕು. ಎಷ್ಟು ಪ್ರಕರಣಗಳು ದಾಖಲಾಗಿವೆ? ಎಷ್ಟು ಜನಕ್ಕೆ ದಂಡ ಹಾಕಲಾಗಿದೆ? ಈ ಪರಿಸ್ಥಿತಿ ಎತ್ತ ಸಾಗುತ್ತಿದೆ? ಬೆಳಗ್ಗೆ ಎದ್ದು ಹೋಟೆಲ್‌ಗೆ ಹೋಗಿ ಗೋಧಿ ಚಪಾತಿ ಕೊಡಿ ಎಂದು ಕೇಳುವಂತಾಗಿದೆ. ಅವನು ನಮಗೆ ಮತ್ತೆ ಮೈದಾ ಚಪಾತಿಯನ್ನೇಕೊಡುತ್ತಾನೆ. ಮೈದಾ ಪುನಃ ವಿಷ. ಎಲ್ಲಿ ಶುದ್ಧವಾದ ಆಹಾರವನ್ನು ಹುಡುಕುವುದು ಎನ್ನುವುದೇ ಒಂದು ಸಮಸ್ಯೆಯಾಗಿದೆ. ಈಗ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಮೇಲೆ ಬಹಳ ದೊಡ್ಡ ಜವಾಬ್ದಾರಿಯಿದೆ. ಇಂತಹ ವೈಜ್ಞಾನಿಕ ಆವಿಷ್ಕಾರಗಳ ಯುಗದಲ್ಲಿಯೂ ನಮಗೆ ಕಲಬೆರಕೆಯನ್ನು ಪತ್ತೆ ಮಾಡಲಾಗದೆ, ಪ್ರತಿ ನಿತ್ಯವೂ ನಾವು ವಿಷವನ್ನು ಸೇವನೆ ಮಾಡುತ್ತಿದ್ದೇವೆಂದರೆ ಮನುಷ್ಯರನ್ನು ಕಾಪಾಡುವುದು ಹೇಗೆ? ಇದು ನಾಗರಿಕ ಸರ್ಕಾರದ ಮೂಲ ಕರ್ತವ್ಯ. ನಾವು ಶುದ್ಧವಾದ ಆಹಾರವನ್ನು ಪಡೆಯುವ ದಿಸೆಯಲ್ಲಿ ಕಾಯ್ದೆಯನ್ನು ಬಳಕೆ ಮಾಡಿಕೊಳ್ಳಬೇಕು. *CFTRI* ಅನ್ನೂ ಬಳಕೆ ಮಾಡಿಕೊಳ್ಳಬೇಕು. ಗುಡಿ ಕೈಗಾರಿಕೆಗಳಿಗೆ ಹೋಗಬೇಕು. ಹೇಗಾದರೂ ಮಾಡಿ ಈ ಆಹಾರ ಕಲಬೆರಕೆಯನ್ನು ತಪ್ಪಿಸುವ ದಿಸೆಯಲ್ಲಿ ಸರ್ಕಾರ ಮುಂದಾಗಬೇಕೆಂದು ಆಗ್ರಹಿಸುತ್ತಾ, ಆ ಮೂಲಕ ಮನುಕುಲವನ್ನು ರಕ್ಷಣೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಕೇವಲ ಕಲಬೆರಕೆ ಆಹಾರದ ಬಗ್ಗೆ ಹೇಳಿದರು. ಮಾನ್ಯ ಶ್ರೀಕಂಠೇಗೌಡರು ನಾವು ಹೊಟ್ಟೆಗೆ ಸೇವಿಸುವ ಮದ್ಯದ ಬಗ್ಗೆ ಏನೂ ಹೇಳುತ್ತಿಲ್ಲ.

**ಸಭಾಪತಿಯವರು:-** ಅದರಲ್ಲಿಯೂ ಕಲಬೆರಕೆ ಇದೆಯೇ?

**ಶ್ರೀ ಮರಿತಿಬ್ಬೇಗೌಡ:-** ನನ್ನ ಸ್ನೇಹಿತರೊಬ್ಬರು ರೆಗ್ಯುಲರ್ ಆಗಿ ಮದ್ಯ ಸೇವಿಸುತ್ತಾರೆ. ಸಮಯ ಸಿಕ್ಕಿದಾಗ ಅವರೂ ನಾವು ಜೊತೆ ಸೇರುತ್ತೇವೆ. ಏನಪ್ಪಾ ಹೇಗಿದ್ದೀಯ ಎಂದರೆ ಬಹಳ ಚೆನ್ನಾಗಿದ್ದೇನೆಂದು ಹೇಳುತ್ತಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಮರಿತಿಬ್ಬೇಗೌಡರೇ, ಸೇರುತ್ತೇವೆ ಎಂದರೆ ಮದ್ಯಸೇವನೆಗಾಗಿಯೇ?

**ಶ್ರೀ ಮರಿತಿಬ್ಬೇಗೌಡ:-** ಇಲ್ಲ, ಇಲ್ಲ. ನನಗಿಲ್ಲ. Friendly ಆಗಿ ಸೇರುತ್ತೇವೆ. ಸ್ವಲ್ಪ ಸೇವಿಸಿದಾಗ ಬಹಳ ಮೋಜು ಬರುತ್ತದೆ ಎಂದು ಹೇಳಿದರು. ಜಾಸ್ತಿ ಸೇವನೆ ಮಾಡಿದಾಗ ಅದೇ ಮೋಜು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡುತ್ತದೆ ಎಂದು ಹೇಳಿದರು. ಸ್ವಲ್ಪ ಸೇವನೆ ಮಾಡಿದರೆ ನಾನು ಅದನ್ನು ಕೆಣಕುತ್ತೇನೆ. ಹೆಚ್ಚು ಸೇವನೆ ಮಾಡಿದಾಗ ಅದೇ ನನ್ನನ್ನು ಕೆಣಕುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪುರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹುಶಃ ಇಂತಹ slow poison ನಾವು ದಿನಂಪ್ರತಿ ಸೇವನೆ ಮಾಡುತ್ತಿದ್ದೇವೆ. ನಾವು ಮಿರಿಮಿರಿ ಮಿಂಚುತ್ತಿರುವ ಕೋಳಿ ಮಾಂಸವನ್ನು ತಿನ್ನುತ್ತೇವೆ. ಅದು ಯಾವ ರೀತಿ ಕೆಂಪಗಿರುತ್ತದೆ ಎಂದರೆ...

**ಶ್ರೀ ಹೆಚ್.ಎಂ.ರೇವಣ್ಣ:–** ಮಿಣಿಮಿಣಿ ಬೇರೆ, ಮಿರಿಮಿರಿ ಬೇರೆ.

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಅಬಕಾರಿ ಇಲಾಖೆಯೇ ಇದೆ. ಕುಡಿದಾಗ ಮಜಾ ಬರುತ್ತದೆ, ನಶೆ ಏರುತ್ತದೆ. ಸ್ವಲ್ಪ ಪ್ರಮಾಣದಲ್ಲಿ ಶಾರೀರಿಕವಾಗಿ ಹಾನಿಯಾಗುತ್ತದೆ. ಸರ್ಕಾರಕ್ಕೆ ಹಣವೂ ಬರುತ್ತದೆ. ಆದರೆ ಈ ರೀತಿಯಾಗಿ ವಿಷಪ್ರಾಷನವನ್ನು ತಡೆಯುವುದಕ್ಕೆ ಒಂದು ಸರಿಯಾದ ಇಲಾಖೆಯೇ ಇಲ್ಲವೆಂದರೆ ಇದೆಂತಹ ದುರ್ದೈವ? ದಿನಂಪ್ರತಿ ಜನರು ಈ ರೀತಿಯಾಗಿ ವಿಷವನ್ನು ಸೇವನೆ ಮಾಡುತ್ತಿದ್ದು, ಯಾವುದೇ ಸರ್ಕಾರವಿರಲಿ ಈ ರೀತಿಯ ದಿವ್ಯ ನಿರ್ಲಕ್ಷ್ಯವನ್ನು ವಹಿಸುವುದು ಏಕೆ? ಇದಕ್ಕೆ ಪ್ರತ್ಯೇಕವಾದ ಒಂದು ಇಲಾಖೆಯ ರಚನೆಯಾಗಬೇಕು. ಅಂಗಡಿಗಳಲ್ಲಿ ಅಜಿನೋಮೋಟೊ ಎಂದು ಸಿಗುತ್ತದೆ. ಅದನ್ನು ಹಾಕಿದರೆ ಆಹಾರ ಪದಾರ್ಥದ ರುಚಿ ಹೆಚ್ಚಾಗುತ್ತದೆ. ಆದರೆ ಅದು ಕ್ಯಾನ್ಸರ್‌ಕಾರಕವಾದುದು. ಅದನ್ನು ಸರ್ಕಾರ ಬ್ಯಾನ್ ಮಾಡುತ್ತದೆಯೇ? ಇಂತಹ ಹಾನಿಕಾರಕ ವಿಷಗಳೆಷ್ಟು?

ಖಾದ್ಯತೈಲಗಳ ಕಲಬೆರಕೆಯ ಬಗ್ಗೆ ಹೇಳಿದರು. ದನದ ಮಾಂಸದ ಕೊಬ್ಬನ್ನು ಕಾಯಿಸಿದರೆ ಬೆಣ್ಣೆಯಂತೆ ಬರುತ್ತದೆ. ನಾವು ಸಣ್ಣ ಹುಡುಗರಿದ್ದಾಗ ಅದನ್ನು ನೋಡಿದ್ದೇವೆ. ನಾಯಿ ಮಾಂಸವನ್ನು ಕುದಿಸಿದರೆ ಕೊಬ್ಬು ಬರುತ್ತದೆ. ಅದನ್ನು ಮಿಕ್ಸ್ ಮಾಡುವುದರಿಂದ ಹೃದಯಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಅಬಕಾರಿ ಇಲಾಖೆ ಇರುವಂತೆ ಇದಕ್ಕೂ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಬೇಕು. ಇದಕ್ಕೆ ಬೇಕಾದಂತಹ ನೌಕರರನ್ನು ನೇಮಕ ಮಾಡಬೇಕು. ಪ್ರತಿನಿತ್ಯ ನಾವು ಇದೇ ರೀತಿ ವಿಷಸೇವನೆ ಮಾಡುತ್ತಿದ್ದೇವೆ. ಹೋಟೆಲ್‌ಗಳೂ ಇದಕ್ಕೆ ಹೊರತಲ್ಲ. ಒಬ್ಬ ಬಡವ ಕಳ್ಳಬಟ್ಟಿ ಸಾರಾಯಿ ಮಾಡಿದರೆ ಅವನನ್ನು ಹಿಡಿಯುತ್ತಾರೆ. ಆದರೆ ಈ ರೀತಿಯಾಗಿ ವಿಷವನ್ನು ಸೇವನೆ ಮಾಡುವಂತೆ ಮಾಡಿರುವವರನ್ನು ಹಿಡಿಯುವುದಿಲ್ಲವೆಂದರೆ ಇದೆಂತಹ ದುರ್ದೈವ. ಇದರಿಂದ ಸರ್ಕಾರಕ್ಕೆ ಬರುವ ಹಣವೆಷ್ಟು? ರೂ.5

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೋಟಿ ಚಿಲ್ಲರೆ ಎಂದು ಹೇಳಿದ್ದಾರೆ. ಕೊಲೆ ಮಾಡುವವರಿಗೆ ನೀಡುವ ಶಿಕ್ಷೆಗಿಂತಲೂ ಕಠಿಣ ಶಿಕ್ಷೆಯನ್ನು ಇವರಿಗೆ ವಹಿಸಬೇಕು. ಇದಕ್ಕೆ ಒಂದು ಪ್ರತ್ಯೇಕ ಇಲಾಖೆ ಮಾಡಿ ಅದಕ್ಕೆ ಶಕ್ತಿ ತುಂಬಿ, ಇಂತಹ ಕಲಬೆರಕೆಯನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇಂದು ಈ ವಿಷಯವನ್ನು ತೆಗೆದುಕೊಂಡು ಮಾಡುತ್ತಿರುವ ಚರ್ಚೆ ಬಹಳ ಒಳ್ಳೆಯ, ಜನಪರವಾದಂತಹ ಚರ್ಚೆ ಎಂದು ನಾನು ಭಾವಿಸುತ್ತೇನೆ. ಕಾರಣವೇನೆಂದರೆ ದೇಶದಲ್ಲಿ ಪ್ರತಿಯೊಬ್ಬ ಮನುಷ್ಯ ಅನಿವಾರ್ಯವಾಗಿ ಅವನ ಜೀವನವನ್ನು ನಡೆಸುವುದಕ್ಕೆ ಪ್ರತಿದಿನ ಕಲಬೆರಕೆ ಆಹಾರ ಸೇವನೆ ಮಾಡುತ್ತಿದ್ದಾನೆ. ಇದನ್ನು ಸರಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರವು Food Safety and Standards Act of India ಎಂದು ಮಾಡಿದೆ. ಇದರಡಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಒಂದು ಇಲಾಖೆ ಇದೆ. ಆ ಇಲಾಖೆಯ ಅಧಿಕಾರಿಗಳು ಇಲ್ಲಿ ಬಂದಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. It is part of Food and Civil Supplies Department. ಇದು ಬಹಳ ಗಂಭೀರವಾದ ವಿಷಯ.

**(604) 06.20 19.3.2020 KG VK**
**ಶ್ರೀ ಪಿ.ಆರ್.ರಮೇಶ್ (ಮುಂದು):–**

ಈ ಇಲಾಖೆ ಆಹಾರ ಸಂರಕ್ಷಣೆ ಮತ್ತು ಗುಣಮಟ್ಟ ಅಂದರೆ, Food Safety and Standards Act of India, ಇದರಲ್ಲಿ ಕರ್ನಾಟಕಕ್ಕೆ ಒಬ್ಬ ಆಯುಕ್ತರು, ಜಂಟಿ ಆಯುಕ್ತರು ಒಬ್ಬರು, ಉಪ ಆಯುಕ್ತರು ಇಬ್ಬರು, ಕಾನೂನು ಸಲಹೆಗಾರರು ಒಬ್ಬರು ಇದ್ದಾರೆ. ಇತರೆ ಸಿಬ್ಬಂದಿಯವರು ಸುಮಾರು 300 ಜನರು ಇರಬಹುದು, ಇಷ್ಟು ಜನರನ್ನು ಬಿಟ್ಟು ಬೇರೆ ಯಾರೂ ಸಹ ಇಲ್ಲ. ಇದು ನಮ್ಮ ಇಡೀ ರಾಜ್ಯಕ್ಕೆ ಇರುವಂಥದ್ದು ಈ Food Safety and Standards Act of India ಎಂದು, 2006 ರಲ್ಲಿ ಈ ಕಾಯಿದೆ ಬಂದಿದೆ. 2011 ರಲ್ಲಿ ಈ ಕಾಯಿದೆಗೆ ರೂಲ್ಸ್ ಬಂದಿದೆ. ಇವತ್ತು ಎಣ್ಣೆ ಪದಾರ್ಥಗಳ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ನಾವು ಎಣ್ಣೆ ಕಲಬೆರಕೆಯ ಬಗ್ಗೆ ಹೇಳಿದರೆ ಸಾಲದು, ಈ petroleum product ನ ಕೊನೆಯಲ್ಲಿ ಬರುವಂತಹ product ಇದಾಗಿದ್ದು, ಅದಕ್ಕೆ ಬೇಡಿಕೆ ಇಲ್ಲದಿದ್ದಾಗ ಅದನ್ನು ಸಮುದ್ರಕ್ಕೆ ಹಾಕುತ್ತಿದ್ದರು. ಅದರ ಹೆಸರು White Paraffin Oil. ಅದನ್ನು WHO (World Health Organization) ರವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

medicines purpose ಗೆ only 10 percent ಬಳಸುವುದಕ್ಕೆ permit ಮಾಡಿದ್ದಾರೆ. ಆದರೆ, ನಮ್ಮವರು ಭಾರತದಲ್ಲಿ ದೊಡ್ಡ ದೊಡ್ಡ ಕಂಪನಿಗಳು 10% ಕಡಲೆ ಕಾಯಿ ಎಣ್ಣೆ ಹಾಕುತ್ತಾರೆ. ಇನ್ನೂ 90% White Paraffin Oil ಹಾಕುತ್ತಾರೆ. ಇದರಿಂದ ನಮ್ಮ ದೇಹ immediate effect ಆಗುವುದಿಲ್ಲ. ಈ ಎಣ್ಣೆಯನ್ನು ನಾವು ಪ್ರತಿ ದಿವಸ ಮನೆಯಲ್ಲಿಯೂ ತಿನ್ನುತ್ತೇವೆ ಮತ್ತು ಪ್ರತಿ ಹೋಟೆಲ್‌ನಲ್ಲಿಯೂ ತಿನ್ನುತ್ತೇವೆ. ನಾವು ಪ್ರತಿ ದಿವಸ ಆ ಎಣ್ಣೆಗೆ ಒಗ್ಗಿ ಹೋಗಿದ್ದೇವೆ. ಪ್ರತಿ ಆಹಾರ ಪದಾರ್ಥದಲ್ಲಿಯೂ ಎಣ್ಣೆ ಇದೆ. ಇದು ಒಂದು ಸಣ್ಣ ಉದಾಹರಣೆ. ಈ Food Safety and Standards Act ಯಲ್ಲಿ ಇರುವಂಥದ್ದು, ಇಲ್ಲಿ ನಾವು basic registration ಮಾಡುವಂತಹದ್ದು ಪ್ರತಿಯೊಂದು ಆಹಾರ ಪದಾರ್ಥಕ್ಕೆ human consume ಯಾರು ಯಾರು ಮಾಡುತ್ತಾರೆ, ಅವರಿಗೆಲ್ಲರಿಗೂ ನೋಂದಣಿಯನ್ನು ಮಾಡಲೇಬೇಕಾಗುತ್ತದೆ. ಅದು ಫುಟ್‌ಬಾತ್‌ನ ಮೇಲೆ ಇರುವಂತಹ ಒಂದು ಸಣ್ಣ ಅಂಗಡಿಯಾದರೂ, ಒಂದು ಹೋಟೆಲ್ ಆದರೂ, ಒಂದು ಜಿಲೇಬಿ ಅಂಗಡಿಯಾದರೂ ಆಯಿತು. ಯಾವುದೇ ಡಬ್ಬದಲ್ಲಿ concealed ಆಗಿರುವಂತಹ juice ಆಗಿರಬಹುದು, ಪ್ರತಿಯೊಂದು ನೋಂದಣಿಯಾಗಲೇಬೇಕು. ಆ ನೋಂದಣಿಗೆ below Rs. 10 lakh ವಾರ್ಷಿಕ ವಹಿವಾಟು ಇರುವಂತಹ ಕಂಪನಿಗಳು ಅಲ್ಲಿ ನಮ್ಮ basic registration ಆಗಲೇಬೇಕು. ಇನ್ನೂ 12 ಲಕ್ಷ ರೂಪಾಯಿಗಳಿಂದ 20 ಕೋಟಿ ರೂಪಾಯಿಗಳವರೆಗೂ ರಾಜ್ಯದಲ್ಲಿರುವಂತಹ ಈ ಕಾಯಿದೆ ಕೆಳಗೆ constitute ಮಾಡಿರುವಂತಹ ಒಂದು Authority ರವರು ಈ ಪರವಾನಿಗೆಯನ್ನು ಅಥವಾ ಒಂದು ಅನುಮತಿಯನ್ನು ಕೊಡುವಂತಹ ಅವಕಾಶ ಇದೆ. ಇನ್ನೂ 20 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವಹಿವಾಟು ಆಗುವಂತಹ ಯಾವುದೇ ಒಂದು food produce ಮಾಡುವಂತಹ ಒಂದು ಕಂಪನಿ ಇರಬಹುದು ಅಂತಹವರು ಈ ಪರವನಿಗಿಯನ್ನು ಕೊಟ್ಟು ಅವರನ್ನು ಹತೋಟಿಗೆ ಇಟ್ಟುಕೊಳ್ಳುವುದು ನೇರವಾಗಿ ಕೇಂದ್ರ ಸರ್ಕಾರದವರು ಕೊಡುತ್ತಾರೆ. ಇದು ನಮ್ಮ ದೇಶದಲ್ಲಿ ಇರುವಂತಹ ವ್ಯವಸ್ಥೆ. ಇಲ್ಲಿ ಹಿರಿಯ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆ background ನಲ್ಲಿಯೇ ಇವತ್ತು ಆ ಕಾಯಿದೆಯಲ್ಲಿ ಯಾವುದೇ ಒಂದು ಪದಾರ್ಥಗಳನ್ನು ನಾವು ಅನುಮಾನದಿಂದ ನೋಡಿದಾಗ ಆ Authority ರವರು Laboratory ಇದೆ. ಒಟ್ಟು 4 Laboratories ಗಳು ಇವೆ. ಬೆಂಗಳೂರಿನಲ್ಲಿ ಇದೆ. ಮೈಸೂರು, ಗುಲ್ಬಾರ್ಗ ಮತ್ತು ಬೆಳಗಾವಿಯಲ್ಲಿ ಇದೆ. ಇದನ್ನು ಮಾನ್ಯ ಸಚಿವರು ತಿಳಿದುಕೊಳ್ಳಬೇಕಾಗುತ್ತದೆ. ಪ್ರಥಮವಾಗಿ ಈ Food Safety and

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Standards Act ಕೆಳಗಡೆ ಇರುವಂತಹ Commissioner ರವರಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳಾಗಲಿ ಇವತ್ತು ಈ ಸಭೆಯಲ್ಲಿ ಇದ್ದಾರೆಯೇ ಎಂಬುದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ. ದಯವಿಟ್ಟು ಅದನ್ನು ತಿಳಿಸಿದರೆ, ನಾನು ಅವರಿಗೂ ಸಹ ಕೆಲವು ವಿಚಾರಗಳನ್ನು ಹೇಳುತ್ತೇನೆ. ಯಾವ ಆಹಾರ ಪದಾರ್ಥಗಳು ಕಲಬೆರಕೆ ಇವೆ ಎಂಬುದನ್ನು ಆ ಸಂಸ್ಥೆಯವರು ಸಾರ್ವಜನಿಕರಿಗೆ ಹೇಳಬೇಕು. ನಾನು ಇದನ್ನು ಹೇಳುತ್ತಿಲ್ಲ. ಕಾಯಿದೆ ಹೇಳುತ್ತವೆ. ಸಾಕಷ್ಟು provisions ಇದೆ, ಈ Rules ಬಹಳಷ್ಟು ಗಟ್ಟಿತನ ಇದೆ. ಇದು ಬಹಳಷ್ಟು ಅವರ ಮೇಲೆ prosecute ಮಾಡುವುದಕ್ಕೆ ಅವಕಾಶ ಇದೆ. ಎಲ್ಲಾ ಅವಕಾಶಗಳು ಈ ಕಾಯಿದೆಯಲ್ಲಿ ಇರುವಂಥದ್ದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳದೇ ಇರುವುದು ನಮ್ಮ ದೌರ್ಭಾಗ್ಯವಾಗಿದೆ. ಇವತ್ತು ಈ ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆಯೇ ಎಂಬುದನ್ನು ದಯವಿಟ್ಟು ಹೇಳಬೇಕು.

**ಶ್ರೀ ಬಿ.ಶ್ರೀರಾಮಲು:-**ಮಾನ್ಯ ಸಭಾಪತಿಯವರೇ, ಇದ್ದಾರೆ.

**ಡಾ: ಸಿ.ಎನ್. ಅಶ್ವಥ್ ನಾರಾಯಣ್(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲ್‌ರವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಕಳೆದ 6–7 ವರ್ಷದಲ್ಲಿ ಯಾವಾಗ ನೋಡಿದರೂ ಹೆಚ್1ಎನ್1 ಬಂದಾಗಲೂ *H1N1 influenza*ಇದ್ದಾಗಲೂ *diagnostic test* ಮಾಡುವುದಕ್ಕೆ ‘ಪೂನಾ’ಗೇ ಕಳುಹಿಸುತ್ತಿದ್ದೆವು, ಬೆಂಗಳೂರಿನಲ್ಲಿಯೂ ಅಂತಹ ಲ್ಯಾಬ್ ಸೌಲಭ್ಯ ಇರಲಿಲ್ಲ. ಆಗಿನಿಂದ ಯಾವುದೂ ಇಲ್ಲ, 5–6 ವರ್ಷಗಳ ಹಿಂದೆ;

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, . . .

**ಡಾ: ಸಿ.ಎನ್. ಅಶ್ವಥ್ ನಾರಾಯಣ್:–** ಮಾನ್ಯ ತಿಮ್ಮಾಪೂರರವರೇ, ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದೇ ಸೆಕೆಂಡ್;

**ಡಾ: ಸಿ.ಎನ್. ಅಶ್ವಥ್ ನಾರಾಯಣ್:–** ಮಾನ್ಯ ಎಸ್.ಆರ್. ಪಾಟೀಲ್‌ರವರೇ, ನಿಮ್ಮ ಭಾವನೆ ಕೂಡ ಅರ್ಥವಾಗಿದೆ. ನಾನು ಇಲ್ಲಿ ಯಾವುದನ್ನೂ *defend* ಮಾಡುವುದಕ್ಕೆ ನಿಂತಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಉಪ ಮುಖ್ಯಮಂತ್ರಿಯವರೇ, ನಿನ್ನೆ ಇನ್ನೊಬ್ಬ ಉಪಮುಖ್ಯಮಂತ್ರಿಯವರಾದ ಶ್ರೀ ಗೋವಿಂದ ಕಾರಜೋಳರವರು ಹೇಳಿಕೆ ಮಾಡಿದ್ದರು, 200 ಕೋಟಿ ರೂಪಾಯಿಗಳನ್ನು ಲ್ಯಾಬ್ ತೆಗೆಯುವುದಕ್ಕೆ ಮೀಸಲಾಗಿಟ್ಟಿದ್ದೆವು, ಒಂದು ಲ್ಯಾಬ್ ತೆಗೆಯುವುದಕ್ಕೆ 1 ರಿಂದ 1½ ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದ್ದರು. ಪ್ರತಿ ಜಿಲ್ಲೆಗೂ ಒಂದು ಲ್ಯಾಬ್ ತೆಗೆಯಿರಿ,ಪ್ರತಿ ಜಿಲ್ಲೆಗೂ ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ ವಿಶೇಷ ವಾರ್ಡ್‌ನಲ್ಲಿ, isolation ನಲ್ಲಿಡಿ. ನಿಗಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟಕವನ್ನು ಪ್ರಾರಂಭ ಮಾಡಿ. ಮುಖ್ಯಮಂತ್ರಿಯವರಾದ ಮಾನ್ಯ ಯಡಿಯೂರಪ್ಪನವರು ಸುಮಾರು 200 ಕೋಟಿ ರೂಪಾಯಿಗಳಷ್ಟು ಹಣವನ್ನು ಇದಕ್ಕೆ ಮೀಸಲಾಗಿಟ್ಟಿದ್ದೇವೆ, ನಿನ್ನೆ ಕ್ಯಾಬಿನೆಟ್‌ನಲ್ಲಿ ನಿರ್ಣಯವಾಗಿದೆ ಎಂದು ಹೇಳಿದರು. ಅದರ ಜೊತೆಗೆ NDRF (State *Disaster Response Fund*),SDRF (State *Disaster Response Fund)norms*ನಲ್ಲಿ ಕೇಂದ್ರ ಸರ್ಕಾರವು *instructions* ಕೊಟ್ಟು ಇದನ್ನು ಪ್ರಕೃತಿ ವಿಕೋಪ ಎಂದು ಭಾವಿಸಿ 184 ಕೋಟಿಯಿಂದ 384 ಕೋಟಿ ರೂಪಾಯಿಗಳಾಯಿತು. ಒಂದು ಜಿಲ್ಲೆಯಲ್ಲಿ ಒಂದು ಲ್ಯಾಬ್ ತೆಗೆಯುವುದಕ್ಕೆ 1 ರಿಂದ 1½ಕೋಟಿ ರೂಪಾಯಿಗಳು ಸಾಕು. ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ವಿಶೇಷ ವಾರ್ಡ್‌ಗಳನ್ನು, ನಿಗಾ ಘಟಕಗಳನ್ನು ಪ್ರಾರಂಭ ಮಾಡಿ, ತಾಲ್ಲೂಕಿಗೆ ಹೇಳುತ್ತಿಲ್ಲ ಇಷ್ಟು ಹಣ ಇದೆ ಪ್ರಾರಂಭ ಮಾಡುವುದಕ್ಕೆ ಏನಾಗಿದೆ, *now we are in 2nd stage,* 2ನೇ ಹಂತದಲ್ಲಿದ್ದೇವೆ, 4ನೇ ಹಂತಕ್ಕೆ; ಇಟಲಿಯಲ್ಲಿ ನಿನ್ನೆ ಒಂದೇ ದಿವಸದಲ್ಲಿ ಸುಮಾರು 365 ರಿಂದ 475 ಜನರು ಸತ್ತಿದ್ದಾರೆ. ಚೈನಾ ದೇಶವನ್ನೇ ಮೀರಿಸುವ ಮಟ್ಟಕ್ಕೆ ಹೋಗಿದೆ. ಒಂದು ವೇಳೆ ಏನಾದರೂ *3rd stage or 4th stage* ಮುಟ್ಟಿದರೆ *we will become helpless.* ಏಕೆಂದರೆ, ಚೈನಾ ದೇಶದ ನಂತರ ಎರಡನೇ ಹೆಚ್ಚು ಜನವಸತಿಯುಳ್ಳ ದೇಶ ನಮ್ಮ ಭಾರತ ದೇಶವಾಗಿದೆ. ನಮ್ಮ ಉತ್ತರ ಕರ್ನಾಟಕದಲ್ಲಿ ಕಲಬುರ್ಗಿಯಲ್ಲಿ ಏನು *positive case* ಆಗಿದೆ, ಅವರ ಮಗಳು ಕೂಡ *positive* ಆಗಿದ್ದಾಳೆ; ತಾವು ಕೂಡ ಹೋಗಿದ್ದಿರಿ, ವೈದ್ಯರ ಜೊತೆ ಸಂಪರ್ಕ ಮಾಡಿದ್ದಿರಿ; ಆ ವೈದ್ಯರಿಗೆ ಕೂಡ *positive case* ಇದೆ. ಉತ್ತರ ಕರ್ನಾಟಕದಲ್ಲಿ ಪರಿಸ್ಥಿತಿ ಇಷ್ಟು ಸೀರಿಯಸ್ ಇದೆ, ಅಲ್ಲಿ ಒಂದು ಲ್ಯಾಬ್ ಸಹ ಪ್ರಾರಂಭ ಮಾಡಿಲ್ಲ. ಜಿಲ್ಲೆಗೆ ಒಂದು ಕೋಟಿ ಅಥವಾ ಒಂದೂವರೆ ಕೋಟಿ ಹಣವನ್ನು ತಕ್ಷಣವೇ *on war footing without any further delay the Government should open labs in every district of the North Karnataka and Mid Karnataka.*

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕಳೆದ 3-4 ದಿವಸಗಳಿಂದಲೂ ಕರೋನ ಬಗ್ಗೆ ಚರ್ಚೆ ನಡೆಯುತ್ತಿದೆಯಾದರೂ ಯಾರೂ ಸಹ *ventilators* ಬಗ್ಗೆ ಮಾತನಾಡುತ್ತಿಲ್ಲ. ಇಡೀ ಜಗತ್ತಿನಲ್ಲಿಯೇ, ಅಮೇರಿಕಾದ ಆಸ್ಪತ್ರೆಗಳಲ್ಲಿಯೇ *ventilators* ಇಲ್ಲ. *Ventilators* ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದು ಬಹಳ ಕಡಿಮೆ. ನನ್ನ ಪ್ರಕಾರ ICU (Intensive Care Unit) ಗಳಲ್ಲಿ *ventilators*...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಸಿ.ಎನ್. ಅಶ್ವಥ್ ನಾರಾಯಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರುಗಳು Lab Testing or Screening Test ಮಾಡುವುದಕ್ಕೆ Covid-19 ಪರೀಕ್ಷೆ ತಪಾಸಣೆ ಮಾಡುವುದಕ್ಕೆ ಒಂದು ಲ್ಯಾಬ್‌ನ ಸೌಲಭ್ಯದ ವಿಚಾರವಾಗಿ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಮುಖ್ಯವಾಗಿ ಈ ಸೌಲಭ್ಯವನ್ನು ಒದಗಿಸುವುದಕ್ಕೆ bio-safety levels ಬೇಕಾಗುತ್ತದೆ. ಈ virus extraction ಮಾಡುವುದಕ್ಕೆ ಅದರದ್ದೇ ಆದ ಸೌಕರ್ಯವನ್ನು ಒದಗಿಸಬೇಕಾಗುತ್ತದೆ. ಇಲ್ಲದಿದ್ದರೆ ಸರಿಯಾದ ವ್ಯವಸ್ಥೆ ಇಲ್ಲದೇ ಎಲ್ಲಿ ಬೇಕಾದರೂ ಇದನ್ನು ಮಾಡುವುದಕ್ಕಾಗುವುದಿಲ್ಲ. ತಾವು ಹೇಳಿದ ಹಾಗೆ ಈ ಸೌಕರ್ಯ ಮಾಡಬೇಕೆಂದು; ನಾನು ಪ್ರಾರಂಭದಲ್ಲಿಯೇ ಹೇಳಿದೆ, ಬೆಂಗಳೂರಿನಲ್ಲಿಯೂ ಇರಲಿಲ್ಲ, ಇದನ್ನು ready ಆಗಿ establish ಮಾಡುವುದಕ್ಕೆ ಇದು ರಕ್ತ ಪರೀಕ್ಷೆ ಮಾಡುವ ರೀತಿ ಅಲ್ಲ. Sample collection or swab collection ಮಾಡುವುದಕ್ಕೆ ಇರುವ Kit ಕೂಡ ಇಲ್ಲಿ ಉತ್ಪಾದನೆಯಾಗುತ್ತಿಲ್ಲ. ಒಂದಿಷ್ಟು ವಿಚಾರಗಳನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ಅದೇನೆಂದರೆ, ಬೆಂಗಳೂರಿನಲ್ಲಿಯೂ ಇದನ್ನು ತಪಾಸಣೆ ಮಾಡುವುದಕ್ಕೆ ಮೊದಲು ಅವಕಾಶ ಇರಲಿಲ್ಲ. ಕಾಲಕ್ರಮೇಣ ಬೆಂಗಳೂರಿನಲ್ಲಿ 3 ಜಾಗಗಳಲ್ಲಿ ಈ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇನ್ನೂ ಒಂದೆರಡು ಜಾಗಗಳಲ್ಲಿ ವಿಸ್ತರಣೆಯಾಗುತ್ತಿದೆ. ಇನ್ನೂ 4–5 ಕಡೆ ವಿಸ್ತರಣೆ ಆಗಬೇಕಿದೆ, bio-safety level – 2nd level ನಲ್ಲಿದೆ. ಆ ಸಿಬ್ಬಂದಿಗಳು ಸರಿಯಾಗಿ handle ಮಾಡುವುದಕ್ಕೆ virus extraction ಮಾಡಲಿಲ್ಲವೆಂದರೆ ಆ contamination ನಲ್ಲಿ virus extraction and dispose ಮಾಡುವುದು, ಇವೆರಡನ್ನೂ ಮಾಡಲಿಲ್ಲವೆಂದರೆ ನಾವೇ ಹೊಸದಾಗಿ ಇನ್ನೂ ಸಮಸ್ಯೆಗಳನ್ನು ಕರೆಸಿಕೊಂಡಂತಾಗುತ್ತದೆ. ಇವತ್ತು ಬೆಂಗಳೂರಿನಲ್ಲಿಯೂ BMC (Bangalore Medical College) ಅಥವಾ ಕೆಲವು ಭಾಗಗಳಲ್ಲಿ ಏನಿದೆಯೋ ಅಲ್ಲಿ ಸಹ bio-safety level-3 ಸೌಕರ್ಯಗಳಿಲ್ಲ. Bio safety level-2 ನಲ್ಲಿದೆ, Bio safety level-3 ಸೌಕರ್ಯಗಳು ಕೆಲವು ಖಾಸಗಿ ವ್ಯವಸ್ಥೆಗಳಲ್ಲಿವೆ. ಇನ್ನೊಂದು Tuberculosis Institute ನಲ್ಲಿದೆ. ಅಲ್ಲಿ tuberculosis purpose ಗಾಗಿ ಮಾತ್ರ ಮಾಡುತ್ತಾರೆ. ಈ ವೈರಸ್‌ಗೆ ಸಂಬಂಧಿಸಿದಂತೆ ಪರೀಕ್ಷೆಯನ್ನು ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂತಹ Molecular Testing Lab establish ನ್ನು ತ್ವರಿತವಾಗಿ ಮಾಡಬೇಕೆಂದು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(611) 19-03-2020/ 07-30/ ಕೆಹೆಚ್-ಎಕೆ**

**ಡಾ|| ಅಶ್ವತ್ಥನಾರಾಯಣ ಸಿ.ಎನ್ (ಮುಂದು):-**

ಇದಕ್ಕಾಗಿ ಬಜೆಟ್‌ನಲ್ಲಿಯೂ funds ಅನ್ನು earmark ಮಾಡಿದ್ದೇವೆ. ಈ funds ಅನ್ನು earmark ಮಾಡಿ ಎಲ್ಲ ಕಡೆಯಲ್ಲಿಯೂ ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ಇವತ್ತು K.F.D. (Kyasanur Forest Disease) ಬಗ್ಗೆ ಆಗಲೇ ಮಾತನಾಡಬೇಕಾದರೆ, ಈ K.F.D., ಎಚ್1ಎನ್1 ಇವೆಲ್ಲಾ ಕಾಯಿಲೆಗಳಲ್ಲಿ virus ಗಳು ಇದ್ದಾಗ detect ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಅಡೆತಡೆಗಳು ಇವೆ. ಹಾಗಾಗಿ ಇದನ್ನು ಸರಿಪಡಿಸಿಕೊಳ್ಳುವುದಕ್ಕೆ ಈಗ ತ್ವರಿತವಾಗಿ ಇವತ್ತಿನ ದಿವಸ automated machines ಇವೆ. ಇವತ್ತು ನಾನು ಹೇಳುತ್ತಿದ್ದದ್ದು ಒಂದು extraction ಮಾಡುವುದು, ಇನ್ನೊಂದು ಟೆಸ್ಟ್ ಮಾಡುವುದು, ಇವತ್ತಿನ ದಿವಸ ಕೆಲವು automated machines ಇವೆ. ಅದನ್ನು ಎಲ್ಲಿ, ಏನೂ ಮಾಡುವ ಆಗಿಲ್ಲ. Sample feed ಮಾಡುವುದು, ಅದೇ extract ಮತ್ತು test ಮಾಡಿ, ಅದೇ ರಿಸಲ್ಟ್ ಅನ್ನು ಕೊಡುವಂತಹ ಮಿಷನ್‌ಗಳು ಕೂಡ ಬಂದಿವೆ. ಇನ್ನೊಂದು higher end machines ಇರುತ್ತದೆ. ಅದು ಒಂದು ಸಾವಿರ, ಎರಡು ಸಾವಿರ ಸ್ಯಾಂಪಲ್‌ಗಳು, ಇದು ಎಲ್ಲಾ ಕಾಲದಲ್ಲಿಯೂ ಬೇಕಾಗಿರುವುದಿಲ್ಲ. ನಾವು ಹೇಳುತ್ತಿರುವ ಒಂದು ಸೌಲಭ್ಯವನ್ನು ಸ್ಥಾಪನೆ ಮಾಡುವುದರಿಂದ, ಯಾವುದೇ ರೀತಿಯ ವೈರಸ್‌ಗಳು, ಎಚ್1ಎನ್1 ಆಗಲಿ ಆಗುವುದಿಲ್ಲ. ಇವತ್ತಿನ ದಿವಸ ಎಚ್1ಎನ್1 ಬಹಳ ವ್ಯಾಪಕವಾಗಿ ದೇಶದ್ಯಾದ್ಯಂತ ಹರಡಿದ್ದರೂ ಕೂಡ ಯಾರಿಗೆ ಏನು ಬಂದಿದೆ ಎಂಬುದರ ಬಗ್ಗೆ detection ಆಗುತ್ತಿರಲಿಲ್ಲ. ಇದರಿಂದ ಸಾವು-ನೋವುಗಳು ಆಗುತ್ತಿದ್ದವೇ ಹೊರತು ಯಾರು ಯಾವ ಕಾರಣದಿಂದ ಸಾವನ್ನಪ್ಪಿದ್ದಾರೆ ಎಂಬುದೇ ಗೊತ್ತಾಗುತ್ತಿರಲಿಲ್ಲ. ಹಾಗಾಗಿ ಈ ಎಲ್ಲಾ ಅಂಶಗಳನ್ನು ವ್ಯಕ್ತಪಡಿಸಿದಾಗ ಇದರ ಬಗ್ಗೆ ಗೊತ್ತಾಗಬೇಕು. Diagnose ಆಗಬೇಕು ಅಥವಾ ಯಾವ ಕಾರಣದಿಂದ ಯಾರ ಸಾವು ಆಗಿದೆ, ಏಕೆ ಮರಣ ಹೊಂದಿದ್ದಾರೆಂಬುದು ಗೊತ್ತಾಗಬೇಕಾದರೆ ಈ ರೀತಿಯ detection ಗಳು ಇರಲಿಲ್ಲ. ಇದೆಲ್ಲಾ ಸ್ಥಾಪನೆ ಮಾಡಬೇಕಾಗಿದೆ. ಹಾಗಾಗಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಯಾವುದೇ ತಾರತಮ್ಯ ಇಲ್ಲ. ಇದನ್ನು ಸ್ಥಾಪನೆ ಮಾಡುವುದಕ್ಕೆ ನಾವು ತಯಾರಿದ್ದೇವೆ ಮತ್ತು ಮೊದಲೆಲ್ಲಾ kit import ಆಗುತ್ತಿತ್ತು. ಇವತ್ತು ಲೋಕಲ್‌ನಲ್ಲಿ manufacture ಮಾಡುವುದಕ್ಕೆ ಸಿದ್ಧ ಮಾಡುತ್ತಿದ್ದೇವೆ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಲೋಕಲ್‌ನಲ್ಲಿಯೇ swab collection ಮಾಡುವುದಕ್ಕೆ ಕಿಟ್ ಅನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಇವತ್ತಿನ ದಿವಸ ಇಡೀ ವಿಶ್ವದಲ್ಲಿಯೇ import ಗೆ ಎಲ್ಲಾ ಕಡೆ ಒತ್ತಡ ಇದೆ. ಇವತ್ತಿನ ದಿವಸ ಎಲ್ಲರಿಗೂ swab collection ಗೆ material ಮತ್ತು kit ಅವಶ್ಯಕತೆ ಇರುವುದರಿಂದ ಎಲ್ಲಾ ಕಡೆಯಲ್ಲಿಯೂ ಕೊರತೆ ಇದೆ. ಹಾಗಾಗಿ ಇಂತಹ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವು ಇಲ್ಲಿಯೇ ತಯಾರಿಸುತ್ತಿದ್ದೇವೆ. ಹಾಗಾಗಿ ಇವತ್ತಿನ ದಿವಸ ಎಷ್ಟು ಜನರಿಗೆ ಬೇಕಾದರೂ scanning ಮತ್ತು screening ಮಾಡುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ screen ಮಾಡಬೇಕಾದರೆ ಸೀಮಿತವಾಗಿ ಮಾಡಬೇಕು. ಏಕೆಂದರೆ, ಎಲ್ಲರಿಗೂ ಮಾಡುವುದಕ್ಕೆ ಅನೇಕ ರೀತಿಯ ಸಮಸ್ಯೆಗಳು ಇವೆ. ಹಾಗಾಗಿ ಇದನ್ನೆಲ್ಲಾ ಬಗೆಹರಿಸುವುದಕ್ಕೆ ತ್ವರಿತವಾಗಿ ಕೆಲಸಗಳನ್ನು ಮಾಡುತ್ತೇವೆ. ಎಲ್ಲಾ ಜಿಲ್ಲೆಗಳಲ್ಲಿಯೂ ನಾವು late ಇದ್ದೇವೆ. ಅದೇನೆಂದರೆ, ಕೆಲವೊಂದು ವರ್ಷಗಳನ್ನು ನಾವು ನೋಡಿದಾಗ ಇಷ್ಟು ವರ್ಷಗಳು ನಾವು ತಡ ಮಾಡಿರುವುದು ಗೊತ್ತಾಗುತ್ತಿದೆ. ನಾವೆಲ್ಲರೂ ಆ ಸರ್ಕಾರ, ಈ ಸರ್ಕಾರ ಎಂದು ದೂಷಿಸುತ್ತಿರಬಹುದು. ನಾವು ಯಾವ ಸರ್ಕಾರದ ಬಗ್ಗೆಯೂ ದೂಷಿಸದೇ ಜನರ ರಕ್ಷಣೆಗೆ ಬರುವಂತಹದ್ದು ನಮ್ಮ ಕರ್ತವ್ಯ ಇದೆ. ಈ ಕರ್ತವ್ಯವನ್ನು ನಾವು ಮಾಡುತ್ತೇವೆ ಮತ್ತು ಎಲ್ಲಾ ಜಿಲ್ಲೆಯಲ್ಲಿಯೂ ಇದು ಸ್ಥಾಪನೆಯಾಗುತ್ತದೆ. ಮುಂದಿನ ದಿನಗಳಲ್ಲಿ ಇಂತಹದ್ದು ಏನೇ ಸಮಸ್ಯೆಗಳು ಇದ್ದರೂ ಎಲ್ಲಾ ಬೇರೆ ಬೇರೆ ಭಾಗಕ್ಕೆ ಬರುವಂತಹ ಪರಿಸ್ಥಿತಿ ಇರುವುದಿಲ್ಲ. ಅಲ್ಲಲ್ಲಿಯೇ ಇದನ್ನು ಬಗೆಹರಿಸುವುದಕ್ಕೆ ಮತ್ತು ತಪಾಸಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಚಿವರೇ ಒಂದು ನಿಮಿಷ. Biosafety ಇಲ್ಲ ಎಂದು ಮಾನ್ಯ ಸಚಿವರು ಹೇಳಿದರು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಹೆಚ್.ಎಂ.ರೇವಣ್ಣರವರೇ, ಒಂದು ನಿಮಿಷ. ಇದರ ಬಗ್ಗೆ ಒಂದು clear cut ad (advertisement) ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಭಾಗದ ಜನರು ಬೆಳಗ್ಗೆ ನನ್ನನ್ನು ಕೇಳಿದರು. ಈ ad ಅನ್ನು ನೋಡಿ, ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ ಒಂದು ಲ್ಯಾಬ್ ಇಲ್ಲ. ನೀವೇನೂ ನಿದ್ದೇ ಮಾಡುತ್ತಿದ್ದೀರಾ ಎಂದು ಕೇಳಿದರು. ಈ ad ಅನ್ನು ತೆಗೆದುಕೊಂಡು ನನಗೆ ತೋರಿಸಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಅಶ್ವತ್ಥನಾರಾಯಣ ಸಿ.ಎನ್ (ಉಪಮುಖ್ಯಮಂತ್ರಿಯವರು, ಉನ್ನತ ಶಿಕ್ಷಣ, ಐ.ಟಿ., ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಇಲಾಖೆ):-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಮೊನ್ನೆಯ ದಿವಸ ಮಾನ್ಯ ಸಚಿವರೇ ಹೇಳಿದರು. ಬೀದರ್ ಜಿಲ್ಲೆಯಲ್ಲಿ ಐ.ಟಿ., ಪಾರ್ಕ್‌ಗೆ ಬಜೆಟ್ ಭಾಷಣದಲ್ಲಿ . . .

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದು ಬಜೆಟ್ ಭಾಷಣ ಎಂದು ಹೇಳುತ್ತಾರೆ. ಹಾಗಾದರೆ ಇದು ಸಹ ಬಜೆಟ್ ಭಾಷಣವೇ ಆಗುತ್ತದೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-**ಮಾನ್ಯ ಸಭಾಪತಿಯವರೇ, funds earmark ಮಾಡಿ ಬಿಟ್ಟಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ ಇದರ ಬಗ್ಗೆ ತಾವೇ ಹೇಳಿದ್ದೀರಿ. ಒಂದು ನಿಮಿಷ. ನಾನು ಹೇಳುವುದನ್ನು ಮೊದಲು ಕೇಳಿ. The Hon. Minister should listen to me first. What did he tell on that day? ಮಾನ್ಯ ಸಚಿವರು ಏನು ಹೇಳಿದ್ದಾರೆ ಎಂದರೆ, ನಾನು ಬೀದರ್ ಜಿಲ್ಲೆಯಲ್ಲಿ ಐ.ಟಿ., ಪಾರ್ಕ್‌ಗೆ. . . ನಾನು ಐ.ಟಿ., ಮಂತ್ರಿ ಇದ್ದಾಗ ಬಜೆಟ್‌ನಲ್ಲಿ ಅನುಮೋದನೆ ಕೊಟ್ಟಿದ್ದೇವೆ. ಮಾನ್ಯ ಸಚಿವರು ಇದನ್ನು ಬಜೆಟ್ ಭಾಷಣ ಎಂದು ಹೇಳಿದರು. ತಾವು ಸಹ ಹೇಳಿರುವುದನ್ನು ನಾನು ಬಜೆಟ್ ಭಾಷಣ ಎಂದು ಹೇಳಬೇಕಾಗುತ್ತದೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-**ಮಾನ್ಯ ಸಭಾಪತಿಯವರೇ, ಇದಕ್ಕೆ funds earmark ಮಾಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, it's a very clear cut picture. Five labs have been established in Southern Karnataka. ನಾವು ಈ ವೈರಸ್‌ಗಳಿಂದ ಸಾಯುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಸ್ಪಷ್ಟವಾಗಿ ಹೇಳುತ್ತಿಲ್ಲ. ಕೊನೆಯಪಕ್ಷ ಅಲ್ಲಿಂದ ಸ್ಯಾಂಪಲ್ ಅನ್ನು ಏನಾದರೂ airlift ಆದರೂ ಮಾಡುತ್ತಾರೆಯೇ, ಇವತ್ತಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ದಿವಸ ಬೆಳಗಾವಿ, ಹುಬ್ಬಳ್ಳಿ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಏರ್‌ಪೋರ್ಟ್ ಇದ್ದು, ಆ ಸ್ಯಾಂಪಲ್ ಅನ್ನು airlift ಮಾಡಬೇಕು. The government must establish labs. ಮಾನ್ಯ ಉಪಮುಖ್ಯಮಂತ್ರಿಯವರೇ, ನೋಡಿ.

**ಡಾ॥ಅಶ್ವತ್ಥನಾರಾಯಣ ಸಿ.ಎನ್:**–ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿರುವಂತಹ ವಿಚಾರದಲ್ಲಿ ಯಾವುದೇ ಭಾಗದಲ್ಲಿದ್ದರೂ ಕೂಡ ಸ್ಯಾಂಪಲ್ ಸಂಗ್ರಹಣೆ ಮಾಡುವುದಕ್ಕೆ ಅವಕಾಶ ಇದೆ.

**ಶ್ರೀ ಎಸ್.ಆರ್.ಪಾಟೀಲ್:**– ಮಾನ್ಯ ಸಚಿವರೇ, ಸ್ಯಾಂಪಲ್ ಸಂಗ್ರಹಣೆ ಮಾಡುವುದು ಅಷ್ಟೇ ಅಲ್ಲ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:**–ಮಾನ್ಯ ಸಭಾಪತಿಯವರೇ, in the coming days, we will establish it.

**ಶ್ರೀ ಎಸ್.ಆರ್.ಪಾಟೀಲ್:**– ಮಾನ್ಯ ಸಭಾಪತಿಯವರೇ, the government should do it very fast and very quickly. ಇದು ಯುದ್ಧೋಪಾದಿಯಲ್ಲಿ ಆಗಬೇಕು.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:**–ಮಾನ್ಯ ಸಭಾಪತಿಯವರೇ, ಇದನ್ನು ಎಲ್ಲಾ ಜಿಲ್ಲೆಯಲ್ಲಿಯೂ ಮಾಡುತ್ತಿದ್ದೇವೆ. Just install ಮಾಡುವುದೊಂದೇ ಅಲ್ಲ. Manpower…

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:**– ಮಾನ್ಯ ಸಭಾಪತಿಯವರೇ, . . .

**ಶ್ರೀ ಹೆಚ್.ಎಂ.ರಮೇಶ್‌ಗೌಡ:** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:**– ಮಾನ್ಯ ಸದಸ್ಯರುಗಳಾದ ಮಾನ್ಯ ಹೆಚ್.ಎಂ.ರೇವಣ್ಣನವರೇ ಮತ್ತು ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ ತಮಗೆ ಅವಕಾಶವನ್ನು ಕೊಡುತ್ತೇನೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:**–ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾವು establish ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಇದನ್ನು establish ಮಾಡಿ, ಇದಕ್ಕೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಿಬ್ಬಂದಿಯನ್ನು ಒದಗಿಸಿ, ಇದು ಚಾಲನೆಯಲ್ಲಿರುವ ರೀತಿಯಲ್ಲಿ ಮಾಡುವುದಕ್ಕೆ ಇದನ್ನು ತ್ವರಿತವಾಗಿ ಮಾಡುತ್ತಿದ್ದೇವೆ. ಇದು ತುಂಬಾ ಮುಖ್ಯವಾದ ವಿಚಾರವಾಗಿರುವುದರಿಂದ, ಇದನ್ನು ಖಂಡಿತವಾಗಿಯೂ ಮಾಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಮಾಡುತ್ತೇವೆ ಎಂದರೆ ನಮ್ಮದೇನೂ ಅಭ್ಯಂತರವಿಲ್ಲ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾಗಿ ಈ ಕಾಯ್ದೆಯ ಬಗ್ಗೆ ಮಾತನಾಡುತ್ತಿದ್ದೇವೆ. ಐ.ಟಿ. ಮತ್ತು ಬಿ.ಟಿ. ಕಂಪನಿಗಳನ್ನು ಮತ್ತು ಇನ್ನಿತರ ಕಂಪನಿಗಳನ್ನು ಮುಚ್ಚುತ್ತಿದ್ದೇವೆ. ಎಲ್ಲೆಲ್ಲಿ ಜನ ಸೇರುತ್ತಿದ್ದಾರೆ. ಅಲ್ಲೆಲ್ಲಾ ಕಡಿಮೆ ಮಾಡುತ್ತಿದ್ದೇವೆ. ನನಗೆ ಇರುವಂತಹ ಮಾಹಿತಿಯ ಪ್ರಕಾರ ಇಡೀ ದೇಶದಲ್ಲಿಯೇ ಸೆಕ್ಷನ್ 144 ಜಾರಿಯಾಗಬಹುದು ಎಂಬ ಮಾಹಿತಿ ಇದೆ. ಈ ದೇಶದಲ್ಲಿ ಎಲ್ಲಿಯೂ ಕೂಡ ಜನ ಸೇರಬಾರದು. ಆದರೆ, ಒಂದು segment ನಮ್ಮ ಚರ್ಚೆಯಿಂದ ಹೊರಗೆ ಹೋಗಿ ಬಿಟ್ಟಿದೆ. ಈ ರಾಜ್ಯದೊಳಗೆ organized and unorganized sector ನಲ್ಲಿ ಕೆಲಸ ಮಾಡುವಂತಹ ಕಾರ್ಮಿಕರ ಸಂಖ್ಯೆ ಒಂದು ಕೋಟಿ ಇಪ್ಪತ್ತು ಲಕ್ಷದಷ್ಟು ಇದೆ. It is almost 20% of the population. ಆ ಕಾರ್ಮಿಕರು ಕೆಲವೊಂದು ಕಡೆ 50 ಜನರು, 500 ಜನರು, 1000 ಜನರು ಇರಬಹುದು. ಕೆಲವು ಜನರು ಶಿಫ್ಟ್‌ಗಳಲ್ಲಿಯೂ ಕೂಡ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಸುರಕ್ಷತೆಯ ಬಗ್ಗೆ ಎಲ್ಲಿಯೂ ಕೂಡ ಪ್ರಸ್ತಾಪ ಮಾಡಿರುವುದಿಲ್ಲ. ಅದರ ಬಗ್ಗೆ ಪ್ರಸ್ತಾಪ ಮಾಡುವುದನು ಮರೆತಿದ್ದೇವೆ. ಇದರ ಬಗ್ಗೆ ಬೆಳಗ್ಗೆ ಪ್ರಸ್ತಾಪ ಮಾಡಿದೆ, ಇವತ್ತು ಸದನದಲ್ಲಿ ಮಾನ್ಯ ಉಪಮುಖ್ಯಮಂತ್ರಿಯವರು ಮತ್ತು ಆರೋಗ್ಯ ಸಚಿವರು ಇದ್ದಾರೆ. ದೊಡ್ಡ ದೊಡ್ಡ ಉದ್ದಿಮೆಗಳಲ್ಲಿ ಕೆಲಸ ಮಾಡುವಂತಹ ಈ ಕಾರ್ಮಿಕರ ಕೂಲಿಕಾರರ ರಕ್ಷಣೆ ಮತ್ತು ಒಂದು ಸಾರಿ ಅವರು ಇಲ್ಲಿಗೆ ಬಂದರೆ ಬಡವರ ಕೇರಿಗಳಿಗೆ ಅಥವಾ ಸ್ಲಂ ಗಳಿಗೆ ತೆಗೆದುಕೊಂಡು ಹೋಗಬಹುದು. ಆ ಕಾರ್ಮಿಕರಿಗೆ ರಜೆಯನ್ನು ಕೊಡುತ್ತಾರೋ ಅಥವಾ ಏನು ಕ್ರಮ ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ತಿಳಿಸಬೇಕು. Waive off ಮಾಡುತ್ತಾರೋ, ಏನು ಮಾಡುತ್ತಾರೆ ಎಂಬುದರ ಬಗ್ಗೆ ಸರ್ಕಾರ ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯವರು ಎಲ್ಲಾ ರೀತಿಯಲ್ಲಿಯೂ ಸಹ ಖಾಯಂ ವ್ಯವಸ್ಥೆಗೆ ಹೇಳಿದ್ದಾರೆ. ನಾವು ಹೇಳುವುದೇನೆಂದರೆ, ಬೆಳಗಾವಿಯಲ್ಲಿ, ಕೆ.ಎಂ.ಸಿ. ಹುಬ್ಬಳ್ಳಿಯಲ್ಲಿ, ಕಲುಬುರರ್ಗಿಗೆ ಖಾಸಗಿ ಕಾಲೇಜುಗಳಿಂದ ಆಸ್ಪತ್ರೆಗಳಿಗೆ ಸ್ಥಳಾಂತರ ಮಾಡಿ. ತತ್ಕಾಲಿಕವಾಗಿ ಸ್ಥಳಾಂತರ ಮಾಡಿ, ಈಗ ಏನೂ ಭಯದ ವಾತಾವರಣ ನಿಮಾಣವಾಗಿದೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:–**ಮಾನ್ಯ ಸಭಾಪತಿಯವರೇ, ಬೆಳಗಾವಿ ಮತ್ತು ಗುಲ್ಬರ್ಗಾದಲ್ಲಿ ಆಗುತ್ತಿದೆ. ಬೇರೆ ಕಡೆಗಳಲ್ಲಿ ಮಾಡುವುದಕ್ಕೆ ಅದಕ್ಕೆ . . .

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಚಿವರೇ, ದಯಮಾಡಿ ತಾವು ಎಲ್ಲಾ ಕಡೆಗಳಲ್ಲಿಯೂ ಮಾಡಿ. ಏಕೆಂದರೆ, ಎಲ್ಲಾ ಕಡೆಯಲ್ಲಿಯೂ ಕೂಡ ಭಯದ ವಾತಾವರಣ ನಿರ್ಮಾಣವಾಗಿದೆ. ಆ ಭಾಗದ ಜನರಿಗೆ ಇಲ್ಲ ಎಂದು ಆಗಬಾರದು. ಆ ಭಾಗದ ಜನರು ನಮ್ಮನ್ನು neglect ಮಾಡಿದ್ದಾರೆ. ನಮ್ಮಲ್ಲಿ ಯಾವುದೇ ರೀತಿಯ ವ್ಯವಸ್ಥೆ ಇಲ್ಲ. ನಾವು ಬೆಂಗಳೂರಿಗೆ ಹೋಗಬೇಕು ಎನ್ನುವ ಭಾವನೆ ಆ ಭಾಗದ ಜನರಲ್ಲಿ ಬರಬಾರದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಇದರ ಬಗ್ಗೆ ಅನುಮಾನ ಉಂಟಾಯಿತು. ಮಾನ್ಯ ಉಪಮುಖ್ಯಮಂತ್ರಿಯವರ ಹೇಳಿಕೆಗೂ ಮತ್ತು ಮಾನ್ಯ ಆರೋಗ್ಯ ಸಚಿವರ ಹೇಳಿಕೆಗೂ ಸ್ವಲ್ಪ ವ್ಯತ್ಯಾಸ ಇರುವುದು ಕಾಣಿಸುತ್ತಿದೆ. ನಾನು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಯವರು ಹೇಳುತ್ತಿರುವಾಗ ಎಚ್1ಎನ್1 ಯಿಂದ ಪೂನಾಗೆ ಹೋಗಿ ವಾಪಸ್ಸು ಬಂದರು. ಆದರೆ ಇಲ್ಲಿ ಇನ್ನೂ ಘಟಕಗಳು set up ಆಗಿಲ್ಲವೆನ್ನುವುದಾದರೆ, ಬೆಂಗಳೂರಿನಲ್ಲಿ ಈಗಾಗಲೇ ಆಗಿವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆಯಲ್ಲವೇ, ಅದರಲ್ಲಿ ಪಕ್ವವಾಗಿ ಇದೆಯೇ, ಮಾನ್ಯ ಆರೋಗ್ಯ ಸಚಿವರು 4–5 ಘಟಕಗಳು ಈಗಾಗಲೇ ಸಿದ್ಧವಾಗಿವೆ ಎಂದು ಹೇಳಿದರು. ಮಾನ್ಯ ಉಪಮುಖ್ಯಮಂತ್ರಿಯವರು ಹೇಳುವಾಗ ಇನ್ನೂ ಘಟಕಗಳು ಸಿದ್ಧವಿಲ್ಲ ಎಂದು ಹೇಳಿದರು. ಇದರ ಬಗ್ಗೆ ಈಗ contradict ಆಗುವುದು ಬೇಡ. ಈಗ ಇರುವ 4–5 ಘಟಕಗಳ ಜೊತೆಗೆ ಗುಲ್ಬರ್ಗಾ ಮತ್ತು ಬೆಳಗಾವಿ ಜಿಲ್ಲೆಯಲ್ಲಿರುವ ಏರ್‌ಪೋರ್ಟ್‌ಗಳಲ್ಲಿ ಮೊದಲು ಮಾಡಬೇಕು. ಏಕೆಂದರೆ, ಈಗ movement ನಲ್ಲಿ ಇರುವುದೇ ಅಲ್ಲಿ. ಅಲ್ಲಿಂದ ಬಂದು ಒಳಗಡೆ ಸೇರಿಕೊಂಡ ಮೇಲೆ ಮಾಡುವುದಕ್ಕಿಂತ ಮೊದಲೇ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:-** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರು ಬೆಳಗ್ಗೆಯಿಂದ ಮಾತನಾಡಲು ಅವಕಾಶವನ್ನು ಕೇಳುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. ಆ ಕಡೆ ಆಯನೂರು ಮಂಜುನಾಥ್‌ರವರು ಈಗ ತಾನೇ 5 ನಿಮಿಷಗಳ ಮೊದಲು ಒಂದು ದೊಡ್ಡ ನೊಣವನ್ನು ಹೊಡೆದರು. ಇಲ್ಲಿ ಈಗ ತಾನೇ ಒಂದು ನೊಣ ಹೋಯಿತು. ಇಲ್ಲಿ ದಿನನಿತ್ಯ ದಪ್ಪ ಗಾತ್ರ ನೊಣಗಳು ಹೋಗುತ್ತವೆ. ಈಗ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಮುಂದೆ ಆ ನೊಣ ಬಂದಿದೆ. ನಮ್ಮ ಸದನವನ್ನು ಮೊದಲು sanitize ಅನ್ನು ಮಾಡಬೇಕು. ದಪ್ಪ ಗಾತ್ರದ ನೊಣ ಎಲ್ಲಾ ಕಡೆ ಬರುತ್ತಿದೆ. ಆ ನೊಣ ಚಿಕ್ಕ ಗಾತ್ರದ್ದು ಅಲ್ಲ. ಮುಂಚೆ ಈ ರೀತಿ ಇರಲಿಲ್ಲ, ಪ್ರತಿ 5 ರಿಂದ 10 ನಿಮಿಷಕ್ಕೊಮ್ಮೆ ಬರುತ್ತಿದೆ. ದಯಮಾಡಿ, ಮೊದಲು ನಮ್ಮ ಸದನವನ್ನು sanitize ಅನ್ನು ಮಾಡಬೇಕು.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮೊದಲು ಕೊವಿಡ್-19 ರ ಬಗ್ಗೆ ಮಾತನಾಡಬೇಕೇ ಅಥವಾ ಆಹಾರದ ಬಗ್ಗೆ ಮಾತನಾಡಬೇಕೇ ಎಂಬುದು ನನ್ನ ಪ್ರಶ್ನೆ.

**ಸಭಾಪತಿಯವರು:-** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ಮೊದಲು ಆಹಾರದ ಬಗ್ಗೆ ಮಾತನಾಡಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಎಲ್ಲಾ ಮಾನ್ಯ ಸದಸ್ಯರು ಲ್ಯಾಬೊರೇಟರಿ ಬಗ್ಗೆ ಮಾತನಾಡಿದ್ದಾರೆ. ಇವತ್ತಿನ ದಿವಸ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಕೊವಿಡ್-19 ಪತ್ತೆ ಆಗಿದ್ದು, ಈಗ ಮಧ್ಯಾಹ್ನ 3.30 ಗಂಟೆಗೆ ಕೊವಿಡ್-19 ಇರುವ ಬಗ್ಗೆ ಪಾಸಿಟಿವ್ ಬಂದಿದೆ. ಅಲ್ಲಿ ರಜೆಯನ್ನು ಕೊಟ್ಟಿರುವುದಿಲ್ಲ. ಏಕೆಂದರೆ, ಎಲೆಕ್ಟ್ರಾನಿಕ್ ಸಿಟಿಯನ್ನು ಬಿಟ್ಟರೆ, ಹೆಬ್ಬಾಳದಲ್ಲಿರುವ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಹೆಚ್ಚಾಗಿ ಐ.ಟಿ. ಕಂಪನಿಗಳು ಇರುವಂತಹದ್ದು. ಅಲ್ಲಿ ಯಾರೂ ಇನ್ನೂ ರಜೆಯನ್ನು ಘೋಷಣೆ ಮಾಡಿರುವುದಿಲ್ಲ. ಈಗಾಗಲೇ ಅಲ್ಲಿ ಒಂದೊಂದು ಕಂಪನಿಯಲ್ಲಿ ಸುಮಾರು 750 ರಿಂದ 1200 ಜನರು ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-**ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಒಂದೊಂದು ಸೆಕ್ಟರ್ ಅಲ್ಲಿ ಬಹಳ ಇದೆ. ಎಲೆಕ್ಟ್ರಾನಿಕ್ ಸಿಟಿಯನ್ನು ಬಿಟ್ಟರೆ, ಹೆಬ್ಬಾಳದಲ್ಲಿರುವ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಹೆಚ್ಚಾಗಿ ಐ.ಟಿ. ಕಂಪನಿಗಳು ಇರುವಂತಹದ್ದು. ಅಲ್ಲಿ ಇವತ್ತು ಮಧ್ಯಾಹ್ನ 3.30 ಗಂಟೆಗೆ ಕೊವಿಡ್-19 ಇರುವುದು ಒಂದು ಪಿ.ಜಿ. ಯಲ್ಲಿ ಪತ್ತೆಯಾಗಿದೆ.

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರಮೇಶ್‌ಗೌಡರವರು ಹೇಳಿರುವ ವಿಚಾರದ ಬಗ್ಗೆ ಯಾರೋ ಸುಳ್ಳು ಸುದ್ದಿಯನ್ನು ಹಬ್ಬಿದ್ದಾರೆ ಎಂದು ತಮ್ಮಲ್ಲಿ ವಿನಂತಿಸುತ್ತೇನೆ. ಏಕೆಂದರೆ, ಇದರ ಬಗ್ಗೆ ಸದನಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಚಿವರೇ ಇದರ ಬಗ್ಗೆ ಸ್ಪಷ್ಟೀಕರಣವನ್ನು ಮಾಡುತ್ತಿದ್ದೇನೆ. ಈಗಾಗಲೇ ಇದರ ಬಗ್ಗೆ ಎಲ್ಲರಿಗೂ ಗೊತ್ತಿರುವಂತಹದ್ದು, ಮಾಧ್ಯಮದಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನೋಡಿ.

**ಶ್ರೀ ಬಿ. ಶ್ರೀರಾಮುಲು:-**ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ ಸಾಮಾಜಿಕ ಜಾಲತಾಣಗಳಲ್ಲಿ ಬರುವುದನ್ನು ತಾವು ತಲೆಗೆ ಹಚ್ಚಿಕೊಳ್ಳಬೇಡಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಚಿವರೇ, ನಿಮ್ಮ ಆಂಬುಲೆನ್ಸ್ ಹೋಗಿ ಕೊವಿಡ್-19 ಪತ್ತೆಯಾಗಿರುವ ವ್ಯಕ್ತಿಯನ್ನು ಈಗಾಗಲೇ ಕರೆದುಕೊಂಡು ಹೋಗಿದ್ದಾರೆ ಎಂಬ ಮಾಹಿತಿ ಕೂಡ ಬಂದಿದೆ. ಅದಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿ ರಜೆಯನ್ನು ಘೋಷಣೆ ಮಾಡಿಲ್ಲ ಎಂದು ನಾನು ಹೇಳುತ್ತಿದ್ದೇನೆ. ದಯಮಾಡಿ, ಅಲ್ಲಿ ಐ.ಟಿ. ಕಂಪನಿಗಳು ಹೆಚ್ಚಾಗಿ ಇರುವಂತಹದ್ದು.

**ಶ್ರೀ ಬಿ. ಶ್ರೀರಾಮುಲು:-**ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ಇದರ ಬಗ್ಗೆ ತಾವು ಸಲಹೆ ಕೊಟ್ಟಿರುವುದಕ್ಕೆ ಧನ್ಯವಾದಗಳು.

**(612) 19/03/2020/8:50/ಎಸ್‌ಪಿಆರ್/ಎಕೆ**

**ಡಾ॥ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರೋನ ವೈರಸ್ ಅಂದರೆ ಕೋವಿಡ್-19 ಕಾಯಿಲೆಯ ಬಗ್ಗೆ ಬಹಳ ಗಂಭೀರವಾದ ಚರ್ಚೆಗಳಾಗುತ್ತಿವೆ. ಮೊನ್ನೆಯ ಟೆಲಿಗ್ರಾಫ್ ಪತ್ರಿಕೆಯಲ್ಲಿನ ವರದಿಯೊಂದನ್ನು ನಾನು ಓದಿದೆ. ಇಟಲಿಯಲ್ಲಿ the number of

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

identified cases is 10,000 and availability of ventilators is 5090, ಇನ್ನು ಸುಮಾರು 4,810 ಜನರಿಗೆ ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅದು ತಪ್ಪು ಮಾಹಿತಿಯಾಗಿದ್ದು, the number of identified cases in Italy is 24000 and not ten thousand.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಪತ್ರಿಕೆಯನ್ನು ಓದಿ ಹೇಳುತ್ತಿದ್ದೇನೆ. ಟೆಲಿಗ್ರಾಫ್ ಪತ್ರಿಕೆಯು ಲಂಡನ್‌ನಲ್ಲಿ ಬಿಡುಗಡೆಯಾಗುತ್ತದೆ. ಅದರಲ್ಲಿ ಹತ್ತು ಸಾವಿರ ಪ್ರಕರಣಗಳನ್ನು ಗುರ್ತಿಸಿದ್ದು, ರೋಗಿಗಳನ್ನು ದಾಖಲು ಮಾಡಿಕೊಳ್ಳಲು ಅಲ್ಲಿ 5,090 ಹಾಸಿಗೆಗಳು ಮಾತ್ರವೇ ಇರುವುದನ್ನು ನೋಡಿ, ಅಲ್ಲಿನ ಸರ್ಕಾರವು 80 ವರ್ಷ ಮೇಲ್ಪಟ್ಟ ರೋಗಿಗಳನ್ನು ಕಡೆಗಾಣಿಸಿರುವ ಬಗ್ಗೆ ವರದಿಯಾಗಿದೆ. 'Let those who are aged 80 years and above go' ಎನ್ನುವ ವಿಚಾರವನ್ನು ನಾನು ಓದಿದ್ದೇನೆ. It was alarming. ಅಂದರೆ ಕಾಯಿಲೆ ಬಂದಿರುವ ರೋಗಿಗಳನ್ನು ಆಸ್ಪತ್ರೆಗಳಲ್ಲಿ ದಾಖಲಿಸಲೂ ಸಹ ಇಟಲಿಯಲ್ಲಿನ ಆಸ್ಪತ್ರೆಗಳಲ್ಲಿ ಹಾಸಿಗೆಗಳು ದೊರೆಯದಿರುವ ವಾತಾವರಣ ಇವತ್ತಿನ ದಿನ ಉದ್ಭವಿಸಿದ್ದು ಇದು ನಮಗೆಲ್ಲರಿಗೂ ಎಚ್ಚರಿಕೆಯ ಗಂಟೆಯಾಗಿದೆ. ನಮ್ಮ ಭಾರತ ದೇಶದಲ್ಲಿ now we are going to step into the 3rd and 4th stage. ಮೂರನೆ ಮತ್ತು ನಾಲ್ಕನೆ ಹಂತಕ್ಕೆ ಹೋದಾಗ by chance ಈ ರೀತಿಯಾಗದಂತೆ ನಾವು ಆ ದೇವರಲ್ಲಿ ಪ್ರಾರ್ಥಿಸೋಣ. ಒಂದು ವೇಳೆ ನಮ್ಮ ಜನರು ಮುಂಜಾಗ್ರತಾ ಕ್ರಮಗಳಿಗೆ ಸರಿಯಾಗಿ ಸ್ಪಂದಿಸದೇ, ಕಾಯಿಲೆಯನ್ನು ಬಹಳವಾಗಿ ಕಡೆಗಾಣಿಸಿದರೆ, ಆ ಹಂತಗಳನ್ನು ನಿಭಾಯಿಸುವ ಶಕ್ತಿ ಸಾಮರ್ಥ್ಯ... ಇದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಇದರ ಜೊತೆಗೆ ಸರ್ಕಾರ ರಾಜ್ಯದಲ್ಲಿನ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ವಶಕ್ಕೆ ಪಡೆದುಕೊಳ್ಳಬೇಕು. ಅಲ್ಲಿ ಪ್ರತ್ಯೇಕವಾದ Isolation Blockಗಳನ್ನು ಮಾಡಬೇಕು. ಕಾಲೇಜಿನವರಿಗೆ ಸಾಮಾಜಿಕ ಜವಾಬ್ದಾರಿಯಿದೆ. ಬೆಂಗಳೂರು ನಗರದಲ್ಲಿ ಖಾಸಗಿ ಹೈಟೆಕ್ ಆಸ್ಪತ್ರೆಗಳು ಕೇವಲ ಹಣ ಮಾಡುವುದಕ್ಕಾಗಿಯೇ ಇಲ್ಲ. ಇದರಲ್ಲಿ ಅವರ ಜವಾಬ್ದಾರಿಯೂ ಸಹ ಇದೆ. ಸದರಿ ಆಸ್ಪತ್ರೆಗಳಲ್ಲಿ ವಿಶೇಷವಾಗಿ ಐ.ಸಿ.ಯು., ವೆಂಟಿಲೇಟರ್‌ಗಳನ್ನು earmark ಮಾಡಿ spare ಮಾಡಬೇಕು. ಸರ್ಕಾರಿ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 2010 ನೇ ಇಸವಿಯವರೆಗೆ ಕೇವಲ ಆರು ವೆಂಟಿಲೇಟರ್‌ಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರವೇ ಲಭ್ಯವಿತ್ತು. ಈ ಬಗ್ಗೆ ನಾನು ಇದೇ ಸದನದಲ್ಲಿ ಪ್ರಸ್ತಾಪಿಸಿದ ನಂತರ ಈಗ ಅಲ್ಲಿ 20–25 ವೆಂಟಿಲೇಟರ್‌ಗಳಿರಬಹುದು. ಇಂತಹ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ನಂಬಿಕೊಂಡು ನಾವು ಬದುಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದಯಮಾಡಿ ಸರ್ಕಾರ ಖಾಸಗಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳನ್ನು ವಶಕ್ಕೆ ಪಡೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿ ಎಲ್ಲಾ ಶಾಲಾ–ಕಾಲೇಜುಗಳಿಗೆ ರಜೆ ನೀಡಲಾಗಿದೆ. ಆದರೆ ನಗರದ ಒಂದು ಪ್ರತಿಷ್ಠಿತ ಡಿಗ್ರಿ ಕಾಲೇಜ್‌ನಲ್ಲಿ ಪರೀಕ್ಷೆ ನಡೆಸುತ್ತಿರುವ ಬಗ್ಗೆ ಇವತ್ತಿನ ದಿವಸ ಬೆಳಿಗ್ಗೆ ನನಗೆ ಸುಮಾರು ಹತ್ತು ದೂರವಾಣಿ ಕರೆಗಳು ಬಂದಿವೆ. ಅದರ ಮಾಹಿತಿಯನ್ನು ನಾನು ಆಗಲೇ ಮಂತ್ರಿಗಳಿಗೆ ನೀಡಿದ್ದೇನೆ. ಯಾರೂ ಸಹ ಯಾವುದೇ ರೀತಿಯ ಅಚಾತುರ್ಯಗಳನ್ನು ಮಾಡಬಾರದು; ಕಡ್ಡಾಯವಾಗಿ ಸರ್ಕಾರದ ನಿರ್ದೇಶನಗಳನ್ನು ಪಾಲಿಸಬೇಕು. ಏಕೆಂದರೆ, ಸರ್ಕಾರಕ್ಕಿಂತ ಯಾರೂ ಸಹ ದೊಡ್ಡವರಲ್ಲ. ಈ ರೀತಿಯ ಸೂಚನೆಗಳನ್ನು ಸರ್ಕಾರವು ನೀಡಬೇಕೆಂದು ನಾನು ಆಗ್ರಹಿಸುತ್ತೇನೆ. ಇಂತಹ ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿಯನ್ನು ಆ ದೇವರು ಇನ್ನೂ ಹೆಚ್ಚಿಗೆ ಕೊಡಲಿ ಎಂದು ನಾನು ಹಾರೈಸುತ್ತೇನೆ.

**ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ನನಗೆ ವಿನಾಯಿತಿಯನ್ನು ನೀಡಬೇಕಾಗುತ್ತದೆ. ಏಕೆಂದರೆ, ನಾನು ಎಲ್ಲಾ ವಿಷಯಗಳಿಗೂ ಉತ್ತರವನ್ನು ಕೊಡುತ್ತಿದ್ದರೆ ಹೊರಗಡೆ ಇರುವ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಈಗಿನ ಗಂಭೀರ ಸಂದರ್ಭದಲ್ಲಿ ನನಗೆ ಹೊರಗಡೆ ಕೆಲಸ ಜಾಸ್ತಿ ಇದೆ.

**ಸಭಾಪತಿಯವರು:–** ಮಾನ್ಯ ಸಚಿವರು ಹೇಳುವುದನ್ನು ನಾನು ಒಪ್ಪುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಬೇರೊಬ್ಬ ಮಂತ್ರಿಗಳಿಗೆ ಜವಾಬ್ದಾರಿಯನ್ನು ವಹಿಸಬಹುದು. ಮಾನ್ಯ ಮಂತ್ರಿಗಳು confine ಆಗಬೇಕೆಂದು ನಾವು ಹೇಳುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹೇಳುವುದು ಸರಿಯಿದೆ. ವೈದ್ಯರು ಆದ ಉಪಮುಖ್ಯಮಂತ್ರಿಗಳಿಗೆ ಚಾರ್ಜ್‌ನ್ನು ಕೊಡಬಹುದು. ಅವರು ನೋಡಿಕೊಳ್ಳುತ್ತಾರೆ. ಆರೋಗ್ಯ ಮಂತ್ರಿಗಳು ರಾಜ್ಯದ ಎಲ್ಲಾ ಕಡೆಗಳಿಗೆ ಭೇಟಿ ನೀಡಲಿ. ಮಾನ್ಯ ಸಭಾನಾಯಕರು ಆರೋಗ್ಯ ಮಂತ್ರಿಗಳಿಗೆ ಈ ಸದನದಿಂದ ಮುಕ್ತಿ ನೀಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮಗೆ ತೆರಿಗೆ ರೂಪದಲ್ಲಿ ಬರುವ ಬಹಳ ತೆರಿಗೆಯು ಅಂದರೆ ಶೇಕಡಾ 50 ರಷ್ಟು ತೆರಿಗೆಯು ಮಾಹಿತಿ ತಂತ್ರಜ್ಞಾನ ವಲಯದಿಂದ ಬರುತ್ತದೆ. ಇವತ್ತಿನ ದಿವಸ ಈ ಐ.ಟಿ.ವಲಯದಲ್ಲಿ ಐವತ್ತು ಸಾವಿರದಷ್ಟು ಜನರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳು ತೊಂದರೆಯಲ್ಲಿದ್ದಾರೆ. ಇವರ ಬಗ್ಗೆ ತಕ್ಷಣವೇ ಹೇಳಿಕೆಯನ್ನು ಮಾನ್ಯ ಉಪಮುಖ್ಯ ಮಂತ್ರಿಗಳು ನೀಡಬೇಕೆಂದು ನಾನು ಕೋರುತ್ತೇನೆ.

**11. <u>ಅರ್ಧ ಗಂಟೆ ಕಾಲಾವಧಿ ಚರ್ಚೆ</u>**

**ವಿಷಯ:- ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಿಂದ ನಿಯಮಬಾಹಿರವಾಗಿ ಮಾಡಲಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ನಿಯೋಜನೆ ಕುರಿತು.**

* * *

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೇಮಕಾತಿ ಹೊಂದಿದ ಕಾಲೇಜು ಉಪನ್ಯಾಸಕರು ರಾಜ್ಯದ ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ನಿಯೋಜನೆ ಮೇರೆಗೆ ಬರುತ್ತಾರೆನ್ನುವ ವಿಚಾರವನ್ನು ನಾನು ಮೊನ್ನೆಯ ದಿನ ಪ್ರಸ್ತಾಪಿಸಿದ್ದೆನು. ಅವತ್ತಿನ ದಿವಸ ಉಪ ಮುಖ್ಯಮಂತ್ರಿಗಳು ನೀಡಿದ ಉತ್ತರವು ನಮಗೆ ಸಮಾಧಾನವನ್ನು ತಂದಿಲ್ಲ. ಈ ವಿಚಾರದಲ್ಲಿ ನಾವು ಬಹಳಷ್ಟು ಚರ್ಚೆಗಳನ್ನು ಮಾಡಿದ್ದೇವೆ. ನನ್ನ ಬಳಿ ಇರುವ ಪಟ್ಟಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಊರು ಮೊದಲ ಸ್ಥಾನದಲ್ಲಿದೆ. ಶ್ರೀ ಎಸ್.ಎಂ.ಸತೀಶ್ ಎನ್ನುವವರು ಬೀಳಗಿಯಿಂದ ಮಿಡಿಗೇಶಿ ಎಂಬಲ್ಲಿಗೆ ನಿಯೋಜನೆ ಹೋಗಿದ್ದಾರೆ. ಈ ರೀತಿಯ ಹಲವಾರು ಉದಾಹರಣೆಗಳನ್ನು ನಾನು ನೀಡುತ್ತೇನೆ. ಕೊಪ್ಪಳದಿಂದ ಕುಣಿಗಲ್‌ಗೆ; ಕುದೂರಿನಿಂದ ಮೈಸೂರಿಗೆ; ಹೊನ್ನಾವರದಿಂದ ಮಂಡ್ಯಕ್ಕೆ; ಆಡಿಯಿಂದ ಬೆಂಗಳೂರಿಗೆ; ಲಿಂಗಸುಗೂರುನಿಂದ ಗೌರಿಬಿದನೂರಿಗೆ; ಚಿಟಗುಪ್ಪಿಯಿಂದ ಬೆಂಗಳೂರಿಗೆ. ಈ ರೀತಿಯಾಗಿ ಹಲವಾರು ಜನರು ರಾಜ್ಯದ ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ಬಂದಿದ್ದಾರೆ. ಅಂದರೆ ರಾಜ್ಯದ ಉತ್ತರ ಭಾಗದಲ್ಲಿ ನೇಮಕಾತಿ ಹೊಂದಿ ಹುದ್ದೆಯ ಸಮೇತವಾಗಿ ನಿಯೋಜನೆ ಮೇರೆಗೆ ಹೋಗುತ್ತಾರೆ. ಇದು ಅವರ ಅಧಿಕಾರಾವಧಿಯಲ್ಲಿ ಅಲ್ಲ ಅವರ ಹಿಂದಿನ ಅವಧಿಯಲ್ಲಾಗಿದೆ. ಈ ಮಾತನ್ನು ನಾನು ಮೊದಲೇ ಹೇಳಿದ್ದೇನೆ. ನಿನ್ನೆಯ ದಿವಸ ನಾವು ವರ್ಗಾವಣೆಯ ಬಗ್ಗೆ ಮಾತನಾಡಿದ್ದೇವೆ. ಶಿಕ್ಷಕರು ಹಾಗೂ ಉಪನ್ಯಾಸಕರು ಇಲ್ಲ ಎಂದು ಹೇಳಿದಾಗ, ಸರ್ಕಾರವು ಅತಿಥಿ ಉಪನ್ಯಾಸಕರನ್ನು ನೇಮಿಸುವುದಾಗಿ ಹೇಳಿತು. ನಿಯೋಜನೆಯ ಅವಶ್ಯಕತೆ ಏನು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾನು ಈ ಹಿಂದೆ ಮಂತ್ರಿಯಾಗಿದ್ದಾಗ ಇದನ್ನು ವಿಭಾಗವಾರು ಮಾಡಲು ಪ್ರಯತ್ನಿಸಿದೆವು. ಆಗ ಯಾರೋ ಒಬ್ಬರು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದರು. ಆಗ ನ್ಯಾಯಾಲಯವು 'the candidate for the post of lecturer can apply anywhere. It is a fundamental right of the candidate' ಎಂಬುದಾಗಿ ಅಭಿಪ್ರಾಯಪಟ್ಟಿತು. ಹೀಗಾಗಿ ಆಗ ಅದನ್ನು ಜಾರಿಗೊಳಿಸಲಾಗಲಿಲ್ಲ. ದಕ್ಷಿಣ ಭಾಗದ ವಿದ್ಯಾರ್ಥಿಗಳ ಶೇಕಡಾವಾರು ಅಂಕ ಜಾಸ್ತಿಯಾಗಿರುತ್ತದೆ. ಏಕೆಂದರೆ ಈ ಭಾಗದ ವಿದ್ಯಾರ್ಥಿಗಳು ಹೆಚ್ಚು ಓದುತ್ತಾರೆ ಅಥವಾ ವಿಶ್ವವಿದ್ಯಾಲಯದ ತಪ್ಪು ಇರಬಹುದು. ಈ ವಿಚಾರವು ನನಗೆ ತಿಳಿದಿಲ್ಲ. ದಕ್ಷಿಣ ಭಾಗದ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆದಿದ್ದು, ಉತ್ತರ ಭಾಗದಲ್ಲಿ ಕೆಲಸಕ್ಕೆ ಅರ್ಜಿ ಸಲ್ಲಿಸುತ್ತಾರೆ. ಆಗ ಅವರುಗಳ ನೇಮಕಾತಿ ರಾಜ್ಯದ ಉತ್ತರ ಭಾಗದಲ್ಲಾಗುತ್ತದೆ. ನೇಮಕಾತಿ ಹೊಂದಿದವರು ಕನಿಷ್ಠ Probationary Period ಪೂರ್ಣಗೊಳ್ಳುವವರೆಗೂ ಸಹ ಅಲ್ಲಿ ಕರ್ತವ್ಯ ನಿರ್ವಹಿಸುವುದಿಲ್ಲ. ಉನ್ನತ ಶಿಕ್ಷಣ ಇಲಾಖೆಯಲ್ಲಿಯೂ ಸಹ counselling ಮುಖಾಂತರ ವರ್ಗಾವಣೆ ಮಾಡುವ ವ್ಯವಸ್ಥೆ ಇದೆ. ನನಗೆ ತಿಳಿದ ಹಾಗೆ ಶ್ರೀ ಆರ್.ವಿ.ದೇಶಪಾಂಡೆರವರು ಈ ಹಿಂದೆ ಇಲಾಖೆಯ ಮಂತ್ರಿಗಳಾಗಿದ್ದಾಗ ಆ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ನೇಮಕಾತಿ ಹೊಂದಿದ ನಂತರ ಕನಿಷ್ಠ Probationary Period ಇನ್ನೂ ಪೂರ್ಣಗೊಂಡಿಲ್ಲ ಆಗಲೇ ಸುಮಾರು 138 ಜನರು ನಿಯೋಜನೆ ಮೇರೆಗೆ ಹೋಗಿದ್ದಾರೆ. ಇದರಲ್ಲಿ ಲೈಬ್ರರಿಯನ್, ಗುಮಾಸ್ತ, Physical Education Director ಗಳನ್ನು ನಿಯೋಜನೆ ಮಾಡಲಾಗಿದೆ. ಈ ವಿಷಯವನ್ನು ನಾನು ಈ ಹಿಂದೆಯೂ ಸಹ ಪ್ರಸ್ತಾಪಿಸಿದ್ದೆನು. ಈ ಬಗ್ಗೆ ಪ್ರಶ್ನಿಸಿದಾಗ, ಸರ್ಕಾರವು ಆಡಳಿತಾತ್ಮಕ ಹಿತದೃಷ್ಟಿಯಿಂದ 137 ಬೋಧಕರ ಹಾಗೂ 8 ಬೋಧಕೇತರ ಸಿಬ್ಬಂದಿಗಳನ್ನು ದಿನಾಂಕ 19/01/2019 ರಂದು ಹೊರಡಿಸಿದ ಆದೇಶದಲ್ಲಿ ನಿಯೋಜನೆ ಮಾಡಲಾಗಿದೆ ಎಂದು ತಿಳಿಸಿದೆ. ಇದರಲ್ಲಿ ಯಾವ ರೀತಿಯಾದ ಆಡಳಿತಾತ್ಮಕ ಹಿತದೃಷ್ಟಿಯಿದೆ ಎಂದು ನಾನು ಕೇಳುತ್ತೇನೆ. ಯಾವುದೇ ಒಬ್ಬ ಐ.ಎ.ಸ್. ಅಥವಾ ಸಹಾಯಕ ಆಯುಕ್ತರು ಇಲ್ಲ ಎನ್ನುವ ಪಕ್ಷದಲ್ಲಿ ಮತ್ತು ಆರೋಗ್ಯ ಇಲಾಖೆಯಲ್ಲಿ ಯಾವುದೇ ಒಬ್ಬ ವೈದ್ಯರು ಇಲ್ಲ ಎನ್ನುವ ಸಂದರ್ಭಗಳಲ್ಲಿ ನಿಯೋಜನೆ ಮಾಡಬೇಕು. ಇಂತಹದ್ದನ್ನು ಆಡಳಿತಾತ್ಮಕ ಹಿತದೃಷ್ಟಿಯಿದೆ ಎಂದು ನಾನು ಹೇಳುತ್ತೇನೆ. ಆದರೆ ಮಕ್ಕಳಿಗೆ ಬೋಧನೆ ಮಾಡುವ 138 ಉಪನ್ಯಾಸಕರನ್ನು ವರ್ಗಾವಣೆ ಮಾಡುವುದು ಬಿಟ್ಟು ನಿಯೋಜನೆ ಮಾಡಿದ್ದಾರೆ ಎಂದರೆ ಇದರರ್ಥವೇನು? ಈ ಸಂಗತಿಗಳೆಲ್ಲವೂ ಮಾಧ್ಯಮಗಳಲ್ಲಿ ಬಿತ್ತರಗೊಂಡಿದೆ. ನಾನು ಈಗಿನ ಮಂತ್ರಿಗಳನ್ನು ದೂಷಿಸಲು ತಯಾರಿಲ್ಲ. ಏಕೆಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಅವರ ಹಿಂದಿನ ಮಂತ್ರಿಗಳ ಅವಧಿಯಲ್ಲಾಗಿದೆ. ಈ ಸಂಗತಿಗಳು ಪತ್ರಿಕೆಗಳಲ್ಲಿ ಏಕೆ ವರದಿಯಾಗಿಲ್ಲ? ಕೆಲವು ಉಪನ್ಯಾಸಕರುಗಳು ತಾವು ನಿಯೋಜನೆ ಕೋರಿ ಮೂರ್‍ನಾಲ್ಕು ಲಕ್ಷ ರೂಪಾಯಿಗಳ ಲಂಚವನ್ನು ನೀಡಿರುವ ಬಗ್ಗೆ ಹಾಗೂ ತಮ್ಮ ಕೌಟುಂಬಿಕ ಸಮಸ್ಯೆಗಳ ಬಗ್ಗೆ ನನ್ನ ಬಳಿ ಬಂದು ತಿಳಿಸಿದರು. ಈಗ ನಿಯೋಜನೆಗೊಂಡ ಕೆಲವರು ನನ್ನ ಬಳಿ ಬಂದು 'ಕೈಮುಗಿದು ಕೇಳುತ್ತೇನೆ ಏನಾದರೂ ಮಾಡಿ ಸಹಾಯ ಮಾಡಿ ಎಂದು ಕೇಳಿದ್ದರು'. ಅವರಿಗಿರುವ ಕಷ್ಟವನ್ನು ನಾನು ಒಪ್ಪುತ್ತೇನೆ. ಆ ಪೈಕಿ ಕೆಲವು ಪತಿ-ಪತ್ನಿಯರು ಮತ್ತು ಮಕ್ಕಳಿರುವ ಪ್ರಕರಣಗಳಿರಬಹುದು.ಆ ಹುದ್ದೆಗೆ ಕೆಲವು ಉಪನ್ಯಾಸಕರು ಅರ್ಹರಿದ್ದರೂ ಸಹ ಅವರುಗಳೇಕೆ ಉತ್ತರ ಕರ್ನಾಟಕ ಭಾಗದ ಹುದ್ದೆಗಳಿಗೆ ಅರ್ಜಿಯನ್ನು ಹಾಕಬೇಕಿತ್ತು? ಕೆಲವು ಉತ್ತರ ಕರ್ನಾಟಕ ವಿಜಯಪುರ ಜಿಲ್ಲೆಯ ಉಪನ್ಯಾಸಕರುಗಳು ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಂತಹವರುಗಳು ತಮ್ಮ ಜಿಲ್ಲೆಗೆ ಮರಳುವುದಕ್ಕೆ ಸಾಧ್ಯವೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಆಡಳಿತಾತ್ಮಕ ಹಿತದೃಷ್ಟಿ ಎಲ್ಲಿದೆ ಎಂದು ನಾನು ಕೇಳಬಯಸುತ್ತೇನೆ. ಇದು ಸರಿಯಾದ ಕ್ರಮವಲ್ಲ. ಮೈಸೂರು ಜಿಲ್ಲೆಗೆ 42; ಬೆಂಗಳೂರಿಗೆ 28; ಮಂಡ್ಯಕ್ಕೆ 6; ಹಾಸನಕ್ಕೆ 6; ಕೋಲಾರಕ್ಕೆ 6 ಈ ರೀತಿಯಾಗಿ ಉಪನ್ಯಾಸಕರುಗಳು ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಿಗೆ ನಿಯೋಜನೆಗೊಂಡಿದ್ದಾರೆ. ಈ ರೀತಿಯ ನಿಯೋಜನೆಯಿಂದಾಗಿ ಉತ್ತರ ಕರ್ನಾಟಕ ಭಾಗದ ಜನರಿಗೆ 138 ಹುದ್ದೆಗಳು ತಪ್ಪಿಹೋದವು. ಪಾಪ! ಅಲ್ಲಿನ ಅಭ್ಯರ್ಥಿಗಳು ನೇಮಕಾತಿಯಿಂದ ವಂಚಿತರಾದರು. ಈಗ ನೇಮಕಾತಿ ಹೊಂದಿದವರು 61 ಅಂಕಗಳನ್ನು ಗಳಿಸಿದ್ದರೆ, ಉತ್ತರ ಕರ್ನಾಟಕ ಭಾಗದ ಅಭ್ಯರ್ಥಿಗಳು 59.6 ಅಂಕಗಳನ್ನು ಪಡೆದಿದ್ದರು. ಹೀಗಾಗಿ ಅವರಿಗೆ ಕೆಲಸ ಸಿಕ್ಕಿಲ್ಲ.

**(613)/19-3-2020/7-50/ಎಂಎಂ/ಆರ್‌ಎನ್**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):-**

ಮಕ್ಕಳ ಪರಿಸ್ಥಿತಿ ಏನಾಗಬೇಕು ಅದನ್ನು ಹೇಳಿ. ಬಂಕಾಪುರದಲ್ಲಿ ಇಂಗ್ಲೀಷ್, ಗಣಿತ, ಅರ್ಥಶಾಸ್ತ್ರ, ವಾಣಿಜ್ಯ ಶಾಸ್ತ್ರದ ಶಿಕ್ಷಕರೆ ಇಲ್ಲ. ನೇಮಕಾತಿ ಮಾಡುವಲ್ಲಿ ನಿಮ್ಮ ಗುರಿ ಏನು ಎನ್ನುವುದನ್ನು ಹೇಳಿ. ನೇಮಕಾತಿ ಅಲ್ಲಿ ಮಾಡಿ ಶಿಕ್ಷಕರನ್ನು ಬೇರೆ ಕಡೆಗೆ deputation ಮಾಡಲಾಗಿದೆ. ಯಾವ ನಿಯಮದ ಮೇಲೆ deputation ಮಾಡಲಾಗಿದೆ? ಒಂದು ಕಡೆ ಶಿಕ್ಷಕರು ಹೆಚ್ಚಾಗಿದ್ದರೆ, ಎಲ್ಲಿ ಶಿಕ್ಷಕರಿಲ್ಲದೆ ಮಕ್ಕಳಿಗೆ ತೊಂದರೆಯಾಗುತ್ತದೆ ಅಲ್ಲಿಗೆ deputation ಮಾಡಬೇಕು. ಕೆಲವು ಕಡೆಗಳಲ್ಲಿ ಶಿಕ್ಷಕರು ಇಲ್ಲ, ಅತಿಥಿ ಉಪನ್ಯಾಸಕರೂ ಇಲ್ಲ. ಅದಕ್ಕೆ ನಾವು ಪದೇ ಪದೇ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಮಾತನಾಡುತ್ತೇವೆ. ಈಗ ನಡೆಯುತ್ತಿರುವ ರೀತಿಯನ್ನು ನೋಡಿಯೇ ನಾವು ಆ ಮಾತನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತೇವೆ. ಅನೇಕ ಸಾರಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎನ್ನುವ ಬೇರೆ ಬೇರೆ ರಾಜ್ಯ ಮಾಡಬೇಕು ಎನ್ನುವ ಕೂಗನ್ನು ನಾವು ಬಹಳ ಸಾರಿ ವಿರೋಧ ಮಾಡಿದ್ದೇವೆ. ನಮ್ಮಲ್ಲಿ 138+8 ಜನ ಶಿಕ್ಷಕರನ್ನು ನೇಮಕ ಮಾಡಿ ಮತ್ತೆ ಈ ಭಾಗಕ್ಕೆ deputation ಮಾಡಲಾಗಿದೆ. ಕೇವಲ ನಾಲ್ಕು ಜನ ಮಾತ್ರ ಅಲ್ಲಿ ಇದ್ದಾರೆ. ಭಟ್ಕಳದಲ್ಲಿ ಶಿಕ್ಷಕರೇ ಇಲ್ಲ. ಅಲ್ಲಿಯವರು ನಮ್ಮನು ಕೇಳುತ್ತಾರೆ. ಇದು ಮಾಡಿರುವುದು ತಪ್ಪು. ಯಾರು ಮಾಡಿದರು ಈ ರೀತಿ. ಹಿಂದೆ ಒಬ್ಬರು ಮಂಜುಳಾ ಎಂದು ಶಿಕ್ಷಣ ಆಯುಕ್ತರಿದ್ದರು. ಆಗ ನಮ್ಮ ಕಡೆಯವರೆ ಒಬ್ಬರು deputation ಕೇಳಲು ಬಂದಿದರು, ಆಗ ನಾನು ಸತ್ತರೂ deputation ಕೊಡುವುದಿಲ್ಲ ಎಂದು ಅವರಿಗೆ ನಾನು ನೇರವಾಗಿಯೇ ಹೇಳಿದ್ದೇನೆ. ನಂತರ ನಾನು ಶಿಕ್ಷಣ ನಿರ್ದೇಶಕರಿಗೆ deputation ಮಾಡಬೇಡಿ ಎಂದು 10 ಪತ್ರಗಳನ್ನು ಬರೆದಿದ್ದೇನೆ. ಆದರೂ ಮಾಡಿದ್ದಾರೆ. ಮಕ್ಕಳು ದೇವರು ಎಂದು ಹೇಳುತ್ತೇವೆ. ಆದರೆ ಮಕ್ಕಳ ಜೀವನದ ಜೊತೆಯೇ ಆಟವಾಡುತ್ತಿದ್ದೇವೆ. ಮಕ್ಕಳಿಗೆ ಶಿಕ್ಷಣ ಕೊಡುವವರೆ ಇಲ್ಲ ಎಂದರೆ ಏನು ಮಾಡುವುದು. ಇಂಗ್ಲಿಷ್, ಗಣಿತ ಶಿಕ್ಷಕರು ಇಲ್ಲ. ಶಿಕ್ಷಣ ಇಲಾಖೆ ಶಿಕ್ಷಕರ ಅನುಕೂಲಕ್ಕಾಗಿ ಇದೆಯೋ ಅಥವಾ ಮಕ್ಕಳ ಅನುಕೂಲಕ್ಕಾಗಿ ಇದೆಯೇ? ಸದನದಲ್ಲಿ ನಾವು ಶಿಕ್ಷಕರ ಬಗ್ಗೆ ವಿಷಯ ಮಾತನಾಡುವಾಗ, ಸಭಾನಾಯಕರು ಯಾವಾಗಲೂ ಶಿಕ್ಷಕರ ವಿಷಯವನ್ನೇ ಮಾತನಾಡುತ್ತಾರೆ ಎಂದು ನಮಗೆ ಹೇಳುತ್ತಾರೆ. ಆದರೆ ದುರ್ದೈವ ಎಂದರೆ, ಯಾವುದೇ ವಿಷಯವನ್ನು ಮಾತನಾಡುತ್ತಾ ಇರುವಾಗ ಅದು ನೇರವಾಗಿ ಶಿಕ್ಷಕರ ಕಡೆಯೇ ಹೋಗುತ್ತದೆ. ನಾವು ಚುನಾವಣೆ ಇರಲಿ ಬಿಡಲಿ ಶಿಕ್ಷಕರ ಸಮಸ್ಯೆ ಬಂದಾಗ ಇಲ್ಲಿ ಮಾತನಾಡುತ್ತಲೇ ಇರುತ್ತೇವೆ. ಆದರೆ ನಮ್ಮ ಮಾತು ಸಮಗ್ರ ಮಕ್ಕಳ ಅಭಿವೃದ್ಧಿ ಬಗ್ಗೆ ಇರುತ್ತದೆ. ನಾನು ಶಿಕ್ಷಣ ಸಚಿವನಾಗಿದ್ದಾಗ ಏನು ಮಾಡಿದ್ದೇನೆ ಎನ್ನುವುದನ್ನು ರೆಕಾರ್ಡ್ ತೆಗೆದು ನೋಡಿ. ಈ ವರ್ಗಾವಣೆ ವಿಧೇಯಕವನ್ನು ಆಗಲೇ ತರಲಾಯಿತು. ಈ ರೀತಿ ನಮ್ಮ ಮಕ್ಕಳಿಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ ಈ ವಿಧೇಯಕವನ್ನು ತರಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ 1300 ಶಿಕ್ಷಕರನ್ನು ನೇಮಕ ಮಾಡಿಕೊಂಡಾಗ ಕೇವಲ 290 ಜನ ಶಿಕ್ಷಕರು ಮಾತ್ರ ಕಲ್ಯಾಣ ಕರ್ನಾಟಕದವರು. ಬೆಳಗಾವಿ, ಕಾರವಾರ, ಧಾರವಾಡ ಈ ಜಿಲ್ಲೆಗಳನ್ನು ಶಿಕ್ಷಣ ಕಾಶಿ ಎಂದು ಕರೆಯುತ್ತಾರೆ. ಆದರೆ ಚಿಕ್ಕೋಡಿಯಲ್ಲಿ 2002ನೇ ಇಸವಿಯಲ್ಲಿ 1100 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಯಿತು. ಆಗ ಕಲ್ಯಾಣ ಕರ್ನಾಟಕದವರು ಕೇವಲ 228 ಜನ ಶಿಕ್ಷಕರು. ಉಳಿದವರು ಬರಿ ಮಂಗಳೂರು, ಬೆಂಗಳೂರು, ಮೈಸೂರು, ಮಂಡ್ಯ, ಹಾಸನ ಕಡೆಯವರೆ ಇದ್ದರು. ಇದಕ್ಕೆ ನಮ್ಮದೇನು ತಕರಾರು ಇಲ್ಲ. ಆದರೆ ಎಲ್ಲಿ ನೇಮಕಾತಿ ಹೊಂದುತ್ತಾರೆ ಅಲ್ಲಿಯೇ ಇರಬೇಕು. ಈಗ ಕೌನ್ಸಿಲಿಂಗ್ ಮುಖಾಂತರ ವರ್ಗಾವಣೆಯಾಗುತ್ತಿರುವವರು ಮೂಲಸ್ಥಾನದಲ್ಲಿ 8 ವರ್ಷ ಸೇವೆಯನ್ನು ಮಾಡಿದರೆ ವರ್ಗಾವಣೆ ಹೊಂದುತ್ತಿದ್ದಾರೆ. ನೇಮಕಾತಿ ಮಾಡಿ,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರಿನವರು, ಮಂಗಳೂರಿನವರು, ಕಾರವಾರದವರು ಅರ್ಜಿಯನ್ನು ಹಾಕಿಕೊಳ್ಳಬೇಡಿ ಎಂದು ಹೇಳಲು ಬರುವುದಿಲ್ಲ. ಮೆರಿಟ್ ಇರುವವರು ಬರುತ್ತಾರೆ. ಆದರೆ ಸರ್ಕಾರ ಮಕ್ಕಳ ಭವಿಷ್ಯದ ಬಗ್ಗೆ ವಿಚಾರ ಮಾಡಬೇಕು. ಮಕ್ಕಳ ಅನುಕೂಲಕ್ಕಾಗಿ deputation ಮಾಡಲಾಗಿದೆ ಎಂದು ಅಧಿಕಾರಿಗಳು ಉತ್ತರವನ್ನು ಬರೆದು ಕೊಟ್ಟಿದ್ದಾರೆ. ಅದನ್ನು ಮಂತ್ರಿಗಳು ಇಲ್ಲಿ ಓದುತ್ತಿದ್ದಾರೆ ಅಷ್ಟೆ. ನಾನು ಶಿಕ್ಷಣ ಸಚಿವನ್ನಾಗಿದ್ದೆ, ಆಗ ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದರು. ಒಬ್ಬ ಶಿಕ್ಷಕರು ನೇಮಕವಾಗಿ ಇನ್ನು ಎರಡು ವರ್ಷವಾಗಿರಲಿಲ್ಲ. ನಮ್ಮ ಶ್ರೀ ಎಚ್.ಡಿ.ರೇವಣ್ಣನವರು ನಿರ್ಮಲಾ ಎನ್ನುವವರ ಒಂದು ಕೇಸ್‌ನ್ನು ತೆಗೆದುಕೊಂಡು ಬಂದರು. ಅದಕ್ಕೆ ನಾನು ಇವರು ನೇಮಕವಾಗಿ ಇನ್ನು ಎರಡು ವರ್ಷವಾಗಿಲ್ಲ, probationary period ಆಗಿರುವುದಿಲ್ಲ. ಇವರನ್ನು deputation ಮಾಡಲು ಬರುವುದಿಲ್ಲ ಎಂದು ಹೇಳಿದೆ. ಆದರೂ ಮುಖ್ಯಮಂತ್ರಿಗಳ ಕಛೇರಿಯಿಂದ ಮಾಡಿ ಎನ್ನುವ ಆದೇಶ ಬಂತು. ಇವರು ನೇಮಕವಾಗಿ ಇನ್ನು ಎರಡು ವರ್ಷಗಳಾಗಿಲ್ಲ, ಇದನ್ನು ಮಾಡಲು ಬರುವುದಿಲ್ಲ, ಇನ್ನು ಅವರ probationary period ಮುಗಿದಿರುವುದಿಲ್ಲ ಎಂದು ಬರೆದು ಮತ್ತೆ ಮುಖ್ಯಮಂತ್ರಿಗಳ ಕಛೇರಿಗೆ ಕಳುಹಿಸಿದೆ. ಅಲ್ಲಿಂದ ಮತ್ತೆ ಅದೇ ರೀತಿ ಕಡತ ಬಂತು. ಆಗ ಶ್ರೀ ವಿಜಯ ಭಾಸ್ಕರ್‌ರವರು ಶಿಕ್ಷಕರ ಇಲಾಖೆ ಕಾರ್ಯದರ್ಶಿಯವರಾಗಿದ್ದರು. ಅವರು ಕ್ಲೀಯರ್ ಆಗಿ ಇವರದ್ದು ಇನ್ನು probationary period ಮುಗಿದಿರುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳೇ ಆದೇಶ ಮಾಡಿದರೂ ಸಹಿತ probationary period ಆಗುವವರೆಗೆ ವರ್ಗಾವಣೆ ಮಾಡಲು ಬರುವುದಿಲ್ಲ ಎಂದು ಬರೆದರು. ಈ ರೀತಿ ಅಧಿಕಾರಿಗಳು ಈ ರೀತಿ ಇದೆ ಇದನ್ನು ಮಾಡಲು ಬರುವುದಿಲ್ಲ ಎಂದು ನಿಮಗೆ ಹೇಳಬೇಕು. ಆದರೆ ಈಗಿನ ಅಧಿಕಾರಿಗಳು ಇಲ್ಲಿ ಇನ್ನು ಮಂತ್ರಿಗಳು ಹೇಳಲು ಫೋನ್ ಎತ್ತುತ್ತಿರುವಾಗಲೇ ಅಲ್ಲಿ, ಡೆಪ್ಯೂಟೇಷನ್ ಮಾಡಿಬಿಟ್ಟಿರುತ್ತಾರೆ. ಅಲ್ಲಿಯು ಬೇರೆ ವ್ಯವಸ್ಥೆ ಇದೆ. ನಾನು ಇವತ್ತಿನ ಐಎಎಸ್ ಅಧಿಕಾರಿಗಳನ್ನು ನೋಡಿದ್ದೇನೆ, ಇವತ್ತಿನ ಐಎಎಸ್ ಅಧಿಕಾರಿಗಳನ್ನು ನೋಡಿದ್ದೇನೆ. ಆಗಿನ ಅಧಿಕಾರಿಗಳು ಪ್ರತಿಯೊಂದಕ್ಕೂ ನೋಟ್ ಹಾಕುತ್ತಿದರು. ಶಿಕ್ಷಣ ಇಲಾಖೆ ಮುಖ್ಯ ಕಾರ್ಯದರ್ಶಿಯಾಗಿ ಆಗ ಶ್ರೀ ರವೀಂದ್ರ ಎನ್ನುವವರು ಇದ್ದರು. ನಾನು ಇಲ್ಲಿಗೆ ಬಂದಾಗ ಅವರು ಶಿಕ್ಷಣ ಇಲಾಖೆಯಲ್ಲಿ ಉಪ ಕಾರ್ಯದರ್ಶಿಯಾಗಿದ್ದರು. ಅವರು ಪ್ರತಿಯೊಂದನ್ನು ಓದುತ್ತಿದ್ದರು. ಆದರೆ ಈಗಿನವರು ಏನು ಇಲ್ಲ ಕ್ಲಾರ್ಕ್ ಬರೆದುಕೊಟ್ಟಿರುವುದಕ್ಕೆ ಸಹಿ ಹಾಕುತ್ತಾರೆ ಅಷ್ಟೆ. ಈಗಿನವರಿಗೆ ಸಮಯವೇ ಇರುವುದಿಲ್ಲ. ಶಿಕ್ಷಣ ಇಲಾಖೆಯಲ್ಲಿಯೂ ಅಧಿಕಾರಿಗಳಿಗಂತು ಯಾವುದೇ ಕಾಳಜಿ ಇಲ್ಲ. ಅವರು ಸಾರಿಗೆ, ಅಬಕಾರಿ ಇಲಾಖೆಗಳಿಗೆ ಹೋಗಬೇಕು ಎನ್ನುವವರು ಅಲ್ಲಿ ಬಂದಿರುತ್ತಾರೆ. ಆದರೂ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಲಾಖೆಯು ತೆಗೆಯುತ್ತಾರೆ. ಈ ಇಲಾಖೆಯಲ್ಲಿಯು ಸಿಗುತ್ತದೆ ಎಂದು ಗೊತ್ತಾದ ಮೇಲೆ ಇಲ್ಲಿಂದ ಹೋಗಲು ಇಷ್ಟಪಡುವುದಿಲ್ಲ. ಇಂತಹ ಅನೇಕ ಘಟನೆಗಳು ಇವೆ. ಶಿಕ್ಷಕರ ತೊಂದರೆಗಳು ಇರುತ್ತವೆ. ಆದರೆ ನೇಮಕಾತಿ ಮಾಡುವಾಗಲೇ ಅದೆಲ್ಲವನ್ನು ವಿಚಾರಿಸಬೇಕು. ಈಗ ಏಪ್ರಿಲ್, ಮೇ ತಿಂಗಳಲ್ಲಿ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಮಕ್ಕಳು ಏನು ಪರೀಕ್ಷೆ ಬರೆಯಬೇಕು. ನಮ್ಮ ಊರಿನಲ್ಲಿ ಒಂದು ಮಹಿಳಾ ಕಾಲೇಜಿನಲ್ಲಿ ಒಬ್ಬರು ಖಾಯಂ ಉಪನ್ಯಾಸಕರು ಇಲ್ಲ. ಆ ಕಾಲೇಜಿಗೆ ಖರ್ಚು ಮಾಡಲು ಹಣವನ್ನೆ ಕೊಟ್ಟಿಲ್ಲ, ನಾವೇ ಹಣ ಹಾಕಿ ಕಂಪ್ಯೂಟರ್ ಇತರೆ ವಸ್ತುಗಳನ್ನು ತಂದು ಕೊಟ್ಟಿದ್ದೇವೆ. 10 ಸಾರಿ ಹೇಳಿದಾಗ, ಮೊನ್ನೆ 25,000 ರೂ.ಗಳನ್ನು ಬಿಡುಗಡೆಗೊಳಿಸಿದ್ದಾರೆ. ಈ ರೀತಿ ವ್ಯವಸ್ಥೆ ಇದೆ. ಇಲ್ಲಿ ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ಮಂತ್ರಿಗಳು ಹೇಳಿರುವುದೆಲ್ಲವನ್ನು ಮಾಡಬೇಕು ಎಂದು ಇಲ್ಲ, ಮಾಡಬಾರದು ಎಂದೂ ಕೂಡಾ ಹೇಳುವುದಿಲ್ಲ. ಆದರೆ ಯಾವುದು genuine, ಅವಶ್ಯಕವಾಗಿದೆ ಎನ್ನುವುದನ್ನು ತಿಳಿದುಕೊಂಡು ಮಾಡಬೇಕು. ಈಗಿನ ಅಧಿಕಾರಿಗಳು ರಾಜಕಾರಣಿಗಳಿಗಿಂತ ಮುಂದೆಯೇ ಇರುತ್ತಾರೆ. ಇದರ ಏನು ಕ್ರಮ ತೆಗೆದುಕೊಳ್ಳುತ್ತೀರಿ ತೆಗೆದುಕೊಂಡು ಆ ಮಕ್ಕಳಿಗೆ ನ್ಯಾಯ ಕೊಡಬೇಕು ಎನ್ನುವ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಗಳೆ, ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು ಮಾತನಾಡಿರುವುದಕ್ಕೆ ಸಹಮತ ವ್ಯಕ್ತಪಡಿಸಿ ಹೇಳಲು ಇಷ್ಟಪಡುತ್ತೇನೆ. Deputation ನನ್ನು probationary period ಆಗದೆ ಇದ್ದರೂ ಮಾಡಲು ಬರುತ್ತದೆಯೇ? ಎರಡನೆಯದಾಗಿ mandatory condition, ಎರಡು ವರ್ಷವಾಗುವವರೆಗೆ ಮಾಡಲು ಆಗುವುದಿಲ್ಲ. Deputation ಗೆ reasons should be assigned. ಅದನ್ನು ಮಾಡಿಲ್ಲ. ಮೂರನೆಯದಾಗಿ, ಆ ಭಾಗದ ಬೆಳವಣಿಗೆಗಾಗಿ ವಿಶೇಷವಾಗಿ ಉಪನ್ಯಾಸಕರನ್ನು ನೇಮಕ ಮಾಡಿ ಅಲ್ಲಿಗೆ ಕೊಟ್ಟಾಗ ಅಲ್ಲಿ along with post ಇಲ್ಲಿಗೆ ಬಂದರೆ, ಅಲ್ಲಿಯ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಮಾನ್ಯ ಶ್ರೀ ಎಸ್.ಆರ್.ಪಾಟೀಲ್‌ರವರು ಮಾತನಾಡುತ್ತಾ ಉತ್ತರ ಕರ್ನಾಟಕದ ಬಗ್ಗೆ ಏಕೆ ನಿಮಗೆ ಇಷ್ಟೊಂದು ನಿರ್ಲಕ್ಷ್ಯ ಎಂದು. Along with post ಬಂದ ಮೇಲೆ 138+8 ಒಟ್ಟು 146 ಹುದ್ದೆಗಳ ಗತಿ ಏನು? ಈ ವಿಚಾರವಾಗಿ ಗಂಭೀರ ಕ್ರಮವನ್ನು ತೆಗೆದುಕೊಳ್ಳಬೇಕು. ಶಿಕ್ಷಣ ಇಲಾಖೆಯಲ್ಲಿ ಆಳವಾಗಿ ಸೇವೆ ಮಾಡಿದ ಶ್ರೀ ಅನಿರುದ್ದ್ ಶ್ರವಣ್‌ರವರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಮ್ಮ ಗುಲಬರ್ಗಾದಲ್ಲಿ ಶಿಕ್ಷಣ ಇಲಾಖೆಯ ಆಯುಕ್ತರಾಗಿದ್ದಾರೆ. ಅದರೆ ಅವರಿಗೆ concern ಇದೆ. Highly decent officer, ಅವರಿಗೆ ಕೇಳಿ ನಮ್ಮ ಭಾಗದಲ್ಲಿ ಎಷ್ಟು ತೊಂದರೆ ಇದೆ ಎಂದು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, with post transfer ಮಾಡಿರುವುದು ನನಗೆ ಗೊತ್ತೆ ಆಗಿಲ್ಲ. ನಮ್ಮ ಬಗ್ಗೆ ಏನು ತಿಳಿದುಕೊಂಡಿದ್ದೀರಿ? ನಮ್ಮಗೆ ಏನು ಬೇಡವೇ ಬೇಡ ಅಂದುಕೊಂಡಿದ್ದೀರಾ ಹೇಗೆ. ನಿಮ್ಮ ವಿಚಾರವಾದರೂ ಏನು ಇದೆ? ಶ್ರೀ ಎಸ್.ಎಂ.ಸತೀಶ್, ವಾಣಿಜ್ಯ ಶಾಸ್ತ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಬೀಳಗಿ. ಇದು ಸರ್ಕಾರಿ ಕಾಲೇಜು. ಏಳುವರೆ ಎಕರೆ ಜಮೀನನ್ನು ನಮ್ಮ ತಂದೆಯವರ ಹೆಸರಿನಲ್ಲಿ ಸರ್ಕಾರಕ್ಕೆ donate ಮಾಡಿದ್ದೇನೆ. ಈ ಸದ್ಯ 5 ಕೋಟಿ ರೂ.ಗಳ ಬೆಲೆ ಬಾಳುವಂತಹ ಜಾಗ ಅದು. I have donated that land in the name of my father; ಶ್ರೀ ರುದ್ರಗೌಡ ಪಾಟೀಲ್, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ. ಅಲ್ಲಿ ಪ್ರಿನ್ಸಿಪಾಲರು ಒಬ್ಬರೆ ಇರುವುದು. ಉಳಿದವರೆಲ್ಲರೂ guest lecturers. ಈ ವಿಷಯ ನನಗೆ ಕಲ್ಪನೆ ಇರಲಿಲ್ಲ. ಮಾನ್ಯ ಹೊರಟ್ಟಿಯವರಿಗೆ ಧನ್ಯವಾದಗಳು, ಈ ವಿಷಯವನ್ನು ನನಗೆ ನೆನಪಿಗೆ ತಂದರು. ಇಡೀ ಉತ್ತರ ಕರ್ನಾಟಕಕ್ಕೆ ಪ್ರಥಮ ಕಾಲೇಜ್ ಅದು. ಸರ್ಕಾರಕ್ಕೆ ನಾವು ಇಷ್ಟೆಲ್ಲಾ ತ್ಯಾಗ ಮಾಡಿದ್ದೇವೆ.

**(614)19-03-2020(08-00)ಬಿಎಸ್‌ಸಿ-ಆರ್‌ಎನ್**

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಶ್ರೀಮಾನ್ ವೀರಪ್ಪ ಮೊಯ್ಲಿರವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಅವರು Local Inspection ಕಮಿಟಿಯ ವತಿಯಿಂದ ಬಂದಿದ್ದು, ಆಗ ಅವರು syndicate member ಏನೋ ಆಗಿದ್ದರು. ನಮಗೆ ಏನು ಮಾಡಬೇಕೆಂದಿದ್ದಾರೆ? ನಮ್ಮನ್ನು ಮುಗಿಸಿಬಿಡುವ ವಿಚಾರ ಇದ್ದರೆ ಹೇಳಿಬಿಡಲಿ. If you want to finish us... finish us. ಎಲ್ಲಾ ದೃಷ್ಟಿಯಲ್ಲಿಯೂ ಈ ನಮೂನೆ ಮಾಡುತ್ತಾರೆ. ಆರೋಗ್ಯ, ಶಿಕ್ಷಣ ಎಲ್ಲದ್ದರಲ್ಲಿಯೂ ಮಾಡುತ್ತಿದ್ದಾರೆ. ಅವರ ಮನಸ್ಸಿನಲ್ಲಿ ಏನಾದರೂ once for all North Karnatakaಕ್ಕೆ ಜನಗಣಮನ ಹಾಡಿಸಿಬಿಡಬೇಕೆಂಬ ವಿಚಾರ ಇದ್ದರೆ ಹೇಳಿಬಿಡಲಿ. ಎಲ್ಲದ್ದರಲ್ಲೂ ತಾರತಮ್ಯ ಎಂದರೆ ಹೇಗೆ?

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಮರಿತಿಬ್ಬೇಗೌಡಃ–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಸರ್ಕಾರ ಇದ್ದಾಗ ಆಗಿದೆ, ಅವರು ಮಾಡಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ಃ–** ಯಾವ ಸರ್ಕಾರವೇ ಇರಲಿ, ನಮ್ಮ ಸರ್ಕಾರ ಇದ್ದರೂ ಕೇಳುವುದಿಲ್ಲ, I don't care. ನಮ್ಮದೇ ಸರ್ಕಾರ ಇರಲಿ. ನಾನು ಪಕ್ಷದ ಆಧಾರದ ಮೇಲೆ ಮಾತನಾಡುವುದಿಲ್ಲ. ಯಾರೇ ಇರಲಿ. ನಮ್ಮ ಪಕ್ಷದ ಸರ್ಕಾರ ಇದ್ದರೂ I don't care. I want to protect the interest of people of that area. It is my duty ಎಂಬುದನ್ನು ಮಾನ್ಯ ಮರಿತಿಬ್ಬೇಗೌಡರು ತಿಳಿದುಕೊಳ್ಳಬೇಕು. It has given me a birth. 'ಜನನಿ ಜನ್ಮಭೂಮಿಶ್ಚ, ಸ್ವರ್ಗಾದಪಿ ಗರೀಯಸೀ' ಎನ್ನುವಂತೆ ಹಡೆದ ತಾಯಿ, ಜನ್ಮ ಕೊಟ್ಟ ಭೂಮಿ ಸ್ವರ್ಗಕ್ಕಿಂತ ಹೆಚ್ಚು ಎಂದು ಹೇಳುತ್ತಾರೆ.

**ಶ್ರೀ ಅರುಣ ಶಹಾಪುರಃ–** ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ, ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಮಂತ್ರಿಯಾಗಿದ್ದ ಅವರನ್ನು ತೆಗೆದು ಅನ್ಯಾಯ ಮಾಡಿದರು. ಮಾನ್ಯ ಹೊರಟ್ಟಿಯವರಿಗೆ ಮಂತ್ರಿ ಮಾಡದಂತೆ ಅನ್ಯಾಯ ಮಾಡಿದರು. ಅವರು ಹೇಳಿದ್ದರಲ್ಲಿ ಬಹಳ ಸತ್ಯ ಇದೆ.

**ಶ್ರೀ ಎಸ್.ಆರ್. ಪಾಟೀಲ್ಃ–** ನಾನು ಅದನ್ನು ಹೇಳಿಲ್ಲ, ಅವರು ಕೂಡಿಸಿ ಹೇಳುತ್ತಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದಲ್ಲಿ ನೇಮಕಾತಿ ಮಾಡಿ ಮೈಸೂರು–ಬೆಂಗಳೂರಿಗೆ ನಿಯೋಜನೆ ಮಾಡಿರುವುದು ಅನ್ಯಾಯವಲ್ಲವೇ? ನೂರಕ್ಕೆ ತೊಂಭತ್ತರಷ್ಟು ಜನರನ್ನು ಮೈಸೂರು–ಬೆಂಗಳೂರಿಗೆ ನಿಯೋಜನೆ ಮಾಡಿ ಉತ್ತರ ಕರ್ನಾಟಕದಲ್ಲಿ ಮಕ್ಕಳಿಗೆ ಆಗುತ್ತಿರುವ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವೇ? ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಅನ್ಯಾಯವಾಗಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಪ್ರಸ್ತುತ ಸಾಲಿನಲ್ಲಿ 1,242 ಸಹಾಯಕ ಪ್ರಾಧ್ಯಾಪಕರನ್ನು ನೇಮಕಾತಿ ಮಾಡಲು ಕ್ರಮ ಕೈಗೊಳ್ಳುತ್ತಿದೆ ಎಂದು ಉತ್ತರ ನೀಡಿದ್ದಾರೆ. ಸದನಕ್ಕೆ ತಪ್ಪು ಮಾಹಿತಿ ಏಕೆ ಕೊಡುತ್ತಾರೆ? ತಾವು ಕೊನೆಯಲ್ಲಿನ (ಇ) ಉತ್ತರವನ್ನು ನೋಡಿ. ಉತ್ತರದಲ್ಲಿ ಒಂದಕ್ಕೊಂದು ಸಂಬಂಧ ಇಲ್ಲ. ನಾವು ಇಲ್ಲಿ ಬಂದು ಹೆಬ್ಬೆಟ್ಟು ಒತ್ತುತ್ತಿದ್ದೇವೆಯೇ? ಉತ್ತರ ಹೇಗೆ ಬೇಕಾದರೂ ಕೊಡಬಹುದೇ? ಒಂದಾದರೂ ಉತ್ತರ ಸರಿಯಿದೆಯೇ ಎಂದು ನೋಡಿ. 138 ಮಂದಿ ನಿಯೋಜನೆ ಮಾಡಿ ಮಕ್ಕಳಿಗೆ ಅನ್ಯಾಯ ಆಗಿಲ್ಲ ಎಂದು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇಲ್ಲಿ ಮಂತ್ರಿಗಳು ಉತ್ತರ ಹೇಳಿ ಬೈಸಿಕೊಳ್ಳುವವರು ಅವರು, ಸರಿಯಾದ ಉತ್ತರ ಕೊಡದಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ನಾವು ಅಧಿಕಾರಿಗಳ ಉತ್ತರವನ್ನು ಹೇಳುತ್ತೇವೆ, ಅವರೂ ಅದನ್ನೇ ಹೇಳುತ್ತಾರೆ. ಸದನಕ್ಕೆ ತಪ್ಪು ಮಾಹಿತಿ ಕೊಡುವುದು ಯಾವ ಪದ್ಧತಿ ಎಂದು ಕೇಳಬಯಸುತ್ತೇನೆ.

**ಡಾ|| ಸಿ.ಎನ್. ಅಶ್ವಥನಾರಾಯಣ (ಉಪ ಮುಖ್ಯ ಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ., ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಇಲಾಖೆ):-** :- ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಮಂಡಿಸಿರುವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಈ ಚರ್ಚೆಯಲ್ಲಿ ಪ್ರಾಧ್ಯಾಪಕರ ನಿಯೋಜನೆ ವಿಚಾರದಲ್ಲಿ ನಿಯಮಾನುಸಾರವಲ್ಲದೇ ಮಾಡಿರುವ ಕಾರ್ಯಗಳಿಂದ ಯಾವರೀತಿ ಆ ಭಾಗದ ಜನರಿಗೆ ಅನ್ಯಾಯವಾಗಿದೆ ಎಂಬ ವಿಚಾರಗಳನ್ನು ನಮಗೆ ತಿಳಿಸಿದ್ದಾರೆ. ಈ ವಿಚಾರದಲ್ಲಿ ನಾನು ಒಂದಷ್ಟು ಮಾಹಿತಿ ಕೊಡಲು ಇಷ್ಟಪಡುತ್ತೇನೆ. ಮಾನ್ಯ ಪ್ರತಿಪಕ್ಷದ ನಾಯಕರು 137 ಜನರು with posts ಹೋಗಿದ್ದಾರೆಯೇ ಎಂದು ಕೇಳುತ್ತಿದ್ದರು. 137 ಜನರನ್ನು ಎರವಲು ಸೇವೆ ಮೇಲೆ ಹಾಕಲಾಗಿದೆ. ಮಾನ್ಯ ಪ್ರತಿ ಪಕ್ಷದ ನಾಯಕರು ಉತ್ತರ ಕರ್ನಾಟಕದವರಾಗಿದ್ದು, ಇಡೀ ಕರ್ನಾಟಕವೇ ಅವರದ್ದಾಗಿದೆ. ಆದ್ದರಿಂದ ಯಾವುದೇ ಭಾಗದಲ್ಲಿ ಅನ್ಯಾಯವಾದರೆ ಮಾನ್ಯ ಹೊರಟ್ಟಿಯವರು ಹೇಳಿದಂತೆ ಯಾವುದೇ ಶಾಲಾ-ಕಾಲೇಜಿಗೆ ಅನ್ಯಾಯವಾದರೆ...... ಅಲ್ಲಿನ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ತರಬೇತಿ ಕೊಡಲು ನೇಮಕಾತಿಯಾಗಿದ್ದು, ಅವರ ಅನುಕೂಲಕ್ಕೋಸ್ಕರ ಮಾಡಿಲ್ಲ. ಹಾಗಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ತರಬೇತಿ ಕೊಡುವ ಕಾರ್ಯ ಮಾಡುವಂತಿರಬೇಕು. Probationary period ಮುಂಚೆ transfer ಆಗುವಂತಹದ್ದು, ಇನ್ನೊಂದು ಮತ್ತೊಂದು ಹೊರವಲಯದಲ್ಲಿ ಬರುವ ಕಾರ್ಯಗಳು ನಡೆದಿರುತ್ತವೆ. ಇವತ್ತು 137 ಜನರ ವಿಚಾರಕ್ಕೆ ಸಂಬಂಧಪಟ್ಟಂತೆ 46 ಜನರನ್ನು ಆ ಭಾಗದಿಂದ ಬೇರೆ ಕಡೆ ನಿಯೋಜನೆ ಮಾಡಲಾಗಿದೆ. 2017 ರಿಂದ ವರ್ಗಾವಣೆಯಾಗದೇ ನಿಯೋಜನೆ ನಡೆಯುತ್ತಿದೆ. Transfer Act ನಲ್ಲಿ counselling ಆಗದೇ ಎಲ್ಲವೂ ನಿಯೋಜನೆಯಲ್ಲಿ ನಡೆಯುತ್ತಾ ಬರುತ್ತಿದೆ. 137 ಜನರಲ್ಲಿ 46 ಜನರನ್ನು ಮಾತ್ರ ನಿಯೋಜನೆ ಮಾಡಲಾಗಿದೆ. ನಿಯೋಜನೆ ಆದ 46 ವ್ಯಕ್ತಿಗಳಿಗೆ ಬದಲಾಗಿ replacement ಅಥವಾ ತಾತ್ಕಾಲಿಕವಾಗಿ solution ಅಥವಾ ಪರಿಹಾರವಾಗಿ ನೀಡಲಾಗಿದೆ. ಇದಕ್ಕೆ ಪರಿಹಾರವಾಗಿ 197 guest faculty appointment ಮಾಡಲಾಗಿದೆ. ನಿಯೋಜನೆ ಆಗಿರುವುದಕ್ಕೆ ಪರಿಹಾರವಾಗಿ 197 ಜನರನ್ನು ನೇಮಕ ಮಾಡಲಾಗಿದ್ದು, ಇದನ್ನು ಸರಿ ಇದೆ ಎಂದು ಸಮಜಾಯಿಷಿ ಹೇಳುತ್ತಿಲ್ಲ. ಆದರೆ ಬರುವ ದಿನಗಳಲ್ಲಿ ಅಂದರೆ academic year, ಏಪ್ರಿಲ್-ಮೇ

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ತಿಂಗಳು ಮುಗಿದ ನಂತರ ಕಾನೂನುಬಾಹಿರವಾದ ಯಾವುದೇ ನಿಯೋಜನೆಗಳನ್ನು........ ಯಾವುದೇ ನಿಯೋಜನೆಗಳು academic year ಗೆ ಆಗುತ್ತದೆ. ಒಂದು ವರ್ಷಕ್ಕೆ ಆಗುತ್ತದೆ. ಇಂತಹ ನಿಯೋಜನೆಗಳು ಎಲ್ಲೇ ಆಗಿದ್ದರೂ ಮುಂದಿನ ದಿನಗಳಲ್ಲಿ ಅಂದರೆ ಬರುವಂತಹ academic year ನಲ್ಲಿ ಎಲ್ಲೆಲ್ಲಿ ಅವರ ಪೋಸ್ಟ್ ಇದೆಯೋ, ಅಲ್ಲಿಯೇ ಕೆಲಸ ಮಾಡಬೇಕು. ಅದರ ಬಗ್ಗೆ ಎರಡು ಮಾತಿಲ್ಲ. ಇದು ಆಗಬೇಕು. ಜೊತೆಯಲ್ಲಿ Transfer Counselling Bill ಅನ್ನು ಈ ಅಧಿವೇಶನದಲ್ಲಿ ತರುತ್ತಿದ್ದೇವೆ. ಕಳೆದ Counselling Act ನಲ್ಲಿ ಇದ್ದ ಸಮಸ್ಯೆಗಳನ್ನು ತಿದ್ದುಪಡಿ ಮೂಲಕ ತರುತ್ತಿದ್ದೇವೆ. ಇದು ಒಂದು ಕಡೆ ಆದರೂ ಇಂತಹ ಪರಿಸ್ಥಿತಿ ಮುಂದೆ ಆಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಎಲ್ಲೆಲ್ಲಿ ಅವರ ಪೋಸ್ಟ್ ಇದೆಯೋ, ಅಲ್ಲಲ್ಲೇ ಕೆಲಸ ಮಾಡುವುದು ಆಗಬೇಕು. ಇಲ್ಲದಿದ್ದರೆ ಈ ರೀತಿ ಎಲ್ಲೆಲ್ಲೋ ನಿಯೋಜನೆ ಮಾಡಿದಾಗ ಅವರು ಹೇಳಿದರೀತಿ ಅವರಿಗೆ ಪೋಸ್ಟಿಂಗ್ ಕೊಟ್ಟು ಎಲ್ಲೋ ಹೋಗಿ ಕೆಲಸ ಮಾಡುವುದಕ್ಕೆ ಕೊಡುವುದಲ್ಲ. ವಿದ್ಯಾರ್ಥಿಗಳಿಗೆ ಸಮಸ್ಯೆ ಆಗಬಾರದೆಂದು 197 guest faculty ಗಳನ್ನು ನೇಮಕ ಮಾಡಿದ್ದೇವೆ. ಇದನ್ನು ಮಾಡಿ ಬಗೆಹರಿಸುವ ಕೆಲಸ ಮಾಡಿದ್ದೇವೆ. Overall ಆಗಿ ಉತ್ತರ ಕರ್ನಾಟಕದಲ್ಲಿ 1861 sanctioned ಪೋಸ್ಟ್‌ಗಳಿದ್ದು, 1514 ಕೆಲಸ ಮಾಡುತ್ತಿದ್ದು, 347 vacancies ಇದ್ದು ಅದನ್ನು ತುಂಬಲು call for ಮಾಡಿದ್ದು, ಸಂಪೂರ್ಣವಾಗಿ 100% ಭರ್ತಿ ಮಾಡುತ್ತೇವೆ. ಜೊತೆಯಲ್ಲಿ 4120 ಜನ guest faculties ಕೆಲಸ ಮಾಡುತ್ತಿದ್ದಾರೆ. ಮಾನ್ಯ ಹೊರಟ್ಟಿಯವರು ತಿಳಿಸಿರುವ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಇಂತಹವುಗಳಿಗೆ ಆಸ್ಪದ ಕೊಡದೇ, ಅಚ್ಚುಕಟ್ಟಾಗಿ, ಉತ್ತಮವಾಗಿ ನಿರ್ವಹಣೆ ಮಾಡಲು ಸಂಪೂರ್ಣವಾಗಿ ಇಲಾಖೆಯಲ್ಲಿ ಕಾನೂನು ಪಾಲನೆಯಾಗುವಂತೆ ವರ್ಗಾವಣೆ, ನಿಯೋಜನೆಯಲ್ಲಿ ಗೊಂದಲವಾಗದಂತೆ....ಅವರು ಉದಾಹರಣೆಗಳನ್ನು ಕೊಟ್ಟರು, ಇಂತಹ ಸನ್ನಿವೇಶಗಳಿಗೆ ಅವಕಾಶಗಳನ್ನು ಮಾಡಿಕೊಡದೇ ಉತ್ತಮವಾಗಿ ನಿರ್ವಹಣೆ ಮಾಡುತ್ತೇವೆ. ಯಾವುದೇ ರೀತಿ ಅನ್ಯಾಯವಾಗದಂತೆ ಅವಕಾಶ ಮಾಡಿಕೊಡುವುದಿಲ್ಲ ಎಂದು ವಿಶ್ವಾಸ ಕೊಡುತ್ತೇನೆ.

**(615)/19.03.2020/8.10/ಹೆಚ್‌ವಿ-ವಿಕೆ**

**ಡಾ: ಸಿ.ಎನ್.ಅಶ್ವತ್ಥ ನಾರಾಯಣ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಯಾವುದೇ ಸನ್ನಿವೇಶಗಳಿಗೆ ಅವಕಾಶವನ್ನು ಮಾಡಿಕೊಡದೇ ಉತ್ತಮವಾಗಿ ಕಾರ್ಯನಿರ್ವಹಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ಯಾವುದೇ ಭಾಗಕ್ಕೂ,

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಯಾವುದೇ ಉದ್ದೇಶದಿಂದಲೂ ಅನ್ಯಾಯವಾಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆನ್ನುವ ವಿಶ್ವಾಸವನ್ನು ನಾನು ಈ ಸದನದ ಮೂಲಕ ನೀಡುತ್ತಿದ್ದೇನೆ.

**ಸಭಾಪತಿಯವರು:-** ಶ್ರೀ ಹೆಚ್.ಎಂ.ರಮೇಶ್‌ಗೌಡರು ದಿನಾಂಕ:09.03.2020ರಂದು ಪ್ರಸ್ತಾಪಿಸಿದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:71 (540), ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಆಸ್ಪತ್ರೆ ಮತ್ತು ಸಿಬ್ಬಂದಿಗಳ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯವನ್ನು ಕುರಿತು ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ಸೋಮವಾರದಂದು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಒಂದು ಸಣ್ಣ ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಂದ ಬಯಸುತ್ತಿದ್ದೇನೆ. ಮಾನ್ಯ ಬಸವರಾಜ್ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಾಗ, ಒಂದು ಬ್ಯಾಚ್ ಆಗಿತ್ತು, ನಂತರ ಶ್ರೀ ಜಿ.ಟಿ.ದೇವೇಗೌಡರು ಶಿಕ್ಷಣ ಸಚಿವರಾಗಿದ್ದಾಗ ಒಂದು ಬ್ಯಾಚ್ ಆಗಿತ್ತು. ಶ್ರೀ ಬಸವರಾಜ್ ಹೊರಟ್ಟಿಯವರು ನಾವೆಲ್ಲರೂ ಒಂದು ಮೀಟಿಂಗ್ ಮಾಡಿ, ಪೋಸ್ಟಿಂಗ್ಸ್ ಕೌನ್ಸಿಲಿಂಗ್ ಮಾಡುವಾಗ ಪತಿ-ಪತ್ನಿ ಪ್ರಕರಣವನ್ನು ಪರಿಗಣಿಸಬೇಕೆಂದು 2017ರಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದೆವು. ಇದಕ್ಕೊಂದು ರಿಯಾಯಿತಿಯನ್ನು ನೀಡಿ. ಇದಕ್ಕೆ ಯಾವುದೇ ತೊಂದರೆಯಾಗಬಾರದು. ಉಳಿದಂತೆ ಮಾನ್ಯ ಬಸವರಾಜ್ ಹೊರಟ್ಟಿಯವರು ಹೇಳಿದಂತೆ ಮಾಡಿ.

**ಡಾ: ಸಿ.ಎನ್.ಅಶ್ವತ್ಥ ನಾರಾಯಣ:-** ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣದಲ್ಲಿ 123 ಜನರಿಗೆ ಕೊಡಲಾಗಿದೆ. ಇಲಾಖೆಯ ಗೈಡ್‌ಲೈನ್ಸ್‌ನಿಂದ ಮತ್ತು ಕಾನೂನಿನಿಂದ ಹೊರಗಿರುವಂತಹ ಪ್ರಕರಣಗಳಿಗೆ ಯಾವುದೇ ರೀತಿಯ ಅವಕಾಶವನ್ನು ಮಾಡಿಕೊಡುವುದಿಲ್ಲ. ಕಾನೂನಿನ ಪ್ರಕಾರವಾಗಿ ಮಾಡಿಕೊಡುತ್ತೇವೆ. ಈ ವರ್ಗಾವಣೆಯ ಕಾರ್ಯವನ್ನು ಬಹಳ ಉತ್ತಮವಾಗಿ ನಿರ್ವಹಿಸುತ್ತೇವೆನ್ನುವ ಭರವಸೆಯನ್ನು ನಾನು ನೀಡುತ್ತಿದೇನೆ.

**ಸಭಾಪತಿಯವರು:-** ಅರ್ಧಗಂಟೆ ಕಾಲಾವಧಿ ಚರ್ಚೆ ಇಲ್ಲಿಗೆ ಮುಕ್ತಾಯಗೊಂಡಿದೆ. ಸಭೆಯನ್ನು ಈಗ ನಾಳೆ ಬೆಳಿಗ್ಗೆ 10.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 8 ಗಂಟೆ 11 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 20ನೇ ಮಾರ್ಚ್ ಮಾಹೆ 2020ರ ಶುಕ್ರವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)**

<><><><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು